ಸಂಪುಟ ೧೪
ಸಂಚಿಕೆ ೩-೪

ಕರ್ನಾಟಕ ಭಾರತಿ

ಸಂಕ್ರಮಣ ಮತ್ತು ಅಕ್ಷಯತೃತೀಯಾ
ಸಂಯುಕ್ತ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ಜನವರಿ ಮತ್ತು ಮೇ, ೧೯೮೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ" ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನದ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, **"ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೪ ಸಂಚಿಕೆ : ೩ ಮತ್ತು ೪

ಪ್ರಧಾನ ಸಂಪಾದಕರು

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಹಾಯಕ ಸಂಪಾದಕರು

ಡಾ. ಎಂ. ಬಿ. ಕೊಟ್ರಶೆಟ್ಟಿ

ಪ್ರ ಸಾ ರಾ ಂ ಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೪ ಸಂಚಿಕೆ : ೩-೪

ಜನವರಿ ಮತ್ತು ಮೇ, ೧೯೮೨

ಸಂಕ್ರಮಣ ಹಾಗೂ ಅಕ್ಷಯ ತೃತೀಯಾ
ಸಂಯುಕ್ತ ಸಂಚಿಕೆ

ಪ್ರಕಾಶಕರು :

ಎಸ್. ಬಿ. ನಾಯಕ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

ಮುದ್ರಕರು :

ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ

ಪರಿವಿಡಿ

ಲಕ್ಷ್ಮೀಶ ಕವಿಯ ಕಾಲಮಾನ (ವಿಮರ್ಶೆ)

ಕೆ. ವೆಂಕಟರಾಯಾಚಾರ್ಯ

ವ್ಯಾಸಭಾರತ ಪಾಂಡವರ ಕತೆಯನ್ನೊಳಗೊಂಡ ಮಹಾನ್ ಕೃತಿ. 'ಜಯೋ ನಾಮೇತಿ ಹಾಸೋಽಯಂ' ಎಂದು ಹೆಸರುಗೊಂಡ ಮೌಲಿಕ ಕೃತಿ ಕ್ರಮೇಣ ಭಾರತ-ಮಹಾಭಾರತಗಳೆಂದು ವಿಸ್ತಾರವಾಗಿದೆ. ಈ ಕೃತಿಯು ಹಲವಾರು ಹಸ್ತಪ್ರತಿಗಳಿಂದಲೂ, ಟೀಕೆ ಟಿಪ್ಪಣೆಗಳಿಂದಲೂ ಇಂಥ ಅಭಿಪ್ರಾಯಕ್ಕೆ ಎಡೆ ಇದೆ. (ಪುಣೆಯ ಭಾಂಡಾರ್ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆ ಪ್ರಕಟಿಸಿದ ಪರಿಷ್ಕೃತ ಪ್ರತಿ) ಶ್ರೀ ಶಂಕರಾಚಾರ್ಯರಿಗಿಂತ ಹಿಂದಿನ ಜೈನ ಕೃತಿಯಲ್ಲಿ 'ಭಗವದ್ಗೀತೆಯ' ಯ ಪಾಠಾಂತರಗಳು ಕಾಣುತ್ತವೆ. (ಡಾ. ಪಿ. ಕೆ. ಗೋಡೆ, ಪುಣೆ, ಅವರ ಲೇಖನ).

ವ್ಯಾಸ ಭಾರತದ ಕನ್ನಡ ರೂಪ ಗದಗಿನ 'ಕುಮಾರವ್ಯಾಸ' ನಿಂದ ರಚಿತವಾಗಿದೆ. ಹತ್ತು ಪರ್ವಗಳನ್ನು ಮಾತ್ರ ಇವನು ಅನುವಾದಿಸಿದ್ದಾನೆ. ಉಳಿದ ಸ್ತ್ರೀ ಪರ್ವವು ಶ್ರೀನಿವಾಸ ಕವಿಯಿಂದಲೂ, ಮತ್ತೆ ಏಳು ಪರ್ವಗಳಂ ತಿಮ್ಮಣ್ಣ ಕವಿಯಿಂದಲೂ ಅನುವಾದಿಸಲ್ಪಟ್ಟಿವೆ.

ಪಾಂಡವರು ಅಶ್ವಮೇಧವನ್ನು ಕೈಗೊಂಡರೆಂಬ ಕತೆ ವ್ಯಾಸಭಾರತದಲ್ಲಿ ಹೇಳಿದೆ. ಅಲ್ಲಿ, ಆ ಮೊದಲಿಗೆ ಅಶ್ವಮೇಧದ ಪ್ರಸ್ತಾಪವಾಗಿ, ಕಾಲಾನುಕ್ರಮತಃ ನಡೆದ ಅನುಗೀತೆ, ಪರೀಕ್ಷಿತನ ಉಜ್ಜೀವನಗಳು ಹೇಳಿವೆ, ಮತ್ತೆ ಯಾಗದ ವಿಚಾರವೇ ಮುನ್ನಡೆದಿದೆ.

ವ್ಯಾಸಭಾರತದ ಈ ಅಶ್ವಮೇಧ ಪರ್ವದಲ್ಲಿ ಬರುವ ಪ್ರತಿಭಟರಲ್ಲಿ ಕೆಲವರು ಕುರುಕ್ಷೇತ್ರದ ಯುದ್ಧದಲ್ಲಿ ಸೇರಿಲ್ಲೆಂದರೆ ಏನು ? ಎಂಬ ಪ್ರಶ್ನೆಯೇಳುತ್ತದೆ. ಆದರೆ ಅವರೆಲ್ಲರೂ ಆಗ ಕೇವಲ ಯುವರಾಜರಾಗಿದ್ದರೆಂದು. ಬಭ್ರುವಾಹನನು ತಟಸ್ಥನಾಗಿದ್ದನೆಂದು ತಿಳಿಯಬಹುದು. ಕೇವಲ ಹತ್ತು ಅಧ್ಯಾಯಗಳಲ್ಲಿ ಅರ್ಜುನನೇ ಕುದುರೆಯನ್ನು ಕಟ್ಟಿದ, ಎಲ್ಲರನ್ನು ಗೆದ್ದು ಸನ್ಮಾನಿತನಾಗಿ ಮರಳಿದನೆಂದಿದೆ (೭೫–೮೪). ವ್ಯಾಸಭಾರತದಂತೆ, ಜೈಮಿನಿಯುಂ ಪ್ರತ್ಯೇಕ ಭಾರತ ಗ್ರಂಥವನ್ನು ಬರೆದಿರಬೇಕು. ಅದರೊಂದು ಪರ್ವ–ಅಶ್ವಮೇಧದ ಕತೆ–ಮಾತ್ರ ಸದ್ಯಃ ಲಭ್ಯವಿದೆ. ಈ ಪರ್ವ ೬೮ ಅಧ್ಯಾಯಗಳಷ್ಟು ವಿಸ್ತಾರವಿದೆ. ಇದರಲ್ಲಿ ವ್ಯಾಸನ ಅಶ್ವಮೇಧ ಪರ್ವಕ್ಕಿಂತ ಹೆಚ್ಚು ಹಲವು ಘಟನೆ ಕತೆ ವ್ಯಕ್ತಿಗಳು ಕಂಗೊಳಿಸುತ್ತವೆ.

ಶ್ರೀರಾಮನ ಅಶ್ವಮೇಧವು ವಾಲ್ಮೀಕಿ ರಾಮಾಯಣದಲ್ಲಿ ಸೂಚಿತವದೆ. ಅಶ್ವಸಂತಾರಾದಿಗಳು ಅಲ್ಲಿಲ್ಲ. ಪದ್ಮಪುರಾಣದ 'ಶೇಷ ರಾಮಾಯಣ' ದಲ್ಲಿ ಶ್ರೀ ರಾಮಾಶ್ವಮೇಧದ ಕತೆ ಬಲು ವಿಸ್ತಾರವಾಗಿದೆ. ಪದ್ಮಪುರಾಣದ ಈ ಕತೆಯನ್ನು ಶ್ರೀ ಸೋಸಲೆ ಅಯ್ಯಶಾಸ್ತ್ರಿಗಳು 'ಶೇಷ ರಾಮಾಯಣ' ವೆಂದು ವಾ. ಷಟ್ಪದಿಯಲ್ಲಿ ಬರೆದಿದ್ದಾರೆ. 'ಮುದ್ದಣ' ಕವಿಯು 'ಶ್ರೀರಾಮಪಟ್ಟಾಭಿಷೇಕ' (ವಾ. ಷಟ್ಪದಿ), ಮತ್ತು 'ಶ್ರೀ ರಾಮಾಶ್ವಮೇಧ' (ಗದ್ಯ) ವೆಂಬುದಾಗಿ ಬರೆದಿದ್ದಾರೆ.

ವ್ಯಾಸಭಾಗವತದಲ್ಲಿ ಶ್ರೀಕೃಷ್ಣನ ಅಶ್ವಮೇಧ ಸೂಚಿತವದೆ. ಅಲ್ಲಿ ಅಶ್ವಸಂತಾರಾದಿಗಳು ಹೇಳಿಲ್ಲ! 'ಗರ್ಗ ಸಂಹಿತೆ' ಯಲ್ಲಿ ಉಗ್ರಸೇನನ ಅಶ್ವಮೇಧ ಬಲು ವಿಸ್ತಾರವಾಗಿದೆ. ಜೈಮಿನಿ ಕೃತ ಅಶ್ವಮೇಧ ಪರ್ವಕ್ಕೂ ಈ 'ಗರ್ಗ ಸಂಹಿತೆ'ಗೂ ಕೆಲವೆಡೆ ಸಾಮ್ಯಗಳಿವೆ, ಸಂವಾದಿಯಾಗಿವೆ. ಕವಿಯು ಪ್ರತಿಭೆ ಮತ್ತು ಧಾರ್ಮಿಕ ದರ್ಶನಗಳಿಂದಾಗಿ ವಸ್ತು-ಘಟನೆಗಳ ಮೂಲಕ ಹೊಸತನ್ನು ನಿರ್ಮಿಸುತ್ತಾನೆ. ಲಕ್ಷ್ಮೀಶ ಕವಿಯು ಕನ್ನಡದಲ್ಲಿ (ವಾ. ಷ. ಪದ್ಯರೂಪವಾಗಿ) ಜೈಮಿನಿಯ 'ಅಶ್ವಮೇಧ'ವನ್ನು ಬರೆದಿದ್ದಾನೆ. ಈ ಕವಿಯ ಕೃತಿಯ ಬಗೆಗೆ ಹಲವಾರು ವಿದ್ವಾಂಸರು ತಂತಮ್ಮ ಆಶಯಗಳನ್ನು ಬರೆದಿದ್ದಾರೆ. ಆದರೂ ಇನ್ನೂ ಕೆಲವು ಜಿಜ್ಞಾಸೆಗಳಿವೆ. ಪ್ರಸ್ತುತ, ಲಕ್ಷ್ಮೀಶ ಕವಿಯ ಕಾಲಮಾನದ ಬಗೆಗೆ ಬರೆಯಲೆಳಸಿದ್ದೇನೆ. ಸಹೃದಯರು 'ಹಂಸ ಕ್ಷೀರ' ನ್ಯಾಯದಂತೆ ಈ ವಿಚಾರವನ್ನು ಪರಿಗ್ರಹಿಸಬೇಕೆಂದು ವಿನಂತಿ.

ಲಕ್ಷ್ಮೀಶನು ಈ ಕೃತಿಯಲ್ಲಿ ಆಶ್ರಿತ ರಾಜನನ್ನಾಗಲೀ, ಪ್ರಾಚೀನ-ಸಮಕಾಲೀನ-ಕವಿಗಳನ್ನಾಗಲೀ ಹೆಸರಿಸಿಲ್ಲ; ತನ್ನ ಕಾಲಮಾನವನ್ನೂ ಸ್ಪಷ್ಟವಾಗಿ ಏನೂ ಸೂಚಿಸಿಲ್ಲ. ಆವೊಂದು ಚಾರಿತ್ರಿಕ ವಿಚಾರವನ್ನೂ ಸೂಚಿಸಿಲ್ಲ! ಆದರೂ ಈತನು ಮೂಲಕ್ಕಿಂತ ಹೆಚ್ಚಿನದೇನು ಹೇಳಿದನು, ಸಮಸಾಯಿಕವಾಗಿ ಹೊಂದುವ. ವಿಚಾರಗಳೇನು? ಶಾಬ್ದಿಕ ಶ್ಲೇಷರೂಪಗಳೇನು ಎಂಬುದನ್ನು ವಿಶ್ಲೇಷಿಸಿ, ಆ ಆಧಾರದ ಮೇರೆಗೆ ಈ ಕವಿಯ ಕಾಲಮಾನವನ್ನು ಕಂಡುಕೊಳ್ಳುವುದಕ್ಕೆ ಅವಕಾಶವಿದೆ. ಈ ದಿಸೆಯಲ್ಲಿ ಒಂದೆರಡು ವಾದಗಳನ್ನು ವಿಮರ್ಶಿಸುವುದೂ ಸೂಕ್ತವಾಗಿದೆ.

ಡಾ. ದ. ರಾ. ಬೇಂದ್ರೆಯವರು : "ಕನ್ನಡ ಜೈಮಿನಿ ಭಾರತದಲ್ಲಿ ಚಂದ್ರಹಾಸನನ್ನು ವರ್ಣಿಸುವಾಗ, ಲಕ್ಷ್ಮೀಶನು ಮೂಲದಲ್ಲಿಲ್ಲದ ಕೆಲವು ವಿಶೇಷಗಳನ್ನು ಕೈಕೊಂಡಿದ್ದಾನೆ :

ಜಲಜಾಕ್ಷ ಭಕ್ತಿಯಿಂ ಪ್ರಹ್ಲಾದನಾಗಿ, ನಿ ।
ಶ್ಚಲ ಹರಿಧ್ಯಾನದಿಂ ಧ್ರುವನಾಗಿ, ಸತ್ವದಿಂ ।
ಬಲಿಯಾಗಿ, ಶಾಂತತ್ವದಿಂ ವಿಭೀಷಣನಾಗಿ, ವೈಷ್ಣವಾಭರಣವೆಂಬ ॥

ಕಲೆಯಿಂದೆ ಮಹಿಗೆ ರುಕ್ಮಾಂಗದಂ ತಾನಾಗಿ ।
ಸಲೆ ಕೀರ್ತಿಯಿಂ ಪುಂಡರೀಕನಾಗಿರುತಿಹಂ ।
ಸುಲಲಿತ ಚರಿತ ಭಾಗವತ ಶಿರೋಮಣಿ ಚಂದ್ರಹಾಸನುರ್ವೀ
ತಳದೊಳು" (೨೯–೧೪)

ಇಲ್ಲಿಯ ಪ್ರಹ್ಲಾದ, ಧ್ರುವ, ಬಲಿ, ವಿಭೀಷಣ, ರುಕ್ಮಾಂಗದರು ಪೌರಾಣಿಕ ಕತೆಗಳಲ್ಲಿ ಪ್ರಸಿದ್ಧರು. 'ಸಲೆ ಕೀರ್ತಿಯಿಂ ಪುಂಡರೀಕನಾಗಿ' ಎಂಬಲ್ಲಿ ಕೇವಲ ಪೌರಾಣಿಕ ಕಥನವೇ ಅಲ್ಲದೆ, ಕೀರ್ತಿಯಿಂದಾಗಿ ಚಾರಿತ್ರಿಕ ಪ್ರಥಿತನಾದ ಪುಂಡರೀಕನನ್ನು–ವಿಠಲಭಕ್ತನನ್ನು–ಹೇಳಿದೆ.

ಕನ್ನಡದಲ್ಲಿಯೂ ವಿಠಲಭಕ್ತಿಯು – ಪುಂಡರೀಕನ – ಪ್ರಸಾರವಾದುದೆಂದರೆ, ವಿಜಯನಗರದಲ್ಲಿ ಕೃಷ್ಣದೇವರಾಯನು ಇ. ೧೫೨೦–೨೧ರಲ್ಲಿ ವಿಠಲಮೂರ್ತಿಯನ್ನು ಪ್ರತಿಷ್ಠಿಸಿದುದರಿಂದಲೆ ಆಗಿರುತ್ತದೆ. ಈ ಕೃತಿಯೂ ಅದೇ ಕಾಲಕ್ಕೆ ರಚಿತವಾಗಿರಬೇಕು" ಎಂದರು (ಜೈ. ಭಾ. ಮುನ್ನುಡಿ).

ಡಾ. ವಾಮನ ಬೇಂದ್ರೆಯವರು : 'ಲಕ್ಷ್ಮೀಶನ ಜೈಮಿನಿ ಭಾರತ' ಎಂಬ ನಿಬಂಧದಲ್ಲಿ (ಮೈಸೂರು ಗೀತಾ ಬುಕ್‌ಹೌಸಿನ ೧೯೭೯ ರ ಪ್ರಕಟನೆ) ಮತ್ತು 'ಲಕ್ಷ್ಮೀಶ' ಎಂಬ ಪುಸ್ತಕದ (ಬೆಂಗಳೂರ ಐ. ಬಿ. ಎಚ್. ಅವರ ೧೯೭೮ರ ಪ್ರಕಟನೆ) ತಮ್ಮ ಲೇಖದಲ್ಲಿ, ಈ ಮೇಲಿನ ಮಾತನ್ನು ಆಧರಿಸಿ, ಸಮರ್ಥಿಸಿ, ಬರೆದಿದ್ದಾರೆ; ಲಕ್ಷ್ಮೀಶನ ಈ ಕೃತಿಯ ರಚನೆ ಇ. ೧೫೨೦–೨೧ ರಲ್ಲಿ' ಎಂದರು.

ಜಿಜ್ಞಾಸೆ : ಪಂಡರಪುರದ ಉಲ್ಲೇಖ ೮–೯ ನೆ ಶತಕದ ಶಾಸನಗಳಲ್ಲಿ ಪಂಡರಗಿ ಎಂದು ಕಾಣುತ್ತದೆ. ವಿಠಲಭಕ್ತರಲ್ಲಿ 'ಪುಂಡರೀಕ'ನು ವಿಶಿಷ್ಟನಾಗಿರುವನೆಂದೇ ಆತನಂ ಕೀರ್ತಿಯುತನು. ಮಹಾರಾಷ್ಟ್ರದ ಭಕ್ತನಾದ ಜ್ಞಾನದೇವನು 'ಕಾನಡಾ ಹೋ ವಿಠಲು ಕರ್ನಾಟಕುಂ ಕ್ಯಾನೇಮಜಿಲಾ ವಿಜಲಾವೇಧು' (ಅಭಂಗ ೭೬೪) ಕರ್ಣಾಟಕ ದೇಶದಲ್ಲಿಯ ವಿಠಲದೇವನು ತನ್ನ ಕಡೆಗೆ ನನ್ನ ಮನಸ್ಸನ್ನು ಆಕರ್ಷಿಸಿಕೊಂಡನು– ಎಂದು ಹೇಳಿರುವನು. ನಾಮದೇವನಾದರೊ, ಕಾಶಿಯೆ ಕನೋಜಾ, ದ್ವಾರಕೇಗೂಜರೂ, ಕಾನಡಾ ವಿಠಲ ಪಂಡರೀಯೆ, (ಅಭಂಗ ೩೫೮–೧) –ಕನೋಜ ಪ್ರಾಂತದಲ್ಲಿ ಹೇಗೆ ಕಾಶೀಕ್ಷೇತ್ರವೊ, ಗುಜರಾತ ಪ್ರಾಂತದಲ್ಲಿ ಹೇಗೆ ದ್ವಾರಕಾ ಕ್ಷೇತ್ರವೊ, ಹಾಗೆ ಕರ್ನಾಟಕ ಪ್ರಾಂತದಲ್ಲಿ ವಿಠಲದೇವನ ಪಂಡರೀಕ್ಷೇತ್ರ– ಎಂದಿದ್ದಾನೆ. ಕನ್ನಡದಲ್ಲೂ ವಿಠಲಭಕ್ತಿ ಹರಡಿರುವುದನ್ನು ಕಾಣಬಹುದಾಗಿದೆ.

ಶ್ರೀ ಮಧ್ವಾಚಾರ್ಯರು (ಇ. ೧೨೦೦–೭೮) ಉಡುಪಿಯ ಅಷ್ಟಮಠಗಳ ಪೈಕಿ ಪೇಜಾವರ, ಶೀರೂರು, ಪುತ್ತಿಗೆ ಮಠಗಳಿಗೆ ವಿಠಲಪ್ರತಿಮೆಗಳನ್ನು ಪೂಜೆಗಾಗಿ ನೀಡಿರುತ್ತಾರೆ.

"ಶ್ರೀಕೃಷ್ಣದೇವರಾಯ ವಿಜಯವಿಠಲನ ಗುಡಿಯಲ್ಲಿ ವಿಗ್ರಹವನ್ನು ಪ್ರತಿಷ್ಠಿಸಿದ್ದನೆಂಬ ಸಂಗತಿ ಶ್ರೀವಾದಿರಾಜರ 'ತೀರ್ಥಪ್ರಬಂಧ' ದಲ್ಲಿ ಸ್ಪಷ್ಟವಾಗುತ್ತದೆ. ಅದಕ್ಕೂ ಮೊದಲು ಪಂಡರಾಪುರದಲ್ಲಿ ವಿಠಲನ ಪ್ರತಿಷ್ಠೆಯಾಗಿದ್ದುದಷ್ಟೆ ಅಲ್ಲದೆ, ಕವಿ ತೌಂಡರಸನ ಕಾಲಕ್ಕಾಗಲೇ (೧೩ ನೆ ಶ.) ಅದು ಸಾಕಷ್ಟು ಪ್ರಸಿದ್ಧಿಯನ್ನು ಗಳಿಸಿತ್ತು.) ಅವನು 'ದಶಕುಮಾರ ಚರಿತೆ' ಮತ್ತು 'ನಳಚಂಪು' ಎಂಬ ಎರಡು ಗ್ರಂಥಗಳಲ್ಲಿಯೂ ಅವಕಾಶವನ್ನು ಕಲ್ಪಿಸಿಕೊಂಡು 'ಅಭಂಗವಿಠಲ' ನನ್ನು ಬಾಯಿ ತುಂಬ ಕೊಂಡಾಡಿರುತ್ತಾನೆ. ಮಹಾರಾಷ್ಟ್ರದ ಭಕ್ತರಾದ ಜ್ಞಾನದೇವ ಮತ್ತು ತುಕಾರಾಮರು ಈ ದೇವರನ್ನು ಕನ್ನಡಿಗರ ಅಧಿದೈವವೆಂದು ಕರೆದಿರುವುದರಿಂದ, ಬಹಳ ಹಿಂದಿನಿಂದಲೂ ಕನ್ನಡನಾಡಿನಲ್ಲಿ ವಿಠಲಭಕ್ತಿ ಬಳಕೆಯಲ್ಲಿದ್ದಿತೆಂದು ಹೇಳಬಹುದಾಗಿದೆ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು ಪುನರ್ಮುದ್ರಿಸಿರುವ 'ನಳಚಂಪು'ವಿನ "ಮುನ್ನುಡಿಯಲ್ಲಿ ಈ ಬಗ್ಗೆ ಸಾಕಾದಷ್ಟು ವಿಷಯ ದೊರೆಯುತ್ತದೆ" (ಡಾ. ಜಿ. ವರದರಾಜರಾಯರು ನನಗೆ ಬರೆದ ೨೯-೭-೮೧ ರ ಪತ್ರದಲ್ಲಿ ಈ ವಿಚಾರ ತಿಳಿಸಿ ಉಪಕರಿಸಿದ್ದಾರೆ.)

ಮುಳುಬಾಗಿಲು ಮಠದ ಶ್ರೀಪಾದರಾಜರು (ಇ. ೧೪೦೬-೧೫೦೪) ಪಂಡರಪುರದಲ್ಲಿ ವಿಠ್ಠಲಮೂರ್ತಿಯನ್ನು ಪಡೆದರು. ಅಂತೆ 'ರಂಗವಿಠಲ'ನೆಂಬ ಮುದ್ರಿಕೆಯಲ್ಲಿ ಕನ್ನಡದಲ್ಲಿ ಅನೇಕ ಕೀರ್ತನಾದಿಗಳನ್ನು ರಚಿಸಿದರು. (ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ 'ಶ್ರೀಪಾದರಾಜರ ಕೃತಿಗಳು' ಎಂಬ ಸಂಕಲನ ನೋಡಿ.) ಆದುದರಿಂದ, ಚಂದ್ರಹಾಸನನ್ನು 'ಪುಂಡರೀಕ'ನಾಗಿ ನಿರೂಪಿಸಿದ ಲಕ್ಷ್ಮೀಶನು ವಿಜಯನಗರದ ಕೃಷ್ಣದೇವರಾಯನು ನಡೆಸಿದ ವಿಠಲ ಪ್ರತಿಷ್ಠೆಯಿಂದಲೆ ಸ್ಫೂರ್ತಿ ಪಡೆದನೆನ್ನಲು ಅವಕಾಶವಿಲ್ಲ ! ತತ್ಪೂರ್ವದಲ್ಲೆ ಕನ್ನಡದಲ್ಲಿ ವಿಠಲಭಕ್ತಿ ಹರಡಿರುವುದರಿಂದ, ಲಕ್ಷ್ಮೀಶನೂ ತತ್ಪೂರ್ವಕಾಲದಲ್ಲಿ ಇರಬೇಕಾಗುತ್ತದೆ ! ಹಾಗಾದರೆ, ಯಾವ ಕಾಲದವನೆಂದು ಇಲ್ಲಿ ತುಸು ವಿವರಿಸಬೇಕಾಗಿದೆ.

ಲಕ್ಷ್ಮೀಶನು ಕುಮಾರವ್ಯಾಸನಿಗಿಂತ ಇತ್ತೀಚಿನವನೆಂದು ಹೆಚ್ಚಾಗಿ ಎಲ್ಲಾ ವಿಮರ್ಶಕರೊಪ್ಪುತ್ತಾರೆ. ಕುಮಾರವ್ಯಾಸನ ಕಾಲಮಾನ ಯಾವುದೆಂದು ಪರಿಶೀಲಿಸಬೇಕು. ಕುಮಾರವ್ಯಾಸನನ್ನು ಸ್ತುತಿಸಿದ ಕುಮಾರ ವಾಲ್ಮೀಕಿಯ ಕಾಲವೇನೆಂದು ತಿಳಿದರೆ ಕುಮಾರವ್ಯಾಸನ ಕಾಲವು ಸುಸ್ಪಷ್ಟವಾಗಿ ತಿಳಿಯುತ್ತದೆ.

"ಸರಸ ವರ್ಣಕ ಕವಿಗಳೊಳು ಭಾ ।
ಸುರ ಕುಮಾರವ್ಯಾಸನೊಬ್ಬನು ।
ಪರಿಕಿಪೊಡೆ ತಾನೊಬ್ಬ, ಮಗುಳೆರಡನೆಯ ವಸ್ತುಕಕೆ ॥
ವರಕುಮಾರವ್ಯಾಸನೊಬ್ಬನು ।
ಎರಡನೆಯ ತಾನೊಬ್ಬ, ಮಿಕ್ಕಿನ ।
ಬರಡು ಕವಿಗಳ ಲೆಕ್ಕಿಸುವನೆ ಕುಮಾರ ವಾಲ್ಮೀಕಿ ॥ (ಯು. ೫೫-೬೬)

ಕುಮಾರವ್ಯಾಸನು ಕರ್ನಾಟಕ ಭಾರತ ಕಥಾ ಮಂಜರಿ (ಗದಗು ಭಾರತ) ಎಂಬ ವರ್ಣಕವನ್ನೂ, ಐರಾವತ (ಗಜನೋಂಪಿ) ಎಂಬ ವಸ್ತುಕವನ್ನೂ ಬರೆದನು; ಅಂತೆ ಕುಮಾರ ವಾಲ್ಮೀಕಿ ತೊರವೆರಾಮಾಯಣವೆಂಬ ವರ್ಣಕವನ್ನೂ ಮೈರಾವಣ ಕಾಳಗವೆಂಬ ವಸ್ತುಕವನ್ನೂ ಬರೆದನೆಂದು ವಿಮರ್ಶಕರಲ್ಲಿ ಬಹುಮತವಿದೆ! ಕುಮಾರ ವಾಲ್ಮೀಕಿಯ ಮೈರಾವಣ ಕಾಳಗದಲ್ಲಿ ವಿದ್ಯಾಶಂಕರ ಗುರುಗಳ ಸ್ತುತಿ ಇದೆ :

"ನಿರುಪಮಿತ ನಿರ್ಲೇಪ ನಿರ್ಮದ ।
ನಿರವಯುವ ನಿಶ್ಚಿಂತ ನಿರ್ಮಲ ।
ನಿರತಿಶಯ ನಿಷ್ಕಾಮ ನಿತ್ಯಾನಂದ ನಿರ್ದ್ವಂದ್ವ ।
ಪರಮಹಂಸ ಪರೇಶ ಪಾವನ ।
ಚರಿತ ವಿದ್ಯಾಶಂಕರೋತ್ತಮ ।
ಗುರುಪದಾಂಬುಜಯುಗಳಕಾಂ ನಮಿಸುವೆನು ಭಕ್ತಿಯಲಿ ॥"

(ಕ. ಕಾ. ಕಲಾನಿಧಿ ,ಮೈಸೂರು ೧೯೧೨)

'ಈ ಗುರು ಶೃಂಗೇರಿಯವನಾದ ಪಕ್ಷದಲ್ಲಿ ಇವನ ಕಾಲ ೧೪ನೆ ಶತಕದ ಮಧ್ಯ ಭಾಗವಾಗುತ್ತದೆ. (ಕ. ಕ. ಚ. ೨–೧೪೪). ಕುಮಾರವ್ಯಾಸ–ಚಾಮರಸರು ಸಂಬಂಧಿಕರು––ಸಮಕಾಲಿಕರು–ಎಂಬ ಪ್ರವಾದದಿಂದಾಗಿ, ಕುಮಾರವಾಲ್ಮೀಕಿ ಅಷ್ಟು ಹಿಂದಣವನಲ್ಲೆಂದು ಅಲ್ಲಿ ತರ್ಕಿಸಲಾಗಿದೆ. ಕುಮಾರವ್ಯಾಸ–ಚಾಮರಸರಲ್ಲಿ ಸಂಬಂಧವಾಗಲಿ–ಸಮಕಾಲಿಕತೆಯಾಗಲಿ–ಹೇಳುವುದು ಸರಿಯಾಗದೆಂದು ಶ್ರೀ ನಾ. ಶ್ರೀ. ರಾಜಪುರೋಹಿತರು ಬರೆದಿದ್ದಾರೆ. ಕುಮಾರವಾಲ್ಮೀಕಿ ೧೪ನೆ ಶತಕದ ಮಧ್ಯಭಾಗದವ, ಕುಮಾರವ್ಯಾಸ ೧೩ನೆ ಶತಕದ ಉತ್ತರಾರ್ಧದವನೆಂದು ಹೇಳಬೇಕು. (ಸಾಹಿತ್ಯದ ಹಿನ್ನೆಲೆಯೆಂಬ ನನ್ನ ಲೇಖನ ಸಂಕಲನದ "ಕುಮಾರವ್ಯಾಸನ ಕಾಲ ಯಾವುದು ?" ನೋಡಿ) ಪ್ರಸ್ತುತ, ಲಕ್ಷ್ಮೀಶಕವಿಯೂ ೧೩ನೆ ಶತಕದಿಂದ ಈಚೆಯವನಾಗುತ್ತಾನೆ! ಹಾಗಾದರೆ, ಆತ ಯಾವಾಗ ಇದ್ದನೆಂದು ತಿಳಿಯಬೇಕು. 'ಲಕ್ಷ್ಮೀಶ'ನು ವಿಜಯನಗರದ ೧ನೆ ಹರಿಹರನ ಕಾಲದವನು— ಶ್ರೀ ಗೋವಿಂದ ಪೈಗಳು ಬರೆದಿದ್ದಾರೆ (ಕವಿಲಕ್ಷ್ಮೀಶ–ಪ್ರಶಸ್ತಿಗ್ರಂಥ–ಪುನರ್ಮುದ್ರಣ ೧೯೭೮ ಕನ್ನಡ ಸಾಹಿತ್ಯ ಪರಿಷತ್– ಪು. ೮೬–೯೩).

ಶ್ರೀಯುತರ ಲೇಖನದ ಮುಖ್ಯಾಂಶಗಳಿವು :

೧) "ಜಿತ ತಮಂ, ಭುವನ ಮಧ್ಯ ಪ್ರಕಾಶಂ, ವಿರಾ ।
ಜಿತವರಾಹ ಶ್ರೀಧರಂ, ಪಂಚಮುಖ ಮೂರ್ತಿ ।
ನುತ ಕಾಶ್ಯಪಂ, ರಾಜತೇಜೋಹರಂ, ದೂಷಣಾರಿ, ಗೋಕುಲಜಾತನು॥
ಅತಿಕಾಂತಿ ಶೋಭಿತದಿಗಂಬರಂ, ಕಲಿತಾಪ ।
ಹೃತ ಕುವಲಯಂ, ಚಕ್ರಿಯವತಾರದಶಕದು ।

ನ್ನತಿಗಳಂ ತಳೆದೆಸೆವ ದಿನಪನುದಯಂಗೈದನಂದು ಪೂರ್ವಾಚಲದೊಳು"
(ಕ. ಜೈ. ಭಾ. ೧೭-೪೨)

ಇದರಲ್ಲಿ ವಿಷ್ಣು ಮತ್ತು ಸೂರ್ಯಪರವಾದ ಶ್ಲೇಷೆಯಿದೆ. ಹಾಗೆ ಇದರ ವಿಶೇಷ ವಾಚಿಕಗಳೆಲ್ಲವೂ ಅನ್ವಯಿಸುವ 'ಚಕ್ರಿ' ಎಂಬ ಪದವನ್ನು ಕವಿ ತುಂಬ ಸಾಕೂತವಾಗಿ ಪ್ರಯೋಗಿಸಿರಬೇಕು; ಚಕ್ರವರ್ತಿಪರವಾದ ಅರ್ಥದಲ್ಲಿಯೂ ಇದನ್ನು ಕವಿ ಬಳಸಿರುವನು. ಅರಸನನ್ನು ವಿಷ್ಣುವಿಗೆ ಹೋಲಿಸುವ ರೂಢಿಯಿಂದ, ಈ ಪದ್ಯದಲ್ಲಿ 'ಚಕ್ರವರ್ತಿ' ಪರವಾದ ಶ್ಲೇಷಾರ್ಥವು ಕವಿಸಮಯಕ್ಕೂ ತುಂಬ ಸಮುಚಿತವಾಗಿದೆ. ಇದು ಸರಿಯೆಂದಾದರೆ, ಈ ಚಕ್ರವರ್ತಿ ಯಾರಾಗಿರಬಹುದು? ಲಕ್ಷ್ಮೀಶನ ಈ ಪದ್ಯದಲ್ಲಿ ವರ್ಣಿತವಾಗಿರುವ ಸಮ್ರಾಟನು ವಿಜಯನಗರದ ಮೊದಲ ನೆಯ ಹರಿಹರರಾಯ (ಕ್ರಿ. ಶ. ೧೩೩೬-೫೩) ನಾಗಿರಬೇಕೆಂದು ನಿರ್ಧರಿಸಬಹುದು. ಈ ದೃಷ್ಟಿಯಿಂದ ಈ ಪದ್ಯದ ಹತ್ತು ಬಗೆಯ ಶ್ಲೇಷೆಗಳೂ ವಿಶೇಷಗಳೂ ಏನೆಂದು ಅಲ್ಲಿ ಬರೆಯಲಾಗಿದೆ. ವಾಚಕರು ಆ ಲೇಖ ನೋಡಬಹುದು.

೨) ಈ ಕಾವ್ಯದ ಬೇರೆ ಕೆಲವು ಮಾತುಗಳಿಂದಲೂ ಈ ಬಗೆ ಸ್ಪಷ್ಟವಾಗು ತ್ತದೆ: "ಯಾದವ ಸಾರ್ವಭೌಮಂ ನಿಜಾವತರ್ಗೆ॥ ಭೂಚಕ್ರದೊಳ್ ಪಸರಿಸುವ ಕೀರ್ತಿಲತೆ ಮೂಡಲಾಚಂದ್ರಮಾಗಿರ್ಪ ತೆರದಿಂದ ಕವಿಮತಿಗೆ ಗೋಚರಿಸೆ...॥" (೩೪-೪೦).

ಇಲ್ಲಿ 'ಮೂಡಲು' ಎಂಬ ಕ್ರಿಯಾಪದದಿಂದ, ಆ ರಾಜ್ಯವು ಉದಿಸಿ ಇದ್ದಿತಷ್ಟೆ ಎಂಬ ಅರ್ಥವೂ; 'ಕವಿಮತಿಗೆ ಗೋಚರಿಸೆ' ಎಂಬುದರಿಂದ, ಆ ರಾಜ್ಯೋದಯವು ಕವಿಯ ಜೀವಿತಕಾಲದಲ್ಲಿ ಆಗಿದ್ದಿರಬೇಕೆಂಬ ಅರ್ಥವೂ ಹೊರಡುವಂತೆ ಕಾಣುವುದ ರಿಂದ, ಈ ಪದ್ಯದಲ್ಲೂ ಮೊದಲನೆಯ ಹರಿಹರನನ್ನು ಶ್ಲೇಷೆಯಿಂದ ಪರ್ಯಾಯವಾಗಿ ಹೇಳಿರಬೇಕು.

೩) 'ಹರಿಹರಾರ್ಚನೆಯ ಸುಕೃತ' (೩೪-೪೩), 'ಹರಿಹರ ಸಮಾರಾಧನೆ ಗಳಂ ಮಾಡುವ' (೧೧-೫) ಇತ್ಯಾದಿ ಹರಿಹರ' ಎಂಬ ಪದ ಹರಿ-ಶಿವರನ್ನು ಮಾತ್ರವಲ್ಲ; ಮರೆಯಾಗಿ ಹರಿಹರನನ್ನು ಸೂಚಿಸುವಂತಿದೆ.

೪) ವಿಜಯನಗರಕ್ಕೆ 'ಹಸ್ತಿನಾವತಿ'ಯೆಂದೂ ಹೆಸರಿತ್ತು. ಅದನ್ನು ನಿರ್ಮಿಸಿ ದುದೂ ಮೊದಲನೆಯ ಹರಿಹರನೆಂದೂ ತಿಳಿಯುತ್ತದೆ. ಇವೆಲ್ಲ ಕಾರಣಗಳಿಂದ ಜೈಮಿನಿ ಭಾರತದಲ್ಲಿ ವಿಜಯನಗರದ ೧ನೆಯ ಹರಿಹರರಾಯನನ್ನು ಪರ್ಯಾಯ ವಾಗಿ ಸೂಚಿಸಿದೆ ಎಂದೂ, ಲಕ್ಷ್ಮೀಶನು ಆ ಅರಸನ ಸಮಸಾಮಯಿಕನಾಗಿದ್ದಿರ ಬೇಕೆಂದೂ ನನ್ನ ನಂಬುಗೆ. ಈ ನನ್ನ ತರ್ಕಸರಣಿ ಸರಿಯೆಂದಾದರೆ, ಜೈಮಿನಿ ಭಾರತದ ರಚನೆ ಆ ಹರಿಹರನ ಕಾಲದಲ್ಲಿ, ಅಂದರೆ ಕ್ರಿ. ಶ. ೧೩೩೬-೫೩ ರೊಳಗೆ ಆಗಿರಬೇಕು.

ಶ್ರೀ ಪೈಗಳ ಈ ಬಗೆತಕ್ಕೆ ಕೆಲವು ಸಂವಾದಿಗಳು,

ವಿಜಯನಗರದಲ್ಲಿ ಯದುವಂಶವೇ ಮೊದಲಿಗೆ ಆಳಿತ್ತು. ಆ ವಂಶದ ಸಂಗಮ-ಹರಿಹರ ಮೊದಲಾದವರ ವರ್ಣನೆಗಳು ಈ ಮೇಲಿನ ವಿಚಾರಕ್ಕೆ ಪುಷ್ಟಿಗೊಡುತ್ತವೆ :

೧) "ಧರೆಯೊಳ್ ಸಂಗಮನೆಂಬ ಪಾಂಡುವಿಗವಾಕಾವಾ ಯಿಗಂ ಪುಟ್ಟಿದರ್।
ಭರದಿಂ ಹರಿಯಪ ಕಂಪಣಕ್ಷಿತಿಪನಾ ಬುಕ್ಕೋರ್ವಿಪಂ ಮುದ್ದಪಂ ।
ನಿರುತಂ ಮಾರಪನೆಂಬ ಪಾಂಡವರೊಳಾರ್ಪಿಂ ಮಧ್ಯಮಂ ಪಾಂಡವಂ ।
ವರಭೂಪಾಲಕ ಗರ್ವಮತ್ತಗಜಸಿಂಹಂ ಬುಕ್ಕ ಭೂಪಾಲಕಂ ॥"

(ಪುನರ್ಮುದ್ರಿತ ಎ. ಕ. ೪-೧೪೮, ಹೊಮ್ಮಪುಟ. ೯೧)

ಸಂಗಮನು ಪಾಂಡುವೆಂದು, ಅವನ ಅಯ್ವರು ಮಕ್ಕಳು ಪಾಂಡವರೆಂದು, ಬುಕ್ಕನು ಮಧ್ಯಮ ಪಾಂಡವರೆಂದು ಹೇಳಿದ ಈ ಒಕ್ಕಣೆಯಿಂದ ೧ನೆ ಹರಿಹರನು ಧರ್ಮರಾಯನೆಂದು ಊಹಿತವಾಗಿ, ಕ. ಜೈ. ಭಾ. ಈ ವಿಚಾರವನ್ನೇ ಪರ್ಯಾಯವಾಗಿ ಹೇಳಿರಬೇಕು !

೨) "ಇತ್ಥಂ ದೈವರಹಸ್ಯತಃ ಕೃತಯುಗೇಕರ್ತುಂ ಕವಿಂ ಕಾಲತೋ ।
ನಂದಃಸಂಗಮಭೂಪತಿಃ ಸಮಭವತ್ ಕಾಮಾಂಬಿಕಾ ತತ್ಪ್ರಿಯಾ ।
ತತ್ಪುತ್ರೋ ಹರಿಭೂಪತೇರವರಜೋಜಿಷ್ಣೋರುಪೇಂದ್ರೋಯಥಾ ।
ಶ್ರೀಮದ್ಬುಕ್ಕಮಹೀಪತಿಃ ಸಮಾಜನಿಸ್ಪಾಂಗೋಪಯನ್‌ವಿಷ್ಣುತಾಂ ॥"

(ಅದೇ. ಎ. ಕ. ೫-೭೭. ಪುಟ ೭೦. ಹಬಸೂರು).

ದ್ವಾಪರದ ನಂದನೆ ಸಂಗಮವಾಗಿ, ಬುಕ್ಕನೆ ಕೃಷ್ಣನೆಂದು ನಿರೂಪಿಸಿದ ಈ ಭಂಗ್ಯಂತರದಲ್ಲಿ ೧ನೆ ಹರಿಹರನು ಬಲರಾಮನಂತೆಂದೂ-ಜಿಷ್ಣುವೆಂದೂ-ಊಹಿತವಾಗುವಂತೆ ವರ್ಣಿಸಿದುದು ಗಮನಾರ್ಹ !

೩) "ಅಸ್ತಿಕೌಸ್ತುಭಕಲ್ಪದ್ರುಸುರಧೇನುಸಹೋದರಃ ।
ರಮಾನುಜಃ ಸುಧಾಂಶುಶ್ಚ ಕ್ಷೀರಸಾಗರಸಂಭವಃ ॥
ಉದಭೂದನ್ವಯೇತಸ್ಯಯಧುರ್ನಾಮಮಹೀಪತಿಃ ।
ಪಾಲಿತಃಯತ್ಕುಲೀಯೇನ ವಾಸುದೇವೇನ ಭೂತಳಂ ॥
ಅಭೂತ್ತಸ್ಯಕುಲೇ ಶ್ರೀಮಾನ್ ಅಭಂಗುರ ಗುಣೋದಯಃ ।
ಅಪಾಸ್ತದುರಿತಾಸಂಗ ಸಂಗಮೋನಾಮಭೂಪತಿಃ ॥
ಆಸನ್‌ಹರಿಹರಃಕಂಪರಾಯೋ ಬುಕ್ಕ ಮಹೀಪತಿಃ ।
ಮಾರಪೋ ಮುದ್ದಪಶ್ಚೇತಿ ಕುಮಾರಾಸ್ತಸ್ಯ ಭೂಪತೇಃ ॥
ಪಂಚಾಸನಾತ್ಮನಾಂ ತೇಷಾಂ ಪ್ರಖ್ಯಾತೋ ಬುಕ್ಕಭೂಪತಿಃ ।
ಪ್ರಚಂಡವಿಕ್ರಮೋ ಮಧ್ಯೇ ಪಾಂಡವಾನಾಮಿವಾರ್ಜುನಃ ॥"

(ಅದೇ ಎ. ಕ. ೫-೨೫೬ ಹೆಮ್ಮಿಗೆ).

ಯದು – ವಾಸುದೇವ – ಸಂಗಮ – ಹರಿಹರಾದಿಯರು (ಪಂಚಾನನಾತ್ಮರು) ಮತ್ತು ಬುಕ್ಕನ ಉಲ್ಲೇಖಗಳು ಈ ಬಗೆಗೆ ಸಮುಚಿತ ಸಂಬಂಧಿಗಳಾಗಿವೆ.

೪) "ಶ್ಲಾಘ್ಯೇತಸ್ಮಿನ್ಯಧೋರ್ವಂಶೇ ಸಂಜಾತಃ ಸಂಗಮೇಶ್ವರಃ ।
ಸಂಗಮಃ ಶ್ರೀಸರಸ್ವತ್ಯೋರಭೂದ್ಯತ್ರಾತಿ ದುರ್ಲಭಃ ॥
ಆಕರಾದ್ಗುಣರತ್ನಾನಾಂ ತಸ್ಮಾತ್ ಶ್ರೀಸಂಗಮೇಶ್ವರಾತ್ ।
ಪಾರಿಜಾತ ಇವಾಂಭೋಧೇರುದಭೂದ್ಬುಕ್ಕಭೂಪತಿಃ ॥"

(ಮೈ. ಆ. ರಿ. ೧೯೨೪–೨೫)

ಯದುವಂಶದಲ್ಲಿ ಸಂಗಮನ ಸ್ಥಾನಮಾನಗಳು, ಅವನಿಂದ ಹುಟ್ಟಿದ ಬುಕ್ಕರಾಜನ ಈ ಉಲ್ಲೇಖಗಳು ಮನನೀಯಗಳು.

೫) "ಅಸ್ತಿಸ್ವಸ್ತ್ಯಯನಂ ಭೂಮೇರ್ವಂಶಃ ಪ್ರಾಂಶುರಕುಂಠಿತಃ ।
ಯದೂನಾಂ ಕೃಷ್ಣಬಂಧೂನಾಂ ತಲ್ಲೀಲಾ ನಿತ್ಯಸಾಕ್ಷಿಣಾಂ ॥
ತತ್ರ ಸಾಗಮಭೂಪಾಲಃ ಕ್ಷೀರಾಬ್ಧೇಶ್ಚಂದ್ರಮಾ ಇವ ।
ಆವಿರಾಸೀತ್ಕಲಾ ನಾಥಃ ಕಾಮಾಯಿ ಚಂದ್ರಿಕಾಪ್ರಿಯಃ ॥
ತೌದಂಪತೀ ಸಮಾರಾಧ್ಯ ಪಂಪಾಯಃ ಪ್ರಾಣವಲ್ಲಭಂ ।
ತತ್ಪಂಚವದನ ಪ್ರಖ್ಯಾನ್ಪ್ರತ್ರಾನ್ ಪ್ರಾಪ್ತೌಮಹೌಜಸಾ ॥"

(ಮೈ. ಆ. ರಿ. ೧೯೪೧–೪೮)

ಯದುವಂಶದಲ್ಲಿ ಕೃಷ್ಣ–ಸಂಗಮ–ಹರಿಹರಾದಿಯರ ಉತ್ಕರ್ಷ ಹೇಳಲಾಗಿದೆ. ಹರಿಹರಾದಿಯರು ಈಶ್ವರನ ಪಂಚವದನರಂತೆಂದಿದೆ !

ವಿಜಯನಗರ ರಾಜ್ಯದ ಮೊದಲ ಚಕ್ರವರ್ತಿಯಾದ ಮೊದಲ ಹರಿಹರನ ಬಗೆಗೆ ಅವನ ತಂದೆ–ತಮ್ಮಂದಿರ ಬಗೆಗೆ-ಶಾಸನಗಳಲ್ಲಿ ಹೇಳಿದ ಈ ಮಾತುಗಳು ಕೇವಲ ಕವಿಸಮಯದ ಹೊಗಳಿಕೆಗಳಲ್ಲ: ವಾಸ್ತವಿಕವಾಗಿ ಹಲವೆಡೆಯ–ಉಲ್ಲೇಖಗಳಾಗಿವೆ. ಲಕ್ಷ್ಮೀಶನು ೧ನೆ ಹರಿಹರನ ಸಮಕಾಲಿಕನಾಗಿರಬೇಕೆಂಬುದು ಆತನ ಕಾವ್ಯದ ಉಲ್ಲೇಖಗಳಿಂದಲೂ, ಅಂತಹ ಬಗೆಗೆ ಸಂವಾದಿಗಳಾಗಿರುವ ಶಾಸನಗಳಿಂದಲೂ ಸುವ್ಯಕ್ತ !

ಕನ್ನಡ ಜೈಮಿನಿ ಭಾರತದ (೧೭–೪೨) 'ಜಿತತಮಂ–? ಎಂಬಾ ಪದ್ಯದ ಕೊನೆಗೆ 'ಚಕ್ರಿಯವತಾರದ ಶಕದುನ್ನತಿಗಳಂ ತಳೆದೆಸೆವ ದಿನಪ' ನೆಂಬ ರೂಪಕದಲ್ಲಿ ಈ ಹರಿಹರನ ರಾಜ್ಯಪ್ರಾಪ್ತಿಯೊಂದು 'ಶಕ'ವೆಂದು ವಿಶೇಷತಃ ಭಂಗ್ಯಂತರದಲ್ಲಿ ಕವಿ ಹೇಳಿರಬಹುದೆಂದು ಭಾವಿಸಬಹುದು. 'ಚಕ್ರಿಯವತಾರ–ದಶಕದುನ್ನತಿಗಳಂ' ಕವಿ ಹೇಳಿರಬೇಕೆಂದೂ, ಈ ಕೃತಿ ೧೩೩೫ ರ ಮೇಲೆ ೧೦ ವರ್ಷದಲ್ಲಿ (೧೪೪೫–೪೭ ರಲ್ಲಿ) ರಚಿತವಿರಬೇಕೆಂದು ಶ್ರೀ ಸಿ. ಕೆ. ನಾಗರಾಜರಾಯರು ಹೇಳಿದ್ದರು. ಆದರೆ, ೧ನೆಯ

ಹರಿಹರನ ರಾಜ್ಯ ಪ್ರಾಪ್ತಿಯನ್ನೆ 'ಶಕ' ವೊಂದೆಂದು ಕವಿ ಪರಿಭಾವಿಸಿದನೆಂದು ತಿಳಿದರೆ, ಇ. ೧೩೩೫-೩೬ ರಲ್ಲಿ ಈ ಕೃತಿ ರಚಿತವೆನ್ನಲಡ್ಡಿಯಿಲ್ಲ!

ಕುಮಾರವ್ಯಾಸ ಪಾಂಡವರ ರಾಜ್ಯಪ್ರಾಪ್ತಿಯಾದ ವರೆಗಿನ ಕತೆಯನ್ನು ಪಾಂಡವ ಸ್ಥಾಪನಾಚಾರ್ಯ 'ಕೃಷ್ಣಚರಿತೆ' ಯನ್ನಾಗಿ ಬರೆದನು. ಲಕ್ಷ್ಮೀಶ ಪಾಂಡವ ಅಶ್ವಮೇಧ ಕತೆಯನ್ನು ಪಾಂಡವ ಸ್ಥಾಪನಾಚಾರ್ಯ 'ಕೃಷ್ಣಚರಿತೆ' ಯನ್ನಾಗಿ ಬರೆದನು. ಪಾಂಡವರೆಂದು ಹೆಸರುಗೊಂಡ ವಿಜಯನಗರದ ದೊರೆಗಳಲ್ಲಿ ಮೊದಲನೆಯ ಹರಿಹರ ರಾಜ್ಯಪ್ರಾಪ್ತಿಯ ಕಾಲದಲ್ಲಿ, 'ಈ ಮತಿಗೆ ಗೋಚರಿಸೆ' (೩೪-೪೦), ಲಕ್ಷ್ಮೀಶನು ಜೈಮಿನಿ ಭಾರತವನ್ನು ಬರೆದನೆಂಬುದು ಸೂಕ್ತ!

ಅನುಬಂಧ : ೧

೧) ೧ನೆಯ ಹರಿಹರನ ಎಲ್ಲಾ ಶಾಸನಗಳಲ್ಲಿ ಅವನನ್ನು ಮಹಾಮಂಡಲೇಶ್ವರನೆಂದೇ ಹೇಳಿದೆ ಇದಕ್ಕೆ ಅಪವಾದವಾಗಿ, ಒಂದೇ ಒಂದು ಶಾಸನದಲ್ಲಿ ಮಾತ್ರ ಅವನಿಗೆ 'ಮಹಾರಾಜಾಧಿರಾಜ, ರಾಜಪರಮೇಶ್ವರ, ಇತ್ಯಾದಿ ಬಿರುದುಗಳಿವೆ. ಈ ಎ. ಕ-೫, ಅರಸೀಕೆರೆ ೧೪೫ ಹಿರೇಗಂಡಸಿಯ ಶಿಲಾಶಾಸನ. ಕಾಲ ಇ. ೧೩೪೩.

೨) ವಿದ್ಯಾರಣ್ಯ ಕಾಲಜ್ಞಾನ ಎಂಬ ಗ್ರಂಥದಲ್ಲಿ, ಹರಿಹರನನ್ನು ವಿದ್ಯಾರಣ್ಯರು ಪೂರ್ಣಾಭಿಷೇಕದಿಂದ ಪಟ್ಟವನ್ನು ಕಟ್ಟಿ, ಅವನಿಗೆ ಸಿಂಹಾಸನ, ಕಟಕ, ಕಿರೀಟಗಳನ್ನು ಕೊಟ್ಟನೆಂದು ಹೇಳಲಾಗಿದೆ. (ಮಂಗಳೂರ ಶ್ರೀ ಎಂ. ಮುಕುಂದ ಪ್ರಭುಗಳು ಈ ೨ ವಿಚಾರಗಳನ್ನು ತಿಳಿಸಿ ಉಪಕರಿಸಿದ್ದಾರೆ).

"೧ನೆ ಹರಿಹರನ ಪಟ್ಟವಾಗಿ ೧೦ ವರ್ಷ ಕಳೆದಾಗಲೇ ಆತ ಚಕ್ರವರ್ತಿಯೆಂದು ಹೇಳಲಾಗಿದೆ; ಆಮೇಲೇನೇ ಲಕ್ಷ್ಮೀಶ ಈ ಕೃತಿ ಬರೆದನೆನ್ನುವುದು" (ಶ್ರೀ ಸಿ. ಕೆ. ನಾಗರಾಜರಾವ್) ಬೇಕಾಗಿಲ್ಲ! ೧೩೪೩ ನೆ ಇಸ್ವಿಯಲ್ಲಿ ಆತನಿಗೆ 'ಮಹಾರಾಜಾಧಿರಾಜ, ರಾಜಪರಮೇಶ್ವರ, ನೆಂದುದು ಇಲ್ಲಿ ತಿಳಿಯುತ್ತದೆ. ವಿಜಯನಗರದಲ್ಲಿ ಆತನ ಪಟ್ಟಾಭಿಷೇಕಕ್ಕೆ ವಿದ್ಯಾರಣ್ಯರು ನೀಡಿದ ವಸ್ತುಗಳೂ ಗಮನೀಯಗಳಾಗಿವೆ. ೧ನೆ ಹರಿಹರನ ಪಟ್ಟಾಭಿಷೇಕದ ವಿಚಾರವನ್ನೆತ್ತಿಕೊಂಡು, ಲಕ್ಷ್ಮೀಶನು ಈ ಕನ್ನಡ ಜೈಮಿನಿ ಭಾರತವನ್ನು ಇ. ೧೩೩೫-೩೬ ರಲ್ಲಿ ಬರೆದನೆನ್ನಲು ಅದಾವ ಅಡ್ಡಿಯೂ ಇಲ್ಲ!

(ಸಾಹಿತ್ಯ ತರಂಗವೆಂಬ ನನ್ನ ಸಂಕಲನದಲ್ಲಿ ಇದು ಪ್ರಕಟವಾಗಲಿದೆ!)

ಅನುಬಂಧ : ೨

೧) ಸಂಸ್ಕೃತ ಜೈಮಿನಿ ಭಾರತದಲ್ಲಿ, 'ಬಭ್ರುವಾಹನ ರಾಜ್ಯದ ಹೆಂಗುಸರ ಎದೆ, ತಲೆ, ಮೂಗುಗಳಲ್ಲಿ ಮುತ್ತುಗಳಿವೆ' ಯೆಂದುದರಿಂದ 'ಈ ಮೂಗುತಿ

೧೦೦೦-೧೩ರ್ಳ ರ ಮಧ್ಯಭಾಗದಲ್ಲಿ ಮುಸಲ್ಮಾನರ ಆಕ್ರಮಣದ ನಂತರ ಪರಕೀಯ ರಿಂದ ತರಲ್ಪಟ್ಟಿದೆ' ಯೆಂದು, ಆ ಮೇರೆಗೆ ಆ ಕೃತಿ ೧೫ ನೆ ಶತಕದಲ್ಲಿ ಬರೆದಿರ ಬೇಕೆಂದು ಡಾ. ವಾಮನ ಬೇಂದ್ರೆಯವರ ಆಶಯ ಸರಿಯಾಗದು !

ಮೂಗುತಿ ಸಾವಿರಾರು ವರ್ಷದ ಹಿಂದಿನ ಕೃತಿಗಳಲ್ಲಿ ಹೇಳಿದೆ. ದುಷ್ಟ ಬುದ್ಧಿಯ ವಿಲಾಪದಲ್ಲಿ 'ಕಾಶ್ಮೀರಮಿವ ಸಂಭಿನ್ನಂ ಲಿಂಗಂ ಪಾಖಂಡಿಭಿರ್ನರೈಃ' ಎಂದುದರಿಂದ, ಸು. ೧೦ ನೆ ಶತಕದ ಮೇಲೆ ಸಂಸ್ಕೃತ ಜೈಮಿನಿಭಾರತ ರಚಿತವಾಗಿರ ಬೇಕೆಂದು ಕಾಣುತ್ತದೆ.

೨) 'ಕೃಷ್ಣಾಂತ=ಕೃಷ್ಣದೇವರಾಯ'ನ ಕಾಲದಲ್ಲಿ ಲಕ್ಷ್ಮೀಶ ಇದ್ದಿರಲಾರ ನೆಂದು ಶ್ರೀ ಗೋವಿಂದ ಪೈಗಳು ವಿವರಿಸಿದ್ದಾರೆ. ಆದರೆ, ಅವರು, ಅರ್ಜುನ ವಿಲಾಪದ 'ಲಿಂಗವಿಲ್ಲದಪೀಠವಹಾಗಿರದೆ ಪಾಂಡವರ ಸಿರಿಯನ್ನು ನೀನಿಲ್ಲದಾಗ' ಎಂಬುದಕ್ಕೆ, 'ಮುಸಲ್ಮಾನರು ದಕ್ಷಿಣ ಭಾರತಕ್ಕೆ ದಾಳಿಯಿಟ್ಟುದನ್ನು' ಸೂಚಿಸುತ್ತಾ, ಲಕ್ಷ್ಮೀಶ ಆ ಕಾಲದ ಮೇಲೆ ಕವಯಿಸಿದನೆಂದು ಹೇಳಿದ್ದಾರೆ ! ಈ ಮೇಲಿಂದ 'ಕಾಶ್ಮೀರದ ಲಿಂಗ' ವೆಂಬುದೇ ಇಲ್ಲಿ ಹೇಳಿರಬೇಕು. ಶ್ರೀ ಪೈಯವರು ಮೂಲ ಕೃತಿಯನ್ನು ಇಲ್ಲಿ ಗಮನಿಸಿಲ್ಲೆಂದು ಕಾಣುತ್ತದೆ !

೩) ಕನ್ನಡ ಜೈಮಿನಿ ಭಾರತದ ೧ನೆಯ ಸಂಧಿಯ ಕೊನೆಯ ಪದ್ಯವಾಗಿ 'ವಿದ್ವತ್ಸಭಾವಲಯಮರಿಯೆ' ಎಂದಿರಬೇಕು. ಈ ಬಗೆಗೆ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ತಾಳಿಗರಿಯಲ್ಲಿಯೂ (ಕ್ರಮಾಂಕ ೨೨೬೫), ಮೈಸೂರ ೨ ಪ್ರತಿ ಗಳಲ್ಲಿಯೂ ತಕ್ಕಂತೆ (ಡಾ. ವಾ. ಬೇಂದ್ರೆಯವರ ಮಾತು) ಆಧಾರಗಳಿವೆ ! (ಧಾರ ವಾಡದ ಹಸ್ತಪ್ರತಿಯನ್ನು ನನಗೆ ಎರವಲಾಗಿ ನೀಡಿದ ಡಾ. ಎಸ್. ಎಂ. ವೃಷ ಭೇಂದ್ರ ಸ್ವಾಮಿಯವರ ಉಪಕಾರ ಸ್ಮರಣೀಯ !)

೪) ಕನ್ನಡ ಜೈಮಿನಿ ಭಾರತದ ಕೊನೆಯಲ್ಲಿಯೂ ತಕ್ಕಂತೆ ಪದ್ಯಗಳು ಬರೆ ದಿಲ್ಲ. ಆ ಸಂಧಿಯ ೪೧ನೆ ಪದ್ಯವಾಗಿ ಈಗ ಮುದ್ರಿಸಿರುವುದೇ ಕವಿಯ ಪರಿಚಯ ವನ್ನು ತಿಳಿಸುವುದರಿಂದ ಮಂಗಲಪದ್ಯವಾಗಿರಬೇಕೆಂದು ಕಾಣುತ್ತದೆ !

ಸಂಸ್ಕೃತ-ಕನ್ನಡ-ಜೈಮಿನಿ ಭಾರತಗಳಲ್ಲಿಯ ಇಂತಹ ಕೆಲವು ಜಿಜ್ಞಾಸೆಗಳನ್ನು ನನ್ನ ಬೇರೊಂದು ಲೇಖದಲ್ಲಿ ವಿವರಿಸಿದ್ದೇನೆ (ಸಾಹಿತ್ಯ ತರಂಗದಲ್ಲಿ ಆ ಲೇಖ ಪ್ರಕಟ ವಾಗಲಿದೆ).

ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಥಮ ಹೊಯ್ಸಳ ತಾಮ್ರಶಾಸನ

ಎಸ್. ರಾಜಶೇಖರ

ಬಳ್ಳಾರಿ ಜಿಲ್ಲೆಯ ಸಂಡೂರ ತಾಲೂಕಿನ ತಾರಾನಗರದ ಬಳಿ ನಾರಿಹಳ್ಳ ಪ್ರಾಜೆಕ್ಟ್ ಕೆಲಸ ನಡೆಯುತ್ತಿರುವಾಗ, ಹತ್ತಿರದ ಪಾಳುಬಿದ್ದ ವೀರಾಪುರ ಗ್ರಾಮದ ಹಳೆಯ ಮನೆಯೊಂದರಲ್ಲಿ ಮೂರು ತಾಮ್ರಶಾಸನಗಳು ದೊರೆತವು. ಇವುಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ವರಿಷ್ಠರಾದ ಡಾ॥ ಷ. ಶೆಟ್ಟರ್ ಅವರ ಆದೇಶದ ಮೇರೆಗೆ ನಾನು ೧೯೭೪ ರ ಮಾರ್ಚ ತಿಂಗಳಿನಲ್ಲಿ ತಾರಾನಗರಕ್ಕೆ ಹೋಗಿ, ಆ ತಾಮ್ರಪಟಗಳನ್ನು ಸ್ವಚ್ಛಗೊಳಿಸಿ, ಅವುಗಳ ಛಾಯಾಚಿತ್ರದೊಂದಿಗೆ ಶಾಸನಗಳ ಪಾಠವನ್ನೂ ಸಹ ಪಡೆದುಕೊಂಡು ಬಂದೆನು. ಆ ಪಾಠವನ್ನೇ ಇಲ್ಲಿ ಕೊಡಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಪ್ರಥಮ ಹೊಯ್ಸಳ ತಾಮ್ರಶಾಸನವಿದು. ಇದರಲ್ಲಿ ಒಟ್ಟು ಮೂರು ಫಲಕಗಳಿದ್ದು, ಪ್ರತಿಯೊಂದು ಸುಮಾರು ೧'.೫" ಎತ್ತರ ಮತ್ತು ೮'.೫" ಅಗಲ ಇವೆ. ಇವುಗಳ ಮೊದಲ ಫಲಕದ ಹಿಂಬದಿ, ಎರಡನೇ ಫಲಕದ ಎರಡೂ ಬದಿ ಮತ್ತು ಮೂರನೇ ಫಲಕದ ಮುಂಬದಿಯಲ್ಲಿ ಮಾತ್ರ ಶಾಸನ ಕೊರೆಯಲಾಗಿದೆ. ಮೊದಲನೇ ಫಲಕದ ಹಿಂಬದಿಯಲ್ಲಿ ೧೯ ಸಾಲುಗಳು, ಎರಡನೇ ಫಲಕದ ಮುಂಬದಿಯಲ್ಲಿ ೨೧ ಸಾಲುಗಳು ಮತ್ತು ಮೂರನೇ ಫಲಕದ ಮುಂಬದಿಯಲ್ಲಿ ೧೯ ಸಾಲುಗಳು ಇವೆ.

ತಾಮ್ರಪಟಗಳನ್ನು ಜೋಡಿಸುವ ಕೊಂಡಿ (ಉಂಗುರ) ಮತ್ತು ಮುದ್ರೆ ಕಳೆದು ಹೋಗಿವೆ. ಇದು ಹೊಯ್ಸಳ ಅರಸ ನರಸಿಂಹನ ಕಾಲದ ಶಾಸನ. ಶಾಸನದ ಕಾಲ ಶಕವರ್ಷ ೧೧೪೬ ನೆಯ ತಾರಣ ಸಂವತ್ಸರ ಪುಷ್ಯಶುದ್ಧ ಏಕಾದಶಿ ಆದಿತ್ಯವಾರ. ಶಾಸನದ ಪಾಠ ಇಂತಿದೆ :

ಮೊದಲನೇ ಪಟ (ಹಿಂಬದಿ)

೧. ಪಾಯಾದ್ಭುಜಂ ನೃಸಿಂಹಸ್ಯ ದಂಷ್ಟ್ರಿಕಾ ಪೂರ್ವ್ವಪೋತ್ರಿಣಃ
೨. ಸಹಾಧ್ಯಾಯಾನುಬಂಧೇನ ಭುವನೋದ್ಧಾರ ಕರ್ಮ್ಮಣೆ ॥
೩. ಸಳನೆಂಬಯಾದವಂ ಪೊಯ್ಸಳನಾದಂ ಶಶಕಪುರದ

೪. ವಾಸಂತಿಕೊಯೊಳ್ಮಿಳಿದು ಪುಲಿ ಪಾಯ್ವುದುಂ ಪೊ
೫. ಯ್ಸಳ ಎನೆ ಮುನಿ ಬಟುಕಮಾಯ್ತು ಪೊಯ್ಸಳ ವಂ
೬. ಶಂ॥ ಎನಿಬರ್ಪೂರ್ವಯ್ಸಳ ವಂಶ್ಯರಂ ನಿಬರುಂ ಪ್ರಖ್ಯಾತ
೭. ರಾರಾಯರೊಳೆ ವಿನಯಾದಿತ್ಯನವಂಗೆ ಪುತ್ರನೆಱ
೮. ಯಂಗಂ ತತ್ಸುತಂ ವಿಷ್ಣು ತತ್ತನೂಜಾತಂ ನರಸಿಂಗನಾತನ
೯. ಮಗಂ ಬಲ್ಲಾಳನಾತಂಗೆ ಸೂನು ನೃಸಿಂಹಂ ಮಗರಾಧಿರಾ
೧೦. ಯಲಯಕುಳಚೋಳನಿಸ್ತಾರತಂ॥ ಕಡಿತಕ್ಕೇಱಿತ್ತು ನಾ
೧೧. ಲ್ಕುಂ ಕಡಲ ಕಡೆವರಂಧಾತ್ರಿ ಕೀರ್ತಿಸ್ರುಜಂ ಸೋಮರ್ಮ್ಮಡಿಗಳ್ಗೇಱು
೧೨. ತ್ತು ದಿಕ್ಕಾಂತೆಯರ್ಗ್ಗೆ ಸಕಳ ದಿಕ್ಪಾಳರುತ್ತಂ ಸಮಂ ಪಾಯ್ದಡ
೧೩. ರ್ದೇಱಿತ್ತಾಜ್ಞೆ, ಸಿಂಹಾಸನಮನೊಸೆದು ತಾನೇಱಿ ಕುಳ್ಳಿರ್ಪುದುಂ
೧೪. ನೂರ್ಮ್ಮಡಿ ವೀರನಾರಸಿಂಹಂ ಯದುಕುಳ ತಿಳಕಂ ಸೋಮವಂಶ
೧೫. ಪ್ರದೀಪಂ॥ ಆ ನಾರಸಿಂಹದೇವ ಸಭಾನಳಿನೀ ರಾಜಹಂಸನಾಶ್ರಿ
೧೬. ತ ಜನತಾದಾನಾಭಿ ಮಾನನಮಿತ ಚಮೂನಾಥಂ ರಾಯದಂಡ
೧೭. ನಾಯಕ ಹನುಮಂ॥ ಆತನ ಕಲಿ ಬಲ್ಲಾಳನ ತಾತನ ಪದ್ಮಾಂ
೧೮. ಂಬಿಕಾ ಪವಿತ್ರೋದರ ಸಂಜಾತನ ಭಾರಧ್ವಾಜ ಖ್ಯಾತನ ಕಾಣ್ವಾ
೧೯. ನ್ವಯಾಭಿ ಜಾತನ ಜನಕರ್॥ ಪುರುಷತ್ರಯ ಮೋಮೇಣಿದು

ಎರಡನೇ ಪಟ (ಮುಂಬದಿ)

೨೦. ಪುರುಷಾರ್ತ್ಥತ್ರಯಮೋ ಪೇೞೆಮೆನೆ ಮೂವರ್ಸ್ಸೋದರರುಂಪೆ
೨೧. ಸರ್ವ್ವಡೆ ದರ್ವ್ವಾಮರಸಂ ಲಕುಮರಸನಮರದಂಡಾಧೀಶಂ॥ ಆ ಮೂ
೨೨. ವರೊಳಗ್ರಭವಂ ವಾಮರಸವಿತರಣೈಕಲಕ್ಷ್ಮೀ ವಿಕಚತ್ತಾಮರಸಂ
೨೩. ವೀರಗುಣೋದ್ದಾಮರಸಂ ಪಡೆದ ಪುತ್ರನಮಿತ ಚಮೂಪಂ॥ ಮೊ
೨೪. ನೆಯೊಳೆ ಮತ್ಕರವಾಳಂ ಮನೆಯೊಳೆ ಮನ್ಮಂತ್ರ ಸಿದ್ಧಿ ಸಂಕಟ ದೊ
೨೫. ಳೆ ಮತ್ತನುವೆನಿಪ ಸವಿ (?) ಹಿತಂ ರಾಯನೃಸಿಂಹನ ನಚ್ಚಿನಚ್ಚುಪೆ
೨೬. ಸಳ ಹನುಮಂ॥ ಇಱಿಯಲೆ ಕಲ್ತುಬಟಿಕಮಿಲ್ಲ ಸರಿಭಂಗಂ ಶೌರ್ಯಜಾ (?)
೨೭. ದೊಳೆ ಚಾಗಮುಂ ಮಱಿಯಲೆ ಕಲ್ತ ಬಟಿಕ್ಕಮಿಲ್ಲ ಕಲಿಕಂದೌದಾರ್ಯದೊ
೨೮. ಳೆ ಪೆರ್ಮ್ಮೆಯಿಂ ಪೆಱರಾಪ್ಪೂರ್ವಯ್ಸಳರಾಜ್ಯದೊಳೆ ಪೆಸರ್ಗ್ಗೊಳಲೆದಂಡಾಧಿಪ
೨೯. ರ್ಮ್ಮೇಸಲೇಱಿಱಿವಂ ಗೆಲಸಗೆ ಚಾಗವಿೂವನಮಿತಂ ಶೌರ್ಯಂ
ಜನಾನಂದನಂ
೩೦. ಅಮಿತಂ ರಾಯನೃಸಿಂಹ ಪೆಸಳ ಹನುಮಂ ವೀರದೊಳೆ ಜಾಗ ದೊ
೩೧. ಳೆ ಹಿಮಸೇತು ಪ್ರತಿಬದ್ಧಮಪ್ಪ ಜಸಮಂ ಕಯ್ಕೊಂಡ ನಾ ತಂದೆಯಿಂದ
೩೨. ಮಗಂ ವೀರನುದಾರನೆಂಬ ಗುಣದಿಂದೊಪ್ಪಿರ್ದ್ದಪಂ ತಂದೆಗೊಂದು
ಮುಖಃಕ್ಕಗ್ಗಳ

೩೩. ಮಾದಕ್ಷ (ಣ್ಮ)ಕನವೊಲೆ ಬಲ್ಲಾಳದಂಡಾಧಿಪಂ ॥ ಸ್ವಸ್ತಿ ಸಮಸ್ತ ಭು
೩೪. ವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ
೩೫. ದ್ವಾರಾವತೀಪುರವರಾಧೀಶ್ವರಂ ಯಾದವ ಕುಳಾಂಬರದ್ಯುಮಣಿ ಸಂ
೩೬. ಮ್ಯಕ್ತ ಚೂಡಾಮಣಿ ಮಲೆರಾಜ ರಾಜನ ಪ್ರಮಿತ ತೇಜಂ ಮಲಿಪರೊ
೩೭. ಳ್ ಗಂಡಂ ಗಂಡಭೇರುಂಡನಸಹಾಯಶೂರಂ ಮಂದರಧೀರಂ ಶನಿವಾರಸಿ
೩೮. ದ್ಧಿ ಶರಣಾಗತವಾರ್ಧಿ ಗಿರಿದುರ್ಗಮಲ್ಲಂ ವೈರಿಸಿರಸೆಲ್ಲಂ ಚಲದಂಕರಾ
೩೯. ಮನಪಿತಗಜಭೀಮಂ ಚೋಳರಾಯ ರಾಜ್ಯೋದ್ಧಾರಕ ಮಗರಾಧಿರಾ
೪೦. ಯಂ ಸೈನ್ಯಸಂಹಾರಕಂ ಬ್ಯ (?) ಳನಲ್ಲೂ (?) ರ ಪುರ ಕಾಳಾಗ್ನಿರುದ್ರ

ಎರಡನೇ ಪಟ (ಹಿಂಬದಿ) :

೪೧. ಆಶಿಳೊರ್ತ್ತೈಳದುರ್ಗ ನಿರದಲಯಾನಳಂ ದ್ರವಿಳ ಮಂಡಳನಿ
೪೨. ರ್ದ್ಧಾವು ಧಾವಂ ಬಾಣೋಧರೆಯ ಗಜಘಟಾಸಹಿತ ಸಪ್ತಾಂ
೪೩. ಗ ಗ್ರಹಣ ಭುಜಬಳಮಲ್ಲಂ ನಿಶ್ಶಂಕ ಪ್ರತಾಪ ಚಕ್ರವರ್ತಿ ಹೊ
೪೪. ಯ್ಸಳ ಶ್ರೀ ವೀರನಾರಸಿಂಹದೇವರ ಪೂರ್ವ್ವ ದಿಗ್ವಿಜಯದೊಳ್
೪೫. ಪೂರ್ವ್ವಸಾಧಿತ ಕರಿತುರಗರತ್ನವಸ್ತುವಿಸ್ತಾರಿತ ವಿಜಯ
೪೬. ಲಕ್ಷ್ಮೀವಿಳಾಸಮೆಸೆಯೆ ನಿಜರಾಜಧಾನಿ ಘೋರಸಮುದ್ರದ
೪೭. ನೆಲೆವೀಡಿನೊಳ್ಸುಖ ಸಂಕಥಾವಿನೋದದಿಂ ಪೃಥ್ವಿರಾಜ್ಯಂಗೆಯ್ವುತ್ತು
೪೮. ಮಿರೆ ತತ್ಪಾದ ಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಮಹಾಪಸಾ
೪೯. ಯ್ತಂ ಯಾದವರಾಯ ದಕ್ಷಿಣ ಭುಜಾದಂಡಂ ಪಗೆವೆಂಚ್ಚೆಗಂಡಂ
೫೦. ರಾಯ ನರಸಿಂಹ ಪೆಸಳ ಹನುಮಂತಂ ಹಯಾರೂಢ ರೇವನ್ತಂಸ
೫೧. ಬಳ ತ್ರಿಣೇತ್ರಂ ಸಜ್ಜನ ಮಿತ್ರನಾರೂಢ ವಿದ್ಯಾವಿಳಾಸ ವೀರ ವಿಜಯ
೫೨. ಲಕ್ಷ್ಮೀನಿತ್ಯನಿವಾಸನಮಿತಯ್ಯದಂಡನಾಯಕರ್ ಮುಂನಂ ॥ ಶ್ರೀ ವೀರಬ
೫೩. ಲ್ಲಾಳದೇವರ ಶ್ರೀಹಸ್ತದಿಂ ಧಾರಾಪೂರ್ಬಕಂ ಮಾಡಿ ಕಟ್ಟುಗುತ್ತಗೆ ಪಿಂ
೫೪. ಡಾ ದಾನಂ ಗದ್ಯಾಣ ಪಿರ್ಪ್ಪತ್ತಱ ಮೊದಲಂ ತಿಱುವಂತು ಬಿಡಿಸಿದ ಕಲ್ಕ
೫೫. ಣೆ ನಾಡೊಳ ಗಣಗ್ರಹಾರಂ ಶ್ರೀ ಪುರವನಾಗ್ರಾಮ (?) ಮಧ್ಯದೊಳ್ ತಾ
೫೬. ವೆತ್ತಿಸಿದ ತ್ರಿಕೂಟ ದೇವತಾಲಯದೊಳು ಪ್ರತಿಷ್ಠಿತರಾದ ಶ್ರೀ
೫೭. ಮದಮೃತೇಶ್ವರ ದೇವರ ಪಾಮೇಶ್ವರ ದೇವರ ಲಕ್ಷ್ಮೀನಾರಾಯಣದೇವರಂ
೫೮. ಗಭೋಗಕ್ಕಂ ರಂಗಪೂಜೆಗಂ ನಿತ್ಯನೈಮಿತ್ತಿಕ ನೈವೇದ್ಯಚೈತ್ರ ಪವಿತ್ರಾದಿ
೫೯. ಪಂಚ ಪರ್ಬಂಗಳಂ ಖಂಡಸ್ಫುಟಿತ–ಜೀರ್ಣೋದ್ಧಾರಕ್ಕಂ...ದಿಂದಂ ಸಲ್ವಂ

ಮೂರನೇ ಪಟ (ಮುಂಬದಿ)

೬೦. ತಾಗಿ ಪಾದ ಪೂಜೆಯಿತ್ತೆತ್ತು ಶ್ರೀವಿರನಾರಸಿಂಹದೇವರ ಶ್ರೀ
೬೧. ಹಸ್ತದಿಂ ಶ್ರೀ ವಜ್ರೇಶ್ವರದೇವರ ಸೋಮನಾಥದೇವರ ಸಂಸಿಥಾ

೬೨. ನದೊಳೆ ಶಕವರ್ಷ ೧೧೪೬ ನೆಯ ತಾರಣಸಂವತ್ಸರದ ಪುಷ್ಯ
೬೩. ಶುದ್ಧ ದೇಕಾದಶಿಯಾದಿತ್ಯವಾರದುತ್ತರಾಯಣ ಸಂಕ್ರಮಣ
೬೪. ವ್ಯತಿಪಾತದಂದಾ... ಕಸೀಖರ ಗ್ರಾಮವನಾದೇವರ್ಗೆ ಸರ್ವಬಾಧಾ
೬೫. ಪರಿಹಾರ ಸರ್ವ ನಮಸ್ಯವಾಗಿ ಧಾರಾಪೂರ್ಬಕಂ ಮಾಡಿ ಚಂ
೬೬. ದ್ರಾರ್ಕತಾರಂಬರಂ ಸಲ್ವಂತಾಗಿ ಬಿಟ್ಟದತ್ತಿ ಮಂಗಳ ಮಹಾ ಶ್ರೀ ॥ಶ್ರೀ॥
೬೭. ಸ್ವದತ್ತಾಂ ಪರದತ್ತಾಂ ವಾಯೋಹರೇತದಸುನ್ದರಾಂ ಷಷ್ಟಿಂ ವರ್ಷಸ
೬೮. ಹಸ್ರಾಣಿ ವಿಷ್ಟಾಯಾಂ ಜಾಯತೇಕ್ರಿಮಿಃ ॥ ಆಗ್ರಾಮಂದ ಚ
೬೯. ತುಸ್ಸೀಮೆ ಮೂಡಲ್ ಹಂದಿಗೊಳನಲ್ಲಿಂತೆಂಕ ಹೊಂನರಳಿಯಲ್ಲಿ ಪಡುವಹ
೭೦. ದರಿಯೊರ್ಬ್ಬೆಯತ ಮನೆಯಲ್ಲಿ ತೆಂಕಮರಗೂರ ದೇವದಾನದಕ
೭೧. ಲ್ಲಲ್ಲಿಂ ಪಡುವ ಹುಂಗಿಯ ಕೆಱೆಯ ಕಿಟ್ಬಿಯಲ ಮೂಲೆ ಪುಣಿಸೆಯ
೭೨. ಲ್ಲಿಂ ಪಡುವಲ್ಲುಂಡು ಗಲ್ಲಲ್ಲಿಂ ಪಡುವ ಹರಗಿನ ಬಟ್ಟೆಯೊಳಗಣ ಸಾತಿಸೆ
೭೩. ಟ್ಟಿಯ ಕೊಳನಲ್ಲಿಂದಾ ಬಟ್ಟೆಯ ಅಪ್ಪೂರ ಬಟ್ಟೆಯ ಕೂಡಲಲ್ಲಿಂ ಬಡಗಲೆ
೭೪. ಱೆಯ ಪೋಗಣ ಬಿಲೊಣೆಯಲ್ಲಿಂ ಬಡಗನಾಡು ತಿದ್ದಿದರಾಸಿ ಗಲ್ಲಲ್ಲಿಮೂ
೭೫. ಡಲಾನೆಗಲ್ಲಲ್ಲಿಂದಮಿಶಾನ್ಯ ದಡ್ಡಗ (?) ಲ್ಲಂತೀ ಚತುಸ್ಸೀಮೆಯೊಳಗಣ ನುಗ್ರಾ
೭೬. ಮಂಗಳೊಳಗೆ ದಣ್ಣಾಯಕರ ಪ್ರಭು ಸಾಮ್ಯಕ್ಕೆ ಮಾಡಿವೆರ್ಗ್ಗಡೆ..ಹಳ್ಳಿ ಮೆ (?)
೭೭. ಮಂ ದಣ್ಣಾಯಕನ ಕೆಱೆಯುಮನೆಂದೆಂದಿಗಂ ಮಾನ್ಯವಾಗಿ ಮಹಾಜನಂಗಳೆ
೭೮. ಸಲಿಸಿ ಬಹರೀಧರ್ಮಮುತ್ತರೋತ್ತರಾಭಿವರ್ಧಮಾನವಾಗಿಸಲೆ ಮಂಗಳ ಶ್ರೀ

ಪೊನ್ನ ಕವಿಯ ಒಂದು ಪದ್ಯ

ಹಂಪ ನಾಗರಾಜಯ್ಯ

೧.೦೦ ಪೊನ್ನಕವಿಯ ಶಾಂತಿಪುರಾಣದ ಮೊದಲನೆಯ ಆಶ್ವಾಸದಲ್ಲಿ ಬರುವ ಆರನೆಯ ಪದ್ಯ ಹೀಗಿದೆ :

ಗುರುವರದತ್ತ ದಿವ್ಯಮುನಿ ಪುತ್ರರುದಾತ್ತ ಶುಭಂಕರ ಪ್ರಭಂ
ಕರರವರೈಶ್ವರ್ಯಂ ನೆಗಟ್ದ ನೇಮಿಜಿನೇಶರ ಶಾಸನಕ್ಕೆ ಭಾ
ಸುರ ಪರಿರಕ್ಷಣ ಸ್ಥಿತಿಯನಿತ್ತಱುವುರ್ವಿಗಭೂತಪೂರ್ವಮಾ
ಗಿರೆ ದೊರೆವೆತ್ತ ಯಕ್ಷಿ ಬಗೆದೀಕ್ಷಿಸಿ ರಕ್ಷಿಸುಗೆಮ್ಮನೇಗಳುಂ !

ಈ ಪದ್ಯದ ಸ್ವಾರಸ್ಯವನ್ನು ತಿಳಿಯಬೇಕಾದರೆ ಜೈನಪುರಾಣಗಳ ಹಾಗೂ ಯಕ್ಷ-ಯಕ್ಷಿಯರ ಪರಿಚಯ ಇರಬೇಕಾಗುತ್ತದೆ. ಅಲ್ಲದೆ ವಿಸ್ತಾರವಾದ ಜೈನ ಜಾನಪದ ಕಥೆಯೊಂದು ಇಲ್ಲಿ ಹರಳುಗೊಂಡು ಕುಳಿತುಬಿಟ್ಟಿದೆ. ಅದರ ಹಿನ್ನೆಲೆ ತಿಳಿದಾಗ ಈ ಪದ್ಯದ ಸೊಗಸು ಸುರುಳಿ ಬಿಚ್ಚಿಕೊಳ್ಳುತ್ತದೆ.

೧.೦೧ ಮೇಲಿನ ಪದ್ಯದ ಸಾರಾಂಶ : ದಿವ್ಯಮುನಿಗಳಾದ ವರದತ್ತರು ಗುರುಗಳು. ಉದಾತ್ತ ಚರಿತರಾದ ಶುಭಂಕರ ಮತ್ತು ಪ್ರಭಂಕರರು ಅವರ ಶಿಷ್ಯರು. ಸಂಪತ್ತೆಲ್ಲವೂ ಶ್ರೇಷ್ಠ ನೇಮಿನಾಥ ತೀರ್ಥಂಕರನ ಧರ್ಮೋಪದೇಶದ ಪ್ರಚಾರಕ್ಕೆ. ಅವರು ನೀಡಿದ ಪ್ರಕಾಶಯುಕ್ತವಾದ ಧರ್ಮರಕ್ಷಣಸ್ಥಿತಿಯು ಜ್ಞಾನ ಲೋಕಕ್ಕೇ ಅಪೂರ್ವ. ಪ್ರಸಿದ್ಧಳಾದ ಯಕ್ಷಿಯು ವಿಚಾರಮಾಡಿ ನೋಡಿ ನಮ್ಮನ್ನು ಸದಾ ಕಾಪಾಡಲಿ.

೧.೦೨ ಈ ಪದ್ಯದಲ್ಲಿ 'ಯಕ್ಷಿ' ಎಂಬುದು ಯಾವುದೇ ಯಕ್ಷಿಗೆ ಅನ್ವಯವಾಗ ಬಹುದಾದ ರೀತಿಯಲ್ಲಿ ಸಾಮಾನ್ಯವಾಚಕದಂತೆ ತಟ್ಟನೆ ತೋರುತ್ತದೆ. ಆದರೆ ಒಟ್ಟು ಪದ್ಯದ ಅರ್ಥವನ್ನು ಹಿಡಿದಾಗ ಅದು ೨೨ನೆಯ ತೀರ್ಥಂಕರನಾದ ನೇಮಿನಾಥನ ಯಕ್ಷಿಗೆ ಸಲ್ಲಿಸಿದ ಪ್ರಾರ್ಥನೆಯೆಂದು ಸ್ಪಷ್ಟವಾಗುತ್ತದೆ. ಇದರ ಮುಂದಿನ ಪದ್ಯ ಈ ಸಂಗತಿಯನ್ನು ನಿರ್ದಿಷ್ಟಗೊಳಿಸುತ್ತದೆ. ಅದರಲ್ಲಿ (೧-೭) ಸರ್ವಾಹಣ ಯಕ್ಷನನ್ನು ಸ್ತುತಿಸಿದೆ. ಜೈನರ ಪ್ರತಿಯೊಬ್ಬ ತೀರ್ಥಂಕರನಿಗೂ ಒಬ್ಬೊಬ್ಬ ಯಕ್ಷ-ಯಕ್ಷಿಯರು ಇರುತ್ತಾರೆ. ಅಂಬಿಕೆ ಮತ್ತು ಸರ್ವಾಹಣರು ೨೨ನೆಯ ತೀರ್ಥಂಕರ ನೇಮಿನಾಥನ ಯಕ್ಷಿ-ಯಕ್ಷರು.

೧.೦೩ ನೇಮಿನಾಥನ ಯಕ್ಷಿಯಾದ ಅಂಬಿಕೆಗೆ ಅನೇಕ ಹೆಸರುಗಳಿವೆ : ಅಂಬಾ, ಅಂಬಿಕೆ, ಆಮ್ರಾ, ಆಮ್ರಕೂಷ್ಮಾಡೀ, ಕೂಷ್ಮಾಂಡಿ, ಚಾಮುಂಡಾ, ಅಂಬಿಲಾ. ತಾರಾ, ವಜ್ರಾ, ಧರ್ಮಾದೇವಿ, ಅಂಬಿಕಾಕಲ್ಪ (ಶುಭಚಂದ್ರ), ತಿಲೋಯ ಪಣ್ಣತ್ತಿ (ಜದಿಉಸಹ-ಯತಿವೃಷಭ); ಪ್ರವಚನ ಸಾರೋದ್ಧಾರ (ಆಶಾಧರ), ಅಪರಾಜಿತ ಪೃಚ್ಛ, ತ್ರಿಷಷ್ಟಿಶಲಾಕಾ ಪುರುಷ ಚರಿತ್ರೆ, ಪ್ರತಿಷ್ಠಾತಿಲಕ ಮುಂತಾದ ಗ್ರಂಥಗಳಲ್ಲಿ ಈಕೆಯ ವರ್ಣನೆ ಸಿಗುತ್ತದೆ. ಕನ್ನಡದಲ್ಲಿಯೂ ಪೊನ್ನಕವಿಯಲ್ಲದೆ ರನ್ನ. ಕರ್ಣಪಾರ್ಯ, ಮಂಗರಸ ಮೊದಲಾದ ಕವಿಗಳು ಈಕೆಯನ್ನು ಸ್ತುತಿಸಿದ್ದಾರೆ. ಈಕೆಯನ್ನು ದ್ವಿಭುಜೆ, ಚತುರ್ಭುಜೆ, ಅಷ್ಟಭುಜೆ ಎಂದು ವಿಶೇಷಣಿಸಿದ್ದಾರೆ. (ಹಂಪನಾ : ಯಕ್ಷ-ಯಕ್ಷಿಯರು, ಪುಟ ೧೩೬-೧೩೮). ಜೈನ ಪರಂಪರೆಯಲ್ಲಿ ಈಕೆಗೆ ವಿಶೇಷ ಮಾನ್ಯತೆ : ಮಹಾಮಾತ್ಯ ವಾಸ್ತುಪಾಲ ವಿರಚಿತ ಅಂಬಿಕಾಸ್ತವನ, ಜಿನೇಶ್ವರದತ್ತ ಸೂರಿಕೃತ ಅಂಬಿಕಾದೇವಿಸ್ತುತಿ ಮುಂತಾದ ಸ್ವತಂತ್ರ ಸ್ತೋತ್ರ ಸಾಹಿತ್ಯವಿದೆ.

೧.೦೪ ಅಂಬಿಕಾದೇವಿಯ ಪ್ರಾಚೀನವೂ ವಿಖ್ಯಾತವೂ ಆದ ಮೂರ್ತಿ ಗಿರಿನಾರ ಪರ್ವತದ (ಊರ್ಜಯಂತಗಿರಿ) ಅಂಬಾದೇವಿ ಶಿಖರದ ಮೇಲಿದೆ. ಈ ಮೂರ್ತಿಯನ್ನು ಸಮಂತಭದ್ರರು ಸ್ವಯಂಭೂಸ್ತೋತ್ರದಲ್ಲಿ (ಪದ್ಯ ೧೨೭) ಖಚರಯೋಷಿತೆಯೆಂದು ಹೇಳಿದ್ದಾರೆ. ಕನ್ನಡ ನಾಡಿನಲ್ಲಿಯೂ ಈ ಯಕ್ಷಿಯ ಸ್ವತಂತ್ರಮೂರ್ತಿಗಳು ವಿಪುಲವಾಗಿವೆ. ಇವುಗಳಲ್ಲಿ ಐಹೊಳೆಯ ಮೇಗುತಿ ದೇವಾಲಯದ ಮೂರ್ತಿ ಪ್ರಾಚೀನತಮ. ಶ್ರವಣಬೆಳಗೊಳದ ಚಂದ್ರಗಿರಿ ಮೇಲಿನ ಎರಡು ಕಟ್ಟೆ ಚಾವುಂಡರಾಯ ಬಸದಿ, ಕತ್ತಲೆ ಬಸದಿ, ಶಾಂತೀಶ್ವರ ಬಸದಿ, ಸವತಿ ಗಂಧವಾರಣ ಬಸದಿ ಮತ್ತು ಶಾಸನ ಬಸದಿಗಳಲ್ಲಿ ಈಕೆಯ ಮೂರ್ತಿಗಳಿವೆ, ಜಿನನಾಥಪುರದ ಶಾಂತೀಶ್ವರ ಬಸದಿಯ ಹೊರಗೋಡೆಯಲ್ಲಿರುವ ಸಮಭಂಗ ನಿಲುವಿನ ಮೂರ್ತಿ ಗಮನಾರ್ಹವಾಗಿದೆ.

೧.೦೫ ಅಂಬಿಕಾಯಕ್ಷಿಯ ಕಥೆ ಕನ್ನಡದಲ್ಲಿ, ಕಾವ್ಯರೂಪದಲ್ಲಿ ಮೊಟ್ಟಮೊದಲು ದಾಖಲಾಗಿರುವುದು ಪೊನ್ನಕವಿಯ ಶಾಂತಿಪುರಾಣದಲ್ಲಿ. ಅನಂತರ ಇದರ ವಿಸ್ತೃತರೂಪ ಪುಣ್ಯಾಸ್ರವ ಕಥಾಕೋಶದಲ್ಲೂ (ಸಂಸ್ಕೃತ-ರಾಮಚಂದ್ರ ಮುಮುಕ್ಷು), ಪುಣ್ಯಾಸ್ರವ ಚಂಪುವಿನಲ್ಲೂ (ಕನ್ನಡ–ನಾಗರಾಜಕವಿ), ಪ್ರತಿಷ್ಠಾಸಾರದಲ್ಲೂ (ಆಶಾಧರಸೂರಿ) ಕಂಡುಬರುತ್ತದೆ. ಹೀಗಾಗಿ ಪೊನ್ನನ ಉಲ್ಲೇಖಕ್ಕೆ ಚಾರಿತ್ರಿಕ ಮಹತ್ವವಿದೆ. ಸಂಸ್ಕೃತದಲ್ಲಿ ಜಿನಸೇನಕವಿಯ ಹರಿವಂಶಪುರಾಣದಲ್ಲಿ ಈಕೆಯ ಸ್ಮರಣೆಯಿದೆ (ಗೃಹೀತ...); ಇದು ಪೊನ್ನನಿಗಿಂತ ಒಂದು ನೂರುವರ್ಷ ಹಿಂದಿನದು.

೧.೦೬ ಅಂಬಿಕಾಯಕ್ಷಿಯ ಕಥೆ ಹೀಗಿದೆ : (ಸಂಗ್ರಹವಾಗಿ ಹೇಳಿದೆ). ಗಿರಿನಗರ (– ಗಿರ್ನಾರ್) ಭರತಖಂಡದ ಸೌರಾಷ್ಟ್ರ (ಗುಜರಾತ) ದೇಶದ ರಾಜಧಾನಿ. ಭೂಪಾಲ ಅಲ್ಲಿನ ರಾಜ. ವೈದಿಕ ಸೋಮಶರ್ಮನು ಪುರೋಹಿತ. ಈತನ ಮಡದಿ ಅಗ್ನಿಲಾದೇವಿ ಜೈನ ಧರ್ಮಿಯಳು. ಇವರಿಗೆ ಮಕ್ಕಳು ಶುಭಂಕರ ಮತ್ತು

ಪ್ರಭಂಕರ. ಸೋಮಶರ್ಮನು ತನ್ನ ತಂದೆಯ ತಿಥಿಯ ದಿನದಂದು ಪಿಂಡದಾನಕ್ಕಾಗಿ ನದಿಯ ಬಳಿಗೆ ಹೋದನು. ಗಿರಿನಗರದ ಸಮೀಪದ ಊರ್ಜಯಂತ ಗಿರಿಯಲ್ಲಿ ತಿಂಗಳ ಉಪವಾಸಾನಂತರ ವರದತ್ತ ಮುನಿಗಳು ಪಾರಣೆಗಾಗಿ ಚರ್ಯಾಮಾರ್ಗದಿಂದ ಬಂದರು. ವ್ರತಶುದ್ಧಳಾದ ಅಗ್ನಿಲಾದೇವಿ ಆಹಾರದಾನವನ್ನು ನೀಡಿದಳು. ವರದತ್ತರು ಆಶೀರ್ವದಿಸಿ ತೆರಳಿದರು.

ಆ ಸಮಯಕ್ಕೆ ಪಿಂಡದಾನ ಮಾಡಿದ ತಂಡ ಹಿಂತಿರುಗಿತು. ಜೈನಯತಿಗೆ ತಮಗಿಂತ ಮೊದಲು ಆಹಾರದಾನವಾಗಿರುವುದನ್ನರಿತು ಅವರೆಲ್ಲ ಕ್ರೋಧೋನ್ಮತ್ತರಾದರು. ಹಸಿದಿದ್ದರಿಂದ ಕೋಪ ಕೆಚ್ಚಾಯಿತು. 'ಸೋಮಶರ್ಮನೆ, ನಿನ್ನ ಮನೆಯಲ್ಲಿನ ಅನ್ನ ಎಂಜಲಾಗಿದೆ. ಅದನ್ನು ತಿಂದು ನಿನ್ನ ಪಿತೃಗಳನ್ನು ನರಕಕ್ಕೆ ಕಳಿಸಿ ನಮ್ಮ ಬ್ರಾಹ್ಮಣ್ಯವನ್ನು ಹಾಳುಮಾಡೆವು' ಎಂದು ಹೊರಟುನಿಂತರು. ಸೋಮಶರ್ಮನು 'ಅಪರಾಧ ಮನ್ನಿಸಿರಿ, ನನ್ನ ಅರಿವಿಗೆ ಬರದಂತೆ ಅಚಾತುರ್ಯ ನಡೆದಿದೆ. ಪ್ರಾಯಶ್ಚಿತ್ತ ವಿಧಿಸಿದರೆ ಪಾಲಿಸುತ್ತೇನೆ' ಎಂದು ಅಂಗಲಾಚಿದ.

ಅವನ ವಿನಯಕ್ಕೆ ಕೆಲವರು ಮನಕರಗಿದರು. ಇನ್ನೊಂದು ಗುಂಪು ವಿರೋಧಿಸಿತು. ಕಡೆಗೆ ಎಲ್ಲ ಸೇರಿ ಕೆಂಡಕಾರಿ ಹೊರಟುಹೋದರು. ಈತನಿಗೆ ಹೆಂಡತಿಯ ಮೇಲೂ, ಜೈನಮುನಿಯ ಮೇಲೂ ರೋಷ ಉಕ್ಕಿತು. ಹೆಂಡತಿಯನ್ನು ನಿಂದಿಸಿದ. ತೃಪ್ತಿಯಾಗಲಿಲ್ಲ. ಚೆನ್ನಾಗಿ ಥಳಿಸಿದ. ಏಟು ತಾಳಲಾರದೆ ಆಕೆ ಪ್ರಜ್ಞಾಶೂನ್ಯಳಾದಳು. ಅವಳನ್ನು ಅಂಥ ದೈನ್ಯಾವಸ್ಥೆಯಲ್ಲೇ ಬಿಟ್ಟು ಗಂಡ ತನ್ನ ಪಾಡಿಗೆ ತಾನು ನಿರ್ಗಮಿಸಿದ.

ಅಗ್ನಿಲೆಗೆ ಪ್ರಜ್ಞೆ ಮರಳಿತು. ಆಹಾರದಾನಮಾಡಿದ್ದಕ್ಕೆ ಆನಂದಿಸದೆ ಕ್ರೂರವಾಗಿ ವರ್ತಿಸಿದ ಗಂಡನ ನಡವಳಿಕೆಯಿಂದ ನೊಂದಳು. ಮನೆಯ ಋಣ ಮುಗಿಯಿತೆಂದು ಮಕ್ಕಳೊಡನೆ ಹೊರಟಳು. ಊರ್ಜಯಂತಗಿರಿಗೆ ಹೋಗಿ ವರದತ್ತ ಮುನಿಗಳಲ್ಲಿ ದೀಕ್ಷೆ ಬೇಡಿದಳು. ಆದರೆ ಯತಿಗಳು 'ಆತುರದಲ್ಲಿ ಮಾಡಿದ ತೀರ್ಮಾನ ಮತ್ತೂ ಹೆಚ್ಚಿನ ನೋವಿಗೆ ಕಾರಣವಾಗಬಹುದು. ಸಹನೆ ತಂದುಕೊ ತಾಯಿ. ಮಕ್ಕಳು ಬೇರೆ ಇದ್ದಾರೆ. ಮನೆಗೆ ಹೋಗು ತಾಯಿ, ನಿನ್ನ ಪತಿ ನಿನಗಾಗಿ ಹುಡುಕುತ್ತಿರಬಹುದು' ಎಂದು ತಿಳಿಸಿದರು.

ಅಗ್ನಿಲೆಗೂ ಮುನಿಗಳ ಹಿತವಚನ ಸರಿಕಂಡಿತು. ಹತ್ತಿರದ ಮಾವಿನಮರದ ನೆರಳಲ್ಲಿ ಕುಳಿತಳು. ಮಕ್ಕಳಿಗೆ ನೀರು ಕುಡಿಸಿದಳು, ಹಣ್ಣುಗಳನ್ನಿತ್ತಳು. ಅತ್ತ ಗಿರಿನಗರದಲ್ಲಿ ಕೋಲಾಹಲವೆದ್ದಿತು. ಎಲ್ಲೆಲ್ಲೂ ಬೆಂಕಿಯ ಅನಾಹುತ. ಹಾಹಾಕಾರ, ಊರೆಲ್ಲ ಭಸ್ಮವಾಗಿತ್ತು. ಸೋಮಶರ್ಮನ ಮನೆ ಮತ್ತು ದೊರೆಯ ಅರಮನೆ ಮಾತ್ರ ಸುರಕ್ಷಿತವಾಗಿತ್ತು. ಅಂದು ಊಟ ಬಿಟ್ಟು ಬಂದಿದ್ದ ಬ್ರಾಹ್ಮಣರು ಗಾಬರಿಗೊಂಡರು; 'ಅಗ್ನಿಲಾದೇವಿಯ ದುಃಖವೇ ಅಗ್ನಿಯಾಗಿ ನಮ್ಮೆಲ್ಲರ ಮನೆ

ಗಳನ್ನು ಸುಟ್ಟು ಬೂದಿಮಾಡಿ ಆಹುತಿ ತೆಗೆದುಕೊಂಡಿದೆ' ಎಂದು ನೊಂದರು. 'ಸಾಕ್ಷಾತ್ ಶ್ರೀಮನ್ ನಾರಾಯಣನೇ ನಗ್ನ ಸಾಧುವಿನ ರೂಪದಲ್ಲಿ ಆಹಾರ ಪಡೆದು ಹೋಗಿರಬೇಕು' ಎಂದರು. ತಕ್ಷಣವೇ ಎಲ್ಲ ದ್ವಿಜರೂ ಬಂದು ಕ್ಷಮೆ ಕೇಳಿದರು. ಆಹಾರ ಪಡೆಯಲು ಕುಳಿತರು, ಬಡಿಸಿದಷ್ಟೂ ಆಹಾರವೆಲ್ಲಾ ಅಕ್ಷಯವಾಗು ತ್ತಿತ್ತು, ಊರಿನವರೆಲ್ಲಾ ಉಂಡರು." ಅರಮನೆ ಸೈನ್ಯಕ್ಕೂ ಆಹಾರ ಕೊಟ್ಟರು. ಈ ಅಮಾನುಷ ಘಟನೆಯಿಂದ ಅಗ್ನಿಲೆಯ ಗಂಡನಿಗೂ ಪಶ್ಚಾತ್ತಾಪವಾಯಿತು. ಸೋಮಶರ್ಮ ಅಗ್ನಿಲೆಯನ್ನು ಹುಡುಕಲು ಹೊರಟ.

ಬೆಟ್ಟ ಹತ್ತಿ ಬರುತ್ತಿರುವ ಗಂಡನನ್ನು ಅಗ್ನಿಲೆ ದೂರದಿಂದ ನೋಡಿದಳು. ಆತನ ರುದ್ರಾವತಾರದ ರೂಪ ಕಣ್ಮುಂದೆ ಕಟ್ಟಿತು. ಚಿತ್ತಕ್ಷೋಭೆಯಿಂದ ಮತ್ತೆ ತತ್ತರಿಸಿದಳು. ಗಂಡ ಬಂದು ಪುನಃ ಹೊಡೆದರೆ ಏನುಗತಿ ಎಂದು ನಡುಗಿದಳು. ಆಗಲೇ ಬಿದ್ದಿರುವ ಏಟುಗಳ ನೆನಪಾಗಿ ತೀವ್ರ ವೇದನೆಯಿಂದ ಪಂಚನಮಸ್ಕಾರ ಮಂತ್ರ ಪಠಿಸುತ್ತಾ ನೆಲಕ್ಕೆ ಒರಗಿದಳು. ಅಗ್ನಿಲೆಯ ದೇಹ ಮತ್ತೆ ಮೇಲೇಳಲಿಲ್ಲ. ಆತ್ಮ ಬೇರೆಯಾಗಿ ದೂರಹೊರಟಿತ್ತು. ಆಹಾರದಾನದ ಹಾಗೂ ಪಂಚನಮಸ್ಕಾರ ಮಂತ್ರದ ಉಚ್ಚಾರದ ಮಹಿಮೆಯಿಂದ ಶುಭಫಲ ದೊರೆಯಿತು. ಅಗ್ನಿಲೆ ವ್ಯಂತರ ಲೋಕದ ದಿವ್ಯ ಪ್ರಾಸಾದವೊಂದರ ಉಪಪಾದಶಯ್ಯೆಯಲ್ಲಿ ಅಂತರ್ಮುಹೂರ್ತ ದೊಳಗೆ ತೇಜಸ್ವಿನಿಯಾದ ಯಕ್ಷಿಯಾಗಿ ಉದ್ಭವಿಸಿದಳು. ಈಕೆಯೇ ಕೂಷ್ಮಾಂಡಿನೀ ದೇವಿ.

ಕೂಷ್ಮಾಂಡಿನೀದೇವಿ ಯಕ್ಷಿಗೆ ಜನಪ್ರಿಯವಾದ ಹೆಸರು ಅಂಬಿಕಾದೇವಿ. ಅಸ ದೃಶವಾದ ದೇಹಸೌಂದರ್ಯ, ಅಪೂರ್ವವಾದ ವಿದ್ಯೆಗಳ ಒಡತಿ ಅಂಬಿಕೆ. ಈಕೆಗೆ ಸಪ್ತಧಾತುರಹಿತವೂ ಸುಗಂಧಯುಕ್ತವೂ ನಿರ್ಮಲವೂ ಆದ ಶರೀರಕಾಂತಿ ಉಂಟಾ ಯಿತು. ಸ್ವಾಭಾವಿಕವಾದ ಆಭರಣಗಳಿಂದ ಅಲಂಕೃತಳಾದಳು. ಭವಪ್ರತ್ಯಯ ಜ್ಞಾನ, ಅವಧಿಜ್ಞಾನ ದೊರೆತುವು. ಅಣಿಮಾ ಮಹಿಮಾದಿ ಅಷ್ಟ ಸಿದ್ಧಿಗಳಾದುವು. ಇಷ್ಟಪಟ್ಟಕೂಡಲೆ ಜಗದಗಲದಲ್ಲಿ ಎಲ್ಲಿಗೆಂದರಲ್ಲಿಗೆ ಕ್ಷಣಾರ್ಧದಲ್ಲಿ ಹೋಗುವ ಶಕ್ತಿ ಪ್ರಾಪ್ತವಾಯಿತು. ಇಷ್ಟೆಲ್ಲಾ ದಿವ್ಯಶಕ್ತಿಗಳ ಕೂಷ್ಮಾಂಡಿನಿ ಯಕ್ಷಿ ತನ್ನ ಪರಿವಾರ ದೇವತೆಗಳೊಡನೆ ನೇಮಿನಾಥ ತೀರ್ಥಂಕರನ ಶಾಸನ ದೇವತೆಯಾಗಿ ಪ್ರಸಿದ್ಧಳಾದಳು.

ಕೂಷ್ಮಾಂಡಿನಿಗೆ ಧರ್ಮದಿಂದ ಉಂಟಾದ ವೈಭವ ತಿಳಿದು ಬೆರಗುಮೂಡಿತು. ಅತ್ತ ಊರ್ಜಯಂತ ಗಿರಿಯಲ್ಲಿ ತನ್ನ ಪೂರ್ವಜನ್ಮದ ಶರೀರವನ್ನು ಅಪ್ಪಿ ರೋದಿ ಸುತ್ತಿರುವ ಮಕ್ಕಳನ್ನು ಸಂತೈಸಬೇಕೆನ್ನಿಸಿತು. ಹಾಗೆ ಅನಿಸಿದ್ದೇ ತಡ ವೈಕ್ರಿಯಕ ಶಕ್ತಿಯಿಂದ ತಿರುಗಿ ಅಗ್ನಿಲಾದೇವಿಯ ರೂಪವನ್ನು ತಳೆದು ಊರ್ಜಯಂತಗಿರಿಗೆ ಬಂದಳು. ಅಮ್ಮಾ ಎಂದು ಮಕ್ಕಳು ಅಕ್ಕರೆ ತುಂಬಿ ಸರಸರನೆ ಬಂದರು. ಕಂದಮ್ಮ ಗಳಿಗೆ ಏನನ್ನಾದರೂ ಕೊಡಬೇಕೆನ್ನಿಸಿತು. ಕಲ್ಪವೃಕ್ಷವಾಗಿ ನಿಂತಿದ್ದ ಮಾವಿನ ಮರದಿಂದ ಅಮೃತೋಪಮವಾದ ಎರಡು ಹಣ್ಣುಗಳನ್ನು ಕಿತ್ತು ವಾತ್ಸಲ್ಯದಿಂದ

ಕೊಟ್ಟಳು. ಅಲ್ಲಿಯೇ ಇದ್ದ ಗಂಡ ಸೋಮಶರ್ಮನೂ 'ನನ್ನ ಅಪರಾಧ ಮರೆತು ಬಿಡು. ನಾನು ನಿನಗೆ ಚಿತ್ರಹಿಂಸೆ ಕೊಟ್ಟ ಪಾಪಿ. ನಿನಗೆ ಮುಖ ತೋರಿಸಲೂ ಅರ್ಹನಲ್ಲ. ಯಾವ ತಪ್ಪು ಮಾಡದ ನಿನ್ನ ಮೇಲೆ ಮುಳಿದು ನನ್ನ ಕಾಲಮೇಲೆ ನಾನೇ ಕಲ್ಲು ಹಾಕಿಕೊಂಡೆ. ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಮನೆಗೆ ಹೋಗೋಣ ಬಾ' ಎಂದು ಅಂಗಲಾಚಿದ.

ಆಗ ಕೂಷ್ಮಾಂಡಿನಿ ಯಕ್ಷಿಯು ಮನುಷ್ಯಾವಸ್ಥೆಯಲ್ಲುಂಟಾಗುವ ಅಜ್ಞಾನಕ್ಕೆ ಆಚ್ಚರಿಪಟ್ಟು ಹೇಳಿದಳು : 'ನಾನು ನಿನ್ನ ಮಡದಿಯಲ್ಲ. ನಿನ್ನ ಮಡದಿ ಅಲ್ಲಿ ಮಲಗಿದ್ದಾಳೆ ನೋಡು. ನನ್ನ ಪೂರ್ವಭವದ ಶರೀರ ಅಲ್ಲಿದೆ.' ಅಲ್ಲಿ ಶವವಾಗಿ, ಇಲ್ಲಿ ಜೀವಂತವಾಗಿ ಇರುವ ಇಬ್ಬರು ಅಗ್ನಿಲೆಯರನ್ನೂ ನೋಡಿ ಅವನಿಗೆ ದಿಗ್ಭ್ರಮೆಯೇ ಆಯಿತು. ಅವನಿಗೆ ಉಂಟಾದ ಚಿಂತೆ ನಿವಾರಿಸುವಂತೆ ಯಕ್ಷಿಯು ದಿವ್ಯಾಲಂಕಾರ ಸಹಿತಳಾಗಿ ಭೂಸ್ಪರ್ಶ ಮಾಡದ ಹಾಗೆ ನಿಂತಳು. ತನ್ನ ವೃತ್ತಾಂತವನ್ನೆಲ್ಲಾ ಹೇಳಿದಳು. ಅದನ್ನು ಕೇಳಿದ ಸೋಮಶರ್ಮನು ತಾನೂ ಪ್ರವೃತ್ತಿಮಾರ್ಗ ತೊರೆದು ನಿವೃತ್ತಿ ಮಾರ್ಗ ಹಿಡಿದುದನ್ನೂ ಹೇಳಿದನು. ಅದಕ್ಕೆ ಆಕೆ "ವಿರಕ್ತ ಜೀವನಕ್ಕೆ ನಿನಗಿನ್ನೂ ಕಾಲಲಬ್ಧಿಯುಂಟಾಗಿಲ್ಲ. ಮಕ್ಕಳಿಬ್ಬರನ್ನೂ ಮನೆಗೆ ಕರೆದುಕೊಂಡು ಹೋಗು. ಇವರು ಅಸಾಮಾನ್ಯರು, ಉದಯಿಸುವ ಸೂರ್ಯ–ಚಂದ್ರರ ಹಾಗಿರುವರು. ಈ ತೇಜಸ್ವಿಗಳಿಂದ ಭವಿಷ್ಯದಲ್ಲಿ ಧರ್ಮಪ್ರಭಾವನೆ ಹಾಗೂ ಲೋಕಕಲ್ಯಾಣವಾಗುವುದು. ನಿನಗೆ ಅನುಮೋದನ ಪುಣ್ಯಲಭಿಸುವುದು" ಎಂದು ತಿಳಿಸಿ ಅದೃಶ್ಯಳಾಗಿ ನೇಮಿತೀರ್ಥಂಕರರ ಸಮವಸರಣ ಸೇರಿದಳು.

ಸೋಮಶರ್ಮ ಕೂಷ್ಮಾಂಡಿನಿ ಯಕ್ಷಿಯ ಆಜ್ಞೆ ಪಾಲಿಸಿದ. ಮಕ್ಕಳಾದ ಶುಭಂಕರ ಪ್ರಭಂಕರರು ದೊಡ್ಡ ವಿದ್ವಾಂಸರಾದರು. ಸೋಮಶರ್ಮನು ಊರ್ಜಯಂತಗಿರಿಯಲ್ಲಿ ತಪಸ್ಸು ಮಾಡಿ ನೀರಿನ ಋಣ ನೀಗಿಕೊಂಡ. ಮರಣಕಾಲದಲ್ಲಿ ಕೂಷ್ಮಾಂಡಿನಿಯ ಭಕ್ತಿಯೇ ಮನಸ್ಸಿನಲ್ಲಿ ತುಂಬಿತ್ತು. ಅದರಿಂದ ಆ ದೇವಿಯ ವಾಹನವಾಗುವುದಕ್ಕಾಗಿ ವ್ಯಂತರಲೋಕದಲ್ಲಿ ಸಿಂಹಜಾತಿಯ ದೇವತೆಯಾಗಿ ಹುಟ್ಟಿದ. ಪ್ರಭಂಕರ ಶುಭಂಕರರು ಜೈನಸಿದ್ಧಾಂತ ಭಾಸ್ಕರರಾದರು. ಮುಂದೆ ಜಿನಮುನಿಗಳಾದರು. ದೇಶಸಂಚಾರ ಶ್ರೀವಿಹಾರ ಮಾಡುತ್ತಾ ಧರ್ಮಪ್ರಭಾವನೆ ಉಂಟುಮಾಡಿದರು. ಕೂಷ್ಮಾಂಡಿನಿಯ ಮಹಿಮೆಯನ್ನು ಹರಡಿದರು. ಧರ್ಮಚಕ್ರ ಪ್ರವರ್ತನೆಯನ್ನು – ನೇಮಿತೀರ್ಥಂಕರರ ಸಮವಸರಣ ಸೇರಿ ಕೇವಲಜ್ಞಾನವನ್ನು ಸಂಪಾದಿಸಿದರು. ಕೇವಲಜ್ಞಾನೋತ್ಪತ್ತಿಯಾದ ಮೇಲೆ ದಿವ್ಯವಾಣಿಯಿಂದ ಸಮಸ್ತ ಜೀವಕೋಟಿಗೂ ಉದ್ಧಾರವಾಗುವ ಧರ್ಮವನ್ನು ಬೋಧಿಸಿ ಕಡೆಗೆ ಅನನ್ಯವಾದ ಮೋಕ್ಷಪದವಿ ಪಡೆದರು.

ಇದಿಷ್ಟು ಅಂಬಿಕಾಯಕ್ಷಿಯ ಕಥೆ.

೧.೦೭ ಅಂಬಿಕಾ ಯಕ್ಷಿಯ ಕಥೆಯಲ್ಲಿ ಚಾರಿತ್ರಿಕ ಸತ್ಯ ಎಷ್ಟೆಂಬುದು ತಿಳಿಯದು. ಮೊದಲಿಗೆ ಇದೊಂದು ಜನಪದವಮೂಲಕ್ಕೆ ಸೇರಿದ ಕಥೆಯಾಗಿದ್ದಂತೆ ತೋರುತ್ತದೆ. ಪೊನ್ನಕವಿ ಜಾನಪದ ಸಾಮಗ್ರಿಯನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ಬೇರೊಂದು ಲೇಖನದಲ್ಲಿ (ಪೊನ್ನ ಮತ್ತು ಜಾನಪದ; ಸನ್ಮತಿ, ಡಿಸೆಂಬರ್ ೧೯೭೭) ತಿಳಿಸಿದ್ದೇನೆ. ಈ ಪದ್ಯ (೧-೬) ಕೂಡ ಅಲ್ಲಿನ ಮಾಹಿತಿಯನ್ನು ಪುಷ್ಟೀಕರಿಸುತ್ತದೆ. ವಾಸ್ತವವಾಗಿ ಸಂಸ್ಕೃತ ಭಾಷೆಯ ಮೂಲ ಮಹಾಪುರಾಣದಲ್ಲಿಯೇ ಅಂತರ್ಗತವಾಗಿರುವ ಅನೇಕ ಜಾನಪದ ಸಂಗತಿಗಳಿವೆ.

೧.೦೮ ಅಂಬಿಕಾ ಯಕ್ಷಿಯ ಕಥೆ ಪೊನ್ನನ ಕಾಲಕ್ಕಾಗಲೇ ಹೇಗೆ ಕನ್ನಡ ನಾಡಿನಲ್ಲೂ ಜೈನಸಮಾಜದಲ್ಲೂ ಜನಜನಿತವಾಗಿತ್ತೆಂಬುದು ಶಾಂತಿಪುರಾಣದ ೧-೬ ಪದ್ಯದಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಇನ್ನೂ ಒಂದು ಗಮನೀಯ ಅಂಶವಿದೆ. ಪೊನ್ನನ ಶಾಂತಿಪುರಾಣಕಾವ್ಯ ೧೬ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಅದರಿಂದ ಈ ಕಾವ್ಯದಲ್ಲಿ ಸಹಜವಾಗಿಯೇ ಶಾಂತಿನಾಥನ ಯಕ್ಷಯಕ್ಷಿಯರಾದ ಗರುಡಯಕ್ಷ ಮತ್ತು ಮಾನಸೀ ಯಕ್ಷಿಯರ ಸ್ತುತಿ ಇರಬೇಕಿತ್ತು. ಆದರೆ ಅವರ ಪ್ರಸ್ತಾಪವೇ ಇಲ್ಲ. ಈ ಅಂಶ ಕೂಡ ಅಂಬಿಕೆಯ ಮಹತ್ವವನ್ನು ಸಾರುತ್ತದೆ.

೧.೦೯ ಹಿಂದೂ ಧರ್ಮೀಯರು ಪೂಜಿಸುವ ಅಂಬಾ(ಭವಾನಿ) ಪಾರ್ವತಿಗೂ ಈ ಅಂಬಿಕಾ ಯಕ್ಷಿಗೂ ಬಹುವಾದ ಅಭೇದ ಕಂಡುಬರುತ್ತದೆ. ಜೈನ ಮತ್ತು ಹಿಂದೂ ಧರ್ಮಗಳಲ್ಲಿ ಪೂಜೆಗೆ ಪಾತ್ರಳಾದ ಅಂಬಿಕೆ ಸಾಮಾನ್ಯ ಲೋಕ ವ್ಯವಹಾರದಲ್ಲಿ ಒಬ್ಬಳೇ ದೇವಿಯೆಂದೂ ತೋರುತ್ತದೆ. ಅಂಬಿಕೆಯ ಪೂಜೆಯಂತೆ ಅಂಬಾಜಿಯ ಪೂಜೆ ಧ್ಯಾನ ಸ್ತೋತ್ರ ನಡೆಯುತ್ತದೆ. ಅಂಬಿಕೆಯ ಎರಡು ಪಕ್ಕಗಳಲ್ಲಿ ಇಬ್ಬರು ಮಕ್ಕಳಿರುವಂತೆ ಪಾರ್ವತಿಯ ಎಡಬಲಗಳಲ್ಲಿ ವಿನಾಯಕ ಕಾರ್ತಿಕೇಯ ಇದ್ದಾರೆ. ಇಬ್ಬರ ವಾಹನವೂ ಸಿಂಹ, ಇಬ್ಬರ ಧ್ಯಾನಧೋರಣೆಗಳಲ್ಲಿ ಸಮಾನತೆಯಿದೆ.

೨.೦೦ ಅಂಬಿಕೆಯ ವಿಚಾರದಲ್ಲಿ ಮತ್ತಷ್ಟು ಮಾಹಿತಿ ನೇಮಿಚಂದ್ರನಲ್ಲಿ ಸಿಗುತ್ತದೆ. ಅವನ್ನು ತನ್ನ ಲೀಲಾವತಿ ಕಾವ್ಯದಲ್ಲಿ 'ಅಂಬಿಕೆಯ ಬನ' ವನ್ನೂ, ಅಂಬಿಕೆಯ ಬಿರದುನ್ನೂ ಹಾಡುವ ಭಕ್ತರನ್ನೂ ಉಲ್ಲೇಖಿಸಿದ್ದಾನೆ. ಅಂಬಿಕೆಯನ್ನು ಪೂರ್ಣವಾಗಿ ವರ್ಣಿಸಿರುವ ನೇಮಿಚಂದ್ರ ಕವಿಯ ಎರಡು ಪದ್ಯಗಳೂ ಮನನೀಯವಾಗಿವೆ :

ನೆಱೆದ ಮಗನೇಱಿ ಸಿಂಗದ
ಮಱೆಯುಂ ಕರಪೊಪ್ಪಿ ತೋಱುವನಿಂದಂ ನೇ
ರ್ಗಱೆಯುಮಗಂ ಪನೆಗೊನೆಗಳ
ಕಿಱುವೊಳೆಯೊಸೆ ನಗುತಸೋಂಕೆ ಸೋಗಿಲೊಳೆಸೆಯಲ್ ॥ ೮-೫೬

ತೊಳಗುವ ವಜ್ರದೋಲೆ ಪೊಸಮುತ್ತಿನ ಲಂಬಣಮಾಯ್ದು ಮಾಣಿಕಂ
ಗಳ ಮಿಸುಪ್ಪೈಸರಂ ಪಸಿಯ ನೇತ್ರದ ಬಲ್ಮಿಱಿ ತೋರ್ಪ ಮಿಂಚುವ
ಲ್ಗಳ ಬೆಳಗುಳ್ಳ ಬಾಯ್ದೆಱಿ ಬಟಿಲ್ಮುಡಿ ಸಾಂದಿನ ಬೊಟ್ಟು ಚೆಲ್ವಿನ
ಗ್ಗಳಿಕೆಯನೀಯೆ ಕಣ್ಗೆಸೆವ ಯಕ್ಷಿಯನಬ್ಜದಳಾಯತಾಕ್ಷಿಯಂ ॥ ೮–೫೭

ಸಾರಾಂಶವಿಷ್ಟೆ : ಮೇಲಿನ ಎಲ್ಲ ಹಿನ್ನೆಲೆಯ ಪರಿಚಯವಿಲ್ಲದ ಹೊರತು ಪೊನ್ನನ ೧–೬ ನೆಯ ಪದ್ಯ ಪೂರ್ಣವಾಗಿ ಅರ್ಥವಾಗುವುದಿಲ್ಲ, ಅದರ ಸಾಹಿತ್ಯಕ ಸಾಂಸ್ಕೃತಿಕ ಧಾರ್ಮಿಕ ಮಹತ್ವ ಮನವರಿಕೆಯಾಗುವುದಿಲ್ಲ.

ಶರಣರ ಕ್ರಾಂತಿಯ ಸಫಲತೆ–ವಿಫಲತೆ (ಒಂದು ವಿವೇಚನೆ)

ಬಸವರಾಜ ಸಬರದ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ದೃಷ್ಟಿಯಿಂದ ಹೊಸ ವ್ಯಾಖ್ಯಾನ ಬರೆದ ಕಾಲ; ಅತ್ಯಂತ ಕೆಳವರ್ಗದಿಂದ ಬಂದ ಜನ ಸಮುದಾಯ ಅಂದಿನ ಹದಗೆಟ್ಟ ಪರಿಸರದ ವಿರುದ್ಧ ಬಂಡೆದ್ದ ಸಮಯ. ಇಡೀ ಚರಿತ್ರೆಯಲ್ಲೇ ತಮ್ಮನ್ನೇ ತಾವು ತುರ್ತಾಗಿ ತೊಡಗಿಸಿಕೊಂಡು ಪ್ರಾಮಾಣಿಕ ವಾಗಿ ಹೋರಾಡಿದವರಲ್ಲಿ ಹನ್ನೆರಡನೇ ಶತಮಾನದ ಶರಣರನ್ನು ಬಿಟ್ಟರೆ ಮತ್ತಾರೂ ಸಿಗುವದಿಲ್ಲ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಶತಶತಮಾನಗಳಿಂದಲೂ ತುಳಿಯಲ್ಪಟ್ಟ ನೊಂದ ಜನತೆಯ ಕೊರಳ ಧ್ವನಿಯಾಗಿ ಶರಣರ ವಚನಗಳು ಹುಟ್ಟಿಕೊಂಡವು. ವಚನ ಸಾಹಿತ್ಯ ಆಂತಸ್ಸತ್ವ ಹಾಗು ಬಾಹ್ಯ ರೂಪಗಳೆರಡರಿಂದಲೂ ವಿಶಿಷ್ಟವಾದುದು. ಭಾರತೀಯ ಸಾಹಿತ್ಯದಲ್ಲೇ ಇದಕ್ಕೆ ಸಂವಾದಿಯಾದ ಸಾಹಿತ್ಯ ಮತ್ತೊಂದಿಲ್ಲ.

ಶರಣರಲ್ಲಿ ಕ್ರಾಂತಿ ಎಂಬ ಮಾತನ್ನು ಅತ್ಯಂತ ವ್ಯಾಪಕ ಅರ್ಥದಲ್ಲಿ ನೋಡ ಬೇಕಾಗುತ್ತದೆ. ಶೋಷಿತರು ಶೋಷಣೆ ಮಾಡಿದವರನ್ನು ಕೊಂದು ಹಾಕುವ ರಕ್ತ ಕ್ರಾಂತಿಯೇ ಕ್ರಾಂತಿಯಲ್ಲ; ಶೋಷಣೆಯ ಮಾಧ್ಯಮಗಳನ್ನು ಕಂಡು ಹಿಡಿದು ಅವರ ಬೇರುಗಳನ್ನು ನಿರ್ನಾಮಗೊಳಿಸಿ ಹೊಸ ಬೆಳೆ ಪಲ್ಲವಿಸುವಂತೆ ಮಾಡುವದು ನಿಜವಾದ ಕ್ರಾಂತಿ. ಇದನ್ನೇ ಶರಣರು ಮಾಡಿದ್ದು. ಅಂದಿನ ಸಮಾಜದಲ್ಲಿದ್ದ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ತೊಳೆದು ಹಾಕುವದರ ಜೊತೆಗೆ ಅದೇ ಸ್ಥಳದಲ್ಲಿ ವಿಚಾರದ ಬೆಳೆ ಯನ್ನು ಬೆಳೆಸಿದ್ದು ಅವರ ಕ್ರಾಂತಿಗೆ ಹೊಸ ಆಯಾಮ ತಂದು ಕೊಟ್ಟಿದೆ.

"ವೀರಶೈವ ಚಳುವಳಿಯನ್ನು ಒಂದು ಕ್ರಾಂತಿ ಎಂದು ಭಾವಿಸುವದು ತಪ್ಪು. ಕ್ರಾಂತಿ ಎಂದರೆ ಶೋಷಕ ಸಂಸ್ಥೆಯಾದ ಧರ್ಮದ ನಾಶಕೂಡ. ಆದ್ದರಿಂದ ಧಾರ್ಮಿಕ ಕ್ರಾಂತಿ ಎಂಬ ಮಾತೇ ಅರ್ಥಹೀನ'[೧] ಎನ್ನುವವರು ಕೆಲವರಿದ್ದರೆ, ವಚನ ಚಳು ವಳಿ ಅಂದು ನಿಜವಾಗಿ ಆಗಬೇಕಾಗಿದ್ದ ಕ್ರಾಂತಿಯನ್ನೇ ತಪ್ಪಿಸಿ ಬಿಟ್ಟಿತು– ಎಂದು ಹೇಳುವವರೂ ಹಲವರುಂಟು. ಇಂತವರಿಗೆ ಆಧ್ಯಾತ್ಮದ ವಿಷಯ ಕೆಲಸಕ್ಕೆ ಬಾರದ ವಸ್ತುವೆನಿಸಿದೆ. ದೊಡ್ಡವರನ್ನು ಅಲ್ಲಗಳೆದು ತಾವು ಹೆಸರಾಗುವ ಇಚ್ಛೆ ಇಂಥವರದು.

೧. ಆರ್. ಪೂರ್ಣಿಮಾ : 'ಉಳ್ಳವರು ಶಿವಾಲಯ ಮಾಡುವರು'

ಸಂಕ್ರಮಣ, ಸಂಚಿಕೆ ೬೬. ಪು. ೫

ವಚನ ಸಾಹಿತ್ಯವನ್ನು ನಿಜವಾಗಿಯೂ ಅಧ್ಯಯನ ಮಾಡಿದವರ ಬಾಯಿ ಯಿಂದ ಇಂಥ ಮಾತು ಎಂದಿಗೂ ಬರಲಾರದು. ಶರಣರ ಕ್ರಾಂತಿಯ ಉದ್ದೇಶ ವನ್ನು ಅಂದಿನ ಕಾಲದಲ್ಲಿ ನಿಂತು ನೋಡಬೇಕೇ ವಿನಃ ಪ್ರಜಾಪ್ರಭುತ್ವದ ಇಂದಿನ ಕಾಲದಲ್ಲಲ್ಲ. "ಶರಣರು ದೇವಾಲಯಗಳನ್ನು ತಿರಸ್ಕರಿಸಿದರೇ ವಿನಹ ದೇವರನ್ನಲ್ಲ. ವರ್ಗಸಮರವನ್ನೇ ತಣ್ಣಗೆ ಮಾಡಿದ ಅವರು ಅದ್ಹೇಗೆ ಕ್ರಾಂತಿಕಾರರಾಗುತ್ತಾರೆ."[೨] ಎನ್ನುವವರ ವಾದದಲ್ಲಿ ಎಳ್ಳಷ್ಟೂ ಹುರುಳಿಲ್ಲ. ದೇವರನ್ನು ತಿರಸ್ಕರಿಸಿದ ಮಾತ್ರಕ್ಕೆ ಕ್ರಾಂತಿ ಸಫಲವಾಗುತ್ತದೆಯೇ ? ಇವರೆಲ್ಲಾ ಮಾರ್ಕ್ಸ್‌ನ ಹೆಸರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಜನ. ಇಂತಹ ಕೆಲ ಮಾತುಗಳಲ್ಲಿ ಗಂಭೀರವಾಗಿ ವಿಚಾರಿಸ ಬೇಕಾದ ವಿಚಾರಸತ್ವ ಇಲ್ಲದ್ದರಿಂದ ಇಂಥಹ ವಿಚಾರಗಳಿಗೆ ಪ್ರಾಮುಖ್ಯತೆ ಕೊಡದಿರು ವದೇ ಒಳ್ಳೆಯದು.

ವಚನ ಸಾಹಿತ್ಯವನ್ನು ಕುರಿತು ಮುಕ್ತಮನಸ್ಸಿನ ಚರ್ಚೆ ಇಂದು ಅನಿವಾರ್ಯ. ಆದರೆ ಇಂತಹ ಕೆಲ ಹಸಿ–ಬಿಸಿ ಮಾತುಗಳನ್ನೇ ಪ್ರಸ್ತುತ ವಿಮರ್ಶೆಯ ಮೌಲ್ಯ ಮಾಪನಗಳೆಂದು ಹೇಳುವಂಥ ಮೂರ್ಖತನ ಮತ್ತೊಂದಿಲ್ಲ. ಶರಣರ ಕ್ರಾಂತಿ ಪ್ರಾರಂಭವಾದುದು; ಮೇಲ್ ವರ್ಗದ ನಾಯಕರಿಂದಲ್ಲ ಕೆಳವರ್ಗದ ಪ್ರಾಮಾಣಿಕ ಜನರಿಂದ. ಆದ್ದರಿಂದ ಇಲ್ಲಿ ಕೇವಲ ಬಸವ, ಅಲ್ಲಮ, ಅಕ್ಕಮಹಾದೇವಿಯರಂಥವ ರಷ್ಟೇ ಪ್ರಾಮುಖ್ಯರಲ್ಲ ಉಳಿದ ಮೂನ್ನರೈವತ್ತಕ್ಕೆ ಮೇಲ್ಪಟ್ಟ ಸಕಲ ವಚನಕಾರರ ಸಮುದಾಯವೇ ಅಧ್ಯಯನ ಯೋಗ್ಯರಾಗುತ್ತಾರೆ. ಇಲ್ಲಿ ಪ್ರಸಿದ್ಧರಾದವರಷ್ಟೇ ಅಪ್ರಸಿದ್ಧರು ಪ್ರಾಮುಖ್ಯರೆನಿಸುತ್ತಾರೆ. ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ ಈ ಮೊದಲಾದ ಚಿರಪರಿಚಿತವಿರುವ ಶರಣರೊಂದಿಗೆ ಮಾದರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಹಡಪದಪ್ಪಣ್ಣ, ಉರಿಲಿಂಗ ಪೆದ್ದಿ, ಕಿನ್ನರಿ ಬೊಮ್ಮಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯ ಈ ಮೊದಲಾದ ಶರಣರು ಹಾಗೂ ಕಾಳವ್ವೆ, ರಾಯಮ್ಮ, ಲಿಂಗಮ್ಮ, ರೇವಮ್ಮ, ಹಾದರದ ಗಂಗಮ್ಮ, ಸೂಳೆಸುಂಕವ್ವೆ, ಕೊಟ್ಟಣದ ಸೋಮವ್ವೆ ಇಂತಹ ಹಲವಾರು ಶರಣೆಯರೂ ಕೂಡ ಅಷ್ಟೇ ಪ್ರಾಮುಖ್ಯರಾಗುತ್ತಾರೆ. ಇನ್ನೂ ಸೂಕ್ಷ್ಮವಾಗಿ ನೋಡಿದಾಗ ಈ ಕೆಳವರ್ಗದ ಶರಣ ಸಮುದಾಯ ಅವರಿಗಿಂತಲೂ ಹೆಚ್ಚು ಮುಖ್ಯರೆನಿಸುತ್ತಾರೆ, ನಿಜವಾದ ಸಮತಾವಾದ ಕಾಣಸಿಗುವದು ಈ ಶರಣರಲ್ಲಿ ಮಾತ್ರ.

ಕ್ರಾಂತಿಗೆ ಜಯವೊಂದೇ ಮುಖ್ಯ ಉದ್ದೇಶವಾಗಲಾರದು. ರಣರಂಗದಲ್ಲಿ ಹೋರಾಡುವ ಯೋಧರಿಗೆ ಜಯ ಲಭಿಸಿದರೆ ಎಷ್ಟು ಸಂತೋಷವೋ, ಅಷ್ಟೇ ಸಂತೋಷ ಸಮರದಲ್ಲಿ ಮಡಿದು ಸತ್ತಾಗ ಉಂಟಾಗುತ್ತದೆ. ಈ ಮಾತು ಸಮಾಜ

೨. ಆರ್. ಪೂರ್ಣಿಮಾ : 'ಉಳ್ಳವರು ಶಿವಾಲಯ ಮಾಡುವರು'
ಸಂಕ್ರಮಣ, ಸಂಚಿಕೆ ೬೬. ಪು. ೧೦

ಸುಧಾರಕರಿಗೂ ಅನ್ವಯವಾಗುತ್ತದೆಂಬುದನ್ನು ಶರಣರ ಕ್ರಾಂತಿಯಿಂದ ಕಂಡುಕೊಳ್ಳಬಹುದು. ತಮ್ಮ ಕ್ರಾಂತಿ ಸಫಲವಾಗಬೇಕೆಂಬುದಷ್ಟೆ ಶರಣ ಸಮುದಾಯದ ಉದ್ದೇಶವಾಗಿರಲಿಲ್ಲ. ಅನ್ಯಾಯದ ವಿರುದ್ಧ, ಶೋಷಣೆಯ ವಿರುದ್ಧ ಹೋರಾಡಲು ತಮ್ಮನ್ನೇ ತಾವು ತೀವ್ರರಾಗಿ ತೊಡಗಿಸಿಕೊಂಡ ಶರಣರು ಇಹ ಜೀವನದ ಬದುಕಿಗೆ ಪ್ರಾಮುಖ್ಯತೆಕೊಟ್ಟು ಪ್ರಾಮಾಣಿಕವಾಗಿ ಹೋರಾಡಿದರು. ಆದರೆ ಶರಣರ ಕ್ರಾಂತಿ ಸಂಘಟನೆಯ ಒಡಲನ್ನೇ ಸಾಂಪ್ರದಾಯಿಕ ಶಕ್ತಿಗಳು ಹಾಗೂ ದುಷ್ಟ ರಾಜಕಾರಣ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡವು. ಹೀಗಾಗಿ ಶರಣರ ಕ್ರಾಂತಿ ಏಕೆ ಸಫಲವಾಗಲಿಲ್ಲ ಎಂಬುದು ಮುಖ್ಯವಾಗದೆ ಅವರ ನಿರಂತರ ಹೋರಾಟ, ಅನ್ಯಾಯದ ವಿರುದ್ಧ ಪ್ರತಿಭಟನೆ, ಪ್ರಯತ್ನ, ಅವರು ಪ್ರಾಮಾಣಿಕವಾಗಿ ನಿಷ್ಠೆಯಿಂದ ಬದುಕಿದ ಬದುಕು, —ಇವೆಲ್ಲ ಅತಿ ಮುಖ್ಯವೆನಿಸುತ್ತವೆ. ಹೀಗೆಂದ ಮಾತ್ರಕ್ಕೆ ಶರಣರು ಏನನ್ನೂ ಸಾಧಿಸಲಿಲ್ಲ ಎಂಬರ್ಥವಲ್ಲ. ಕ್ರಾಂತಿಕಾರರಲ್ಲಿ ಇರಬೇಕಾದ ನಿಷ್ಠೆ, ಛಲ, ಪ್ರಾಮಾಣಿಕತೆ, ನಿರ್ಭಯ, ಮನೋಸ್ಥೈರ್ಯ ಈ ಗುಣಗಳೆಲ್ಲ ಶರಣರಲ್ಲಿ ಮೇಳವಿಸಿಕೊಂಡಿದ್ದವು. 'ನಾಳೆ ಬಪ್ಪುದು ನಮಗಿಂದೇ ಬರಲಿ' 'ಛಲಬೇಕು ಶರಣಂಗೆ ಹಿಡಿದುದ ಬಿಡೆನೆಂಬ' 'ನ್ಯಾಯನಿಷ್ಠುರ ಶರಣನಾರಿಗೂ ಅಂಜುವವನಲ್ಲ' 'ಆರು ಮುನಿದು ನಮ್ಮನೇನು ಮಾಡುವರು ?' ಇಂತಹ ಮನೋಸ್ಥೈರ್ಯ, ಛಲ, ಪ್ರತಿಭಟನಾಗುಣ ಕ್ರಾಂತಿಯೊಂದರ ಬೆಳವಣಿಗೆಗೆ ಎಷ್ಟು ಅತ್ಯಗತ್ಯವೆಂಬುದನ್ನು ಶರಣರ ನಡೆ-ನುಡಿಯಿಂದ ಕಂಡುಕೊಳ್ಳಬಹುದಾಗಿದೆ. ಇದರ ಜತೆಗೆ 'ಆದಿ ಪುರಾಣ ಅಸುರರಿಗೆ ಮಾರಿ ವೇದ ಪುರಾಣ ಹೋತಿಂಗೆ ಮಾರಿ' 'ವ್ಯಾಸ ಬೋಯಿತಿಯ ಮಗ ಮಾರ್ಕಂಡೇಯ ಮಾತಂಗಿಯ ಮಗ' 'ಆಗಮದ ಮೂಗಕೊಯ್ಯುವೆ ವೇದಕ್ಕೆ ಒರೆಯನಿಕ್ಕುವೆ' —ಈ ಮುಂತಾದ ನುಡಿಗಳಲ್ಲಿ ಕ್ರಾಂತಿ ಸಂಘಟನೆಯೊಂದಕ್ಕಿದ್ದ ಪಾಂಡಿತ್ಯದ ಬೆನ್ನೆಲುಬು ಎದ್ದುಕಾಣುತ್ತದೆ. ಈ ಎಲ್ಲಾ ಪ್ರಮುಖ ಗುಣಗಳಿದ್ದಾಗ್ಯೂ ಶರಣರ ಕ್ರಾಂತಿ ಏಕೆ ಸಫಲವಾಗಲಿಲ್ಲ ಎಂಬ ಪ್ರಶ್ನೆ ಈ ನಾಡಿನ ದುರಂತವನ್ನೇ ತೆರೆದು ತೋರಿಸುತ್ತದೆ. ಈ ನಾಡು ಕ್ರಾಂತಿ ಮಾಡುವವರಿಗೆ ಬಂಜರ ಭೂಮಿಯಾಗಿದೆ. ಬುದ್ಧ, ಬಸವ, ಮಾರ್ಕ್ಸ್, ಗಾಂಧೀಜಿಯಂಥವರ ಕ್ರಾಂತಿಯನ್ನು ನೆನಪಿಸಿಕೊಂಡಾಗ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ. ದುಷ್ಟಶಕ್ತಿಗಳು, ಕೀಳುಮಟ್ಟದ ರಾಜಕಾರಣ, ಪಟ್ಟಭದ್ರ ಹಿತಾಶಕ್ತಿಗಳು ಹೇಗೆ ಕಾಲ ಕಾಲಕ್ಕೆ ಉಂಟಾಗುವ ಕ್ರಾಂತಿಯ ಬೇರನ್ನೇ ಅಲುಗಾಡಿಸಿ ಬಿಟ್ಟಿವೆ ಎಂಬುದನ್ನು ಚರಿತ್ರೆ ತನ್ನೊಡಲೊಳಗೆ ದಾಖಲುಮಾಡಿಕೊಂಡಿದೆ.

ನೊಂದು-ಬೆಂದ ಜನಸಾಮಾನ್ಯರಿಂದ, ತೀರಾ ಕೆಳವರ್ಗದವರಿಂದ ಪ್ರಾರಂಭವಾದ ಶರಣರ ಕ್ರಾಂತಿ ತೋರಿಕೆಗೆ ವಿಫಲವಾದರೂ ನಿಜವಾಗಿಯೂ ಅವರಲ್ಲಿ ಸಫಲತೆಯಡಗಿದೆ. ಜಯ-ಅಪಜಯಗಳಿಗಿಂತ, ಬದುಕು ಮುಖ್ಯವೆಂಬುದನ್ನು ಶರಣರ ಕ್ರಾಂತಿ ಕಲಿಸಿಕೊಡುತ್ತದೆ. ಪಾಚಿಗಟ್ಟಿ ಕೊಳೆತು ನಾರುತ್ತಿದ್ದ ಅಂದಿನ

ಸಮಾಜವನ್ನು ತಮ್ಮ ಸಂಘಟನಾಶಕ್ತಿಯಿಂದ ನಿರಂತರ ಪ್ರಯತ್ನದಿಂದ ಸಮಾನತೆಯ ತಳಹದಿಯ ಮೇಲೆ ತಂದು ನಿಲ್ಲಿಸಿದ್ದು ಕ್ರಾಂತಿಯ ಸಾರ್ಥಕತೆಯನ್ನು ಎತ್ತಿ ತೋರಿಸುತ್ತದೆ. ಜನಸಾಮಾನ್ಯರು ತಮ್ಮ ಬದುಕಿನ ಬಗೆಗೆ ಆಲೋಚಿಸಿ, ತಮ್ಮ ಮಲಿನ ಪರಿಸರದ ವಿರುದ್ಧ ಪ್ರತಿಭಟಿಸಿ, ಅನುಭವ ಮಂಟಪವೆಂಬ ಒಂದು ಸ್ಥಳದಲ್ಲಿ ಒಂದುಗೂಡಿ ಮುಕ್ತ ಮನಸ್ಸಿನಿಂದ ಚರ್ಚಿಸುತ್ತಿದ್ದರು. ವೈಚಾರಿಕವಾಗಿ ಧ್ವನಿ ಎತ್ತಿದ್ದು ನಮ್ಮ ಚರಿತ್ರೆಯಲ್ಲಿ ಹೊಸದು: ಅಂತೆಯೇ ಶರಣರ ಕ್ರಾಂತಿಗೆ ಉಳಿದ ಕ್ರಾಂತಿಗಳಿಗಿಂತ ಮಹತ್ವ ಬರುತ್ತದೆ.

ಸಫಲತೆ :

ಶರಣರು ಕ್ರಾಂತಿಯಿಂದ ಸಾಧಿಸಿದುದು ಬಹಳಷ್ಟು. ಅವರೆಸಗಿದ ಕ್ರಾಂತಿಯ ಫಲ ಅನಂತ, ಅವರ ಕ್ರಾಂತಿಯಿಂದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ಅನೇಕ ಪ್ರಮುಖ ಬದಲಾವಣೆಗಳಾದವು. ಸಾಹಿತ್ಯದಲ್ಲಿ ಮನ್ವಂತರವೇ ನಡೆಯಿತು. ಲೋಕಾನುಭವದಲ್ಲಿ ಶಿವಾನುಭವವನ್ನು ಕಂಡು ಅರ್ಥಪೂರ್ಣ ಬದುಕನ್ನು ಬದುಕಿದ ಶರಣರು ಪರಕ್ಕಿಂತ ಇಹಕ್ಕೆ ಪ್ರಾಮುಖ್ಯತೆಕೊಟ್ಟು ಕಾಯಕದಲ್ಲಿಯೇ ಕೈಲಾಸ ತೋರಿಸಿದರು. ಸ್ಥೂಲವಾಗಿ ಅವರ ಕ್ರಾಂತಿಯ ಸಫಲತೆಯ ಅಂಶಗಳನ್ನು ಹೀಗೆ ನೋಡಬಹುದು.

I. ಧಾರ್ಮಿಕ ರಂಗದಲ್ಲಿ ಬದಲಾವಣೆ :

ಶರಣರ ಕ್ರಾಂತಿ ಪ್ರಾರಂಭವಾದದ್ದೇ ಧಾರ್ಮಿಕ ರಂಗದಿಂದ. ಧರ್ಮದಲ್ಲಿ ಏಕತೆಯನ್ನು ತಂದರೆ ಸಮಾಜದ ಇನ್ನಿತರ ಅಂಶಗಳು ಸುಧಾರಣೆಯಾಗಬಲ್ಲವೆಂಬುದನ್ನೂ ಅವರು ಮನಗಂಡಿದ್ದರು. ಅಂತೆಯೇ ತಮ್ಮ ಮುಂದೆ ಇದ್ದ ಅನೇಕ ಧರ್ಮ–ಮತ ಪಂಥ ಕಂಡು ಅವುಗಳಿಂದ ವೀರಶೈವ ಧರ್ಮವನ್ನೂ ಆರಿಸಿಕೊಂಡು ಅದನ್ನು ವೈಚಾರಿಕ ಧರ್ಮವನ್ನಾಗಿ ಮಾಡಿದರು. ಧಾರ್ಮಿಕ ರಂಗದಲ್ಲಿ ಪರಸ್ಪರ ಅವಹೇಳನ ಅತಿಯಾಗಿತ್ತು. ಶೈವರ ವಿಚಿತ್ರವಾದ ತಾಂತ್ರಿಕ ಆಚರಣೆಗಳನ್ನು ಖಂಡಿಸಿದ ಶರಣರು ಸಾತ್ವಿಕ ಭಕ್ತಿಯನ್ನು ಪ್ರತಿಪಾದಿಸಿದರು. ವಿಷ್ಣುವೇ ಶ್ರೇಷ್ಠವೆಂದು ಸಾರುವ ವೈಷ್ಣವ ಧರ್ಮವು ಬಸವಾದಿ ಶರಣರಿಗಿಂತ ನೂರಾರು ವರ್ಷ ಮೊದಲೇ ಇದ್ದರೂ ಅದು ಹೆಚ್ಚು ವೈದಿಕ ಪರವಾಗಿದ್ದುದರಿಂದ, ಭಕ್ತಿಗೆ ಅಲ್ಲಿ ಪ್ರಾಧಾನ್ಯವಿಲ್ಲದಿರುವದರಿಂದ ಶರಣರು ಅದನ್ನು ತೀವ್ರವಾಗಿ ವಿರೋಧಿಸಿದರು. ವೈದಿಕವಾದುದನ್ನು ಖಂಡಿಸಲು ಮುಖ್ಯಕಾರಣ ಅದರ ಕರ್ಮಜಡತೆ; ಶರಣರ ಕಾಲದಲ್ಲಿ ಪ್ರಬಲವಾಗಿದ್ದ ಜೈನ ಧರ್ಮವು ಈ ಲೋಕದ ಜೀವನದ ಬಗ್ಗೆ ತಿರಸ್ಕಾರ ಬೆಳೆಸಿಕೊಳ್ಳಲು ಬೋಧಿಸುವಂತಹದಾದ್ದರಿಂದ ಅವರು ಈ ಧರ್ಮವನ್ನೂ ಒಪ್ಪಲಿಲ್ಲ. ಈ ಧರ್ಮ ಇಹದ ಬಗ್ಗೆ ತೀವ್ರ ವೈರಾಗ್ಯ ಹೊಂದಿದ್ದುದೇ ಶರಣರ ತಿರಸ್ಕಾರಕ್ಕೆ ಕಾರಣ. ಇನ್ನು ವೀರಶೈವ ಧರ್ಮ ಪಂಪಪೂರ್ವ ಯುಗದಲ್ಲಿ ಅಂಕುರಾವಸ್ಥೆಯ ಅಸ್ತಿತ್ವದಲ್ಲಿದ್ದ

ಬಗ್ಗೆ ಆಧಾರಗಳಿವೆ. ಈ ವೀರಶೈವ ಧರ್ಮವನ್ನು ಆರಿಸಿಕೊಂಡ ಶರಣರು ಅದೊಂದು ಧಾರ್ಮಿಕ–ಸಾಮಾಜಿಕ ಘಟಕವಾಗಲು, ಶಕ್ತಿಯಾಗಲು ಶ್ರಮಿಸಿದರು. ಶರಣರಿಗೆ ಇಷ್ಟವಾದ ಈ ಧರ್ಮ ಅವರ ಆಚರಣೆಯಲ್ಲಿ ಬಂದಾಗ ಹೊಸ ಆಯಾಮ ಪಡೆಯಿತು– ವಿಶ್ವಮಾನ್ಯ ಧರ್ಮವಾಯಿತು. ಇದು ಶರಣರ ಕ್ರಾಂತಿಯ ಮೊದಲ ಸಾಫಲ್ಯ. ಕಲಚೂರ್ಯರ ರಾಜಧಾನಿಯಾಗಿದ್ದ ಕಲ್ಯಾಣ ವೀರಶೈವರ ಕೇಂದ್ರ ವಾಯಿತು. ಬಸವೇಶ್ವರ ಈ ಕ್ರಾಂತಿಯ ಕೇಂದ್ರಬಿಂದುವಾದ. ದೇಶದ ಹಲ ವಾರು ಕಡೆಗಳಿಂದ ಶರಣರು ಕಲ್ಯಾಣಕ್ಕೆ ಧಾವಿಸಿ ಬಂದರು. ಕಾಶ್ಮೀರದ ರಾಜ ಮೋಳಿಗೆ ಮಾರಯ್ಯನಾಗಿ ಕಲ್ಯಾಣ ಕ್ರಾಂತಿಯಲ್ಲಿ ಪಾಲ್ಗೊಂಡ, ಜೊಮ್ಮಯ್ಯ ಆಂಧ್ರಪ್ರದೇಶದಿಂದ ಬಂದು ಸೇರಿದ. ಹೀಗೆ ನಾನಾ ಕಡೆಯಿಂದ ಬಂದು ಸೇರಿದ ಶರಣ ಸಮುದಾಯ ಅನುಭವ ಮಂಟಪದಂತಹ ಒಂದು ಮುಕ್ತ ವೇದಿಕೆಯಲ್ಲಿ ಕುಳಿತು ಸಮನಾಗಿ ಚರ್ಚಿಸಿ ವಿಚಾರಿಸಿದ್ದು, ಹೋರಾಡಿದ್ದು, ಪ್ರತಿಭಟಿಸಿದ್ದು— ಇವೆಲ್ಲಾ ಸಾಫಲ್ಯತೆಯ ಸಂಕೇತಗಳಾಗಿವೆ. ಇಂತಹ ಪ್ರಕ್ರಿಯೆ ನಡೆದದ್ದು ಚರಿತ್ರೆಗೆ ಹೊಸದು. ಧಾರ್ಮಿಕ ಚರ್ಚೆ, ಚಿಂತನ–ಮಂಥನಗಳಿಂದ ಹೊರಟ ಶರಣರ ಅನಂತ ನುಡಿಮುತ್ತುಗಳೇ ಧರ್ಮದಲ್ಲಾದ ಸಾಫಲ್ಯತೆಯನ್ನು ಎತ್ತಿಹೇಳುತ್ತವೆ.

ಧರ್ಮದ ಹೆಸರಿನಲ್ಲಿ– ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆಯನ್ನೂ ಶರಣರು ತಪ್ಪಿಸಿದರು. 'ಧರ್ಮ' 'ದೇವರು' ಪದಗಳಿಗೆ ಅತಿಭಯಾನಕವಾದ ಅರ್ಥ ಲೇಪಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದ ಪಂಡಿತರ ಬಾಯಿ ಮುಚ್ಚಿಸಿದರು. ಶರ ಣರ ಕಾಲಕ್ಕೆ 'ಧರ್ಮ' ದಯೆಯಾಯಿತು. 'ಕರ್ಮ' ಕ್ರಿಯೆಯಾಯಿತು. ಗೊಡ್ಡು ಸಂಸ್ಕೃತ ಶ್ಲೋಕಗಳನ್ನು ಕೇಳಿದ ಜನತೆಗೆ ಶರಣರ ಅತಿ ಸರಳವಾದ ಅಚ್ಚಗನ್ನಡ ನುಡಿಮುತ್ತು ತುಂಬಾ ಹಿಡಿಸಿತು. 'ದಯೆಯೇ ಧರ್ಮದ ಮೂಲ' ಎಂಬ ಬಸವನ ನುಡಿ ಸಕಲರಿಗೂ ಸ್ವಾಗತವಾಯಿತು.

ಧಾರ್ಮಿಕ ರಂಗದಲ್ಲಿ ಅಶಾಂತಿ ಎದ್ದಾಗ ಅದನ್ನು ಶಾಂತಪಡಿಸುವದರೊಂದಿಗೆ ಅತ್ಯಂತ ಸರಳವಾದ ಹೊಸ ದಾರಿಯನ್ನೂ ತೋರಿಸಿದ್ದು ಶರಣರ ಕ್ರಾಂತಿಯ ಸಫ ಲತೆಯ ಕುರುಹು. ಹಲವಾರು ಜಾತಿ– ಮತಗಳಲ್ಲಿಹರಿದು ಹಂಚಿ ಹೋಗಿದ್ದ ಜನ ಸಮುದಾಯವನ್ನು ಒಂದೇ ಒಂದು ವೇದಿಕೆಯ ಮೇಲೆ ತಂದು ನಿಲ್ಲಿಸಿದ್ದು ಶರಣರ ಪ್ರಯತ್ನದ ನಿಜವಾದ ಸಾರ್ಥಕತೆಯನ್ನು ತೋರಿಸುತ್ತದೆ. ಮಾದಾರ– ಕೇತಿಗ– ಅಂಬಿಗ– ಹಡಪಿಗ– ಬಣಜಿಗ– ನೇಕಾರ– ಡೋಹರ– ಮಡಿವಾಳ– ಇಂತಹ ಹಲ ವಾರು ಕಾಯಕಗಳನ್ನು ಮಾಡುತ್ತಿದ್ದ ಸಾಮಾನ್ಯ ಜನತೆ ಒಂದಾಗಿ ಕೂಡಿ ವಚನ ರಚಿ ಸಿದ್ದು, ತಮ್ಮನ್ನು ತಾವು ರೂಪಿಸಿಕೊಂಡದ್ದು, ಸಕಲರಿಗೂ ಹಿತವನ್ನೇ ಬಯಸಿದ್ದು ಕ್ರಾಂತಿಯೊಂದರ ಸಫಲತೆಯಲ್ಲದೆ ಮತ್ತಿನ್ನೇನು ? ಹತ್ತಾರು ಜಾತಿಗಳು, ಉಪ ಜಾತಿಗಳು, ಕಸಬುಗಳು-ಉಪಕಸಬುಗಳು ಎಲ್ಲಾ ಒಂದೇ ಸಮೂಹದಲ್ಲಿ ಕೂಡಿಕೊಂಡು

ಮೊದಲಿದ್ದ ವೈದಿಕ- ಪರಂಪರೆಯನ್ನೆಲ್ಲಾ ಬಿಟ್ಟುಕೊಂಡು ಹೊಸ ಅಲೆಯಾಗಿ ಹರಿದದ್ದು, ಒಮ್ಮನಸ್ಸಿನಿಂದ ಕೂಗಿದ್ದು ಯಾವ ಚರಿತ್ರೆಗೂ ಹೊಸದೇ ಎನ್ನಬಹುದು.

ಶರಣರು ದೇವರನ್ನು ತಿರಸ್ಕರಿಸಲಿಲ್ಲ- ದೇವಾಲಯಗಳನ್ನು ತಿರಸ್ಕರಿಸಿದರು, ಪೂಜೆ ವಿಧಾನವನ್ನು ಅಲ್ಲಗಳೆಯಲಿಲ್ಲ, ಸರಳೀಕರಿಸಿದರು. ಬರಿ ಪರಕ್ಕಾಗಿಯೇ ತಮ್ಮನ್ನು ತಾವು ಹಾಳುಮಾಡಿಕೊಳ್ಳಲಿಲ್ಲ, ಇಹದಲ್ಲಿಯೇ ಸಕಲ ಕಂಡರು. ಕೈಲಾಸಕ್ಕಾಗಿ ಪರಿತಪಿಸಲಿಲ್ಲ, ಕಾಯಕದಲ್ಲಿಯೇ ಅದನ್ನು ಕಂಡುಕೊಂಡರು.

ಅಂದಿನ ಜನತೆಗೆ 'ಧರ್ಮ' ಬಿಡಿಸಲಾರದ ಕಗ್ಗಂಟಾಗಿತ್ತು. 'ದೇವರು' ಭಯ ಹುಟ್ಟಿಸುವಂಥ, ಮತ್ತೇರಿಸುವಂಥ, ಪಶುಬಲಿ ಕೇಳುವಂಥವನಾಗಿದ್ದ. ಹಾಳು ಕೊಂಪೆಗಳಲ್ಲಿ, ಊರದಾರಿಗಳಲ್ಲಿ, ಕೆರೆ-ಭಾವಿ, ಗಿಡ-ಮರಗಳಲ್ಲಿ ಎಣ್ಣೆಹೊಯ್ಯಿಸಿಕೊಂಡು ಬಿದ್ದ ನೂರಾರು ಹೆಸರಿನ ದೇವತೆಗಳು ಅಂದಿನ ಸಮಾಜದ ಪೂಜ್ಯ ವಸ್ತುಗಳಾಗಿದ್ದವು. ಎಮ್ಮೆ, ಹಸುಗೂಸು, ಬಸಿರು-ಬಾಣಂತಿಯರನ್ನು ಬಲಿ ತೆಗೆದುಕೊಳ್ಳುವ ಮಾರಯ್ಯ, ಬೀರಯ್ಯ, ಕೇತಯ್ಯ, ಕಾಳಯ್ಯರ ಕಾಟ ಅತಿಯಾಗಿತ್ತು. ಮೊರ, ಮಡಿಕೆ, ಕಲ್ಲು, ಮಣ್ಣು, ಬಿಲ್ಲು, ಕೊಳಹ, ಒನಿಕೆ, ಕಸಬರಿಗೆಗಳನ್ನೂ ದೇವರೆಂದು ಪೂಜಿಸುತ್ತಿದ್ದ ಆ ಜನರ ಮೆದುಳಿಗೆ ಅಜ್ಞಾನದ ಪರೆ ಬಂದಿತ್ತು. ಕಾಲಿಡಲು ಸ್ಥಳವಿರದಷ್ಟು ದೇವತೆಗಳು ಬೀಡಾರ ಹೂಡಿದ್ದವು. ಇಂತಹ ಅಂಧಯುಗದ ಜನತೆಗೆ ತಿಳಿಹೇಳಿ, ಸಂಘಟಿಸಿ, ಒಗ್ಗೂಡಿಸಿದ್ದು ನಿಜವಾದ ಸಫಲತೆಯಾಗುತ್ತದೆ. ಅಂದು ಪೂಜಾ ವಿಧಾನವೂ ಬಹಳ ಕಷ್ಟದ್ದಾಗಿತ್ತು. ಹಾಲನೇಮ, ಹಾಲಕೆನೆಯನೇಮ, ಕೆನೆಯಿಲ್ಲದಿದ್ದರೆ ಕಿಚ್ಚಡಿನೇಮ, ಬೆಣ್ಣೆನೇಮ, ಬೆಲ್ಲದನೇಮ- ಹೀಗೆ ಅರ್ಥವಿಲ್ಲದ ಹಲವಾರು ನೇಮಗಳ ಹಗ್ಗಗಳನ್ನು ಕಟ್ಟಿಕೊಂಡು ಒದ್ದಾಡುತ್ತಿದ್ದ ಜನತೆಯ ಹತ್ತಿರ ಹೋಗಿ ಎಲ್ಲ ಕಗ್ಗಂಟುಗಳನ್ನೂ ಬಿಡಿಸಿ ಹಾಕಿ— ಅವರು ಮನುಷ್ಯರ ಹಾಗೆ ಬಾಳುವಂತೆ ಮಾಡಿದ ಯಶಸ್ಸು ಶರಣರಿಗೆ ಸಲ್ಲುತ್ತದೆ.

ಧರ್ಮ ಉಚ್ಚ ಜಾತಿಯವರ ಸ್ವಾರ್ಥ ಸಾಧನೆಯಾಗಿತ್ತು. ವೇದವನ್ನು, ಓದುವ-ಕೇಳುವ ಹಕ್ಕು ಜನಸಾಮಾನ್ಯರಿಗಿರಲಿಲ್ಲ—ಇದು ಅಂದಿನ ಧಾರ್ಮಿಕ ಕಟ್ಟಳೆಯಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹೀಗೆ ಸಮಾಜವನ್ನು ವಿಂಗಡಿಸಿ 'ಧರ್ಮದ' ಹೆಗಲ ಮೇಲೆ ಬಂದೂಕವಿಟ್ಟು ಶೂದ್ರರಿಗೆ ಗುರಿಯಿಟ್ಟು ಹೊಡೆದವರು ಈ ಮೇಲ್ವರ್ಗದ ಪಂಡಿತ ಜನ. ಉಚ್ಚ ಜಾತಿಯವರ ಸೇವೆ ಮಾಡುವದರಲ್ಲಿಯೇ ಕೆಳಜಾತಿಯವರು ಹುಟ್ಟಿಬಂದಂತಿತ್ತು. ಯಜ್ಞ-ಯಾಗಾದಿಗಳು ಸತತವಾಗಿ ನಡೆಯುತ್ತಿದ್ದವು. 'ಕರ್ಮವಾದ' ಪ್ರಧಾನವಾಗಿತ್ತು. ಇಂತಹ ಸಂಕೀರ್ಣ ಸಂದರ್ಭದಲ್ಲಿ ಶರಣರ ಕ್ರಾಂತಿಯ ಪ್ರಯತ್ನ ಅವಹೇಳನಕ್ಕೆ ಗುರಿಯಾಗಿದ್ದ ಧಾರ್ಮಿಕ ರಂಗದಲ್ಲಿಯ ಕೊಳೆಯನ್ನೆಲ್ಲಾ ಹೊರತೆಗೆದು ಹೊಸಬೆಳಗೆ ಅವಕಾಶ ಮಾಡಿಕೊಟ್ಟದ್ದು ನಿಜವಾದ ಕ್ರಾಂತಿಯ ಸಫಲತೆಯನ್ನು ಎತ್ತಿಹೇಳುತ್ತದೆ.

'ಧರ್ಮ' ನಿಜವಾದ 'ಧರ್ಮ'ವಾಗಿ ತಿಳಿದದ್ದು, ಬೆಳೆದದ್ದು, ಶರಣರ ಸಂದರ್ಭದಲ್ಲಿ ಮಾತ್ರ. ಜನ 'ಧರ್ಮ-ದೇವರು'ಗಳನ್ನು ಸರಿಯಾಗಿ ಅರ್ಥೈಸಿದ್ದು ಅಂದಿನ ಶರಣರ ಅತಿ ಮುಖ್ಯವಾದ ಪ್ರಯತ್ನ. ಶರಣರ ಧಾರ್ಮಿಕ ಕ್ರಾಂತಿಯಿಂದ ಶತಶತಮಾನಗಳಿಂದ ತುಳಿಯಲ್ಪಟ್ಟಿದ್ದ ಶೂದ್ರ ಜನತೆಗೆ ಸಮಾನವಾಗಿ ಬದುಕುವ ಅವಕಾಶ ಲಭಿಸಿತು. ಇಂಥ ಅವಕಾಶ ಪಡೆದ ಅನೇಕ-ಕೆಳವರ್ಗದ ಜನ ಮುಂದೆ ಬಂದರು, ಅಧ್ಯಾತ್ಮದಲ್ಲಿ ಪಂಡಿತರು-ಮೇಲ್‌ವರ್ಗದವರು ಸಾಧಿಸಲಾರದ್ದನ್ನು ಸಾಧಿಸಿ ತೋರಿಸಿದರು. ಇದು ಇಂಥವರಿಗೆ, ಅದು ಅಂಥವರಿಗೆ ಎಂದು ಹಾಕಿದ ಗೆರೆಯನ್ನು ಕೊರೆದು ಎಲ್ಲರೂ ಒಗ್ಗೂಡಿ ಧ್ವನಿತೆಗೆದು ಬದುಕಿದ್ದು-ಬೆಳೆದದ್ದು ಶರಣರ ಕ್ರಾಂತಿಯ ಫಲವೆಂದೇ ಹೇಳಬಹುದು.

II. ಸಾಮಾಜಿಕ ಸುಧಾರಣೆಗಳು :—

೧. ಮೂಢನಂಬಿಕೆ — ಅಂಧ ಸಂಪ್ರದಾಯಗಳ ಉಚ್ಚಾಟನೆ :—

ಮೂಢನಂಬಿಕೆಗಳನ್ನು ನಂಬಿ, ಅಂಧಸಂಪ್ರದಾಯಗಳ ಕತ್ತಲಲ್ಲಿ ಬದುಕುತ್ತಿದ್ದ ಅಂದಿನ ಜನತೆಯನ್ನು ಶರಣರು ವೈಚಾರಿಕತೆಯ ಬೆಳಕಿನತ್ತ ಕರೆತಂದರು. ಹಲವಾರು ದೈವಗಳಲ್ಲಿ ನಂಬಿಗೆ ಇಟ್ಟ ಜನತೆ ಅನೇಕ ಭೀಕರ ವ್ರತಗಳನ್ನೂ ಕೈಗೊಂಡಿದ್ದರು. ಅಜ್ಞಾನ ಎಲ್ಲೆಲ್ಲೂ ತಾಂಡವವಾಡುತಿತ್ತು, ಸಮಾಜ ಆಮೂಲಾಗ್ರವಾಗಿ ಬದಲಾವಣೆಯಾಗಬೇಕಾದರೆ ಈ ಅಜ್ಞಾನದ ಕೋಟೆಯನ್ನು ಕಿತ್ತಿಹಾಕುವದು ಶರಣರ ಮೊದಲ ಕೆಲಸವಾಯಿತು.

'ಪರಂಪರೆಯ ಸತ್ವವನ್ನೆಲ್ಲ ಅರಗಿಸಿಕೊಂಡು ಸಂಪ್ರದಾಯದ ಜಡತೆಯಿಂದ ಸಮಾಜವನ್ನು ಮುಕ್ತಗೊಳಿಸಿದುದು ಅವರ ವಿಚಾರವಂತಿಕೆಯ ಮಹತ್ತರವಾದ ಸಾಧನೆ. ಇಂದಿನ ಕೆಲವರು ಬಯಸುವಂತೆ ಅವರು ಧರ್ಮವನ್ನೇ ಮೂಲೋಚ್ಚಾಟನೆ ಮಾಡಿ ರೂಕ್ಷವಾದ ಪಾಶವೀಕ್ರಾಂತಿಗಿಳಿಯಲಿಲ್ಲ. ದೇವರು, ಧರ್ಮ, ಆತ್ಮ, ಉಪಾಸನೆ, ಮೋಕ್ಷ ಮೊದಲಾದವುಗಳನ್ನು ಒಪ್ಪಿಕೊಂಡರು. ಆದರೆ ಅವರ ಸುತ್ತಮುತ್ತಲೂ ಮುಳ್ಳು ಕಂಟಿಯಂತೆ ಬೆಳೆದ ಅವೈಚಾರಿಕ ಆಚಾರಗಳನ್ನು ಹರಿತವಾದ ವಿಚಾರದಿಂದ ಕತ್ತರಿಸಿ ಹಾಕಿದರು.'[೩]

ವೈದಿಕ ಧರ್ಮದ ಶೋಷಣಾಮೂಲವಾದ ಕರ್ಮಠತನವನ್ನೂ ಶರಣರು ಕಠಿಣವಾಗಿ ಖಂಡಿಸುವದರೊಂದಿಗೆ ಸಂಪೂರ್ಣವಾಗಿ ತಿರಸ್ಕರಿಸಿದರು. 'ಆದಿ ಪುರಾಣ ಅಸುರರಿಗೆ ಮಾರಿ, ವೇದ ಪುರಾಣ ಹೋತಿಂಗೆ ಮಾರಿ', ಎಂದು ಹಿಂಸಾ ಮೂಲವಾದ ಯಜ್ಞ-ಯಾಗಾದಿಗಳನ್ನೂ ಅದರ ಸುತ್ತುಮುತ್ತಲು ಮುಳ್ಳು ಹಾಸಿದ ಹಾಗಿದ್ದ ಅಂದಿನ ಧಾರ್ಮಿಕ ಪ್ರಕ್ರಿಯೆಗಳನ್ನೂ ಶರಣರು ಅಲ್ಲಗಳೆದರು.

೩. ಡಾ. ಎಚ್. ತಿಪ್ಪೇರುದ್ರಸ್ವಾಮಿ : 'ವಚನ ಸಾಹಿತ್ಯ : ವೈಚಾರಿಕ ಅಧ್ಯಯನ, ಪುಟ. ೨೬

'ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ, ಕಿಚ್ಚೆದ್ದು ಸುಡುವಾಗ, ಬಚ್ಚಲ ನೀರ ಬೀದಿಯ ದೂಳ ಹೊಯ್ದು, ಬೊಬ್ಬಿಟ್ಟೆಲ್ಲರ ಕರೆವರಯ್ಯ' ಎಂದು ಗೇಲಿಮಾಡುವದರೊಂದಿಗೆ ಬೇರು ಬಿಟ್ಟಿದ್ದ ಅಂದಿನ ಪಾಶವೀ ಪದ್ಧತಿಗಳನ್ನೆಲ್ಲ ಬುಡ ಸಮೇತ ಕಿತ್ತೊಗೆದರು.

ಅಂಥ ಸಂಪ್ರದಾಯಗಳ ಆಗರವಾದ ವೇದ–ಪುರಾಣಗಳನ್ನೂ ಶರಣರು ಅಲ್ಲಗಳೆಯುವದರೊಂದಿಗೆ ವೈಚಾರಿಕತೆಯನ್ನು ಒಡಮೂಡಿಸಿದರು. ಕರ್ಮವನ್ನು ತಿರಸ್ಕರಿಸಿದರು. ಅವರಿಗೆ ವೇದವೆಂಬುದು – ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ' ಪುರಾಣವೆಂಬುದು – ಪುಂಡರ ಗೋಷ್ಠಿ'ಯಾಗಿ ಕಂಡವು. 'ವೇದ ವೇಧಿಸಲರಿಯದೆ ಕೆಟ್ಟವು, ಪುರಾಣ ಪೂರೈಸಲರಿಯದೆ ಕೆಟ್ಟವು, ಶಾಸ್ತ್ರ ಸಾಧಿಸ ಲರಿಯದೆ ಕೆಟ್ಟವು, ಹಿರಿಯರು ತಮ್ಮ ತಾವರಿಯದೆ ಕೆಟ್ಟರು'—ಎಂದು ಹೇಳುವ ಅಲ್ಲಮಪ್ರಭುವಿನ ನುಡಿ ಗಮನಿಸುವಂಥದು. 'ವೇದ ಶಾಸ್ತ್ರಾಗಮ ಪುರಾಣಂಗ ಳೆಂಬವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ' ಎನ್ನುವ ನುಡಿ ಅತ್ಯಂತ ತೀವ್ರ ವಾದುದು.

ವೇದ–ಪುರಾಣಗಳನ್ನು ತಿರಸ್ಕರಿಸುವದರೊಂದಿಗೆ ಅವರು ಬಹುದೇವತಾ ಉಪಾಸನೆಯನ್ನೂ ಅಲ್ಲಗಳೆದರು. 'ಅರಗು ತಿಂದು ಕರಗುವ, ಉರಿಯ ಕಂಡರೆ ಮುದುಡುವ, ಅವಸರ ಬಂದರೆ ಮಾರುವ, ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯ' ಎಂದು ಹೇಳುವದರೊಂದಿಗೆ, ಗುಡಿ–ಗುಂಡಾರಗಳಲ್ಲಿರುವ ಕ್ಷುದ್ರ ದೇವತೆಗಳನ್ನು ತಮ್ಮ ಬಯಕೆಗಳಿಗಾಗಿ ವ್ಯಾಪಾರ ಮಟ್ಟಕ್ಕೆ ತಂದು ನಿಲ್ಲಿಸಿದ್ದ ಅಂದಿನ ಜನತೆಗೆ ಸತ್ಯವನ್ನು ತಿಳಿಪಡಿಸಿ ಭಕ್ತಿ ಏಕಮುಖವಾಗಬೇಕು, ಅಂತರ್ಮುಖ ವಾಗಬೇಕೆಂದು ಸ್ಪಷ್ಟಪಡಿಸಿದರು.

ಒಂದು ಕಡೆ ವೈದಿಕ ಶೋಷಣೆ ಮತ್ತೊಂದು ಕಡೆ ಅತಿಯಾದ ಅಜ್ಞಾನ ಇಂತಹ ಸಂದಿಗ್ಧ ಸ್ಥಿತಿಯಲ್ಲಿದ್ದ ಅಂದಿನ ಜನತೆಯನ್ನೂ ವಿಚಾರ ಪರರನ್ನಾಗಿ ಮಾಡಿ ದುದು ಶರಣರ ಬಹುಮುಖ ಪ್ರಯತ್ನಕ್ಕೆ ಸಾಕ್ಷಿಯಂತಿದೆ. ಮಾರಿ–ಮಸಣಿಗಳನ್ನೂ ಪೂಜಿಸಿಕೊಂಡು, ತಾಮಸ ವ್ರತನೇಮುಗಳನ್ನು ಪಾಲಿಸಿಕೊಂಡು–ಜೋತಿಷ್ಯ–ಶಕು ನಾದಿಗಳನ್ನು ದೃಢವಾಗಿ ನಂಬಿಕೊಂಡು ಕತ್ತಲಲ್ಲಿ ಬಾಳುತ್ತಿದ್ದ ಅಂದಿನ ಪರಿಸರಕೆ ಹೊಸ ದಿಕ್ಕು ತೋರಿಸಿ ತಮ್ಮ ಸಂಘಟನೆಯ ಪಂಜಿನ ಬೆಳಕಿನಲ್ಲಿ ಸಕಲರಿಗೂ ಉನ್ನತವಾದ ಬದುಕು ಕಲ್ಪಿಸಿಕೊಟ್ಟದ್ದು ಶರಣರ ಕ್ರಾಂತಿಯ ಸಫಲತೆಯ ದ್ಯೋತಕ ವಾಗಿದೆ.

'ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣಿರೋ ಮಾರಿ ಎಂಬುದೇನು ? ಕಂಗಳು ತಪ್ಪಿ ನೋಡಿದರೆ ಮಾರಿ, ನಾಲಿಗೆ ತಪ್ಪಿ ನುಡಿದರೆ ಮಾರಿ' ಎಂದು ಅಂತರಂಗದ ಕಡೆ ತಿರುಗಿಸಿದರು. 'ಮನಸ್ಸಿನ ಸಂಶಯ ಕನಸಿನ ಭೂತವಾಗಿ ಕಾಡುವದು

ನೋಡಾ ! ಮನಸಿನ ಸಂಶಯುವಳಿದರೆ ಕನಸಿನ ಕಾಟ ಬಿಟ್ಟೋಡಿತ್ತು' ಎಂದು ಮನಸ್ಸಿನಲ್ಲಿ ನಿಷ್ಠೆಯನ್ನು ನಿಲ್ಲಿಸಿದರು. ತಿಥಿ, ವಾರ, ನಕ್ಷತ್ರ, ಅಷ್ಟಮಿ, ಅಮಾಸೆಗಳೆಂದು ನಂಬಿಕೊಂಡಿದ್ದ ಜನತೆಗೆ 'ಅಂದು ಇಂದು ಮತ್ತೊಂದು ಎನಬೇಡ. ದಿನ ಒಂದೇ ಶಿವಶರಣೆಂಬವಂಗೆ, ದಿನ ಒಂದೇ ಹರಶರಣೆಂಬವಂಗೆ' ಎಂದು ಹೇಳಿ ಏಕ ನಿಷ್ಠತೆಯನ್ನು ಬೋಧಿಸಿದರು. ಇದೇ ಮಾತನ್ನು 'ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ' ಎಂದು ಬಸವಣ್ಣನವರು ಹೇಳಿದರೆ 'ಹೊತ್ತಾರೆ ಅಮವಾಸ್ಯೆ, ಮಟ ಮಧ್ಯಾಹ್ನ, ಸಂಕ್ರಾಂತಿ, ಮತ್ತೆ ಅಸ್ತಮಾನ, ಪೌರ್ಣಿಮೆ ಎಂಬುದಿಲ್ಲ. ಭಕ್ತನ ಮನೆಯಂಗಣವೇ ವಾರಣಾಸಿ' ಎಂದು ದೇವರದಾಸಿಮಯ್ಯ ಈ ಹೇಳಿಕೆಯನ್ನು ಇನ್ನೂ ಸ್ಪಷ್ಟಪಡಿಸಿದ್ದರು.

ಇಂದಿನ ವೈಜ್ಞಾನಿಕ ಯುಗದ ಆಧುನಿಕರಲ್ಲೂ ಮೂಢನಂಬಿಕೆಗಳನ್ನು ಕಾಣಬಹುದು. ಸೋಮವಾರ, ಮಂಗಳವಾರ ವ್ರತಮಾಡುವವರು, ರಾಹುಕಾಲ ಗುಳಿಕ ಕಾಲಗಳನ್ನು ಚಾಚೂ ತಪ್ಪದೆ ಪಾಲಿಸುವವರು, ಬೆಕ್ಕು ಅಡ್ಡಬಂದರೆ ಮುಂದಕ್ಕೆ ನಡೆಯದವರು, ಗ್ರಹಣದ ನಂತರ ನದಿಯಲ್ಲಿ ಮುಳು-ಮುಳುಗಿ ಏಳುವವರು, ತೋಳು ನಡುವಿನ ತುಂಬಾ ತಾಯಿತಾ ಕಟ್ಟಿಕೊಂಡವರು, ಎಡಗಣ್ಣು ಹಾರಿದರೆ ಚಿಂತೆಯಿಂದ ಪರಿತಪಿಸುವವರು ಇನ್ನೂ ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಕೇವಲ ಅವಿದ್ಯಾವಂತರಷ್ಟೇ ಅಲ್ಲದೆ ವಿದ್ಯಾವಂತರಲ್ಲೂ, ವಿಜ್ಞಾನಿಗಳಲ್ಲೂ ಇಂತಹ ಜನ ಇದ್ದಾರೆ. ಪರಂಪರೆಯಿಂದ ಬಂದ ರಕ್ತಗತ ಭಾವನೆಯನ್ನು ಇಂದಿಗೂ ಇವರಿಗೆ ಕಿತ್ತೊಗೆಯಲು ಆಗುವದಿಲ್ಲವೆಂದ ಮೇಲೆ-ಈಗ ಎಂಟುನೂರು ವರ್ಷಗಳ ಹಿಂದಿದ್ದ ಅಂದಿನ ಜನತೆಯನ್ನು ಸುಧಾರಿಸಲು ಶರಣರು ಯಾವ ರೀತಿ ಶ್ರಮವಹಿಸಿರಬೇಕೆಂಬುದು, ಅವರ ಸುಧಾರಣೆಗಳನ್ನು ಕಂಡಾಗ ಆಶ್ಚರಿಯನ್ನುಂಟು ಮಾಡುತ್ತದೆ.

"ಸಾಮೂಹಿಕ ಪ್ರಜ್ಞೆಯ ಉನ್ಮೀಲನ ಮತ್ತು ಉತ್ಥಾನ ಆ ಕಾಲದಲ್ಲಾದಷ್ಟು ಬೃಹತ್ ಪ್ರಮಾಣದಲ್ಲಿ ಮತ್ತು ವ್ಯಾಪಕವಾದ ರೀತಿಯಲ್ಲಿ ನಡೆದುದಕ್ಕೆ ಧಾರ್ಮಿಕ ಇತಿಹಾಸಗಳಲ್ಲಿ ದಾಖಲೆಗಳಿಲ್ಲ"[೧] ಪ್ರತಿಭೆ-ಪಾಂಡಿತ್ಯಗಳು ಹುಟ್ಟಿನಿಂದಲೇ ಬರುವ ಒಂದು ಜನಾಂಗದ ಗುತ್ತಿಗೆಯಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಶರಣರು ಅವಕಾಶವನ್ನು ಕಲ್ಪಿಸಿಕೊಟ್ಟರೆ ಸಾಧನೆ-ಪ್ರಯತ್ನದಿಂದ ಎಲ್ಲರೂ ಬೆಳೆಯಬಲ್ಲರೆಂಬುದನ್ನೂ ತಮ್ಮ ಬದುಕಿನುದ್ದಕ್ಕೂ ದಿಟವಾಗಿ ಸಾಧಿಸಿ ತೋರಿಸಿದರು.

೨. ಅಸ್ಪೃಶ್ಯತಾ ನಿವಾರಣೆ :—

ವರ್ಣವಿಭಜನೆ ಮತ್ತು ಜಾತಿಯ ಮೇಲು—ಕೀಳುಗಳು ಸಾಮಾಜಿಕ ಅನ್ಯಾಯಕ್ಕೆ ಬುನಾದಿಯಾಗಿರುವದನ್ನು ಕಂಡಾಗ ಅದರ ವಿರುದ್ಧ ಶರಣರು ಸಿಡಿದೆದ್ದರು. ಶೋಷಣೆಯ ಸಾಧ್ಯತೆಗಳೆಲ್ಲವನ್ನೂ ಹುಡುಕಿ ಬೇರು ಸಹಿತ ಕಿತ್ತು

೧. ಡಾ. ಎಚ್. ತಿಪ್ಪೇರುದ್ರಸ್ವಾಮಿ : ವಚನ ಸಾಹಿತ್ಯ : ವೈಚಾರಿಕ ಅಧ್ಯಯನ. ಪುಟ. ೨೯.

ಹಾಕಿದರು. ಹುಟ್ಟು ಮಾನವನಿಗೆ ಆಕಸ್ಮಿಕವಾದುದು. ಹುಟ್ಟಿನಿಂದಲೇ ಒಬ್ಬನನ್ನು ಉಚ್ಚ ಕುಲದವನೆಂದು ಮತ್ತೊಬ್ಬನನ್ನು ನೀಚಕುಲದವನೆಂದು ಅಳೆಯುವದು ಮಾನವೀಯತೆಯೇ ಅಲ್ಲ ಎಂದು ಸ್ಪಷ್ಟಪಡಿಸಿದರು. ಅಜ್ಞಾನದ ಗೋಡೆಗಳನ್ನು ಕೆಡವಿಹಾಕಿದರು. ಶರಣರ ಕ್ರಾಂತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರು ಮುಖ್ಯವಾಗಿ ಅಸ್ಪೃಶ್ಯರ ಉದ್ಧಾರಕ್ಕಾಗಿಯೇ ಉದಯಿಸಿ ಬಂದಂತಿತ್ತು. ಜನತೆಯಲ್ಲಿ ಆತ್ಮ ವಿಶ್ವಾಸವನ್ನು ಹುಟ್ಟಿಸಿದುದು ಅವರ ಮಹತ್ಸಾಧನೆಯ ಮತ್ತೊಂದು ಮುಖ್ಯವಾದ ಅಂಶ.

ಶರಣರು ಮಾನವತಾವಾದಿಗಳು. ಮಾನವ ಮಾನವನನ್ನೇ ಜಾತಿಯ ಹೆಸರಿನಲ್ಲಿ, ಕುಲದ ನೆಪದಲ್ಲಿ ಶೋಷಣೆ ಮಾಡುವದನ್ನು ಅವರು ಎಂದಿಗೂ ಸಹಿಸಲಿಲ್ಲ. ಸಕಲರಿಗೂ ಲೇಸನ್ನೇ ಬಯಸುವದೇ ಅವರ ಧರ್ಮವಾಗಿತ್ತು. ಅವರ ಮಾನವತಾವಾದ ಯಾವುದೇ ಒಂದು ವರ್ಗಕ್ಕಾಗಲೀ ಅಥವಾ ಬದುಕಿನ ಯಾವುದೇ ಒಂದು ಭಾಗಕ್ಕಾಗಲಿ ಸೀಮಿತವಾಗಿರಲಿಲ್ಲ. ಡಾ. ಎಸ್. ರಾಧಾಕೃಷ್ಣನ್ ಅವರು ಹೇಳುವಂತೆ 'The ultimate harmonious interrelation of all individuals with one another is the aim of humanism' — ಎಂಬ ಮಾತು, ಶರಣರ ನಡೆ-ನುಡಿಯಲ್ಲಿ ಪಲ್ಲವಿಸಿತ್ತು.

ಎಲ್ಲಾ ಮದಕ್ಕಿಂತ ಕುಲಮದ ಅಂದು ಹೆಚ್ಚಾಗಿತ್ತು: ಉಚ್ಚಕುಲದವರು ಹುಟ್ಟಿನ ಒಂದೇ ಒಂದು ಆಧಾರದಿಂದ ಕೆಳಕುಲದವರನ್ನು ಸೇವಕರಂತೆ, ಪ್ರಾಣಿಗಳಂತೆ ಉಪಯೋಗಿಸಿಕೊಳ್ಳುತ್ತಿದ್ದರು. ಅಸ್ಪೃಶ್ಯರಾದವರು ಊರೊಳಗೆ ಬರಬೇಕಾದರೆ ಗಂಟೆ ಕಟ್ಟಿಕೊಂಡು ಬರುವ ಪದ್ಧತಿ ಇತ್ತು. ಅಸ್ಪೃಶ್ಯರು ಈ ಉಚ್ಚ ಕುಲದವರನ್ನು ಮುಟ್ಟುವದೊತ್ತಟ್ಟಿಗಿರಲಿ, ಅವರ ನೆರಳು ಬಿದ್ದರೆ ಸಾಕು ಮೈಲಿಗೆಯಾಯಿತೆಂದು ಅವರಿಗೆ ಶಿಕ್ಷೆವಿಧಿಸಿದ್ದರು. ಇಂತಹ ಘೋರ ಪರಿಸ್ಥಿತಿಯನ್ನು ತಮ್ಮ ಸಂಘಟನಾ ಪ್ರಯತ್ನದಿಂದ ಹೊಡೆದುಹಾಕಿ, ಉಚ್ಚಕುಲದ ಮಧುವರಸನ ಮಗಳಿಗೂ, ನೀಚಕುಲದವನೆಂದು ತಿರಸ್ಕರಿಸಲ್ಪಟ್ಟಿದ್ದ ಮಾದರ ಹರಳಯ್ಯನ ಮಗನಿಗೂ ಮದುವೆ ಮಾಡಿಸಿದ್ದು ಶರಣರ ನಿಜವಾದ ಕ್ರಾಂತಿಯ ಕುರುಹಾಗಿದೆ.

ಶರಣರು ಮೇಲೆ ಕುಂತು ಬೋಧಿಸಲಿಲ್ಲ. ಕೆಳಗಿಳಿದು ಸಾಮಾನ್ಯರೊಂದಿಗೆ ಸಾಮಾನ್ಯರಾಗಿ ತಾವು ನುಡಿದುದನ್ನು ನಡೆಯಲ್ಲಿ ತೋರಿಸಿದರು. ತಮ್ಮ ಅರಿವಿಗೆ ಬಂದದ್ದನ್ನು ಆಚಾರಣೆಯಲ್ಲಿ ತಂದರು. 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ,' ಎನ್ನುವ ಬಸವಣ್ಣನವರು ಜನ ತನ್ನ ಜಾತಿಯನ್ನೇ ಎತ್ತಿ ಹೇಳುತ್ತಿದ್ದುದನ್ನು ಕಂಡು ಇನ್ನೂ ರೋಸಿ ಒಂದು ಕಡೆ ಹೀಗೆ ಹೇಳುತ್ತಾರೆ. 'ಚೆನ್ನಯ್ಯನ ಮನೆಯ ದಾಸಿಯ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲ್ಲಿ ಬೆರಣೆಗೆ ಹೋಗಿ ಸಂಗವ ಮಾಡಿದರು

ಇವರಿಬ್ಬರಿಗೆ ಹುಟ್ಟಿದ ಮಗ ನಾನು' ಈ ಮಾತಿನ ಹಿಂದಿರುವ ಶರಣರ ಎತ್ತರದ ವ್ಯಕ್ತಿತ್ವ ಎಂಥವರಿಗಾದರೂ ಸ್ಪಷ್ಟವಾಗುತ್ತದೆ. ಅಂದಿನ ಸಮಾಜದ ದೃಷ್ಟಿಯಲ್ಲಿ ಅಸ್ಪೃಶ್ಯರೆಂದೆನ್ನಿಸಿಕೊಂಡಿದ್ದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ, ಕಂಬಳಿ ನಾಗಿದೇವ, ಹರಳಯ್ಯ ಇನ್ನೂ ಮುಂತಾದ ಸಾಧಕರು ಬಸವಾದಿ ಶರಣರ ಕ್ರಾಂತಿಯ ಫಲವಾಗಿ ಆಧ್ಯಾತ್ಮಿಕ ರಂಗದಲ್ಲಿ ಅತ್ಯುನ್ನತವಾದ ಸ್ಥಾನಕ್ಕೇರಿದರು. ಯಾವ ಉಚ್ಚ ಕುಲದವರಿಂದಲೂ ಬರಲಾರದ ಸತ್ವಯುತವಾದ ನುಡಿ, ಸತ್ಯ-ಶುದ್ಧ ನಡೆ ಇವರಲ್ಲಿ ಮೇಳವಿಸಿದವು.

ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಶರಣರು ಬಹುವಾಗಿ ಶ್ರಮಿಸಿದರು. ಅವರ ಶ್ರಮದ ಫಲ ಕೊನೆಗೂ ಅವರಿಗೆ ಲಭಿಸಿತು. ತಮ್ಮ ಬದುಕಿನುದ್ದಕ್ಕೂ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ ನುಡಿಗಳು ಅತ್ಯಂತ ಗಮನಾರ್ಹವಾಗಿವೆ.

'ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲನೊಂದೆ ಎಂಬೆ;
ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ' –ಬಸವಣ್ಣ
'ಕುಲಮದ, ಛಲಮದ ವಿದ್ಯಾಮದದವರ ತೋರದಿರಾ ಗುಹೇಶ್ವರಾ'
–ಪ್ರಭುದೇವ
'ಜಂಗಮದಲ್ಲಿ ಕುಲವನರಸದಿಹುದೇ, ಮೂವತ್ತೈದನೆಯ ಆಚಾರ'
–ಚೆನ್ನಬಸವಣ್ಣ
'ಕುಲದಲ್ಲಿ ಶೂದ್ರನಾದಡೇನು ? ಮನದಲ್ಲಿ ಮಹಾದೇವ
ನೆಲೆಗೊಂಡವನೆ ವೀರಶೈವ ನೋಡಾ ....' –ಸಿದ್ಧರಾಮ
'ಕುಲಭ್ರಮೆ, ಛಲಭ್ರಮೆ, ಆಶ್ರಮ, ಮಠ ಮೊದಲಾದ ಮೂವತ್ತೆರಡು
ಪಾಶಾ ಭ್ರಮಿತರಾಗಿ ತೊಳಲುವ ವೇಷಧಾರಿಗಳ...ಚೆನ್ನಮಲ್ಲಿಕಾರ್ಜುನಯ್ಯ'
–ಅಕ್ಕಮಹಾದೇವಿ
'ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ ?
ಊರೊಳಗೆ ಬ್ರಾಹ್ಮಣ-ಬಯಲು ಊರ ಹೊರಗೆ ಹೊಲೆ ಬಯಲೆಂದುಂಟೆ ?'
–ಬೊಂತಾದೇವಿ
'ಭಕ್ತರ ಕುಲವನೆತ್ತಿ ನಿಂದಿಸುವಾತ......ಭಕ್ತನೇ ?' –ಕಾಳವ್ವೆ
'ಆತ್ಮಂಗೆ ಯಾವ ಕುಲವುಂಟು ಹೇಳಿರೋ..... ವರ್ಣ ಅವರ್ಣಂಗಳುಂಟೆ ?'
–ಸೊಡ್ಡಳ ಬಾಚರಸ
'ಆಚಾರಕ್ಕೆ ಬೇರೆ ಕುಲ ಛಲ ಉಂಟೆ ?' –ಮೋಳಿಗೆಯ ಮಾರಯ್ಯ
'ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಸೂತಕವಿಲ್ಲ. ಆಚಾರವೇ ಕುಲ'
–ಮಾದರ ಚೆನ್ನಯ್ಯ

'ಹೊಲೆಯ ಹೊಲೆಯರೆಂದೊಡೆ ಹೊಲೆಯರೆಂತಪ್ಪರಯ್ಯ,
ಹೊಲೆಯ, ಹೊರಕೇರಿಯಲ್ಲಿರುವರು, ಊರೊಳಗಿಲ್ಲವಯ್ಯ ಹೊಲೆಯರು ?'
–ಅಂಬಿಗರ ಚೌಡಯ್ಯ

'ಕುಲವುಳ್ಳನ್ನಕ್ಕ ಭಕ್ತನಲ್ಲ... ಕುಲ ಗುರು ಕೃಪೆಯ ಕೆಡಿಸಿತ್ತು'
–ಸಂಗಮೇಶ್ವರಪ್ಪಣ್ಣ

ಕುಲದ ಬಗೆಗೆ ಮಾತೆತ್ತಿದರೆ ಶಿಕ್ಷೆವಿಧಿಸುತ್ತಿದ್ದ ಅಂದಿನ ಸಂದರ್ಭದಲ್ಲಿ ಶರಣರು ಈ ರೀತಿಯಾಗಿ ಕೆಚ್ಚೆದೆಯಿಂದ ನುಡಿದದ್ದು ಅದರಂತೆ ನಡೆದದ್ದು ಕ್ರಾಂತಿಯ ನಿಜವಾದ ಸಫಲತೆಯಾಗುತ್ತದೆ. ಎಲ್ಲ ವರ್ಗಗಳಿಂದ, ಎಲ್ಲ ಜಾತಿ–ಮತ–ಪಂಥ ಗಳಿಂದ ಬಂದು ಸೇರಿದ ಸಾಮಾನ್ಯ ಜನಸಮುದಾಯ ಅರಿವು–ಆಚಾರ–ಆಧ್ಯಾತ್ಮದ ಬಗೆಗೆ ಉಪದೇಶಿಸುವ ಮಟ್ಟಿಗೆ, ಇಂತಹ ಒಂದು ಉಚ್ಚಮಟ್ಟಕ್ಕೇರಿದ್ದು ಕ್ರಾಂತಿಯ ಸಫಲತೆಯನ್ನು ಎತ್ತಿ ತೋರಿಸುತ್ತದೆ.

೩. ಸ್ತ್ರೀ ಸಮಾನತೆ :

ಭಾರತದ ಇತಿಹಾಸದಲ್ಲಿ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಪೂರ್ಣ ಗೌರವ ಲಭಿಸಿದ್ದು ಹನ್ನೆರಡನೇ ಶತಮಾನದ ಶರಣರ ಕಾಲದಲ್ಲಿ. ಸ್ತ್ರೀಯನ್ನು ಕಾಣುವ ಶರಣರ ದೃಷ್ಟಿ ಉದಾತ್ತವಾದದ್ದು, ವಿಶಾಲವಾದದ್ದು. ಸ್ತ್ರೀಯಲ್ಲಿ ಅದ್ಭುತ ಶಕ್ತಿಯನ್ನು ಕಂಡ ಶರಣರು ಅವರಿಗೆ ಪುರುಷರ ಸಮಾನ ಸ್ಥಾನವನ್ನು, ಸಮ ಸ್ವಾತಂತ್ರ್ಯವನ್ನಿತ್ತು ಸತ್ಕರಿಸಿದ್ದಾರೆ. ಪತಿಯ ಕಾಯಕದಲ್ಲಿ ನಿಷ್ಠಳಾಗಿ, ಮರೆವು ಕವಿದಾಗ ಅರಿವೀಯುವಳಾಗಿ ಬಹುಮುಖ ವ್ಯಕ್ತಿತ್ವ ಪಡೆದ ಸ್ತ್ರೀಗೆ ಸಮನಾದ ಸ್ಥಾನ ಕಲ್ಪಿಸಿಕೊಟ್ಟದ್ದು ಶರಣರ ವಿಶಾಲ ಮನಸ್ಸಿನ ಪ್ರತೀಕ.

ಸ್ತ್ರೀಯರನ್ನು ಸರಿಯಾಗಿ ಅರ್ಥೈಸಿಕೊಂಡವರೆಂದರೆ ಶರಣರು. ಸ್ತ್ರೀಯರ ಕುಲ–ವಯಸ್ಸು–ರೂಪ ಇದಾವುದನ್ನೂ ಎಣಿಸದೆ ಸಮಾನ ದೃಷ್ಟಿಯಿಂದ ಕಂಡರು.

ಹೆಣ್ಣು ಕೇವಲ ಭೋಗದ ವಸ್ತುವಾಗಿ, ಶತ-ಶತಮಾನಗಳಿಂದಲೂ ಅಲಕ್ಷಿಸಲ್ಪಟ್ಟಿದ್ದಳು. ಅಂತಹ ಹೆಣ್ಣಿಗೆ ಉನ್ನತ ಸ್ಥಾನ ಕೊಟ್ಟು ನಮಿಸಿದವರು ಶರಣರು. ಸ್ತ್ರೀ ಸಮುದಾಯವನ್ನು ಕತ್ತಲದಲ್ಲಿಟ್ಟು ಸಮಾಜದಲ್ಲಿ ಬೆಳಕು ತರಲು ಪ್ರಯತ್ನಿಸಿದವರಿಗೆ ಸೋಲು ಖಂಡಿತ ಎಂದವರು ಮನಗಂಡಿದ್ದರು. ಸಮಾಜ ರಥದ ಒಂದು ಚಕ್ರವನ್ನೇ ಬದಿಗಿಟ್ಟು ಬಹು ಮುಂದೆ ಹೋಗುವದು ಸಾಧ್ಯವಿಲ್ಲವೆಂಬುದನ್ನವರು ತಿಳಿದುಕೊಂಡಿದ್ದರು. 'ಅಂತೆಯೇ ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ಸಾರಿದರು. ಅಕ್ಕಮಹಾದೇವಿಯಂಥ ಹೆಣ್ಣುಮಕ್ಕಳಿಗೆ ಶಿವಾನುಭವ ಮಂಟಪದಲ್ಲಿ ಅತ್ಯುನ್ನತ ವೇದಿಕೆಯನ್ನಿತ್ತು ಗೌರವಿಸಿದರು. ಈ ಕಾರಣದಿಂದ ಶರಣರ ಕ್ರಾಂತಿಯಲ್ಲಿ ಸ್ತ್ರೀಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದಂತೆ ಬೇರಾವ ಕ್ರಾಂತಿಯಲ್ಲೂ ಇದು ಕಂಡುಬರುವದಿಲ್ಲ. ಈ ಕಾರಣದಿಂದ ಅಂದಿನ ಸ್ತ್ರೀಯ

ರಾದರೂ ಕೂಡ ಹಿಂದೆ ಬೀಳಲಿಲ್ಲ ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡರು. ವಿಚಾರ, ನಿಷ್ಠೆ, ಕಾಯಕ, ಭಕ್ತಿ, ಶೀಲ, ಕೆಚ್ಚು ಮುಂತಾದ ಕಡೆಗಳಲ್ಲಿ ಶರಣರನ್ನೇ ಶರಣಾಗತರಾಗಿಸಿಕೊಂಡ ಶರಣೆಯರು ವಚನಕಾರರ ಇತಿಹಾಸದಲ್ಲಿ ಉನ್ನತಸ್ಥಾನ ಪಡೆದಿದ್ದಾರೆ.

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಹಡಪದಪ್ಪಣ, ಕಿನ್ನರಿ ಬೊಮ್ಮಣ್ಣ, ಮಡಿವಾಳ ಮಾಚಯ್ಯ, ನುಲಿಯ ಚೆಂದಯ್ಯ ಈ ಮೊದಲಾದ ಶರಣರೆಲ್ಲರೂ ಅನುಭವ ಮಂಟಪದಲ್ಲಿ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂದು ಸ್ತುತಿಸಿದುದನ್ನು ನೋಡಿದರೆ ಶರಣರು ಹೆಣ್ಣಿಗಿತ್ತ ಶ್ರೇಷ್ಠ ಸ್ಥಾನದ ಕಲ್ಪನೆ ಸ್ಪಷ್ಟವಾಗುತ್ತದೆ. ಅಂದಿನ ವಚನಕಾರ್ತಿಯರಲ್ಲಿದ್ದ ಕೆಚ್ಚು, ಛಲ, ಪ್ರತಿಭಟನೆ, ಪ್ರಾಮಾಣಿಕತೆ, ಹೋರಾಟವನ್ನು ಇಂದಿನ ಇಪ್ಪತ್ತನೇ ಶತಮಾನದ ಲೇಖಕಿಯರಲ್ಲೂ ಕಾಣಲಾರೆವು. ಅಧಿಕ ಸಂಖ್ಯೆಯಲ್ಲಿ ಸ್ತ್ರೀಯರು ಸಾಹಿತ್ಯ-ಸಮಾಜ-ಅಧ್ಯಾತ್ಮ ರಂಗಗಳಲ್ಲಿ ಭಾಗವಹಿಸಿ ಯಶಸ್ವಿಯಾದದ್ದು ಹನ್ನೆರಡನೇ ಶತಮಾನದ ಶರಣರ ಪರಿಸರದಲ್ಲಿ ಮಾತ್ರ.

ಸ್ತ್ರೀ ಬಗೆಗೆ ಶರಣರು ತಾಳಿದ ವಿಚಾರಗಳು ಇಂದಿಗೂ ಆದರ್ಶನೀಯವಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಬಹುದು.

'ಪರವಧುವನು ಮಹಾದೇವಿಯೆಂಬೆ'
'ತೊರಿಯಿಂಭೋ, ತೊರಿಯಿಂಭೋ'
'ಪರನಾರಿಯ ಸಂಗವ ತೊರಿಯಿಂಭೋ'
'ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ' —ಬಸವಣ್ಣ
'ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ' —ಸಿದ್ಧರಾಮ
'ಹೆಣ್ಣು-ಹೊನ್ನು-ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸೆಯೇ ಮಾಯೆ' —ಪ್ರಭುದೇವ

ಇಂತಹ ಸಮಾನತೆಯ ಆಚಾರ-ವಿಚಾರಗಳು ಸಕಲ ಶರಣರಲ್ಲಿಯೂ ಕಾಣಸಿಗುತ್ತವೆ. ಗಂಡಿನಂತೆ ಹೆಣ್ಣಿಗೂ ಎಲ್ಲ ರಂಗಗಳಲ್ಲೂ ಸಮಾನ ಅವಕಾಶ, ಸ್ಥಾನ-ಮಾನ ದೊರಕಿದ್ದು ಶರಣರ ಕಾಲದಲ್ಲಿ ಮಾತ್ರ ಎಂಬುದು ಇತಿಹಾಸ ಓದಿದ ಯಾರಿಗಾದರೂ ಸ್ಪಷ್ಟವಾಗುತ್ತದೆ. ಹೆಣ್ಣು-ಗಂಡುಗಳಲ್ಲಿ ಲಿಂಗ ಭೇದವೊಂದನ್ನು ಬಿಟ್ಟರೆ ಆತ್ಮ ಎಲ್ಲರಲ್ಲಿಯೂ ಒಂದೇ ಎಂದು ಸಾರಿದ ಶರಣರು ಹೆಣ್ಣನ್ನೂ ಸಾಕ್ಷಾತ್ ದೇವರೆಂದು ಭಾವಿಸಿದ್ದು, ಸತ್ಕರಿಸಿದ್ದು, ಸ್ವಾಗತಿಸಿದ್ದು. ಗೌರವಿಸಿದ್ದು ಅವರ ಮಹಾಚೇತನಕ್ಕೆ ಸಾಕ್ಷಿಯಂತಿದೆ. ಅರಿವು-ಆಚಾರ ಅಧ್ಯಾತ್ಮ ರಂಗದಲ್ಲಿ ಅತಿ ಎತ್ತರದ ಸ್ಥಾನಕ್ಕೆ ಅಂದು ಮಹಿಳೆ ಏರಿದಳು. ಅಧ್ಯಾತ್ಮದ ರಂಗದಲ್ಲಿ ಪುರುಷರಿಗೆ ಅಸಾಧ್ಯವಾದುದನ್ನು ಅಂದು ಸ್ತ್ರೀ ಸಾಧಿಸಿ ತೋರಿಸಿದಳು. ಅವಕಾಶ ದೊರೆತರೆ ಹೆಣ್ಣು-ಗಂಡೆಂಬ ಭೇದವಿಲ್ಲದೆ ಸಕಲರೂ ಬೆಳೆಯಬಲ್ಲರು-ಬೆಳಗಬಲ್ಲರು ಎಂಬುದಕ್ಕೆ ಶರಣರ ಕ್ರಾಂತಿಯೇ

ಸಾಕ್ಷಿ. ಸಮಾಜದ ಸಕಲ ಮಜಲುಗಳಲ್ಲಿಯೂ ಸ್ತ್ರೀಗೆ ಸಮಾನವಕಾಶ ದೊರಕಿಸಿ ಕೊಟ್ಟು, ಸ್ತ್ರೀ ಸಮುದಾಯದ ಹೆಗ್ಗಳಿಕೆಗೆ ಕಾರಣರಾದ ಶರಣರ ಈ ಪ್ರಯತ್ನ ಎಂದಿಗೂ ಆದರ್ಶವಾಗಿದೆ.

೪. ಆರ್ಥಿಕಾಭಿವೃದ್ಧಿ :

ಕಾರ್ಲ್‌ಮಾರ್ಕ್ಸ್‌ರ ಅಭಿಪ್ರಾಯದಂತೆ ಸಮಾಜವಾದಿ ಸಮಾಜದಲ್ಲಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯು ಮೊದಲನೆಯದಾಗಿ ಮತ್ತು ಮುಖ್ಯವಾಗಿ ಸಮಾಜದ ಬೆಳವಣಿಗೆಯ ನಿಯಮಗಳನ್ನು, ಉತ್ಪಾದನೆಯ ಮೂಲಭೂತವಾದ ಕಾರ್ಯಗತಿಗಳನ್ನು ಆತ ತಿಳಿದುಕೊಳ್ಳುವಲ್ಲಿ ಅಡಕವಾಗಿದೆ. ಮಾರ್ಕ್ಸ್ ನಿರೂಪಿಸಿದ ಪರಿಶ್ರಮದ ಪರ್ಯಾಯದ ನಿಯಮವು ಬೌದ್ಧಿಕ ಪರಿಶ್ರಮಕ್ಕೆ ಕೂಡಾ ಅನ್ವಯಿಸುವದೆಂದು ನಾವು ತಿಳಿಯುತ್ತೇವೆ. ಇದೇ ವಿಚಾರವನ್ನು ಇನ್ನೂ ಅರ್ಥವತ್ತಾಗಿ ಹನ್ನೆರಡನೇ ಶತಮಾನ ಸಾರ್ವಕಾಲಿಕ ಸತ್ಯವನ್ನು ಪ್ರತಿಬಿಂಬಿಸುತ್ತದೆ.

ಶರಣರ ಕ್ರಾಂತಿ ಧಾರ್ಮಿಕ ರಂಗದಿಂದ ಪ್ರಾರಂಭವಾದರೂ ಅದು ಎಲ್ಲ ರಂಗಗಳಲ್ಲೂ ವ್ಯಾಪಿಸಿ ಆಮೂಲಾಗ್ರ ಬದಲಾವಣೆಗೆ ಹಾತೊರೆಯಿತು. ವ್ಯಕ್ತಿ, ಇನ್ನೊಬ್ಬರ ಹಂಗಿನಲ್ಲಿರದೆ, ಮೈಗಳ್ಳನಾಗದೆ, ತನು–ಮನ ಮುಟ್ಟಿ ದುಡಿದು– ಪಡೆದುಣ್ಣಬೇಕೆಂದು ಹೇಳುವದರೊಂದಿಗೆ ಶರಣರು ಅಂದಿನ ಸಮಾಜದಲ್ಲಿ ಆರ್ಥಿಕ ಅಡಿಪಾಯವನ್ನು ಭದ್ರಗೊಳಿಸಿದರು.

ಸಾಧಕ ಯಾವುದೇ ಹಂತದಲ್ಲಿರಲಿ, ಯಾವುದೇ ವರ್ಗದವನಿರಲಿ ದೈಹಿಕ ಶ್ರಮದಿಂದ ಕೂಡಿದ ಉತ್ಪಾದಕ ದುಡಿಮೆಯಿಲ್ಲದೆ ಬದುಕಲಾಗದು. ಬೆವರು ಸುರಿಸದೆ ತಿನ್ನುವ ಹಕ್ಕು ಭಕ್ತ, ಗುರು, ಜಂಗಮ ಯಾರಿಗೂ ಇರಲಿಲ್ಲ. ಯಾವುದೇ ಕಾಯಕ ಮಾಡಿದರೂ ಎಲ್ಲರೂ ಸರಿಸಮಾನರು. ಕೆಲಸದಲ್ಲಿ ಮೇಲು–ಕೀಳೆಂಬುದಿಲ್ಲ. ಅದು ವರ್ಣ ಮತ್ತು ಜಾತಿಗಳಿಗೆ ಬಂಧಿತವಾದುದಲ್ಲ. ಮಾಡಬೇಕಾದ ಕೆಲಸವನ್ನು ಮನಮುಟ್ಟಿ–ತನುಮುಟ್ಟಿ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಮಾಡಬೇಕು. ಕಾಯಕದಲ್ಲಿ ನಿರತನಾದಾಗ ಗುರು–ಲಿಂಗವನ್ನಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಹಂಗು ಹರಿಯಬೇಕು. ಮಾಡುವ ಕೆಲಸ ಕೇವಲ ಹೊಟ್ಟೆಯ ಪಾಡಿನ ಉದ್ಯೋಗವಾಗದೆ 'ಕಾಯಕ'ವಾಗುವುದು 'ದಾಸೋಹ'ದಿಂದ ಮಾತ್ರ ಸಾಧ್ಯ; ಕೇವಲ ಒಡಲ ಅವಸರಕ್ಕೆ ಕುದಿಯದೆ ಕೂಡಲಸಂಗನ ನಿಲುವಿಂಗೆ ಕುದಿವ ಶರಣರ ಕಾಯಕತತ್ವದ ಅರ್ಥ ಅನಂತವಾದುದು.

ಶರಣರ ಈ ಎಲ್ಲಾ ವಿಚಾರಗಳು ಅಂದು ಆಚರಣೆಗೆ ಬಂದದ್ದರಿಂದ ಅಂದಿನ ಸಮಾಜದಲ್ಲಡಗಿದ ಆಲಸ್ಯತನ–ಮೈಗಳ್ಳತನಗಳು ಮಾಯವಾಗಿ ಸಕಲರೂ ದುಡಿದು, ಆರ್ಥಿಕವಾಗಿ ಸಮರ್ಥರಾಗಿ ಸುಖ–ಸಂತೋಷದಿಂದ ಸಮಾನತೆಯಿಂದ ಬಾಳಿದ್ದು ಕ್ರಾಂತಿಯ ನಿಜವಾದ ಸಫಲತೆಯನ್ನು ಹೇಳುತ್ತದೆ.

ಶರಣರ ಕಾಲದಲ್ಲಿ ಕಾಯಕ ಎಂದೂ ಕುಲಸೂಚಕವಾಗಿರಲಿಲ್ಲ. ಚೆನ್ನಯ್ಯ, ಕಕ್ಕಯ್ಯ, ಮಾಚಯ್ಯ, ಚೌಡಯ್ಯ, ಕೇತಯ್ಯ, ಕನ್ನಪ್ಪ ಮೊದಲಾದ ಶರಣರ ಹೆಸರುಗಳ- ಹಿಂದೆ ಕ್ರಮವಾಗಿ ಇರುವ ಮಾದಾರ, ಡೋಹರ, ಮಡಿವಾಳ, ನುಲಿಯ, ಅಂಬಿಗರ, ಮೇದರ, ಗಾಣದ ಮೊದಲಾದವು ವೃತ್ತಿಸೂಚಕ- ಪದಗಳೇ ವಿನಃ ಜಾತಿ ಸೂಚಕಗಳಾಗಿರಲಿಲ್ಲ.

ಶರಣರಲ್ಲಿ ಒಬ್ಬೊಬ್ಬರು ಒಂದೊಂದು ವೃತ್ತಿಯನ್ನವಲಂಬಿಸಿದ್ದವರಾದರೂ ಪರಸ್ಪರ ತಾರತಮ್ಯಗಳೆಂಬುದೇ ಇರಲಿಲ್ಲ. ಆರ್ಥಿಕ ಸ್ಥಿತಿಯನ್ನು ಸುಧಾರಿಸುವದರೊಂದಿಗೆ, ಆಧ್ಯಾತ್ಮದ ಅರಿವನ್ನೂ ಮೂಡಿಸುತ್ತ ಲೋಕಾನುಭವದಲ್ಲೇ–ಶಿವಾನುಭವವನ್ನೂ ಕಂಡು, ಇಹದಲ್ಲಿಯೇ ಪರವನ್ನು ಹುಡುಕಿ ವ್ಯಕ್ತಿಯಲ್ಲೇ- ಶಕ್ತಿ ತುಂಬಿದ್ದು, ಜೀವದಲ್ಲಿಯೇ ದೇವರನ್ನು ಕಂಡದ್ದು ಅಂದಿನ ಶರಣರ ನಿರಂತರ ಹೋರಾಟದ ಫಲವೆಂದೇ ಹೇಳಬಹುದು.

೫. ವಿಶಿಷ್ಟ ಪ್ರಕಾರದ ಸಾಹಿತ್ಯ ಸೃಷ್ಟಿ :

ಶರಣರಿಂದ ಸೃಷ್ಟಿಗೊಂಡ ವಚನ ಸಾಹಿತ್ಯ ಇಡೀ ವಿಶ್ವದಲ್ಲಿಯೇ ವಿಶಿಷ್ಟವಾದ ಸಾಹಿತ್ಯ. ಗದ್ಯವೂ–ಪದ್ಯವೂ ಅಲ್ಲದ ವಚನದಂತಹ ವಿಶಿಷ್ಟ ಪ್ರಕಾರ ಇನ್ನಾವ ಭಾರತೀಯ ಸಾಹಿತ್ಯದಲ್ಲೂ ಕಾಣಸಿಗದು. ಶರಣರ ಕ್ರಾಂತಿ ಧಾರ್ಮಿಕ ರಂಗದಿಂದಲೇ ಪ್ರಾರಂಭವಾಗಿದ್ದರೂ ಅದು ಸಾಹಿತ್ಯ ರಂಗದಲ್ಲೂ ಮೂಲಭೂತ ಬದಲಾವಣೆಗಳನ್ನು ಮಾಡಿತು. ಶರಣರ ವಚನಗಳಿಂದಲೇ ಕನ್ನಡ ಸಾಹಿತ್ಯಕ್ಕೊಂದು ಬೆಲೆ ಬಂತು. ರಾಜಾಸ್ಥಾನದ ಸಾಹಿತ್ಯವಾಗಿದ್ದ ಚಂಪೂಸಾಹಿತ್ಯ ಪರಂಪರೆಯನ್ನು ಪೋಷಿಸುವ ಪಂಡಿತ ಮಂಡಲಿಯ ಸಾಹಿತ್ಯವಾಗಿತ್ತು. ಶರಣರು ಸ್ವತಂತ್ರರು, ಸಾಮಾನ್ಯ ವರ್ಗದಿಂದ ಬಂದವರು, ಪರಂಪರೆಯನ್ನು ವಿರೋಧಿಸುವವರು. ಶರಣರು ಜನಸಾಮಾನ್ಯ ವರ್ಗದಿಂದ ಬಂದುದರಿಂದ ಜನಸಾಮಾನ್ಯರ ಆಡುಭಾಷೆಯೇ ಅಗ್ರಸ್ಥಾನ ಪಡೆಯಿತು.

ರಾಜಮಹಾರಾಜರ ಆಸ್ಥಾನದಲ್ಲಿ ಪಂಡಿತರ ಸೊತ್ತಾಗಿದ್ದ ಸಾಹಿತ್ಯದೇವಿ ಗುಡಿಸಲಲ್ಲಿ ವಾಸಿಸುವ ಕಡುಬಡುವರ ನಾಲಗೆಯ ಮೇಲೆ ನಲಿದಾಡಿದ್ದು– ಶರಣರ ಬಹು ಮುಖ ಪ್ರಯತ್ನಕ್ಕೆ ಸಾಕ್ಷಿ, ಬೀದಿ ಭಾಷೆಯನ್ನು ಗಾದಿಗೇರಿಸಿ ಸಾಮಾನ್ಯ ಜನರೆಲ್ಲರಿಗೂ ತಮ್ಮ ನುಡಿ ಮುಟ್ಟಿಸಿದವರು ಶರಣರು. ಭಾಷೆಯನ್ನು ಅವರಷ್ಟು ಸಮರ್ಥರಾಗಿ ದುಡಿಸಿಕೊಂಡವರು ಕನ್ನಡ ಸಾಹಿತ್ಯದಲ್ಲಿ ಮತ್ತಾರೂ ಇಲ್ಲ. ಶರಣರು ತಮ್ಮ ಸಮಕಾಲೀನವಾದ ನಡುಗನ್ನಡವನ್ನಾರಿಸಿಕೊಂಡು, ತಮಗೆ ಉಸಿರಾಟದಷ್ಟು ಸಹಜವಾದ ನೆಲದ ಮಾತಿನಲ್ಲಿ ವಚನ ರಚಿಸಿದರು. ಹೊಗಳು ಭಟ್ಟರ ಸಾಹಿತ್ಯ ದೂರವಾಗಿ, ಬದುಕಿಗೆ ಹತ್ತಿರವಾದ ಜನಬದುಕುವ ಸಾಹಿತ್ಯ ಶರಣರಿಂದ ಸೃಷ್ಟಿಯಾಗಿದ್ದು ಅವರ ಕ್ರಾಂತಿಯ ಅಮೂಲ್ಯ ಕೊಡುಗೆ.

'ಜನರ ಬದುಕಿನಿಂದ ಪ್ರೇರಿತರಾಗಿ, ಜನಬದುಕಬೇಕೆಂದು ಶರಣರು ಸಾಹಿತ್ಯ ರಚನೆಗೆ ತೊಡಗಿದವರು. ಸಮಷ್ಟಿ ಜೀವನದ ಆಂತರಿಕ ಸಾಧನೆಯ ಸತ್ವವನ್ನು ಅರಗಿಸಿಕೊಂಡು ನಿಸ್ಸತ್ವ ಸಂಪ್ರದಾಯಗಳನ್ನು ಕತ್ತರಿಸಿ ಹೊಸ ಚೈತನ್ಯವನ್ನುಕ್ಕಿಸಲು ಅದು ಸಾಧನವಾಯಿತು'[೫] ವಚನ ಸಾಹಿತ್ಯದ ಅಂತರಂಗದಂತೆ ಬಹಿರಂಗದ ರೂಪವೂ ಕ್ರಾಂತಿಕಾರಕವಾದ ಪ್ರಯೋಗಶೀಲತೆಯ ಫಲ. ಈ ಪ್ರಯೋಗಶೀಲತೆಗೆ ಅವರನ್ನು ತೊಡಗಿಸಿದ್ದು ಸಾಮಾಜಿಕ ಕಳಕಳಿ.

ಕನ್ನಡದಲ್ಲಿ ಮೊಟ್ಟಮೊದಲು ಕೀರ್ತನೆ(ಸ್ವರವಚನ)ಗಳನ್ನು ರಚಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಸಕಳೇಶ ಮಾದರಸ ಮೊದಲ ಕೀರ್ತನಕಾರ. ಬಸವೇಶ್ವರ ಮೊದಲಾದ ಶಿವಶರಣರು ಕನ್ನಡ ಕೀರ್ತನ ಸಾಹಿತ್ಯದ ಪ್ರವರ್ತಕರೆಂಬುದು ಈಗ ತೀರಾ ಸ್ಪಷ್ಟವಾಗಿದೆ. ಸಾಮಾನ್ಯ ವರ್ಗದಿಂದ ಬಂದ ವಚನಕಾರರೆಲ್ಲಾ ಇಷ್ಟು ಅದ್ಭುತವಾಗಿ, ಅನುಭಾವ ಪೂರ್ಣವಾಗಿ, ವೈಚಾರಿಕವಾಗಿ, ಆಧ್ಯಾತ್ಮಿಕ ತಳಹದಿಯ ಮೇಲೆ ಸಾಹಿತ್ಯ ಸೃಷ್ಟಿಸಿದ್ದು ಇಡೀ ಕನ್ನಡ ಸಾಹಿತ್ಯಕ್ಕೇನೇ ಹೊಸದು. ವಚನಗಳು ಕನ್ನಡಿಗರ ವೇದ–ಉಪನಿಷತ್ತುಗಳು, ಬದುಕಿಗೆ ನೇರವಾಗಿ ಸ್ಪಂದಿಸುವ ಸಮಸ್ಯೆಗಳಿಗೆ ಜ್ವಲಂತವಾಗಿ ಪ್ರತಿಕ್ರಿಯಿಸುವ ಶರಣರ ವಚನಗಳು ಕನ್ನಡ ಸಾಹಿತ್ಯದ ಅಮೂಲಾಗ್ರ ಆಸ್ತಿ.

ಜೀವನದ ಜೊತೆ ನೇರ ಸಂಪರ್ಕವಿದ್ದ ವಚನಕಾರರು ತಮ್ಮ ದೈನಂದಿನ ಅನುಭವದ ಪರಿಚಿತ ಜಗತ್ತಿನ ಪ್ರತಿಮೆಗಳನ್ನು ತಂದು ಕನ್ನಡ ಕಾವ್ಯ ಜಗತ್ತಿನಲ್ಲಿ ಹೊಸಗಾಳಿ ಸುಳಿವಂತೆ ಮಾಡಿದರು.[೬] ಬೂದಿಯಲ್ಲಿ ಹೊರಳುವ ಕತ್ತೆ, ಮಠದ ಬೆಕ್ಕು, ಹೊಲಸನ್ನು ಮೆಚ್ಚಿದ ನಾಯಿ, ಹೊಟ್ಟೆಗಾಗಿ ಒತ್ತೆಕೊಟ್ಟುಕೊಳ್ಳುವ ತಾಯಿ ವೇಶ್ಯೆ, ಕಾಲಿನ ಕೆರ, ಕಾಳು ತೂರುವುದು, ತೊಟ್ಟು ಕಳಚಿದ ಹಣ್ಣು ಎಲೆ ಉದುರುವದು, ಮೂಕೊರೆಯ, ಉಡುವಿನ ನಾಲಗೆ, ಮೊರದ ಮಾರಿ, ಮರುಳ, ಹೊಲೆಯರ ಬಾವಿ, ಬೊಕ್ಕಣದ ಕಡಲೆ, ನೆಲ್ಲಿಯಕಾಯಿ, ಉಪ್ಪು ಇವು ಪ್ರತಿಮೆಗಳಾಗಿ ಕನ್ನಡ ಕಾವ್ಯಕ್ಷೇತ್ರದಲ್ಲಿ ಅವತರಿಸಿದ್ದು ಇದು ಮೊದಲು. ಪ್ರತಿಮೆ–ಸಂಕೇತಗಳನ್ನೂ ಶರಣರಷ್ಟು ಅರ್ಥವತ್ತಾಗಿ ಬಳಸಿಕೊಂಡವರು ಕನ್ನಡ ಸಾಹಿತ್ಯದಲ್ಲಿ ಬಹಳ ವಿರಳ. ಇಂತಹ ಅತ್ಯಮೂಲ್ಯವಾದ ವಚನ ಸಾಹಿತ್ಯ ಶರಣರ ಅನುಪಮ ಕೊಡುಗೆ. ಇದೂ ಕೂಡಾ ಅವರ ಕ್ರಾಂತಿಯ ಫಲವೇ. ಧರ್ಮಕ್ಕೂ ಸಾಹಿತ್ಯಕ್ಕೂ ನಿಕಟವಾದ ಸಂಬಂಧವನ್ನು ವಚನ ಸಾಹಿತ್ಯ ಕಲ್ಪಿಸಿಕೊಡುತ್ತದೆ. ಅದಕ್ಕಿಂತ ಮುಖ್ಯವಾಗಿ ಬದುಕಿಗೂ–ಸಾಹಿತ್ಯಕ್ಕೂ ಇರುವ ಅತ್ಯಂತ ಆತ್ಮೀಯ ಸಂಬಂಧವನ್ನೂ ಅದು ಒತ್ತಿ ಹೇಳುತ್ತದೆ.

---

೫. ಡಾ. ಎಚ್. ತಿಪ್ಪೇರುದ್ರಸ್ವಾಮಿ : 'ವಚನ ಸಾಹಿತ್ಯ, ವೈಚಾರಿಕ ಅಧ್ಯಯನ'. ಪು. ೮೫

೬. ಡಾ. ಎಂ. ಚಿದಾನಂದ ಮೂರ್ತಿ : 'ವಚನ ಸಾಹಿತ್ಯ, ಒಂದು ಸಮೀಕ್ಷೆ' ಪು. ೧೬೧

ಶರಣರು ಸಮಾನತೆಗಾಗಿ ಹೋರಾಡಿದ್ದು, ಅವರ ಕಾಲಕ್ಕೆ ಅದರ ಫಲ ಅವರಿಗೆ ದಕ್ಕಿತು. ಅಹಿಂಸೆಯಿಂದಲೇ ಪ್ರಾರಂಭವಾದ ಅವರ ಕ್ರಾಂತಿ ತನ್ನ ನಿರಂತರ ಪ್ರಯತ್ನದಲ್ಲಿ ಹಲವಾರು ಸವಲತ್ತುಗಳನ್ನು ಒದಗಿಸಿಕೊಡುವದರ ಜತೆಗೆ ಅನೇಕ ಉಪಯುಕ್ತವಾದ ಹೊಸ ಮೌಲ್ಯಗಳನ್ನು ಸೃಷ್ಟಿಸಿತು. ಧಾರ್ಮಿಕವಾಗಿ, ಆರ್ಥಿಕ ವಾಗಿ ಸಮಾಜ ಹೊಸ ಆಯಾಮ ಪಡೆಯಿತು. ಹಿಂದಿದ್ದ ಅನಿಷ್ಟ ಪದ್ಧತಿಗಳೆಲ್ಲಾ ಮಾಯವಾಗಿ, ಅಂಧ ಸಂಪ್ರದಾಯಗಳೆಲ್ಲಾ ಮೂಲೆಗುಂಪಾಗಿ, ಸಾಮಾಜಿಕವಾಗಿ ಹೊಸ ಆಲೋಚನೆ, ಮೌಲ್ಯಗಳು ಸಾಮಾನ್ಯರ ಜೀವನವನ್ನೂ ಕಡಿದು ಇಡೀ ವ್ಯವಸ್ಥೆಯನ್ನೇ ಶರಣರ ಕ್ರಾಂತಿ ಅಲುಗಿಸಿತು. ಈ ಸಂದರ್ಭದಲ್ಲಿ ಸಮಾಜ ನಿಜ ವಾಗಿಯೂ ಅನೇಕ ಸಫಲತೆಗಳನ್ನು ಪಡೆಯಿತು.

ವಿಫಲತೆ :—

ಹನ್ನೆರಡನೇ ಶತಮಾನದ ಶರಣರ ಕ್ರಾಂತಿ ಹಲವಾರು ವಿಚಾರಗಳಿಂದ ಸಫಲವಾಗಿದ್ದರೂ ಕೂಡ ಚರಿತ್ರೆಯ ದೃಷ್ಟಿಯಿಂದಂತೂ ಅದು ವಿಫಲವಾದದ್ದು ಸ್ಪಷ್ಟ. ಕ್ರಾಂತಿಗೆ ಸಫಲತೆ–ವಿಫಲತೆಗಳು ಮುಖ್ಯವಾಗಿರದೆ ಅವರ ನಿಜವಾದ ಪ್ರಯತ್ನ–ಹೋರಾಟ ಮುಖ್ಯವೆನಿಸುತ್ತದೆ. ಆದರೂ ವಿಫಲವಾಗಲು ಕಾರಣ ಗಳಿದ್ದಿರಲೇಬೇಕಲ್ಲ ಎಂಬ ಮಾತು ಬರುವದು ಸಾಮಾನ್ಯ. ಅಂದಿನ ಕ್ರಾಂತಿಯ ವಿಫಲತೆಗೆ ನಿರ್ದಿಷ್ಟವಾಗಿ, ಆಧಾರ ಸಹಿತ ವಿವರಣೆ ನೀಡುವದು ಸಾಧ್ಯವಾಗದೆ ಇದ್ದರೂ ಅಂದಿನ ಸಂದರ್ಭವನ್ನು ಅಭ್ಯಸಿಸಿ ಕೆಲ ವಿಚಾರಗಳನ್ನು ಮಂಡಿಸಬಹುದು.

ಶರಣರು ರಾಜಕೀಯವಾಗಿ ಭದ್ರರಾಗದೇ ಇದ್ದುದೇ ಅವರ ಕ್ರಾಂತಿಯ ವಿಫಲತೆಗೆ ಮುಖ್ಯ ಕಾರಣ ಎನ್ನಬಹುದು. ಯಾಕೆಂದರೆ ಶರಣರ ಕ್ರಾಂತಿ ವಿಫಲವಾದದ್ದೇ ಶಕ್ತಿ ರಾಜಕೀಯ ಕೈವಾಡದಿಂದ. ಯಾವುದೇ ಕ್ರಾಂತಿ ಹೋರಾ ಟದ ಸಫಲತೆಗೆ ರಾಜಕೀಯ ಶಕ್ತಿಯ ಕೈವಾಡ ಬಹುಮುಖ್ಯವಾಗಿರುತ್ತದೆ. ಬೌದ್ಧ ಧರ್ಮ ವಿಶ್ವದಾದ್ಯಂತ ಪ್ರಸಾರವಾಗಲು–ಪ್ರಚಾರವಾಗಲು ಅಶೋಕನ ರಾಜ ಪದವಿ, ರಾಜಕೀಯ ಪ್ರೋತ್ಸಾಹ ಬಹುಮಟ್ಟಿಗೆ ಕಾರಣವಾಗುತ್ತವೆ. ಬೌದ್ಧ ಧರ್ಮ ಬಹಳ ಕಾಲ ಪ್ರಭಾವಿತವಾಗಿರಲಿಕ್ಕೆ ಇದೇ ಕಾರಣ. ಅಷ್ಟೆ ಏಕೆ ಇಂದಿಗೂ ಕೂಡ ನಾವಿದನ್ನು ನೋಡಬಹುದು. ಯಾವುದೇ ಒಂದು ರಾಜ್ಯದ ಮುಖ್ಯಮಂತ್ರಿ ತನ್ನ ವರ್ಗಕ್ಕೆ ತನ್ನ ಜಾತಿಯವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡುವದು ಸಾಮಾನ್ಯ. ಅವನು ಕೆಲವೊಂದು ಸಲ ತನ್ನ ಧರ್ಮದ ತತ್ವಗಳನ್ನು ಒತ್ತಾಯ ಪೂರ್ವಕವಾಗಿಯಾದರೂ ಹೇರಬಹುದು. ಅಧಿಕಾರದ ಒತ್ತಾಸೆಗೆ ಬಿದ್ದ ಜನ ಅನುಕೂಲ ನೋಡುವ ಮಂದಿ ಅದನ್ನು ಒಪ್ಪಲೂ ಬಹುದು. ಅಂದರೆ ರಾಜಕೀಯ ಶಕ್ತಿ ಎಂತಹ ಅಸಾಧ್ಯವಾದ ಕೆಲಸವನ್ನೂ ಸಾಧ್ಯಮಾಡಬಲ್ಲದೆಂಬುದಕ್ಕೆ ನಮ್ಮ ಚರಿತ್ರೆಯಲ್ಲಿ ಬಹಳಷ್ಟು ಉದಾಹರಣೆಗಳು ದೊರೆಯುತ್ತವೆ. ಬಸವಣ್ಣನಂತಹ

ಮಹಾ ಶರಣ ಒಬ್ಬ ಮಂತ್ರಿಯಾಗಿ ತನ್ನ ಕಾರ್ಯ ನಿರ್ವಹಿಸುವಾಗ ಆತನಿಗೆ ಅಂದಿನ ರಾಜಕೀಯ ಮೂಲ ಹಿಡಿತಗಳೆಲ್ಲಾ ಗೊತ್ತಿದ್ದಿರಬಹುದು. ಆದರೆ ಶರಣರು ಅತ್ತ ಹೆಚ್ಚು ಲಕ್ಷ ವಹಿಸಲಿಲ್ಲ. ಅವರಿಗೆ ಸಾಮಾನ್ಯ ವರ್ಗವೇ ಬಹುಮುಖ್ಯವಾಗಿತ್ತು. ಆದರೆ ಶಕ್ತಿ ರಾಜಕೀಯ ತನ್ನ ಒಡಲಾಳದಲ್ಲಿ ಇದೆಲ್ಲವನ್ನೂ ನುಂಗಿ ನೀರು ಕುಡಿಯಿತು. ಕಸಪಯ್ಯ, ಕೊಂಡಿ ಮಂಚಣ್ಣನಂತವರನ್ನೂ ಶರಣರು ಬಹಳ ಹಗುರವಾಗಿ ತೆಗೆದುಕೊಂಡದ್ದೇ ಬಹಳ ಅಪಾಯಕಾರಿಯಾಯಿತು. ಬಸವೇಶ್ವರ ಮಂತ್ರಿಯಿದ್ದಾಗಲೇ ಆತನ ಮೇಲೆ ಹಲವಾರು ಅಪವಾದಗಳು ಬಂದಿದ್ದವು. ಅನೇಕ ಕುಹಕ ಶಕ್ತಿಗಳು ಬಿಜ್ಜಳ ಮತ್ತು ಬಸವಣ್ಣನವರ ನಡುವೆ ಬಿರುಕನ್ನುಂಟುಮಾಡಲು ಪ್ರಯತ್ನಿಸುತ್ತಿದ್ದವು. ಬಸವಣ್ಣನವಚನಗಳಲ್ಲಿ ಬರುವ "ಅರಸು ಮುನಿದರೆ ನಾಡೊಳಗಿರಬಾರದು" ಎಂಬಂತಹ ಮಾತುಗಳು ಆ ಸಂದರ್ಭದ ಹಿನ್ನಲೆಯನ್ನು ವಿವರಿಸುತ್ತವೆ. ಶರಣರಲ್ಲಿ ಎಲ್ಲವೂ ಇತ್ತು. ಸಾಮಾನ್ಯ ವರ್ಗದಿಂದ ಒಂದುಗೂಡಿದ ಆ ಶರಣ ಸಮುದಾಯ ಏಕತೆಯಿಂದ, ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ, ಜಾಣ್ಮೆಯಿಂದ ನಿರಂತರವಾಗಿ ಪ್ರತಿಭಟಿಸಿದರು. –ಪ್ರಯತ್ನಿಸಿದರು–ಹೋರಾಡಿದರು. ಆದರೆ ಶಕ್ತಿ ರಾಜಕೀಯ ಅವರ ಹೋರಾಟವನ್ನು ಮುಂದುವರೆಯಲು ಬಿಡಲಿಲ್ಲ. ಪ್ರಮುಖ ಶರಣರೆಲ್ಲಾ ಚದುರಿ ಚೆಲ್ಲಾಪಿಲ್ಲೆಯಾದರು. ಬಿಜ್ಜಳನ ಕೊಲೆಯಾಯಿತು. ಶರಣರ ಕ್ರಾಂತಿಗೆ ಸಮಾಪ್ತಿಯ ಪರದೆ ಬಿದ್ದಿತು.

ಇನ್ನೂ ಸೂಕ್ಷ್ಮವಾಗಿ ವಿಚಾರಿಸಿದಾಗ ಶರಣರಲ್ಲಿ ಕಾಣುವ ಆತ್ಮಶೋಧನೆಯನ್ನು ಪರಿಶೀಲಿಸಿದಾಗ ಕೆಲವೊಂದು ವಿಚಾರಗಳಲ್ಲಿ ಅವರಲ್ಲಿ ಹೊಯ್ದಾಟ ಕಂಡುಬರುತ್ತದೆ. ವೇದ_ಪುರಾಣಗಳನ್ನು ತಿರಸ್ಕರಿಸಿದ ಅವರೇ ಕೆಲವೊಮ್ಮೆ ಪುರಾಣದ ಪುರಾತನರಿಗೆ ಮಾನ್ಯತೆ ಕೊಡುತ್ತಾರೆ. ದೇವಾಲಯಗಳನ್ನು ಸಂಪೂರ್ಣವಾಗಿ ಅಲ್ಲಗಳೆದ ಅವರು ಉಳ್ಳವರು ದೇವಾಲಯಗಳನ್ನು ಮಾಡಿದರೆ ಸುಮ್ಮನಾಗುತ್ತಾರೆ. ಇಂಥ ಕೆಲ ವಿಚಾರಗಳ ವಿರೋಧಾಭಾಸ ಮತ್ತು ಲಾಂಛನಕ್ಕೆ ಶರಣೆಂಬೆ ಎನ್ನುವ ದೊಡ್ಡಗುಣ ಅವರ ಕಾರ್ಯತತ್ಪರತೆಗೆ ಅಡೆತಡೆಯಾಗಿರಬಹುದು. 'ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದರೆ ಛೀ ಎಂಬೆ' ಎಂದು ಅವರು ಹೇಳಿದರಾದರೂ ಲಾಂಛನಕ್ಕೆ ಶರಣೆಂದು ಕೈಜೋಡಿಸಿದ್ದೇ ಬಹಳ. ಹೀಗಾಗಿ ಅಂದಿನ ದುಷ್ಟ ಶಕ್ತಿಗಳು ಇವರ ಕ್ರಾಂತಿಗೆ ಅಡ್ಡಗೋಡೆಯಾಗಿ ನಿಂತವು.

ಶರಣರ ಕ್ರಾಂತಿಯ ವಿಫಲತೆಗೆ 'ಅವರು ಧರ್ಮದಲ್ಲಿ ಮೂಲಭೂತವಾದ ಬದಲಾವಣೆಯನ್ನು ಮಾಡದೇ ಇದ್ದುದೇ ಕಾರಣ' ಎಂದು ಕೆಲವರು ಹೇಳುವದುಂಟು. ಆದರೆ ಈ ಹೇಳಿಕೆ ಸಮರ್ಪಕವಾಗಲಾರದು. ಧರ್ಮ, ದೇವರು, ಭಕ್ತಿ, ಮೋಕ್ಷ ಇವುಗಳನ್ನು ಶರಣರು ಉಳಿಸಿಕೊಂಡದ್ದರಿಂದಲೇ ಅವರು ಈ ರೀತಿ ಅಭಿಪ್ರಾಯ ಪಡುವದುಂಟು. ಅಧ್ಯಾತ್ಮಿಕ ಶಕ್ತಿಯನ್ನು ಹಳಿಯುವದು, ಆತ್ಮ ಸಾಧನೆಯನ್ನು ಅಲ್ಲಗಳೆಯುವದು ವಿಚಾರವಾದವಾಗುವದಿಲ್ಲ.

ಬಸವಣ್ಣ ಒಬ್ಬ ಮಂತ್ರಿಯಾಗಿದ್ದರೂ ಕೂಡ ಆತನಿಗೆ ರಾಜಕೀಯದಲ್ಲಿ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ತನ್ನ ಸಮಯವನ್ನೆಲ್ಲಾ ಧಾರ್ಮಿಕ–ಸಾಮಾಜಿಕ ಜೀವನ ದಲ್ಲಿ ವಿನಿಯೋಗಿಸುತ್ತಿದ್ದ. ಹೀಗಾಗಿ ಶರಣರ ಗುಂಪಿನಿಂದ ಯಾರೂ ರಾಜಕೀಯ ವಾಗಿ ಭದ್ರವಾಗಿರಲಿಲ್ಲ. ಮೇಲಾಗಿ ಶರಣರು ಬರೀ ದಾಸೋಹ–ಇಷ್ಟಲಿಂಗಧಾರಣೆ– ಪೂಜೆ, ಪ್ರವಚನ ಇವುಗಳಲ್ಲೇ ಹೆಚ್ಚು ಸಮಯವನ್ನು ಕಳೆದುಕೊಳ್ಳುತ್ತಿದ್ದರಿಂದ ತಾವು ತಮ್ಮ ವೈರಿಗಳ ಚಟುವಟಿಕೆಗಳನ್ನು ಗಮನಿಸಲು, ಮುಂದಾಲೋಚಿಸಲು. ಆಗುತ್ತಿರಲಿಲ್ಲ. ನಿಜವಾಗಿಯೂ ಅವರಿಗೆ ಜಯ ಮುಖ್ಯವಾಗಿರಲಿಲ್ಲ. ಮಾಡುವ ಕಾರ್ಯ ಮುಖ್ಯವಾಗಿತ್ತು. ನಡೆಸಿದ ಹೋರಾಟ ಅತಿಮುಖ್ಯವಾಗಿತ್ತು. ಹೀಗಾಗಿ ಶರಣರ ಕ್ರಾಂತಿ ಕಾಲಕ್ಕನುಗುಣವಾಗಿ, ಕುಹಕಶಕ್ತಿಗಳ ಕೈಮೇಲಾಗಿ ವಿಫಲ ವಾಯಿತು. ಇದು ಒಂದರ್ಥದಲ್ಲಿ ವಿಫಲವೆಂದೆನಿಸಿದರೂ ನಿಜವಾದ ಅರ್ಥದಲ್ಲಿ ಅದು ಸಫಲತೆಯ ಸಂಕೇತ ಎಂಬುದು ಸ್ಪಷ್ಟ. ಎಂಥ ಪ್ರಸಂಗ ಬಂದರೂ ಬಿಡದೆ ಹೋರಾಡುವೆನೆಂಬ ಛಲ ಹೊತ್ತ ಶರಣರು ಚದುರಿಹೋಗಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ. ಅವರೆಲ್ಲಾ ಅಲ್ಲಿಯೇ ನಿಂತು ಹೋರಾಡಿದ್ದರೆ ಅದರ ಫಲಿತಾಂಶ ಬೇರೆಯಾಗಬಹುದಿತ್ತೇನೊ. "ಬಸವೇಶ್ವರ ಕಲ್ಯಾಣವನ್ನು ಬಿಟ್ಟುದುದು ಕೇವಲ ತನ್ನ ಅನುಯಾಯಿಗಳು ಹಿಂಸೆಯ ಮಾತನಾಡಿದ ಕಾರಣ ಮಾತ್ರದಿಂದ ಅಲ್ಲ. ಅವನಿಗೆ ಬಿಜ್ಜಳನ ಮಂತ್ರಿಯಾದ್ದರಿಂದ ಅವನ ಪಕ್ಷಪಾತಿಯೆಂಬ ಅಧೀರತೆಯ ಅಪವಾದವನ್ನು ದೂರಿದ ಕಾರಣ ಮಾತ್ರ."[೭] ಎಂದು ಕೆಲವರ ಅಭಿಪ್ರಾಯ. ಎಂಥ ಅಪವಾದ ಬಂದರೂ ಹೆದರದೇ ಹೋರಾಡುವದು ಶರಣ ಧರ್ಮ. ಹೀಗಿರು ವಾಗ ಪ್ರಮುಖ ಶರಣರೆಲ್ಲಾ ಕಲ್ಯಾಣ ಬಿಟ್ಟು ಚದುರಿಹೋಗಿದ್ದು ಅವರ ಮನಸ ದಲ್ಲಿದ್ದ ಹೊಯ್ದಾಟವನ್ನೂ ಸ್ಪಷ್ಟಪಡಿಸುತ್ತದೆ. ಒಮ್ಮಿಂದೊಮ್ಮೆಲೇ ಶರಣರು ಹಿಮ್ಮುಖವಾದದ್ದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡುತ್ತದೆ. ಶಾಸನದಂತಹ ಸಮರ್ಪಕ ಆಧಾರ ದೊರೆತಾಗಲೇ ಇಂಥ ಸಮಸ್ಯೆಗಳು ಸರಳವಾಗಬಹುದು. ಒಟ್ಟಿ ನಲ್ಲಿ ಶರಣರ ಕ್ರಾಂತಿ ವಿಫಲವೆಂದೆನಿಸಿದರೂ ನಿಜವಾದ ಅರ್ಥದಲ್ಲಿ ಅದು ಸಫಲತೆಯ ಸಂಕೇತವಾಗಿದೆ.

---

೭. ಲಿಂಗಣ್ಣ ಸತ್ಯಂಪೇಟೆ : ಪ್ರಸ್ತುತ, : ಪುಟ ೫೫.

ಎಮಿಲಿ ಝೋಲಾ

ವೀರೇಂದ್ರ ಸಿಂಪಿ

ಎಮಿಲಿ ಝೋಲಾ ಫ್ರೆಂಚ್ ಕಾದಂಬರಿಕಾರ. ಪ್ರಕೃತಿವಾದದ ಪುರಸ್ಕರ್ತ. ಪ್ರಕೃತಿವಾದವು ವಾಸ್ತವತೆ ಮಾರ್ಗಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ಜೀವನವನ್ನು ಯಥಾವತ್ತಾಗಿ ವೈಜ್ಞಾನಿಕ ನಿಷ್ಠೆಯಿಂದ ಚಿತ್ರಿಸುವದಕ್ಕೆ ಪ್ರಯತ್ನಿಸುತ್ತದೆ. ಅವನು ಫ್ರೆಂಚ ಕಾದಂಬರಿಕಾರ ಫ್ಲಾಬರ್ಟನ ಅತ್ಯಂತ ಸಮೀಪದ ಮಿತ್ರನಾಗಿದ್ದನು.

ಝೋಲಾ ಮಣ್ಣಿನಮಗ ; ಭೂಮಿತಾಯಿಯ ಎಲ್ಲ ಪ್ರಾಣಿಗಳಲ್ಲಿ ಅವನಿಗೆ ಸಮಾನಾದ ಪ್ರೀತಿ. ಅವನದು ಮಿಶ್ರತಳಿ. ಅಜ್ಜಿ ಗ್ರೀಕಳಾದರೆ, ತಾಯಿ ಫ್ರೆಂಚಳು. ತಂದೆಯಂತೂ ಇಟಾಲಿಯನ್. ಇಂಜನಿಯರ್‌ನಾಗಿದ್ದ ತಂದೆ ಅಪರವಯಸ್ಸಿನಲ್ಲಿ ತೀರಿದಾಗ ಎಮಿಲಿ ಝೋಲಾಗೆ ಕೇವಲ ಏಳು ವರ್ಷ. ಅವನ ಪೋಷಣೆಯ ಭಾರ ತಾಯಿಯ ಮೇಲೆ ಬಿತ್ತು. ಐದು ವರ್ಷದ ಅನಿಯಮಿತ ಶಿಕ್ಷಣಾವಧಿಯಲ್ಲಿ ಅವನು ಮಾಡಿದ್ದು– ಟೋರ್ಸ ನದಿಯ ದಂಡೆಯಮೇಲೆ ಹುಚ್ಚು ಅಲೆದಾಟ. ಏಕ್ಸ ಕಾಲೇಜಿನಲ್ಲಿಯ ಅವನ ವಾಸ್ತವ್ಯ ದೀರ್ಘಯಾತನೆಯ ಕಥೆಯಾಗಿತ್ತು. ಹುಟ್ಟಾ ಗುಕ್ಕನಾದ ಝೋಲಾನಿಗೆ ಏಕಾಕಿತನ ಬಳುವಳಿ. ನಿರಂತರವೂ ಅಪಮಾನಕ್ಕೀಡು ಮಾಡುವ ಸಹಪಾಠಿಗಳೊಡನೆ ಹೋರಾಟ. ಇಂಥದೊಂದು ಸಂಗ್ರಾಮದಲ್ಲಿ ಗುಂಪಿಗೆ ಗುಂಪೇ ಝೋಲಾನಿಗೆ ಹೊಡೆಯುತ್ತ ನಿಂತಾಗ, ಸ್ನೇಹದ ಹಸ್ತ ಮುಂದೆ ಚಾಚಿದವನೆಂದರೆ— ಮುಂದೆ ಚಿತ್ರಕಾರನಾಗಿ ಪ್ರಸಿದ್ಧನಾಗಲಿರುವ ಪಾಲ್‌ಸೀಜಾನ್.

ಹದಿಮೂರು ವಯಸ್ಸಿಗೇನೇ ಝೋಲಾ ಒಂದು ಕಾದಂಬರಿಯನ್ನೂ ಮೂರು ಅಂಕಿನ ನಾಟಕವನ್ನೂ ರಚಿಸಿದ್ದ. ಆದರೆ ಕಾಲೇಜಿನ ಅಂತಿಮ ವರ್ಷದಲ್ಲಿ ಸಾಹಿತ್ಯ ವಿಷಯದಲ್ಲಿ ಅವನು ದೊರಕಿಸಿದ ಗುಣ ಒಂದು ದೊಡ್ಡ ಸೊನ್ನೆ. ಮಗನ ಪರೀಕ್ಷೆಯ ಸೋಲು ತಾಯಿಗೆ ಹೆಚ್ಚಿನ ಆಘಾತವನ್ನುಂಟುಮಾಡಿತು ಅವನ ಮುಂದೀಗ ಎರಡೇ ಮಾರ್ಗಗಳು ತೆರೆದಿದ್ದವು. ಒಂದು : ಆಯುಷ್ಯದುದ್ದಕ್ಕೂ ಕಾರಕೂನನಾಗಿರುವದು. ಇಲ್ಲವೆ ಸಾಹಿತಿಯಾಗಿ ನಿರಂತರವಾಗಿ ಉಪವಾಸ ಬೀಳುವದು.

ಕೊನೆಗೂ ತಂದೆಯ ಗೆಳೆಯನ ಪ್ರಭಾವದಿಂದ ಅವನಿಗೆ ಕಾರಕೂನೀ ವೃತ್ತಿ ದೊರೆಯಿತು. ಅದು ಹೊಟ್ಟೆಗೆ ಹಿಟ್ಟನ್ನೇನೋ ಕೊಟ್ಟಿತು. ಆದರೆ ಮನಸ್ಸಿಗೆ

ತೃಪ್ತಿ ಎಲ್ಲಿಂದ ? ಕಾರಕೂನೀ ನೌಕರಿಯುನ್ನು ಕಾಲಿನಿಂದ ಒದೆದು ನಿಂತಾಗ ಅವನಿಗೆ ಉಳಿದದ್ದು— ಹಸಿವೆ, ಬಡತನ, ಚಿಂದಿಬಟ್ಟೆ ಹಾಗೂ ನಿರಾಶೆ; ಬಹಳವಾದರೆ ಕನಸು. ಈಗ ಮತ್ತೆ ಬಾಲ್ಯಮಿತ್ರ ಸೇಜಾನ್‌ನ ಭೇಟಿ.

ಅವರಿಬ್ಬರೀಗ ಕಾದಂಬರಿಕಾರ ಹಾಗೂ ಚಿತ್ರಕಾರರೆಂದು ಪ್ರಸಿದ್ಧರಾಗಿದ್ದರು. ಒಂದೇ ಕೋಣೆಯಲ್ಲಿ ಉಪವಾಸ ಮಲಗಿ ಅವರಿಬ್ಬರೂ ಕನಸುಗಳನ್ನು ಕಂಡರು. ಒಮ್ಮೊಮ್ಮೆ ಮನೆಯ ಅಟ್ಟದ ಮೇಲೆ ಕುಳಿತ ಗುಬ್ಬಿಗಳನ್ನೇ ಹಿಡಿದು ತಿಂದರು. ಇನ್ನೂ ಕೆಲವು ವೇಳೆ ಊಟವಿಲ್ಲದೆ ಮೂರ್ಛೆ ಬಿದ್ದರು. ಕೊನೆಗೂ ಝೋಲಾನಿಗೆ ಪ್ರಕಾಶನ ಸಂಸ್ಥೆಯೊಂದರಲ್ಲಿ ಬಂಡಲ್ ಕಟ್ಟುವ ನೌಕರಿ ದೊರೆತಾಗ ಒಂದಿಷ್ಟು ಸಮಾಧಾನದ ನಿಟ್ಟುಸಿರು. ಇವನ ಪ್ರತಿಭೆ ಗುರುತಿಸಿ ಮಾಲಿಕ ಜಾಹೀರಾತ ವಿಭಾಗಕ್ಕೆ ವರ್ಗಾಯಿಸಿದ. ಅಲ್ಲಿ ಅವನು ತನ್ನ ಲೇಖನಿಯುನ್ನು ಹಗಲುರಾತ್ರಿ ಬಳಸಿ ಬಳಸಿ ಚೂಪಾಗಿಸಿದನು. ಅಲ್ಲಿಂದ ಈಚೆಗೆ ಕಾವ್ಯದ ಕನಸಿನ ಪ್ರಪಂಚದಿಂದ, ವಾಸ್ತವತೆಯ ಕಾದಂಬರಿ ಪ್ರಪಂಚಕ್ಕೆ ಪ್ರವೇಶಿಸಿದನು. ಕತೆಗಳು ಪ್ರಕಟಗೊಂಡು ಪ್ರಸಿದ್ಧಿಯ ಮೆಟ್ಟಿಲುಗಳನ್ನು ಏರಿ ನಿಂತಾಗ ಪ್ರಕಾಶಕರಿಂದ ಕಾದಂಬರಿ ಪ್ರಕಟನೆಯ ಆಶ್ವಾಸನೆಯೂ ದೊರೆಯಿತು. ಪ್ರಸಿದ್ಧಿಯ ಜೊತೆಗೆ ಪ್ರಣಯವೂ ಸೇರಿದ ಬಳಿಕ ಹೇಳುವದೇನಿದೆ ? ಮನೆಯ ಮಾಲಿಕನ ಮಗಳು– ಪ್ರಿಯಕರನಿಂದ ಪರಿತ್ಯಕ್ತಳಾದ ವಳು –ಇಂಥವಳನ್ನೂ ಝೋಲಾ ತನ್ನ ಕೋಣೆಗಷ್ಟೇ ಕರೆದುಕೊಳ್ಳಲಿಲ್ಲ, ಹೃದಯದವರೆಗೂ ಬರಮಾಡಿಕೊಂಡನು. ಆದರೆ ಇಬ್ಬರಲ್ಲಿ ಸಾಮಾನ್ಯ ಅಂಶಗಳು ತೀರ ಕಡಿಮೆಯಿದ್ದವು : ಝೋಲಾ ದುಃಸ್ವಪ್ನದಂತೆ ಕುರೂಪಿಯಾಗಿದ್ದರೆ, ಅಲೆಕ್ಸಾಂಡ್ರೈನ್‌ಳು ಕನಸಿನಂತೆ ಸುಂದರಳಾಗಿದ್ದಳು. ಅವನು ಅವಳ ಶರೀರ ಸೌಂದರ್ಯಕ್ಕೆ ಮಾರುಹೋದರೆ, ಅವಳು ಅವನ ಆತ್ಮ ಸೌಂದರ್ಯಕ್ಕೆ ಮನಸೋತಳು.

ಝೋಲಾನಿಗೆ ಈಗ ತನ್ನದೇ ಆದ ಸುಖೀ ಸಂಸಾರ, ಬೆಳೆಯುತ್ತಿರುವ ಪ್ರಸಿದ್ಧಿ, ಇವುಗಳೊಂದಿಗೆ ಅವನು ತನ್ನ ಸಾಹಿತ್ಯಿಕ ಕಾರ್ಯವನ್ನು ಮುಂದುವರೆಸಿದನು. ಸಾಹಿತ್ಯದ ವಾಸ್ತವ ಮಾರ್ಗದಲ್ಲಿ ಆಸಕ್ತನಾದ ಅವನು ಪ್ಲಾಬರ್ಟನ ಮ್ಯಾಡಂ ಬಾವರಿಯಂತೆ, ಗಾನ್‌ಕೋರ್ಟನ ಹೆನ್ರಿಯೆಟ್ ಮಾರ್ಶಲ್ ನಾಟಕದಂತೆ ಕಾದಂಬರಿಗಳನ್ನು ರಚಿಸಿ ಜೀವನದ ರಹಸ್ಯಗಳನ್ನು ಶೋಧಿಸಲು ಪ್ರಾರಂಭಿಸಿದನು. ಸಮಾಜದ ಜಾಡ್ಯಗಳನ್ನು ಕಿತ್ತು ಒಗೆದು, ಆರೋಗ್ಯವಂತ ಸಮಾಜ ನಿರ್ಮಿಸುವದು ಅವನ ಗುರಿಯಾಗಿತ್ತು. ತನ್ನ ಕಾದಂಬರಿಗಳಿಗೆ ಅವನು ವಾಸ್ತವವಾದದ ಕೃತಿಗಳೆಂದು ಕರೆಯದೆ, ಪ್ರಕೃತಿವಾದದ ಕಾದಂಬರಿಗಳೆಂದು ಕರೆದನು. ಅವನ ಕಾದಂಬರಿಗಳೇನೋ ತುಂಬ ಜನಪ್ರಿಯವಾದವು. ಆದರೆ ಅವನು ಮಾತ್ರ ಜನರ ನಿಂದೆಗಳಿಗೆ ಗುರಿಯಾಗುವದು ತಪ್ಪಲಿಲ್ಲ. 'ಗೌರವಯುತ ಜನರ ಮನಸ್ಸಿನಲ್ಲಿ ನಾನೊಬ್ಬ ನೀತಿಗೆಟ್ಟ ಮನುಷ್ಯನಾಗಿದ್ದೇನೆ' ಎಂದು ಝೋಲಾ ಹೇಳಿಕೊಂಡಿದ್ದಾನೆ.

ಜನರು ಝೋಲಾನನ್ನು ಟೀಕಿಸಿದರೇನೋ ನಿಜ. ಆದರೆ ಅವನ ಜೇಬಿಗೆ ಹಣ ಸುರಿಯುತ್ತಲೇ ನಡೆದರು. ಸಾಹಿತ್ಯಿಕ ವಲಯಗಳಲ್ಲಿ ಅವನೊಬ್ಬ ಸಿಂಹ ಅಥವಾ ಕರಡಿಯೆಂದು ಪ್ರಸಿದ್ಧನಾದನು. ಸೀಜಾನ್ ಹಾಗೂ ಇನ್ನಿತರ ಅವಜ್ಞೆಗೀಡಾದ ಕಲಾವಿದರ ಕುರಿತು ಲೇಖಾಂಕ ಬರೆದನು. ಒಂದೇ ಕುಟುಂಬದ ಪರಂಪರಾಗತವಾಗಿ ಬರುವ ವಿವಿಧ ಪೀಳಿಗೆಗಳ ಜನರ ಜೀವನವನ್ನು ಪರಿಶೀಲಿಸುವದರ ಮೂಲಕ ಮಾನವ ಜನಾಂಗದ ಪೂರ್ಣ ಹಾಗೂ ನಿರಲಂಕಾರ ಚಿತ್ರಣವನ್ನು ಕೊಟ್ಟನು. ರೋಗಾನ್ ಮಾಕಾರ್ಟ ಸಂಪುಟ ಕೇವಲ ಖಂಡನೆಯ ಮಹಾಕಾವ್ಯವಾಗಿರದೆ ಆಶಾವಾದವನ್ನು ಪ್ರಕಟಿಸುವ ಮಹತ್‌ಗ್ರಂಥವಾಗಿದೆ.

ಇಪ್ಪತ್ತು ಸಂಪುಟಗಳಲ್ಲಿ ಮೂಡಿದ ಈ ಮಹತ್ ಕಾದಂಬರಿಯನ್ನು ಬರೆಯುವದರ ಮೂಲಕ ಝೋಲಾನು ಏಕಕಾಲಕ್ಕೆ ತನ್ನ ದೇಶಬಾಂಧವರ ವಿದ್ಯಾರ್ಥಿ, ವಿಮರ್ಶಕ ಹಾಗೂ ಶಿಕ್ಷಕನಾಗಿ ಪರಿಣಮಿಸಿದನು. ಪ್ರತಿಯೊಂದು ಕಾದಂಬರಿಯನ್ನು ಪ್ರಾರಂಭಿಸುವ ಮುಂಚೆ, ಅವನು ದೃಶ್ಯಗಳ, ಪಾತ್ರಗಳ, ಸನ್ನಿವೇಶಗಳ, ಪಾತ್ರಗಳು ಬಳಸುವ ಭಾಷೆಯ ಕುರಿತು ದೀರ್ಘ ಅಧ್ಯಯನ ನಡೆಯಿಸುತ್ತಿದ್ದನು. ಪ್ರತಿಯೊಂದು ಕಾದಂಬರಿಯ ಸಲುವಾಗಿ ಆ ವಿಷಯಗಳನ್ನು ಕುರಿತ ಪುಸ್ತಕಗಳನ್ನು ಓದುವದಲ್ಲದೆ, ಆ ಸ್ಥಳಗಳಿಗೆ ಭೇಟಿ ಕೊಡುವದೂ, ಆ ಜನರೊಂದಿಗೆ ಮಾತನಾಡುವದೂ ಅವರ ಮಾತಿನ ಧಾಟಿ, ಬಳಸುವ ಭಾಷೆ– ಇವೆಲ್ಲವುಗಳ ಕುರಿತು ವಿವರವಾದ ಟಿಪ್ಪಣಿಗಳನ್ನು ತಕ್ಕೊಳ್ಳುವದೂ ಝೋಲಾನ ಕಾದಂಬರಿ ರಚನೆಯ ಪದ್ಧತಿಯೇ ಆಗಿತ್ತು. ಟಿಪ್ಪಣಿ ತೆಗೆದುಕೊಂಡ ನಂತರ, ಅವಾಥವ್ವ ವಿಷಯವನ್ನು ಮತ್ತೆ ಮತ್ತೆ ಓದಿ, ವ್ಯವಸ್ಥಿತವಾಗಿ ವಿಭಜಿಸಿ ಅದರಿಂದ ಕಥಾ ಸಂವಿಧಾನದ ಹೊಳವನ್ನು ಹಾಕಿಕೊಳ್ಳುತ್ತಿದ್ದನು. ಒಂದೊಂದು ಕೃತಿ ಹೊರಬರಲು ಅವನು ಕೆಲವು ತಿಂಗಳುಗಳ, ಪ್ರಸಂಗ ಬಿದ್ದರೆ ವರ್ಷಗಳ ಪರಿಶ್ರಮವನ್ನೇ ಮಾಡುತ್ತಿದ್ದನು.

ಲಾ ಅಸೋಮೊಯೆರ್ ಎಂಬುದು ಝೋಲಾನ ಕಾದಂಬರಿಯಲ್ಲೊಂದು. ಗರ್ವೇಸ್ ಮಾಕಾರೆಟ್‌ಳು ಈ ಕಾದಂಬರಿಯ ನಾಯಕಿಯಾಗಿದ್ದಂತೆ ಭೂತಾಯಿಯ ಮಲಮಕ್ಕಳ ಪ್ರತಿನಿಧಿಯಾಗಿದ್ದಾಳೆ. ಅವಳಿಗಿನ್ನೂ ಇಪ್ಪತ್ತು ವರ್ಷ ದಾಟಿಲ್ಲವಾದರೂ ಲ್ಯಾಂಟಿರ್‌ನೊಂದಿಗಿನ ಅವಳ ಅನೀತಿ ಸಂಬಂಧದಿಂದಾಗಿ ಎಟೆನ್ ಹಾಗೂ ಕ್ಲಾಡ್ ಎಂಬ ಈರ್ವರು ಮಕ್ಕಳನ್ನು ಪಡೆದಿದ್ದಾಳೆ. ತಾಯ್ತಂದೆಗಳ ಕ್ರೌರ್ಯದಿಂದ ಪಾರಾಗಲು ಅವಳು ತನ್ನ ಹದಿಮೂರು ವಯಸ್ಸಿಗೇನೆ ಲ್ಯಾಂಟಿರ್‌ನಿಗೆ ತನ್ನನ್ನು ತಾನು ಅರ್ಪಿಸಿಕೊಂಡಿದ್ದಳು. ಮೊದಮೊದಲು ಲ್ಯಾಂಟಿರ್‌ನು ಅವಳ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಂಡನು. ಆದರೆ ಈಗೀಗ ಅವನು ಅವಳಿಂದ ದೂರವಾಗುತ್ತಿದ್ದಾನೆ. ರಾತ್ರಿಯೆಲ್ಲ ಮನೆಯ ಹೊರಗೆ ಉಳಿಯುವ ಅವನು, ಮನೆಗೆ ಮುಂಜಾನೆ ಬಂದಾಗ ತನ್ನ ಕಾಲಮೇಲೆ ನಿಲ್ಲದೆ ಹೋಗುತ್ತಾನೆ. ಗರ್ವೇಸಳಿನ್ನೂ ರೂಪಸಿಯಾಗಿಯೇ ಇದ್ದಾಳೆ. ಆದರೆ ಅವಳ ಶರೀರದಲ್ಲೊಂದು ನ್ಯೂನತೆಯಿದೆ. ಅದೇನೆಂದರೆ

ನಡೆಯುವಾಗ ಅವಳು ಕುಂಟುತ್ತಾಳೆ. ಅತಿಶಯ ಪರಿಶ್ರಮದಿಂದ ದಣಿದಾಗೊಮ್ಮೆ ಅವಳ ಕುಂಟುವಿಕೆ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಇತ್ತೀಚಿನ ದಿನಗಳಲ್ಲಿ ಅವಳು ದಣಿದದ್ದು ಹೆಚ್ಚು.

ಸಾರ್ವಜನಿಕ ವಸ್ತ್ರ ಒಗೆಯುವ ಸ್ಥಳದಲ್ಲಿ ಬಟ್ಟೆ ತೊಳೆಯುತ್ತಿದ್ದಾಗ ಅವಳನ್ನು ಯಾವ ಕಾಲಕ್ಕೂ ಬಿಟ್ಟುಕೊಟ್ಟು ಲ್ಯಾಂಟಿರ್‌ನು ಎಡೀಲ್‌ಳನ್ನು ಕೂಡಿದ್ದಾನೆಂದೂ, ಅವಳ ಸರ್ವವಸ್ತು ಒಡವೆಗಳನ್ನೂ ಅಪಹರಿಸಿಕೊಂಡು ಹೋಗಿದ್ದಾನೆಂದೂ, ಗರ್ವೇಸಳ ಮಕ್ಕಳು ಸುದ್ದಿ ತರುತ್ತಾರೆ. ಮಕ್ಕಳ ಚೀರುವಿಕೆಯ ಜೊತೆ ಎಡೀಲ್‌ಳ ಸಹೋದರಿ ವರ್ಜೀನಿಯೂ ಕೂಡ ಅಲ್ಲಿ ಬಂದು, ಗರ್ವೇಸಳ ಸೋಲಿನಲ್ಲಿ ಆನಂದ ಪಡುವ ಹೀನ ಗುಣ ತೋರಿಸುವದರೊಂದಿಗೆ– ಗರ್ವೇಸಳ ಮೇಲೆ ಬೈಗಳ ಸುರಿಮಳೆ ಸುರಿಯುತ್ತಾಳೆ. ಸಿಟ್ಟಿನ ಭರದಲ್ಲಿ ಗರ್ವೇಸಳು ದುರ್ಬಲಳಾಗಿದ್ದಾಗ್ಯೂ ವರ್ಜೀನಿಯಾಳನ್ನೂ ಹಿಡಿದು ಬಡಿಯುತ್ತಾಳೆ ಅಷ್ಟೇ ಅಲ್ಲ ಕಚ್ಚುತ್ತಾಳೆ ಹಾಗೂ ಒದೆಯುತ್ತಾಳೆ. ವರ್ಜೀನಿಯಾ ತಪ್ಪಾಯ್ತು ಕ್ಷಮಿಸು ಎಂದು ಬೇಡಿಕೊಳ್ಳುವವರೆಗೆ ಬಿಡುವದಿಲ್ಲ.

ಕೆಲದಿನಗಳವರೆಗೆ ಗರ್ವೇಸಳು ಬಟ್ಟೆ ತೊಳೆಯುವ ತನ್ನ ಕೆಲಸ ಮುಂದುವರೆಸಿ ತನ್ನನ್ನೂ ತನ್ನ ಮಕ್ಕಳನ್ನೂ ಸಲಹುತ್ತಾಳೆ. ನಂತರ ಅವಳ ದುಃಖ ಪೂರ್ಣ ಜೀವನವನ್ನೆಲ್ಲ ಅರಿತ ತಾವುಟಿಗ ಕೂಪೆ ಅವಳನ್ನೂ ಲಗ್ನವಾಗಬಯಸುತ್ತಾನೆ ಹಾಗೂ ಅವಳ ಒಪ್ಪಿಗೆಯನ್ನೂ ಪಡೆಯುತ್ತಾನೆ. ಸಮಾಜದ ನಿಂದೆ, ಅವಹೇಳನಗಳನ್ನು ಎದುರಿಸಿ ಅವರೀರ್ವರೂ ಸುಖೀ ಸಂಸಾರವನ್ನು ಹೂಡುತ್ತಾರೆ. ಮದುವೆಯಾದ ನಾಲ್ಕು ವರ್ಷಗಳ ತರುವಾಯ ನಾನಾ ಎಂಬ ಮೂರನೆ ಮಗುವನ್ನು ಪಡೆಯುತ್ತಾಳೆ. ಗರ್ವೇಸಳೀಗ ಸ್ವಂತ ಬಟ್ಟೆ ತೊಳೆಯುವ ಅಂಗಡಿಯಿಡುವ ಕನಸು ಕಾಣುತ್ತಾಳೆ. ಆದರೆ ವಿಧಿ ಅವಳಿಗೆ ಅನಿರೀಕ್ಷಿತವಾದ ಏಟನ್ನು ಕೊಡುತ್ತದೆ.

ಅವಳ ಗಂಡ ಕೂಪೆ ರಿಪೇರಿ ಮಾಡುತ್ತಿದ್ದಾಗ ಮಾಳಿಗೆಯ ಮೇಲಿಂದ ಬೀಳುತ್ತಾನೆ. ಅವನನ್ನು ಆಸ್ಪತ್ರೆಗೆ ಆರೈಕೆಗಾಗಿ ಕಳಿಸುವ ಬದಲು ತಾನೇ ಮುಂದೆ ನಿಂತು ಉಪಚಾರ ಮಾಡುತ್ತಾಳೆ. ದೀರ್ಘ ಹಾಗೂ ತುಂಬ ವೆಚ್ಚದ ವಿಶ್ರಾಂತಿಯಿಂದ ಹೊರಬಿದ್ದಾಗ ಕೂಪೆ ಬಹಳ ಬದಲಾಗಿರುತ್ತಾನೆ. ದುರ್ಘಟನೆ ಕೇವಲ ಅವನ ಶರೀರವನ್ನಷ್ಟೇ ಗಾಸಿ ಮಾಡಿರದೆ ಆತ್ಮವನ್ನೂ ಧ್ವಂಸ ಮಾಡಿತ್ತು. ಈಗ ಅವನಲ್ಲಿ ಗುರಿ, ಯೋಜನೆ ಅಥವಾ ಆಶೆಯೆನ್ನುವದು ಏನೂ ಉಳಿದಿರುವದಿಲ್ಲ ಮದ್ಯದ ಗೀಳು ಅವನ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿರುತ್ತದೆ.

ದೈವವು ಗರ್ವೇಸಳ ಜೀವನದೊಂದಿಗೆ ಬೆಕ್ಕು–ಇಲಿಗಳ ಚಲ್ಲಾಟ ಮಾಡುತ್ತಿರುತ್ತದೆ.

ಗರ್ವೇಸಳನ್ನು ಒಬ್ಬ ಕಮ್ಮಾರ ರಹಸ್ಯವಾಗಿ ಪ್ರೇಮಿಸುತ್ತಿದ್ದ. ಒತ್ತಾಯ ದಿಂದ ಅವನು ಅವಳಿಗೆ ಐದುನೂರು ಫ್ರ್ಯಾಂಕುಗಳ ಸಾಲವನ್ನು ಕೊಟ್ಟ. ಇದರಿಂದ ಗರ್ವೇಸಳಿಗೆ ಸ್ವಂತ ಲಾಂಗ್ರಿ ತೆಗೆಯುವದು ಸಾಧ್ಯವಾಯ್ತು.

ಇಲ್ಲಿಗೆ ದೈವದ ಆಟ ಮುಗಿಯಲಿಲ್ಲ. ಎಡಿಲ್‌ಳ ತಂಗಿ ವರ್ಜೀನಿಯಳು ಗರ್ವೇಸಳಿಂದ ಒಮ್ಮೆ ಅಪಮಾನಿತಳಾಗಿದ್ದಳಷ್ಟೇ. ಅದರ ಸೇಡನ್ನು ತೀರಿಸಲು ಈಗ ಉಪಕ್ರಮಿಸುತ್ತಾಳೆ. ಅವಳೀಗ ಪ್ರೀತಿಯ ನಟನೆ ಮಾಡುತ್ತ ಗರ್ವೇಸಳಿಗೆ ಹೇಳಿದಳು— ಲ್ಯಾಂಟಿರ್‌ನೀಗ ಎಡಿಲ್‌ಳನ್ನು ಬಿಟ್ಟಿದ್ದಾನೆ. ಅವನಿನ್ನೂ ನಿನ್ನನ್ನು ಪ್ರೀತಿಸುತ್ತಿದ್ದಾನೆ.

ಗರ್ವೇಸಳಿಗೆ ಭಯವಾಯ್ತು. ಕೆಲವೊಂದು ಅವಧಿಯ ವರೆಗೆ ಅವಳ ಹಳೆಯ ಗಂಡ ಲ್ಯಾಂಟಿರ್ ಅವಳನ್ನು ಸಂಧಿಸಲು ಕೂಡ ಬರಲಿಲ್ಲ. ಬದಲಾಗಿ ಅವಳ ಗಂಡ ನಾದ ಕೂಪೆನ ಜೊತೆಗೆ ಸ್ನೇಹ ಬೆಳೆಸಿದನು. ಅವರಿಬ್ಬರೂ ಈಗ ಪಡಖಾನೆಯಲ್ಲಿ ಕೂಡಿ ಮದ್ಯ ಕುಡಿಯಲಾರಂಭಿಸಿದರು. ಲ್ಯಾಂಟಿರ್‌ನು ಕೂಪೆಯ ಮನೆಗೆ ಬಂದು ಊಟಮಾಡಲು ಪ್ರಾರಂಭಿಸಿದನು.

ಈ ಇಬ್ಬರು ಕುಡುಕ ಪುರುಷರ ಪ್ರಭಾವದಲ್ಲಿ ಗರ್ವೇಸಳ ಅವನತಿಯೂ ಪ್ರಾರಂಭವಾಯ್ತು. ಇವರ ಖರ್ಚನ್ನೆಲ್ಲ ನಿಭಾಯಿಸಿಕೊಳುತ್ತ ಗರ್ವೇಸಳು ಕುಟುಂಬದ ಹೊಣೆಯನ್ನೇನೋ ನಿರ್ವಹಿಸಿದಳು. ಆದರೆ ಅವಳು ತನ್ನ ಉದ್ಯೋಗವನ್ನು ಅಲಕ್ಷಿಸಿದಳು. ಲ್ಯಾಂಟಿರ್‌ನ ತೋಳುಗಳಲ್ಲಿ ಜೀವನವನ್ನೇ ಮರೆತಳು. ಕೊನೆಗೂ ಬರಬೇಕಾದ ಆಘಾತ ಬಂದೇ ಬಂತು. ಅವಳೀಗ ಲ್ಯಾಂಟಿರ್‌ನನ್ನೂ ಲಾಂಡ್ರಿಯನ್ನೂ ಕಳೆದುಕೊಂಡರೆ ವರ್ಜೀನಿಯು ಲಾಂಡ್ರಿ ಹಾಗೂ ಲ್ಯಾಂಟಿರ್‌ನನ್ನು ಪಡೆದು ಸುಖಿಸಿದಳು.

ಗಂಡನ ಜೊತೆಗೀಗ ಅವಳು ಲಾ ಅಸಿಮೀರ್ ಮದ್ಯಗೃಹದ ವಿಷಚಕ್ರದಲ್ಲಿ ಬಿದ್ದಳು. ಕುಡಿದು ಕುಡಿದು ಮೂರ್ಛಾವಸ್ಥೆ ತಲುಪಿದ ಅವಳ ಗಂಡ ಕೂಪೆ ಕೂಡ ಸೆರೆ ಕುಡಿತದ ಸಾವನ್ನು ಅಪ್ಪಿದ. ಬೆಳೆದು ದೊಡ್ಡವಳಾದ ಮಗಳು ನಾನಾ ಮನೆಯನ್ನು ಬಿಟ್ಟು, ಬೀದಿಯಲ್ಲಿ ಬಿದ್ದವಳಾದಳು. ಗರ್ವೇಸಳೂ ಕೂಡ ಓಣಿಯಲ್ಲಿ ತಿರುಗುತ್ತ ವಿಟಪುರುಷರನ್ನು ಆಕರ್ಷಿಸಬೇಕೆಂದಳು. ಆದರೆ ಅವಳತ್ತ ತಿರುಗಿ ನೋಡುವ ಜನರೇ ಇರಲಿಲ್ಲ. ಈಗ ಅವಳ ಪಾಲಿಗೆ ಉಳಿದದ್ದು ಹಸಿವು–ಸೆರೆ ಹಾಗೂ ನಿರಾಶೆ. ಅಧಃಪತನದ ಅಂಚಿನಲ್ಲಿರುವ ಅವಳನ್ನು ಗೌಜೆಟ್‌ನು– ಕೊನೆಯ ಬಾರಿ ರಕ್ಷಿಸಲು ಪ್ರಯತ್ನಿಸಿ ವಿಫಲನಾದನು.

ಬಡವರನ್ನು ನಿಶಾಪ್ರಭಾವಕ್ಕೀಡುಮಾಡುವ ಮದ್ಯ ಕೊನೆಗೂ ಗರ್ವೇಸಳ ಬಲಿ ತೆಗೆದುಕೊಂಡಿತು. ಮದ್ಯಪಾನದ ದುಷ್ಪರಿಣಾಮವನ್ನ ಪರಿಣಾಮಕಾರಿಯಾಗಿ ಹೇಳುವ ಕಾದಂಬರಿಯಿದು.

ಬಡವರ ಕುರಿತಾದ ಝೋಲಾನ ಕಾದಂಬರಿಗಳು ಅವನನ್ನು ಹೇಳತೀರದಷ್ಟು ಶ್ರೀಮಂತನನ್ನಾಗಿ ಮಾಡಿದವು. ಅವನೀಗ ದಪ್ಪನಾದನಷ್ಟೇ ಅಲ್ಲ ವಿಕ್ಷಣ ಮನಸ್ಕನೂ ಆದನು. 'ನೀನು ಏನೇ ಮಾಡು; ಜೀವನವು ಅದರ ಫಲವನ್ನು ಕೊಟ್ಟೇ ಕೊಡುವದು. ಬಡವರಿದ್ದಾಗ ನೀವು ಹಸಿವೆಯಿಂದ ಸಾಯುತ್ತೀರಿ. ಶ್ರೀಮಂತರಾದಾಗ ಹೊಟ್ಟೆ ಬಿರಿಯುವಂತೆ ತಿಂದು ಸಾಯುತ್ತೀರಿ! ನರಗಳ ಜಡ್ಡಿನಿಂದ ಬಳಲುವ ಝೋಲಾನು ತಾನು ಎಲ್ಲ ಜಾಡ್ಯಗಳಿಗೆ ಬಲಿಯಾಗಿದ್ದೇನೆಂಬ ಭ್ರಮೆಯಲ್ಲಿದ್ದನು. ಜೀವನದ ಪ್ರಾರಂಭದಲ್ಲಿ ಅವನು ಬಡತನ, ಕೊರತೆಗಳನ್ನು ಎದುರಿಸಿದ್ದರೆ, ಈಗ ಶ್ರೀಮಂತಿಕೆ ಹಾಗೂ ತೀವ್ರಲಾಲಸೆಗಳನ್ನೂ ಎದರಿಸಬೇಕಾಯ್ತು. ನಿಜ ಹೇಳಬೇಕೆಂದರೆ ಝೋಲಾನು ಕುದುರೆಯಷ್ಟು ಆರೋಗ್ಯವಂತನಾಗಿದ್ದನು. ನಿಜವಾಗಿ ಕಾಡಿದ್ದೆಂದರೆ ಅವನ ಶಕ್ತಿ ಹೀನತೆಯಲ್ಲ; ಸಂತಾನ ಹೀನತೆ. ಮಕ್ಕಳಿಲ್ಲದ್ದರಿಂದ ತಾನೊಬ್ಬ ಅರ್ಧಮನುಷ್ಯನೆಂದು ಅವನು ತಿಳಿದುಕೊಂಡಿದ್ದನು. ತಾಯ್ತನದ ಕರ್ತವ್ಯ ಪೂರ್ತಿಗೊಳಿಸದ ಪತ್ನಿಯನ್ನು ದೈವವು ಅವನಿಗೇಕೆ ದಯಪಾಲಿಸಿತ್ತೋ ತಿಳಿಯದು. ಅವನ ಮನೆಯಲ್ಲಿದ್ದ ಜೀನ್‌ರೋಜರಾಟ್‌ಳು ತನ್ನ ಮಕ್ಕಳಿಗೆ ನಿಶ್ಚಯವಾಗಿಯೂ ಒಳ್ಳೇ ತಾಯಿಯಾಗಬಹುದು. ಯಾಕಾಗಬಾರದು ? ಅವಳಿಗಿನ್ನೂ ಇಪ್ಪತ್ತು ತುಂಬಿಲ್ಲ. ತನಗೋ ಐವತ್ತು ತುಂಬಿ ಕರಡಿಯಾಗಿದ್ದೇನೆ. ಆದರೆ ಊಟದ ಮೇಲಿನ ನಿಯಂತ್ರಣದಿಂದ ತನ್ನ ವಯಸ್ಸಿನಿಂದ ಮೂವತ್ತು ವರ್ಷಗಳನ್ನೂ ತೂಕದಿಂದ ಮೂವತ್ತು ಪೌಂಡುಗಳನ್ನೂ ಕಳೆದುಕೊಳ್ಳಲು ಸಾಧ್ಯವಿತ್ತು. ಅದರಂತೆ ಊಟದಲ್ಲಿ ಬದಲಾವಣೆ ಮಾಡಿಕೊಂಡು ತಕ್ಕಮಟ್ಟಿಗೆ ತರುಣನೇ ಆದನು. ಜೀನ್‌ರೋಜರಾಟ್‌ಳಿಗೆ ಒಂದು ಬೇರೆ ಕೋಣೆಯಲ್ಲಿರಿಸಿದನು. ಕಾಲಕ್ರಮೇಣ ಇಬ್ಬರು ಮಕ್ಕಳ ತಂದೆಯೂ ಆದನು.

ಆದರೆ ಝೋಲಾನ ಮೊದಲ ಹೆಂಡತಿ ಅಲೆಕ್ಸಾಂಡ್ರೈನ್‌ಳಿಗೆ ಇದು ಸಂತೋಷತರಲಿಲ್ಲ. ಅವಳು ಅತ್ತಳು, ಕರೆದಳು ಜೋರಾಗಿ ರಂಪಮಾಡಿದಳು. ಮನೆಬಿಟ್ಟು ಹೊರಡುವೆನೆಂದು ಅಂಜಿಕೆಹಾಕಿದಳು. ಝೋಲಾನ ಮನೆಯಲ್ಲಿ ಅವಳಿಗೆ ಮೊದಲಿನಂತೆ ಪ್ರಥಮಸ್ಥಾನವೇನೋ ಇತ್ತು. ಆದರೆ ಅವನ ಹೃದಯದಲ್ಲಿ ಅವಳಿಗೀಗ ಸಿಕ್ಕಿದ್ದು ದ್ವಿತೀಯ ಸ್ಥಾನವೇ. ದುಃಖದಿಂದ ಉದ್ಭೂತವಾದ ಔದಾರ್ಯದಿಂದ ಅವಳು ತನ್ನ ಸವತಿಯೊಂದಿಗೆ ಒಳ್ಳೇ ಸಂಬಂಧವಿರಿಸಿಕೊಂಡಳು. ಅಷ್ಟೇ ಅಲ್ಲ ಝೋಲಾನು ಈ ಎರಡು ಮಕ್ಕಳ ತಂದೆಯೆಂದು ಸಾರಿದಳು; ತಾನು ಜೀವಿಸಿರುವವರೆಗೆ ಅವರ ಬಗ್ಗೆ ಕಾಳಜಿವಹಿಸಿದಳು, ಝೋಲಾ ತನ್ನ ಪುಸ್ತಕವೊಂದನ್ನು ಕೃತಜ್ಞತಾಪೂರ್ವಕವಾಗಿ ಅಲೆಕ್ಸಾಂಡ್ರೈನ್‌ಳಿಗೆ ಅರ್ಪಿಸಿದನೇನೋ ನಿಜ. ಆದರೆ ಪುಸ್ತಕದ ಇನ್ನೊಂದು ಪ್ರತಿಯಲ್ಲಿ ತನಗೆ ಮಕ್ಕಳಿತ್ತ ಜೀನಳಿಗೆ ಅರ್ಪಣೆ ಎಂದನು. ಈ ರೀತಿಯ ದ್ವಿಮುಖ ಸಂಬಂಧವನ್ನು ಅವನು ಜೀವನದುದ್ದಕ್ಕೂ ಇರಿಸಿದನು.

ಕ್ಯಾಪ್ಟನ್ ಆಲ್ಫ್ರೆಡ್ ಡ್ರೇಫಸ್‌ನ ವಿಚಾರಣೆಯ ಸಂಬಂಧದಲ್ಲಿ ಝೋಲಾ ನಡೆಸಿದ ಹೋರಾಟದ ಕಥೆ ತುಂಬ ರೋಮಾಂಚನಕಾರಿಯಾಗಿದೆ. ಮೊದಮೊದಲು ಈ ಪ್ರಕರಣದಲ್ಲಿ ತೀರ ಕಡಿಮೆ ಆಸಕ್ತಿವಹಿಸಿದ ಝೋಲಾನು, ಮುಂದೆ ಅಧ್ಯಯನ ಮಾಡಿದನಂತರ ಡ್ರೇಫಸ್‌ನ ಮೇಲೆ ಭಾರೀ ಅನ್ಯಾಯ ನಡೆಯುತ್ತಿದೆ ಎಂದು ಉಗ್ರವಾಗಿ ಪ್ರತಿಭಟಿಸಿದನು. ಡ್ರೇಫಸ್‌ನಿಗೆ ಅನ್ಯಾಯವಾದರೆ, ಫ್ರಾನ್ಸಕ್ಕೆ, ಅಲ್ಲ ಇಡೀ ಮಾನವಕೋಟಿಗೆ ಅನ್ಯಾಯವಾದಂತೆಯೆಂದು ಝೋಲಾ ಪ್ರತಿಪಾದಿಸಿದನು. ಅದಕ್ಕಾಗಿ ಕರಪತ್ರವೊಂದನ್ನು ಪ್ರಕಟಿಸಿ ಡ್ರೇಫಸ್‌ನ ಮುಗ್ಧತೆಯನ್ನೂ, ಸಂಸ್ಥೆಗಳ ಕುಹಕತನವನ್ನೂ ಬಯಲಿಗೆಳೆದನು. ಕೋರ್ಟಿನಲ್ಲಿ ನಡೆದ ವಿಚಾರಣೆಯಲ್ಲಿ ಝೋಲಾನಿಗೆ ಮಾನಹಾನಿ ಆಪಾದನೆಯ ಮೇಲೆ ಬಂಧಿಸಲಾಯ್ತು, ವಿಚಾರಣೆಯ ಕೊನೆಗೆ ಝೋಲಾ ನ್ಯಾಯಕ್ಕಾಗಿ ಒಂದು ದೀರ್ಘಮನವಿಯನ್ನು ಕೋರ್ಟಿನ ಎದುರಿಗಿಟ್ಟನು. ಡ್ರೇಫಸ್ ಮುಗ್ಧನೆಂದು ಆಣೆಯಿಟ್ಟು ಹೇಳಿದನು. ತನಗೆ ಒಂದಿಲ್ಲೊಂದು ದಿನ ವಿಜಯ ದೊರೆತೇ ತಿರುವದು. ಆಗ ನಿಶ್ಚಯವಾಗಿಯೂ ಫ್ರಾನ್ಸ ತನ್ನನ್ನು ಗೌರವಿಸಲಾರದೆ ಇರದು ಎಂದು ಆತ್ಮವಿಶ್ವಾಸ ತೋರಿದನು. ನ್ಯಾಯಮೂರ್ತಿಗಳು ಮಾತ್ರ ಝೋಲಾನನ್ನು ಅಪರಾಧಿಯೆಂದು ಕರೆದರು. ಮೂವತ್ತು ಸಾವಿರ ಫ್ರ್ಯಾಂಕುಗಳ ದಂಡವನ್ನು ವಿಧಿಸಿದರು. ನ್ಯಾಯಕ್ಕಾಗಿ ಮಾಡಿದ ಹೋರಾಟದಲ್ಲಿ ಅವನು ತನ್ನ ಆರೋಗ್ಯ, ಪ್ರಸಿದ್ಧಿ, ಹಣ ಹಾಗೂ ಸ್ನೇಹಿತರನ್ನೆಲ್ಲ ಕಳೆದುಕೊಂಡ. ನಾಲ್ವತ್ತು ವರ್ಷಗಳ ಹಿಂದೆ ಅವನು ಹೇಗೆ ಇದ್ದನೋ ಹಾಗೆ ಅವನು ಪರಿತ್ಯಕ್ತ ಪರದೇಶಿ ಹಾಗೂ ಒಬ್ಬಂಟಿಗನಾದನು.

ಆದರೆ ಝೋಲಾ ತನ್ನ ಹೋರಾಟವನ್ನು ಮುಂದುವರೆಸಿ ಫ್ರಾನ್ಸದ ಪ್ರಜ್ಞೆಯನ್ನು ಎಚ್ಚರಿಸಿದನು. ಡ್ರೇಫಿಯಸ್‌ನ ಮರುವಿಚಾರಣೆಯಾದಾಗ ನಿರಪರಾಧಿಯೆಂದು ಸಾಬೀತಾಯ್ತು. ಕೊನೆಗೂ ಝೋಲಾನಿಗೆ ವಿಜಯ ದೊರೆಯಿತು. ಫ್ರಾನ್ಸ ದೇಶವು ತನ್ನ ಗೌರವವನ್ನು ಕಾಪಾಡಿದ್ದಕ್ಕಾಗಿ ಅವನನ್ನು ತುಂಬು ಹೃದಯದಿಂದ ಗೌರವಿಸಿತು.

ಒಂದು ಸಂಜೆ ಝೋಲಾ ಮಲಗಲು ತನ್ನ ಕೋಣೆಗೆ ಹೋದ. ಅಗ್ಗಿಷ್ಟಿಕೆಯಲ್ಲಿಯ ಬೆಂಕಿ ಉರಿಯುತ್ತಲೇ ಇತ್ತು. ಬೆಂಕಿ ಆರಿ ವಾಯು ತುಂಬಿತು. ತತ್ಪರಿಣಾಮವಾಗಿ ಝೋಲಾ ಮಲಗಿದಲ್ಲೇ ಉಸಿರುಗಟ್ಟಿ ಮರಣವನ್ನಪ್ಪಿದನು.

ಝೋಲಾ ಕೊನೆಯ ರಾತ್ರಿಯಂದೂ ಕೂಡ ಮಧ್ಯರಾತ್ರಿಯ ವರೆಗೆ ಬರೆಯುತ್ತ ಕುಳಿತಿದ್ದ. ಬೆಳಗು ಮುಂಜಾನೆ ನೋಡಿದಾಗ ಡೆಸ್ಕಿನ ಮೇಲೆ ಹಸ್ತಪ್ರತಿಯ ಮುಗಿಯಲಾರದ ಪುಟ ಬಿದ್ದಿತ್ತು. ಅವನ ಜೀವನದ ಸಾರಸರ್ವಸ್ವವಾಗಿರುವ ಒಂದು ಸಾಲು ಅಲ್ಲಿತ್ತು. 'ಸತ್ಯದ ಮೂಲಕ ಉನ್ನತತರ ಹಾಗೂ ಹೆಚ್ಚು ಸುಖೀ ಮಾನವ ಜನಾಂಗವನ್ನು ನವೀನವಾಗಿ ನಿರ್ಮಾಣ ಮಾಡಬೇಕು.' ಹೌದು. ಝೋಲಾನ ಜೀವನಸಿದ್ಧಿಯೂ ಅದೇ ಆಗಿತ್ತು.

ಝೋಲಾನ ಪ್ರಕೃತಿವಾದವು ವೈಜ್ಞಾನಿಕ ಖಚಿತತೆಯ ಮೇಲೆ ಅವಲಂಬಿತವಾಗಿದೆ. ಅವನ ದೃಷ್ಟಿಯಲ್ಲಿ ಕಾದಂಬರಿಯು ಪ್ರಯೋಗಶಾಲೆಯಲ್ಲಿಯಂತೆ. ಸಂಶೋಧನೆ ಹಾಗೂ ನಿರೀಕ್ಷಣೆಯ ವಿಧಾನಗಳನ್ನು ಚಿತ್ರಿಸಬೇಕು. ಮನೋವಿಜ್ಞಾನ, ಸಮಾಜಶಾಸ್ತ್ರ ಹಾಗೂ ಆನುವಂಶಿಕತೆಯ ನಿಯಮಗಳ ಪ್ರಕಾರ ಪಾತ್ರಗಳ ಸೃಷ್ಟಿಯಾಗಬೇಕು. ಪಾತ್ರಗಳನ್ನು ಯಥಾರ್ಥವಾಗಿ ರಚಿತವಾದ ಪರಿಸರದಲ್ಲಿ ಇರಿಸಬೇಕು. ಪಾತ್ರಗಳ ಸ್ವಭಾವವು ವ್ಯಕ್ತಿ-ಪರಿಸರಗಳ ಪರಸ್ಪರ ಕ್ರಿಯೆಪ್ರತಿಕ್ರಿಯೆಗಳ ಮೇಲೆ ಅವಲಂಬಿತವಾಗಿದೆ. ಕಾದಂಬರಿಯು ಭೌತಿಕ ಹಾಗೂ ಮನೋವೈಜ್ಞಾನಿಕ ಅಂಶಗಳ ಮೂಲ ಹಾಗೂ ಬೆಳವಣಿಗೆಯ ಅಧ್ಯಯನ ಮಾತ್ರವಾಗಿರದೆ, ಸಮಕಾಲೀನ ಫ್ರಾನ್ಸದ ಸಮಾಜ ಚಿತ್ರಣವಾಗಿದೆ.

ಆನುವಂಶಿಕತೆ ಹಾಗೂ ಪರಿಸರಗಳು ಕುಟುಂಬದ ನಾನಾ ವ್ಯಕ್ತಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆಂಬುದನ್ನು ಅವನು ತನ್ನ ರೋಗಾನ್‌ಮಾಕಾರ್ಟ ಮಾಲಿಕೆಯ ಇಪ್ಪತ್ತು ಕಾದಂಬರಿ ಸಂಪುಟಗಳಲ್ಲಿ ಚಿತ್ರಿಸಿದ್ದಾನೆ. ಎರಡನೇ ಚಕ್ರಾಧಿಪತ್ಯ (೧೮೫೨-೭೦) ದ ಕೆಳಗಿನ ಕುಟುಂಬದ ಸಾಮಾಜಿಕ, ಪ್ರಾಕೃತಿಕ ಇತಿಹಾಸವನ್ನು ಒಳಗೊಂಡ ಕಾದಂಬರಿಗಳನ್ನು ಬರೆದು, ಅವನು ಬಾಲ್ಜಾಕನು ಚಿತ್ರಿಸಿದ ಸಮಾಜದ ಚಿತ್ರಣವನ್ನೂ ಪೂರ್ತಿಗೊಳಿಸಿದ್ದಾನೆ. ಇಪ್ಪತ್ತು ಸಂಪುಟಗಳಲ್ಲಿಯ ಪ್ರತಿಯೊಂದು ಕಾದಂಬರಿಯು ಕುಟುಂಬದ ಒಬ್ಬ ಅಥವಾ ಕೆಲವು ಸದಸ್ಯರ ಜೀವನದ ಮೇಲೆ ಕೇಂದ್ರೀಕೃತವಾಗಿದೆ. ಇಪ್ಪತ್ತು ಸಂಪುಟಗಳಲ್ಲಿ ಅವನು ವಿವಿಧ ಉದ್ಯೋಗದಂಧೆಗಳ, ಇತಿಹಾಸವನ್ನೇ ವರ್ಣಿಸಿದ್ದಾನೆ. ರೈತ, ಗಣಿಕಾರ್ಮಿಕ, ಪಟ್ಟಣದ ಕೂಲಿಕಾರ, ಪಂಡಿತ, ವೇಶ್ಯೆ, ಕಲಾವಿದ, ರಾಜಕೀಯ ಶಾಸ್ತ್ರಜ್ಞ, ಅಗಸಗಿತ್ತಿ ಇವರೆಲ್ಲರ ಉದ್ಯೋಗಗಳೆಲ್ಲ ವಿವರವಾಗಿ ಚಿತ್ರಿತವಾಗಿವೆ.

ಕುಡಿತದ ದುಷ್ಪರಿಣಾಮವನ್ನು ಕುರಿತ ಅಧ್ಯಯನವನ್ನು ಲಾ ಅಸಿಮೋರ್ (೧೮೭೭) ಎಂಬ ಕಾದಂಬರಿಯಲ್ಲಿ ಕೊಟ್ಟರೆ ನಾನಾ (೧೮೮೦) ಕಾದಂಬರಿ ಸುಂದರ ಆದರೆ ಮೂರ್ಖ ಹಾಗೂ ಸಾರಾಸಾರ ವಿಚಾರವಿಲ್ಲದ ವೇಶ್ಯೆಯ ಕಥೆಯನ್ನೂ ಒಳಗೊಂಡಿದೆ. ಗಣಿಯ ಕೆಲಸಗಾರರ ಸಾಮಾಜಿಕ ಸಮಸ್ಯೆಗಳನ್ನು ಜರ್ಮಿನಲ್ (೧೮೮೫) ಚಿತ್ರಿಸುತ್ತದೆ. ೧೮೮೭ರಲ್ಲಿ ಬರೆದು ಪ್ರಕಟಿಸಿದ ಭೂಮಿ ಎಂಬ ಕಾದಂಬರಿ ಆಶೆಬುರಕ ಫ್ರೆಂಚ ರೈತರ ನಗ್ನ ಚಿತ್ರವನ್ನು ವಿವರಿಸುತ್ತದೆ.

ಅವನ ಎಲ್ಲ ಕಾದಂಬರಿಗಳಲ್ಲಿ ಜರ್ಮಿನಲ್ ಶ್ರೇಷ್ಠ ಕಾದಂಬರಿಯೆನಿಸಿದೆ. ಅದನ್ನು ಬರೆಯುವಾಗ ಅವನು ಫ್ರಾನ್ಸ ಹಾಗೂ ಬೆಲ್ಜಿಯಮ್‌ದ ಕಲ್ಲಿದ್ದಲಿ ಖಣಿಗಳಲ್ಲಿ ಆರುತಿಂಗಳಗಳವರೆಗೆ ಟಿಪ್ಪಣೆ ತೆಗೆದುಕೊಂಡನು. ಈ ರೀತಿ ಟಿಪ್ಪಣೆ ತೆಗೆದುಕೊಳ್ಳುವದು ಪ್ರಕೃತಿವಾದದ ಒಂದು ಅವಶ್ಯಕ ಭಾಗವೇ ಆಗಿದೆ. ಕಾದಂಬರಿಕಾರ ಪಾತ್ರಗಳನ್ನೂ ಸನ್ನಿವೇಶಗಳನ್ನೂ ಕಲ್ಪಿಸಿಕೊಳ್ಳಬಹುದು. ಆದರೆ ಅವರು ಜೀವಿಸುವ

ಜಗತ್ತು ಮಾತ್ರ ನಿಜ ಜಗತ್ತಿನ ಯಥಾರ್ಥ ನಕಲಾಗಿರಬೇಕು ಎಂದು ಝೋಲಾನ ಅಭಿಪ್ರಾಯವಾಗಿತ್ತು. ಈ ತರದ ಸಾಕ್ಷ್ಯಚಿತ್ರದಂಥ ಕಾದಂಬರಿಗಳನ್ನು ಬರೆದು ಪ್ರಚುರ ಪಡಿಸಿದನು.

ಝೋಲಾ ವಿಶ್ವಕಾದಂಬರಿಕಾರರಲ್ಲಿಯೇ ಒಂದು ಗಣನೀಯ ಸ್ಥಾನವನ್ನಲಂಕರಿಸಿದ್ದಾನೆ. ಅವನ ಕೃತಿಗಳಲ್ಲಿ ಮೂಡಿದ ವ್ಯಾಪಕವಾದ ಜೀವನಚಿತ್ರ ಅಸಾಧಾರಣವಾಗಿದೆ. ಅವನ ದೃಕ್‌ಶಕ್ತಿ ಅನುಪಮವಾಗಿದ್ದು, ಯಾವುದೇ ದೃಶ್ಯವನ್ನು ಅದರ ಎಲ್ಲ ವಿವರಗಳೊಂದಿಗೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲನು. ಕ್ಯಾಬಿನೆಟ್ ಮಂತ್ರಿಗಳು, ಲಕ್ಷಾಧೀಶರು, ಸಮಾಜದ ಮುಖಂಡರು ಮೊದಲು ಮಾಡಿ ಗಟಾರದಲ್ಲಿ ಬಿದ್ದು ನರಳುವ ಅತ್ಯಂತ ಹೀನ ಸ್ಥಿತಿಯ ಬಡವರ ಬಗೆಗೂ ಬರೆದನು. ಇಲ್ಲಿಯವರೆಗೆ ಅವಜ್ಞೆಗೀಡಾದ ವ್ಯಕ್ತಿಗಳ ಕುರಿತು ಬರೆದಾಗ ಅವನು ತುಂಬ ಯಶಸ್ವಿಯಾದನು. ಕಾರಖಾನೆಗಳಲ್ಲಿ ಕೆಲಸಮಾಡುವ ಕಾಮಗಾರರು, ಪಟ್ಟಣದ ಕೊಳಚೆ ಪ್ರದೇಶಗಳಲ್ಲಿರುವ ಜನಜಂಗುಳಿ–ಇವನ ಕಾದಂಬರಿಗಳಲ್ಲಿ ಬರುವ ಪಾತ್ರಗಳು. ಇವರ ಜೀವನವು ಕುರೂಪವಾಗಿದ್ದುದು ಅಷ್ಟೇ ಅಲ್ಲ, ಮಲಿನವೂ ಆಗಿತ್ತು. ಅವನ ಕಾದಂಬರಿಗಳ ಮಹತ್ವದ ಭಾಗವೆಂದರೆ ಕೆಲ ಸ್ಮರಣೀಯ ದೃಶ್ಯಗಳು, ಅವುಗಳಲ್ಲಿ ಅವನು ವ್ಯಕ್ತಿಗಳನ್ನು ತೋರಿಸುವದಿಲ್ಲ, ಚಲನೆಯಲ್ಲಿರುವ ಜನಜಂಗುಳಿಯನ್ನೇ ಪ್ರದರ್ಶಿಸುತ್ತಾನೆ.

ಝೋಲಾ ತಪ್ಪು ಮಾಡಿದ್ದೇನೆಂದರೆ – ಸಾಹಿತ್ಯವನ್ನು ಅವನು ವೈಜ್ಞಾನಿಕ ಪ್ರಯೋಗವೆಂದು ತಿಳಿದದ್ದು. ಸಾಹಿತ್ಯವೆಂದರೆ ಏನು ಎಂಬುದು ಅವನಿಗೆ ತಿಳಿಯದೆ ಹೋಯ್ತು. ಅವನು ಮ್ಯೂಜಿಯಮ್‌ದ ಮಾರ್ಗದರ್ಶಕನಂತೆ ಜೀವನದ ಪ್ರತಿಯೊಂದು ಭಾಗವನ್ನು ಹೊರಗೆ ನಿಂತು ವಿವರಿಸುತ್ತ ಹೋಗುತ್ತಾನೆ. ಝೋಲಾ ತನ್ನ ವಿವರಗಳಿಂದ ರಂಜಿಸಬಲ್ಲನು; ದಿಗ್ಭ್ರಾಂತಿ ಹುಟ್ಟಿಸಬಲ್ಲನು. ಆದರೆ ನಮ್ಮನ್ನು ಅವನು ಮಂತ್ರಮುಗ್ಧನನ್ನಾಗಿ ಮಾಡುವದಿಲ್ಲ. ಅದಕ್ಕಾಗಿ ಅವನು ದೊಡ್ಡ ಕಾದಂಬರಿಕಾರನಲ್ಲ.

ತನ್ನ ಜೀವಿತಾವಧಿಯಲ್ಲಿಯೇ ಅವನು ಅತಿರಂಜಿತ ಶೈಲಿಯ, ಅಶ್ಲೀಲತೆಯನ್ನು ಪುರಸ್ಕರಿಸುವ ಕಾದಂಬರಿಕಾರನೆಂದು ಆಪಾದಿಸಲ್ಪಟ್ಟಿದ್ದ. ಈ ಮಾತು ಯೋಗ್ಯವಲ್ಲ, ಯಾಕೆಂದರೆ ಸಾರ್ವಜನಿಕ ನ್ಯಾಯದ ಬಗ್ಗೆ ಹೋರಾಡುವವನು ಎಂಬ ಮಾತು ಡ್ರೇಫಸ್ ಪ್ರಕರಣದಲ್ಲಿಯ ಅವನ ಹೋರಾಟವು ಸ್ಪಷ್ಟಗೊಳಿಸುತ್ತದೆ.

ಕೆಲವೊಂದು ಸಾರೆ ಅವನೊಬ್ಬ ಕೀಳು ಅಭಿರುಚಿಯ ವರ್ಣರಂಜಿತ ಶೈಲಿಯ ಲೇಖಕನೆಂದು ಅನ್ನಿಸಬಹುದು. ಇದಕ್ಕೆ ಕಾರಣ ಅವನ ಬರವಣಿಗೆಯ ಪದ್ಧತಿಯೇ ಆಗಿದೆ. ಯಾಕೆಂದರೆ ಅವನು ತನ್ನ ದೃಶ್ಯ ಹಾಗೂ ಜನರೊಂದಿಗೆ ತಾದಾತ್ಮ್ಯ ಹೊಂದದೆ ಹೊರಗೆ ನಿಂತು ಜೀವನವನ್ನು ನೋಡಿ ವರದಿ ಮಾಡುವಂಥವನು.

ಆದರೆ ಕಥೆ ಮುಂದುವರೆದಂತೆಲ್ಲ ಅವನು ಅಗ್ಗದ ರೋಮ್ಯಾಂಟಿಕ್ ಬರಹದತ್ತ ಒಲಿಯುತ್ತಿದ್ದನು. ಕುರೂಪವಾದುದನ್ನು ಇನ್ನಷ್ಟು ಕುರೂಪವನ್ನಾಗಿ ಕ್ರೂರತನವನ್ನು ಇನ್ನಷ್ಟು ಕ್ರೂರವಾಗಿ ಸೌಂದರ್ಯವನ್ನು ಇನ್ನಷ್ಟು ಸುಂದರವಾಗಿ ತೋರಿಸುತ್ತ ಹೋಗುವದು ಅವನ ಪದ್ಧತಿಯೇ ಆಗಿತ್ತು. ಇಷ್ಟು ಮಾತ್ರ ನಿಜ, ಅವನ ಕಾದಂಬರಿಗಳಲ್ಲಿ ಅಶ್ಲೀಲತೆಯ ಅಸಂಖ್ಯಾತ ಪುಟಗಳಿರುವದು ಸುಳ್ಳಲ್ಲ. ಆದರೆ ಉದ್ದೇಶಪೂರ್ವಕವಾಗಿ ಈ ರೀತಿ ಮಾಡುವದಿಲ್ಲ.

ಝೋಲಾನ ನಂತರ ಪ್ರಕೃತಿವಾದವು ಹಿಂದೆ ಬಿದ್ದು ಮನೋವೈಜ್ಞಾನಿಕ ಕಾದಂಬರಿಗಳು ಹೆಚ್ಚು ಬಳಕೆಗೆ ಬಂದವು. ಯಶಸ್ವೀ ಕಾದಂಬರಿಕಾರ ತನ್ನ ಮರಣಾನಂತರ ಪ್ರಸಿದ್ಧಿಯ ಮೆಟ್ಟಿಲಿನಿಂದ ಕೆಳಗಿಳಿಯುತ್ತಾನೆ. ಝೋಲಾನ ವಿಷಯದಲ್ಲೂ ಈ ಮಾತು ಸತ್ಯ. ಅವನು ತನ್ನ ಕಾದಂಬರಿಗಳಿಂದ ಕಾದಂಬರಿ ಸಾಹಿತ್ಯ ಪ್ರಕಾರದ ಮೇಲೆ ಅಂತರ್‌ರಾಷ್ಟ್ರೀಯ ಪ್ರಭಾವ ಬೀರಿದನು. ಈಗ ಮತ್ತೆ ಝೋಲಾನ ಕಾದಂಬರಿಗಳಿಗೆ ಮಹತ್ವ ಬರತೊಡಗಿದೆ.

ಕನ್ನಡ–ಮರಾಠಿ ಸಾಹಿತ್ಯ ಬಾಂಧವ್ಯ

ಎಸ್. ಪಿ. ಪಾಟೀಲ

ಕರ್ನಾಟಕ–ಮಹಾರಾಷ್ಟ್ರಗಳು ನೆರೆಯ ಪ್ರಾಂತಗಳು. ಎರಡೂ ಪ್ರಾಂತಗಳ ಕೆಲ ಪ್ರದೇಶ ಎಷ್ಟೋ ಕಾಲದವರೆಗೆ ಕೂಡಿಯೇ ಇದ್ದಿತು. ಭೌಗೋಲಿಕವಾಗಿಯೂ ಎರಡೂ ಹತ್ತಿಕೊಂಡಿರುವದರಿಂದ ಎರಡು ಪ್ರದೇಶಗಳ ಕೊಡು–ಕೊಳ್ಳುವಿಕೆ ಅನೇಕ ಮುಖವಾಗಿ ಸಾಗಿಬಂದುದು ಸ್ವಾಭಾವಿಕ. ಇದರಿಂದಾಗಿ ಎರಡೂ ಪ್ರದೇಶಗಳ ಜನರ ವೇಷ–ಭೂಷಣ, ಹಬ್ಬ-ಹರಿದಿನ, ಉತ್ಸವಗಳೂ, ಆರಾಧ್ಯ ದೈವಗಳೂ ಸಾಮಾನ್ಯ ವಾಗಿವೆ. ಭೌಗೋಲಿಕ ಸೀಮೆಯನ್ನು ದಾಟಿ ಕರ್ನಾಟಕದ ಸವದತ್ತಿಯ ಎಲ್ಲಮ್ಮ, ಚಿಂಚಲಿಯ ಮಾಯಕ್ಕ, ಮಂಗಸೂಳಿಯ ಮಲ್ಲಯ್ಯರು– ಮಹಾರಾಷ್ಟ್ರೀಯರಿಗೂ, ಮಹಾರಾಷ್ಟ್ರದ ಕೊಲ್ಹಾಪುರದ ಮಹಾಲಕ್ಷ್ಮಿ, ಜೇಜೂರಿಯ ಖಂಡೋಬಾ, ಪಂಢರ ಪುರದ ವಿಠ್ಠಲರು– ಕರ್ನಾಟಕದವರಿಗೂ ಆರಾಧ್ಯ ದೈವವಾಗಿ ಈ ಎರಡೂ ಪ್ರದೇ ಶದ ಜನರ ಸಾಂಸ್ಕೃತಿಕ ಸಮ್ಮೇಳನದ ಪ್ರಮುಖ ಕೇಂದ್ರಶಕ್ತಿಗಳಾಗಿ ಪರಿಣಮಿ ಸಿದ್ದಾರೆ.

'ಕವಿರಾಜಮಾರ್ಗ'ದ ಪ್ರಕಾರ ಕನ್ನಡನಾಡು ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ ಮಹಾನಾಡು. ಶಾತವಾಹನ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಶಿಲಾಹಾರ, ಸೇವುಣ ರಾಜಮನೆತನಗಳು ಎರಡೂ ಪ್ರದೇಶಗಳನ್ನು ಒಟ್ಟಾಗಿ ಆಳಿದವು. ಪುಲಕೇಶಿ ಮಹಾರಾಷ್ಟ್ರದ ಅನೇಕ ಪ್ರಾಂತಗಳನ್ನು ಗೆದ್ದುದರಿಂದ ಅವನನ್ನು 'ಮೂರು ರಾಷ್ಟ್ರಗಳ ಸ್ವಾಮಿ' ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಮುಂದೆ ಮಹಾರಾಷ್ಟ್ರದ ರಾಜರು ಕರ್ನಾಟಕದ ಪ್ರದೇಶವನ್ನು ಕೆಲವು ಕಾಲದ ವರೆಗೆ ಆಳಿದರು.

ಮರಾಠಿ ಭಾಷೆ ರೂಪುಗೊಳ್ಳುವ ಮೊದಲೇ ಶ್ರೀಮಂತವಾಗಿ ಬೆಳೆದ ಕನ್ನಡ ಭಾಷೆಯ ಪ್ರಭಾವ ಮರಾಠಿ ಭಾಷೆಯ ಮೇಲಾಗುವುದು ಸ್ವಾಭಾವಿಕ. ಆದುದರಿಂದ ಮರಾಠಿ ಭಾಷೆಯಲ್ಲಿ ಸೇರ್ಪಡೆಯಾಗಿರುವ ಅನ್ಯಭಾಷೆಯ ಪದಗಳಲ್ಲಿ ಕನ್ನಡ ಪದ ಗಳಿಗೆ ಹೆಚ್ಚಿನ ಸ್ಥಾನವಿರುವದು ಗಮನಾರ್ಹ ಅಂಶವೆಂಬುದಾಗಿ ಮರಾಠಿ ವಿದ್ವಾಂಸರು ಒಪ್ಪಿಕೊಂಡ ಸಂಗತಿಯಾಗಿದೆ.

ಕರ್ನಾಟಕದ ಶಿಲ್ಪಕಲೆಯ ಮೇರುಕೃತಿಯಾದ ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದ ಪದದಲ್ಲಿಯ 'ಚಾವುಂಡರಾಯೆಂ ಕರವಿಯೆಲೆ' (ಕ್ರಿ.ಶ. ೯೮೩)ಯು ಮರಾ

ಠಿಯ ಪ್ರಥಮ ವಾಕ್ಯವೆಂಬುದನ್ನು ಎಲ್ಲರೂ ಒಪ್ಪಿದ್ದಾಗಿದೆ. ಅಲ್ಲಿಯೇ ಇರುವ 'ಗಂಗರಾಜೇ ಸುತ್ತಾಲೆ ಕರವಿಲೆ' ಎಂಬ ಶಾಸನಕ್ಕೆ ಮರಾಠಿ ವಿದ್ವಾಂಸರು ಹೆಚ್ಚಿನ ಮಹತ್ವ ಕೊಡುವರು. ಈ ಮರಾಠಿ ಶಾಸನದ 'ಸುತ್ತಾಲೆ' (ಸುತ್ತ+ಆಲಯ) ಕನ್ನಡ ಪದವೆಂಬುದನ್ನು ಮನ್ನಿಸುವರು. ಈ ಶಾಸನದ ಆಧಾರದಿಂದಲೇ ೧೦ನೆಯ ಶತಮಾನದ ವೇಳೆಗೆ ಮರಾಠಿ ಭಾಷೆ ಪ್ರಚಾರದಲ್ಲಿದ್ದಿತೆಂದು ತಿಳಿಯಲಾಗುವದು. ಆದರೆ ೧೨ನೆಯ ಶತಮಾನಕ್ಕಿಂತ ಮುಂಚಿನ ಮರಾಠಿ ಸಾಹಿತ್ಯ ಉಪಲಬ್ಧವಾಗಿಲ್ಲ.

'ಜ್ಞಾನೇಶ್ವರಿ' ಮರಾಠಿಯ ಸರ್ವಶ್ರೇಷ್ಠಕೃತಿ. ಇದರ ಕರ್ತೃ ಜ್ಞಾನದೇವ-ದೇವಗಿರಿಯ ರಾಜಾರಾಮನ ಕಾಲದವ. ಜ್ಞಾನೇಶ್ವರಿ, ಅಮೃತಾನುಭವ ಹಾಗೂ 'ಸ್ವಾತ್ಮಾನುಭವ' ಅವನ ಕೃತಿಗಳು. ಜ್ಞಾನೇಶ್ವರಿಯಲ್ಲಿ ಅಕ್ಕಸಾಲಿ, ಅಡತರ, ಆಡವಾರಾ, ಕೇಳವಣಿ, ತೂಕ, ಪೌಳಿ(ಳಿ), ಮದವಿ, ಮಾತು, ಮಿರವಣಿ (ಮೆರವಣಿಗೆ), ಸೂಡ, ಹೆರಳು ಮುಂತಾದ ನೂರಾರು ಕನ್ನಡ ಪದಗಳು ದೊರೆಯುವವು. 'ಕಾನಡಾ ಹೋ ವಿಟ್ಠಲೂ ಕರ್ನಾಟಕೂ' ಎಂದು ಪಂಢರಪುರದ ವಿಠ್ಠಲನನ್ನು ಕರ್ನಾಟಕದವನಾಗಿ ಕರೆದಿದ್ದಾರೆ. ಜ್ಞಾನೇಶ್ವರದ್ದೆಂದು ತಿಳಿಯಲಾಗುವ 'ಕಾಟ್ಯಾಂಚ್ಯಾ ಆಣಿವರ ವಸತಿ ತೀನಗಾಂವ' ಎಂಬ ಕೂಟ ಪದ ಹಾಗೂ ಪುರಂದರ ದಾಸರ 'ಮುಳ್ಳುಕೊನೆಯ ಮೇಲೆ ಮೂರು ಕೆರೆಯ ಕಟ್ಟಿ' ಎಂಬ ಪದದಲ್ಲಿ ಅನನ್ಯ ಸಾಮ್ಯ ಕಂಡು ಬರುವದನ್ನು ಡಾ. ಪಂಡಿತ ಆವಳೀಕರರು ವಿವರಿಸಿದ್ದಾರೆ.[೧] ಭಾಷಾ ಬಾಂಧವ್ಯದ ದೃಷ್ಟಿಯಿಂದ ಇದು ಮಹತ್ವದ ಸಂಗತಿಯಾಗಿದೆ. ಮರಾಠಿಯಲ್ಲಿಯ 'ಭಾರೂಡ'ವಂತೆ ಕನ್ನಡದ ಮುಂಡಿಗೆಗಳಿವೆ. ಇವೆರಡರ ತೌಲನಿಕ ಅಧ್ಯಯನ ಮರಾಠಿ ಸಂತಸಾಹಿತ್ಯ ಹಾಗೂ ಕನ್ನಡದ 'ದಾಸಸಾಹಿತ್ಯ'ಗಳ ವಿವರವಾದ ಅಧ್ಯಯನಕ್ಕೆ ಪ್ರೇರಣೆಯನ್ನೀಯುವದಾಗಿದೆ.

ಮುಕುಂದರಾಜರು ಮರಾಠಿಯ ಆದಿಕವಿ. ಅವರ 'ವಿವೇಕಸಿಂಧು'ವು ಕನ್ನಡಕ್ಕೆ ಕವಿರಾಜಮಾರ್ಗವಿದ್ದಂತೆ ಮರಾಠಿಯಲ್ಲಿ ಉಪಲಬ್ಧವಾದ ಆದಿಗ್ರಂಥ. ವಿವೇಕ ಸಿಂಧು ಕನ್ನಡದ 'ಅನುಭವಾಮೃತ'ದಂಥ ಕೃತಿಯಾಗಿದೆ.

ನಿಜಗುಣರ 'ವಿವೇಕಚಿಂತಾಮಣಿ'ಯನ್ನು ಮರಾಠಿಯಲ್ಲಿ ಪರಿವರ್ತಿಸಿದವರು ಶಾಂತಲಿಂಗಸ್ವಾಮಿ. ಕನ್ನಡ ಗದ್ಯಗ್ರಂಥಕ್ಕೆ ಮರಾಠಿ ಭಾಷೆಯಲ್ಲಿ ಕಾವ್ಯದ ವೇಷ ತೊಡಿಸಿದ್ದಾರೆ. ತತ್ತ್ವಜ್ಞಾನದಂತಹ ನೀರಸ ವಿಷಯವನ್ನು ಕಾವ್ಯಮಯವಾಗಿ ದೃಷ್ಟಾಂತಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಶಾಂತಲಿಂಗರ ಮಾತೃಭಾಷೆ ಕನ್ನಡವಾಗಿರಬೇಕೆಂಬುದಕ್ಕೆ ಇದರಿಂದ ಬಲವಾದ ಸಂದೇಹವುಂಟಾಗುವುದು. ಚನ್ನ ಬಸವಣ್ಣನವರ 'ಕರಣಹಸುಗೆ'ಯನ್ನೂ ಶಾಂತಲಿಂಗಸ್ವಾಮಿ ಮರಾಠಿಗೆ ಅನುವಾದಿಸಿದ್ದಾರೆ. "ಶಾಂತಲಿಂಗಸ್ವಾಮಿಯು ಈ ಎರಡು ಕೃತಿಗಳನ್ನು ಅನುವಾದಕ್ಕೆ ಆಯ್ಕೆ

೧. 'ಕರ್ನಾಟಕ ಮತ್ತು ಮರಾಠಿ ಸಾಹಿತ್ಯ' : ಅನುವಾದಕ : ಎಸ್. ಪಿ. ಪಾಟೀಲ, ೧೯೭೭ ಪು. ೧೬೨-೧೬೬.

ಮಾಡುವದರಲ್ಲಿಯೂ ಔಚಿತ್ಯ ಮಾರ್ಮಿಕತೆಯನ್ನು ತೋರಿದ್ದಾರೆ. ವೀರಶೈವ ತತ್ವಜ್ಞಾನದಲ್ಲಿಯ ಎರಡು ವಿಚಾರಧಾರೆಗಳನ್ನು ಪ್ರತಿನಿಧಿಸುವ ಇಬ್ಬರು ಕವಿಗಳ ಎರಡು ಕಾವ್ಯಗಳ ಆಯ್ಕೆ ಮಾಡುವಲ್ಲಿ ಶಾಂತಲಿಂಗಸ್ವಾಮಿಯ ಸಮನ್ವಯ ದೃಷ್ಟಿ ಕಂಡುಬರುವದು. ಈ ವಿಚಾರಧಾರೆಯಲ್ಲಿ ಮೇಲುನೋಟಕ್ಕೆ ಭೇದ ಕಂಡರೂ ಅವುಗಳಲ್ಲಿ ಪ್ರವಹಿಸುತ್ತಿರುವ ಭಾವ ಒಂದೇ ಎಂಬ ಅರಿವು ಅವರಿಗಿದ್ದಿತು."[೨] ಎಂದು ಡಾ. ಆವಳೀಕರ ಗುರುತಿಸಿದ್ದಾರೆ. ಶಾಂತಲಿಂಗಸ್ವಾಮಿಯ ಅನುವಾದಗಳು ಕನ್ನಡ–ಮರಾಠಿ ಸಾಹಿತ್ಯಗಳ ಬಾಂಧವ್ಯಕ್ಕೆ ಉತ್ಕೃಷ್ಟ ಉದಾಹರಣೆಗಳಾಗಿವೆ. ವೀರಶೈವ ಧರ್ಮ ಮಹಾರಾಷ್ಟ್ರದ ಮರಾಠಿ ಭಾಷೆಯಲ್ಲಿ ಕೈಕೊಂಡ ವೈಶಿಷ್ಟ್ಯಪೂರ್ಣ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯದ ನಿದರ್ಶನಗಳಾಗಿವೆ.

ಬೀಡ ಜಿಲ್ಲೆಯ ಮನ್ಮಥಸ್ವಾಮಿ (೧೫೬೦–೧೬೧೪) ತಮ್ಮ ಗುರು ಬಸವಲಿಂಗರ ಆದೇಶದ ಮೇರೆಗೆ ಲಾವಣಿಯ ಮೂಲಕ ವೀರಶೈವ ಧರ್ಮಪ್ರಸಾರವನ್ನು ಕೈಕೊಂಡರು. 'ಅನುಭವಾನಂದ' 'ಸ್ವಯಂಪ್ರಕಾಶ' 'ಪರಮರಹಸ್ಯ'ಗಳು ಅವರ ಕೃತಿಗಳು ಮಹಾರಾಷ್ಟ್ರದ ವೀರಶೈವರನ್ನು ಶಿವಭಕ್ತಿಯತ್ತ ಪ್ರವೃತ್ತರನ್ನಾಗಿ ಮಾಡಲು ಅವರು ಶಿವಭಜನೆಯ ಪರಂಪರೆಯನ್ನು ಆರಂಭಿಸಿದರು. ವಾರಕರಿ ಪಂಥ ಪ್ರಬಲವಾಗಿರುವಾಗಲೇ ಶಿವೋಪಾಸನೆಯ ಬೆಳವಣಿಗೆಗೆ ಶ್ರಮಿಸಿದರು.

ಕರ್ನಾಟಕದ ದಾಸ ಸಾಹಿತ್ಯ ಹಾಗೂ ಮಹಾರಾಷ್ಟ್ರದ ಸಂತ ಸಾಹಿತ್ಯ ಏಕಕಾಲಕ್ಕೆ ಎರಡೂ ಪ್ರದೇಶವನ್ನು ವ್ಯಾಪಿಸಿದವು. ಪುರಂದರದಾಸ ಹಾಗೂ ಏಕನಾಥರು ಸಮಕಾಲೀನರು; ಭಕ್ತಿಯನ್ನು ಜನ ಭಾಷೆಯಲ್ಲಿ ಹೇಳುವ ಪ್ರಯತ್ನ ಮಾಡಿದರು, ಪಂಢರಪುರದ ವಿಠ್ಠಲ ಇಬ್ಬರಿಗೂ ಆರಾಧ್ಯ ದೈವವಾದುದರಿಂದ ಕನ್ನಡ-ಮರಾಠಿಗಳ ನಿಕಟ ಪರಿಚಯ ಪರಸ್ಪರರಿಗಾಗುವದು ಸ್ವಾಭಾವಿಕ. ಏಕನಾಥರ ಒಂದು ಅಶುದ್ಧ ಬರವಣಿಗೆಯಲ್ಲಿ 'ನಮೋ ಕಾನಡಿ ಭಾಷಾ' ಎಂದು ಕರೆಯಲಾಗಿದೆ. ಕೆಲವು ಕನ್ನಡ ಅಭಂಗಗಳನ್ನೂ ಅವರು ರಚಿಸಿರಬಹುದಾಗಿದೆಯೆಂದು ಮರಾಠಿ ವಿದ್ವಾಂಸರು ಊಹಿಸಿದ್ದಾರೆ.

ಏಕನಾಥರ ಮೊಮ್ಮಗ ಮುಕ್ತೇಶ್ವರ (೧೫೩೧) ಕುಮಾರವ್ಯಾಸ ಭಾರತವನ್ನು ಅನುಸರಿಸಿ ಮರಾಠಿ ಭಾರತವನ್ನು ರಚಿಸಿದನು. ಕುಮಾರವ್ಯಾಸನ 'ಅರಸುಗಳಿಗಿದು...' ಪದ್ಯದ ನೇರ ಅನುವಾದ ಮರಾಠಿ ಭಾರತದಲ್ಲಿ ದೊರೆಯುವದು. ಅವನ ಪದ್ಯಗಳಲ್ಲಿ ಕನ್ನಡ ಪದಗಳೂ ದೊರೆಯುವುದು ಕನ್ನಡದ ನಿಕಟ ಪರಿಚಯವನ್ನು ನಿದರ್ಶಿಸುವದು.

ಚಂದ್ರಾತ್ಮಜರುದ್ರ (೧೬೪೦–೧೭೦೦) ಮರಾಠಿಯ ಪ್ರಮುಖ ಕವಿ. ತನಗೆ ಸಂಸ್ಕೃತ ಅಭ್ಯಾಸವಿಲ್ಲ, ಕರ್ನಾಟಕ ಕವಿ ಕುಮಾರವ್ಯಾಸನನ್ನು ಆಧರಿಸಿ ತಾನು ತನ್ನ ಕಾವ್ಯವನ್ನು ರಚಿಸುತ್ತಿರುವುದಾಗಿ ಹೇಳಿದ್ದಾನೆ :

೨. ಅದೇ ಪು. ೪೪.

"ಮಜ ಸಂಸ್ಕೃತ ನಾಹೀ ಅಭ್ಯಾಸ
ಕರ್ನಾಟಕ ಕವಿ ಕುಮಾರವ್ಯಾಸ
ತ್ಯಾಂಚೇನೀ ಆಧಾರೆ ಗ್ರಂಥವಿಲಾಸ
ಪ್ರಾರಂಭಿಲಾ ಯಾ ಹೇತು."

ಈ ಕೃತಿಯಿಂದ ಕನ್ನಡದ ಮೇಲಿನ ಅವನ ಪ್ರಭುತ್ವ ಹಾಗೂ ಭಾಮಿನಿ ಷಟ್ಪದಿಯ ಪ್ರೀತಿ ಸ್ಪಷ್ಟವಾಗುವದು. ಇವನ ಕೃತಿಯೊಂದಿಗೆ ಷಟ್ಪದಿ ಕಾವ್ಯಗಳ ಮರಾಠಿ ಅನುವಾದ ಕಾರ್ಯ ಆರಂಭವಾಯಿತಲ್ಲದೆ 'ಪ್ರಭುಲಿಂಗಲೀಲೆ'ಯ ಮರಾಠಿ ಅನುವಾದವೂ ಲಭ್ಯವಾಯಿತು. ಬ್ರಹ್ಮದಾಸನೆಂಬ ೧೮ ನೆ ಶ.ದ ಕವಿ ಅದನ್ನು 'ವಿಶ್ವಂಭರಲೀಲಾ' ಹೆಸರಿನಲ್ಲಿ ಮರಾಠಿಗೆ ಪರಿವರ್ತಿಸಿದ್ದಾನೆ.

ಬೆಳಗಾವಿ ಜಿಲ್ಲೆಯ ಗುರ್ಲಹೊಸೂರಿನ ಚಿದಂಬರ ದೀಕ್ಷಿತರು ಕರ್ನಾಟಕ ಹಾಗೂ ಮಹಾರಾಷ್ಟ್ರದ ಜನರಿಗೆ ಪೂಜ್ಯವ್ಯಕ್ತಿಗಳಾಗಿದ್ದರು. ಮಹಾರಾಷ್ಟ್ರದ ಅನೇಕ ಸಂತರು ಅವರಲ್ಲಿ ಭಕ್ತಿಭಾವದಿಂದ ಬರುತ್ತಿದ್ದರು. ಅವರ ಜೀವನ ಚರಿತ್ರೆಯನ್ನು ವಿವರಿಸುವ ಮೂರು ಮರಾಠಿ ಕೃತಿಗಳು ದೊರೆಯುವವು. ಕರ್ನಾಟಕದ ಈ ಮಹಾಪುರುಷರಿಗೆ ಮಹಾರಾಷ್ಟ್ರದ ಜನತೆ ಹಾಗೂ ಕವಿಗಳಿಂದ ಸಂದ ಈ ಗೌರವ ಬಾಂಧವ್ಯಕ್ಕೆ ಉಚಿತ ನಿದರ್ಶನವಾಗಿದೆ.

ಚಿದಂಬರ ದೀಕ್ಷಿತರಂತೆಯೇ ಪ್ರಸಿದ್ಧರಾದ ಗುರು ಮಹಿಪತಿದಾಸರ (೧೬೫೦) ಜೀವನ ಚರಿತ್ರೆಯನ್ನು ೧೮ ನೆ ಶ.ದ ರುಕ್ಮಾಂಗದಾಸ – ರುಕ್ಮಜದಾಸನೆಂಬ ಸಂತ ಕವಿಯು "ಗುರುಮಾಲಿಕಾ" ಹೆಸರಿನಲ್ಲಿ ರಚಿಸಿದ್ದಾನೆ, ಮಹಿಪತಿದಾಸರ ಕೀರ್ತನೆಗಳ ಹಸ್ತಪ್ರತಿಯೊಂದು ಮರಾಠಿಯಲ್ಲಿ ಬರೆಯಲ್ಪಟ್ಟಿದೆ.

ವಿಠಬಾಯಿ ಮರಾಠಿಯ ಹಿರಿಯ ಅನುಭಾವಿ ಕವಯತ್ರಿ. ೪೦೦೦ ಪದ—ಅಭಂಗ ರಚಿಸಿದಳೆಂದು ಹೇಳುವರು. ಚಿದಂಬರ ದೀಕ್ಷಿತರ ಭಕ್ತೆ. ರಾಜಾರಾಮನೂ ಚಿದಂಬರ ದೀಕ್ಷಿತರ ಭಕ್ತ. ಚಿದಂಬರ ಲೀಲೆಯೇ ರಾಜಾರಾಮನ ಅಭಂಗದ ಮುಖ್ಯ ವಸ್ತು. ಅವನ ಅಭಂಗಗಳ ಹಸ್ತಪ್ರತಿ ಕಲಘಟಗಿಯಲ್ಲಿ ದೊರೆತುದಾಗಿ ತಿಳಿಯುತ್ತದೆ.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮೂಡಲಗಿ ಕರ್ನಾಟಕ ಹಾಗೂ ಮರಾಠಿ ಸಾಹಿತ್ಯಗಳ ದೃಷ್ಟಿಯಿಂದ ತುಂಬ ಮಹತ್ವದ ಸ್ಥಳ. ಭಾಷೆ, ಸಂಸ್ಕೃತಿ, ಸಾಹಿತ್ಯ ಮತ್ತು ವಿವಿಧ ಪರಂಪರೆಗಳ ಸಂಗಮ ಇದಾಗಿದೆ. ಮರಾಠಿ "ದೇಶಿಕ ಚರಿತ್ರೆ" ಇಲ್ಲಿಯೇ ರಚಿತವಾಗಿದೆ. ಈ ಸ್ವಾಮಿ ಪರಂಪರೆಯಲ್ಲಿ ದತ್ತ ಸಂಪ್ರದಾಯ, ವಿಠ್ಠಲೋಪಾಸನೆ, ರಾಮೋಪಾಸನೆ ಹಾಗೂ ವೀರಶೈವ ಮತದೊಂದಿಗಿನ ನಿಕಟ ಸಂಬಂಧದೊಂದಿಗೆ, ಸಿದ್ಧ–ನಾಥ ಸಂಪ್ರದಾಯದ ಪ್ರವಾಹವೂ ಕಾಣುವದು. ಇದೇ ಪರಂಪರೆಯಲ್ಲಿ ರಂಗಬೋಧ, ಅದ್ವಯಬೋಧ, ಶಿವಬೋಧರಲ್ಲದೆ

ಕೆಲವು ಕವಯತ್ರಿಯರು ಮರಾಠಿಯಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರಲ್ಲಿ ಅದ್ವಯಬೋಧರ ಮೂರು ಕನ್ನಡ ಪದಗಳು ದೊರೆಯುವವು. ಅವುಗಳಲ್ಲಿ "ಲಿಂಗ ಬಂದಾನೆ" ಪದ ಒಂದು. ಮೂಡಲಗಿಯ ಮರಾಠಿ ಸಾಹಿತ್ಯದತ್ತ ಮರಾಠಿ ಪಂಡಿತ ಡಾ. ಆವಳೀಕರ ಅವರ ಗಮನವನ್ನು ಸೆಳೆದವರು ಮಾನ್ಯ ಡಾ. ಬೆಟಗೇರಿ ಕೃಷ್ಣ-ಶರ್ಮರು.

× × × ×

ಕನ್ನಡದ ಇನ್ನೂ ಕೆಲವು ಪ್ರಾಚೀನ ಕೃತಿಗಳೂ ಮರಾಠಿಗೆ ಅನುವಾದವಾಗಿವೆ. ಜಗನ್ನಾಥದಾಸರ 'ಹರಿಕಥಾಮೃತಸಾರ'ವನ್ನು ಶೇಷಗಿರಿರಾಯರು (೧೮೬೮), ಲಕ್ಷ್ಮೀಶನ 'ಜೈಮಿನಿ ಭಾರತ'ವನ್ನು ಯಶವಂತ ಭಾಸ್ಕರ ಜಠಾರ ಅವರು ಮರಾಠಿಗೆ ಅನುವಾದಿಸಿದ್ದಾರೆ. ರತ್ನಾಕರವರ್ಣಿಯ ಭರತೇಶ ವೈಭವವು ಪಂಡಿತ ವರ್ಧಮಾನ ಶಾಸ್ತ್ರಿಗಳಿಂದ ಅನುವಾದಗೊಂಡಿದೆ. ಜಯದೇವಿತಾಯಿ ಲಿಗಾಡೆ ಅವರ 'ಸಿದ್ಧರಾಮ ತ್ರಿವಿಧಿ', ಬಸವಣ್ಣನವರ ಹಾಗೂ ಮಹಾದೇವಿಯಕ್ಕನ ವಚನಗಳ ಮರಾಠಿ ಅನುವಾದಗಳು ಗಮನಾರ್ಹ ಕೃತಿಗಳಾಗಿವೆ.

× × × ×

ಮರಾಠಿ ಭಾಷೆಯ ಪ್ರಭಾವ ಹಾಗೂ ಮರಾಠಿ ಕೃತಿಗಳ ಕನ್ನಡ ಅನುವಾದಗಳು ತುಂಬ ದಿನದಿಂದ ನಡೆದುದು ವಿಶೇಷ ಸಂಗತಿ. ಸೈಗೊಟ್ಟ ಶಿವಮಾರ (೮೦೦)ನ 'ಗಜಾಷ್ಟಕ'ವು ಓವನಿಗೆ–ಒನಕೆವಾಡು ಆಗಿದ್ದು ಓವನಿಗೆ ಹಾಗೂ ಮರಾಠಿ 'ಓವಿ' ಶಬ್ದಕ್ಕೆ ಸಂಬಂಧವಿರಬಹುದೆಂದು ಭಾವಿಸಲಾಗಿದೆ. ಚಾಲುಕ್ಯ ಸೋಮೇಶ್ವರನ 'ಅಭಿಲ-ಷಿತಾರ್ಥ ಚಿಂತಾಮಣಿ'ಯಲ್ಲಿ ಮರಾಠಿ ಜನಪದ ಗೀತೆಗಳ ತುಣುಕುಗಳು ಅಲ್ಲಲ್ಲಿ ಬಂದಿವೆಯೆಂದೂ ಅಭಿಪ್ರಾಯಪಡಲಾಗಿದೆ. ಮುಕುಂದರಾಜನ 'ವಿವೇಕಸಿಂಧು'ವನ್ನು ಮಹಾಲಿಂಗರಂಗ (೧೭ ಶ.) 'ಅನುಭವಾಮೃತ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾನೆ. ಗೋಪಕವಿ 'ಚಿತ್ರಭಾರತ'ವನ್ನು ಕನ್ನಡದಲ್ಲಿ ರಚಿಸಿದ್ದು, ಅದರ ಅರ್ಧಭಾಗದಲ್ಲಿ ಭಾರತ ಕಥೆಯನ್ನೂ, ಉಳಿದ ಅರ್ಧಭಾಗದಲ್ಲಿ 'ವತ್ಸಲಾಹರಣ'ದ ಪ್ರಸಂಗವನ್ನೂ ನಿರೂಪಿಸಿದ್ದಾನೆ. ಮರಾಠಿಯಲ್ಲಿ ಪ್ರಚಲಿತವಿದ್ದ ಈ ಕಥೆಯನ್ನು ಕನ್ನಡದಲ್ಲಿ ಬರೆದುದಾಗಿ ಹೇಳಿಕೊಂಡಿದ್ದಾನೆ

ಕನ್ನಡದ ಗಂಡುಕವಿಯಾದ ಕುಮಾರವ್ಯಾಸನ 'ಭಾರತ'ದಲ್ಲಿ ಅನೇಕ ಮರಾಠಿ ಪದಗಳು ಸಿಗುತ್ತವೆ. ಆದರಣೆ, ಘಡಾವಣೆ, ಜಾಣಪಣ, ವಿಸ್ತಾರಪಣ, ಶೌರ್ಯಪಣ ಮುಂತಾದ ಮರಾಠಿ ಪ್ರತ್ಯಯಾಂತ ಭಾವನಾಮ ಸೂಚಕ ಪದಗಳು ಬಳಕೆಯಾಗಿವೆ. ಪತಿಕರಿಸು (ಪತಿಕರಣೆ), ನಿವಡಿಸು (ನಿವಡಣೆ), ಖೇಪೆ (ಸಲ), ಖೋಳಿಮೇಳಿನೆ ಮೊದಲಾದ ಮರಾಠಿ ಪದಗಳೂ ಕಂಡುಬರುತ್ತವೆ.

ಮರಾಠಿ ಜ್ಞಾನೇಶ್ವರಿಯ ಹಲವಾರು ಕನ್ನಡ ಅನುವಾದಗಳು ಉಪಲಬ್ಧವಿದೆ. ಅದರಲ್ಲಿ ಷಟ್ಪದಿ ರೂಪದ ಅನುವಾದವೂ ಒಂದು. ಮೂಲ ಮರಾಠಿ ಜ್ಞಾನೇಶ್ವರಿ

ಯಲ್ಲಿ ಬರುವ ನೀಚ, ಚೋಖ (ಚೊಕ್ಕ), ಸಾನ (ಸಣ್ಣ), ದಿಟ (ದಿಟ್ಟಿ). ಜೇಟಿ (ಜಟ್ಟಿ), ಕನ್ನಡ ಪದದ ರೂಪಗಳು ಜೇಜೂರಿಯ ಖಂಡೋಬನ ಪೂಜೆಯ ವೇಳೆ ಯಲ್ಲಿ ಹೇಳುವ 'ಉದೋ' ಹಾಗೂ 'ಎಲ್ಕೊ ಮಲ್ಹಾರ' (ಏಳು ಕೋಟಿ ಮಲ್ಲಾರಿ) ಪದಗಳೂ ಕನ್ನಡದವು. ಮರಾಠಿಯ ಅಕ್ಕಾ, ಅತ್ಯಾ ಸಂಬಂಧ ಸೂಚಕ ಪದಗಳು ಕನ್ನಡದ ಅಕ್ಕ, ಅತ್ತೆಗಳಾಗಿವೆ. ಡಾ. ಶಂ. ಬಾ. ಜೋಶಿ ಅವರು ಹಾಗೂ ಕೃ. ಪಾ. ಕುಲಕರ್ಣಿ ಅವರು ಇತರ ಕೆಲವು ಕನ್ನಡ ಪದಗಳನ್ನು ಗುರುತಿಸಿದ್ದಾರೆ. ಇಂದಿಗೂ ಮಹಾರಾಷ್ಟ್ರದ ಗಡಿಪ್ರದೇಶದ ಜನ ಬಳಸುವ ಪೋರ (ಪೋರ), ಕಪಡ (ಕಪ್ಪಡ) ಪದಗಳು ಹಳಗನ್ನಡ ಪದಗಳ ರೂಪಗಳಾಗಿವೆ.

ಹಾತಕಣಗಲೆ ತಾಲೂಕಿನ (ಕೊಲ್ಲಾಪುರ) ಅಲತಗಿಯ ಪಾರ್ಶ್ವನಾಥ ತೀರ್ಥಂಕರ ಮಂದಿರದಲ್ಲಿ ಬರೆಯಲಾದ ಕನ್ನಡ 'ಪಂಪರಾಮಾಯಣ'ದ ಹಸ್ತಪ್ರತಿ, ಸಾಂಗ್ಲಿ ಜಿಲ್ಲೆಯ ಸಮಡೊಳ್ಳಿ ಉಪಾಧ್ಯಾಯರ ಜಿನ್ನಪ್ಪನ ಮಗ ಆದಪ್ಪನು ಬರೆದ 'ಪಂಚತಂತ್ರ'ದ ಹಸ್ತಪ್ರತಿ ದೊರೆತಿವೆ. ಕರ್ನಾಟಕದಲ್ಲಿ ದೊರೆತ ಮರಾಠಿ ಹಸ್ತ ಪ್ರತಿಗಳಲ್ಲಿ 'ಹನುಮಾನಪುರಾಣ'ವು ಕನ್ನಡ ಲಿಪಿಯಲ್ಲಿದೆ. ಕೊಲ್ಲಾಪುರ, ಕಾರಂಜಾ ಮೊದಲಾದ ಸ್ಥಳಗಳಲ್ಲಿ ಅನೇಕ ಕನ್ನಡ ಜೈನ ಕೃತಿಗಳ ಹಸ್ತಪ್ರತಿಗಳನ್ನು ಸುರಕ್ಷಿತ ವಾಗಿ ಸಂಗ್ರಹಿಸಿಡಲಾಗಿದೆ.

× × × ×

ಆಧುನಿಕ ಸಾಹಿತ್ಯದ ವಿವಿಧ ರೂಪಗಳಲ್ಲಿಯೂ ಕನ್ನಡ–ಮರಾಠಿ ಸಾಹಿತ್ಯಗಳ ಮಧುರ ಬಾಂಧವ್ಯಕ್ಕೆ ಅನೇಕ ಉದಾಹರಣೆಗಳು ದೊರೆಯುವವು. ಕನ್ನಡ ಕಾದಂಬರಿಗಳ ಬೆಳವಣಿಗೆಯ ಆರಂಭಕಾಲಕ್ಕೆ ಗಳಗನಾಥರಿಂದ ಅನೇಕ ಮರಾಠಿ ಕಾದಂಬರಿಗಳ ಕನ್ನಡ ಅನುವಾದಗಳು ದೊರೆತವು. "ಬಂಧನಾಚಾ ಪಲಕಡೆ"ಯನ್ನು ಪದ್ಮರಾಜ ಹುನಗುಂದ ಅವರು 'ಬಂಧನದಾಚೆ' ಹೆಸರಿನಲ್ಲಿ ಕನ್ನಡಕ್ಕೆ ತಂದರು. ಹ. ನಾ. ಆಪ್ಟೆಯವರ "ಪಣಕೋನ ಲಕ್ಷಾತ ಘೇತೊ" ಕಾದಂಬರಿಯನ್ನು 'ಯಾರು ಲಕ್ಷಿಸುವರು' ಹೆಸರಿನಲ್ಲಿ ಶಿವರಾಮ ಕಾರಂತರು ಕನ್ನಡಕ್ಕೆ ಅನುವಾದಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ ವಿಜೇತ ವಿ. ಸ. ಖಾಂಡೇಕರರ "ಕೌಂಚವಧ"ವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಅನುವಾದಿಸಿದ್ದಾರೆ. ಅವರ 'ಯಯಾತಿ' 'ಕಾಂಚನಮೃಗ'ಗಳೂ ಕನ್ನಡಕ್ಕೆ ಅನುವಾದಿತವಾಗಿವೆ. ರಣಜಿತ ದೇಸಾಯಿ ಅವರ 'ಸ್ವಾಮಿ' ಸಾನೆ ಗೂರೂಜಿ ಅವರ 'ಶ್ಯಾಮನ ತಾಯಿ' ಕನ್ನಡಕ್ಕೆ ಬಂದಿವೆ. ಪು. ಯ. ದೇಶಪಾಂಡೆ ಅವರ 'ಸುಖಲೇಲಫೂಲ' ಕಾದಂಬರಿ ಎಸ್. ಪಿ. ಪಾಟೀಲರಿಂದ ಅನುವಾದಿತವಾಗಿ ನ್ಯಾಶನಲ್ ಬುಕ್ ಟ್ರಸ್ಟಿನ ಮೂಲಕ ಅಚ್ಚಾ ಗುತ್ತಲಿದೆ. 'ಗಾಂಧಿ ಹತ್ಯೆ ಮತ್ತು ನಾನು' 'ರುಚಿರಾ' 'ಮರಾಠಿ ಕಥಾಕನಜ' 'ಹೆಣ್ಣು ಮತ್ತು ಇತರ ಮರಾಠಿ ಅನುವಾದಿತ ಕಥೆಗಳು' ಮೊದಲಾದ ಅನೇಕ ಕೃತಿಗಳು ಕನ್ನಡಕ್ಕೆ ಬಂದಿವೆ.

ಕನ್ನಡದ ಪ್ರಸಿದ್ಧ ಕೃತಿಗಳು ಮರಾಠಿಗೆ ಅನುವಾದವಾಗಿವೆ. ಕಾರಂತರ 'ಮರಳಿ ಮಣ್ಣಿಗೆ' ಮಾಸ್ತಿಯವರ 'ಸುಬ್ಬಣ್ಣ' ಅನಂತಮೂರ್ತಿಯವರ 'ಸಂಸ್ಕಾರ'ಗಳ ಮರಾಠಿ ಅನುವಾದಗಳು ಪ್ರಕಟವಾಗಿದ್ದು, ಡಾ. ಹಾ. ಮಾ. ನಾಯಕರ 'ನಮ್ಮ ಮನೆಯ ದೀಪ'ವು 'ದೀಪ ಜಳೆ ಆಮುಚ್ಯಾಘರಿ' ಹೆಸರಿನಲ್ಲಿ ಎಸ್. ಪಿ. ಪಾಟೀಲರಿಂದ ಅನುವಾದಿತವಾಗಿದ್ದು ಅಚ್ಚಾಗಲಿದೆ. ಡಾ. ಎ. ಆರ್. ತೋರು ಅವರು 'ಕನ್ನಡ ನವಕಥಾ' ಎಂಬ ಕನ್ನಡ ನವ ಕಥೆಗಳ ಪ್ರಾತಿನಿಧಿಕ ಸಂಕಲನದ ಮರಾಠಿ ಅನುವಾದವನ್ನು ಪ್ರಕಟಿಸಿದ್ದಾರೆ. ಬೆಳಗಾವಿಯ ಶ್ರೀ ಜೋಶಿ ಅವರು ಡಾ. ಬೇಂದ್ರೆ ಅವರ 'ನಾಕು ತಂತಿ'ಯನ್ನು ಮರಾಠಿಗೆ ಅನುವಾದಿಸಿದ್ದಾರೆ. ಕನ್ನಡದ ಖ್ಯಾತ ಕವಿ ಡಾ. ದ. ರಾ. ಬೇಂದ್ರೆ ಅವರ ಮರಾಠಿ ಕೃತಿ 'ಸಂವಾದ'ಕ್ಕೆ ೧೯೬೫ರಲ್ಲಿ ಮಹಾರಾಷ್ಟ್ರದ ಕೇಳಕರ ಪಾರಿತೋಷಕ ಸಂದಿದೆ. ಆಧುನಿಕ ಮರಾಠಿಯ ಖ್ಯಾತಕವಿ ಕೇಸವಸುತರು ಧಾರವಾಡದ ಸರಕಾರಿ ಶಾಲೆಯಲ್ಲಿ ಶಿಕ್ಷಕರಾಗಿದ್ದು ಕಾವ್ಯ ರಚಿಸಿದ್ದಾರೆ. ಅದರಂತೆ ಮರಾಠಿಯ ಇಂದಿನ ಶ್ರೇಷ್ಠ ಕತೆಗಾರರಾದ ಜಿ. ಎ. ಕುಲಕರ್ಣಿ ಅವರು ಧಾರವಾಡದ ಜನತಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಕವಿ ನಿಕುಂಬರು ಬೆಳಗಾವಿಯಲ್ಲಿಯೂ, ಡಾ. ಆವಳೀಕರರು ಧಾರವಾಡದಲ್ಲಿಯೂ, ಡಾ. ರಂ. ಶ್ರೀ. ಮುಗಳಿಯವರು ಮಹಾರಾಷ್ಟ್ರದ ಸಾಂಗಲಿಯಲ್ಲಿಯೂ ಇದ್ದು ಮರಾಠಿ–ಕನ್ನಡಗಳಲ್ಲಿ ಕೃತಿ ರಚನೆ ಮಾಡಿದ್ದಾರೆಂಬುದು ಅಭಿಮಾನಾಸ್ಪದ ಸಂಗತಿ.

× × × ×

ಮರಾಠಿ ನಾಟಕಗಳು ಕನ್ನಡ ನಾಟಕಗಳಿಂದಲೇ ಹುಟ್ಟಿದವು. ಉತ್ತರ ಕರ್ನಾಟಕದ ನಾಟಕಗಳ ಪ್ರಯೋಗ ಸಾಂಗಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ ಆಗುತ್ತಿದ್ದುದರಿಂದ ಅವುಗಳ ಪ್ರೇರಣೆಯಿಂದ ಕಿರ್ಲೋಸ್ಕರ ಕಂಪನಿ ರೂಪಗೊಂಡಿತು. ಕಿರ್ಲೋಸ್ಕರರೂ ಕರ್ನಾಟಕದ ಗುರ್ಲಹೊಸೂರಿನವರೇ. ಮುಂದೆ ಮರಾಠಿ ರಂಗಭೂಮಿ ಅಭಿವೃದ್ಧಿಹೊಂದಿ ತಿರುಗಿ ಕರ್ನಾಟಕದಲ್ಲಿ ಜನಪ್ರಿಯವಾಗಹತ್ತಿದವು. ಇಂದಿಗೂ ಬೆಳಗಾವಿ, ಧಾರವಾಡ–ಹುಬ್ಬಳ್ಳಿಗಳಲ್ಲಿ ಮರಾಠಿ ನಾಟಕಗಳ ಪ್ರಯೋಗಗಳಾಗುತ್ತಿರುವದು ಇದಕ್ಕೆ ಸಾಕ್ಷಿ. ಅದರಂತೆ ಕನ್ನಡ ನಾಟಕಗಳು ಸಾಂಗಲಿ, ಕೊಲ್ಲಾಪುರ – ಇಚಲಕರಂಜಿಗಳಲ್ಲಿ ಯಶಸ್ವಿಯಾಗಿ ಪ್ರಯೋಗಿಸಲ್ಪಡುತ್ತಿವೆ. ಕೈಲಾಸಂ ಮತ್ತು ಕಾರ್ನಾಡರ ನಾಟಕಗಳು ಮರಾಠಿಯಲ್ಲಿ ಅಭಿನಯಿಸಲ್ಪಡುವಂತೆ ಮರಾಠಿಯ ವಿಜಯ ತೆಂಡೂಲಕರರ 'ಶಾಂತತಾ ಕೋರ್ಟ ಚಾಲೂ ಆಹೆ' 'ಸಖಾರಾಮ ಬೈಂಡರ'ಗಳ ಕನ್ನಡ ಅನುವಾದಗಳು ಅಭಿನಯಿಸಲ್ಪಟ್ಟಿವೆ.

ಕನ್ನಡದ ಲಾವಣಿ-ಗೊಂದಲಿಗರ ಹಾಡುಗಳು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿಂದ ಮತ್ತೆ ತಿರುಗಿ ಕರ್ನಾಟಕಕ್ಕೆ ಬಂದಂತಿವೆ. ಅವೆರಡರಲ್ಲಿಯೂ ಪರಸ್ಪರ ಕೊಡು – ಕೊಳುವಿಕೆಯನ್ನು ಗುರುತಿಸಬಹುದಾಗಿದೆ. ಕೀರ್ತನಕಾರರಲ್ಲಿ ಬೆಳಗಾವಿ ಜಿಲ್ಲೆಯ ಶಮನೇವಾಡಿಯ ಸುಬ್ರಾವ ಖೋತ ಹಾಗೂ ಮಹಾರಾಷ್ಟ್ರದ

ಸಾಂಗಲಿ ಜಿಲ್ಲೆಯ ತಾತ್ಯಾ ಚ್ಕೋಪಡೆ ಅವರು ಕನ್ನಡ-ಮರಾಠಿ ಎರಡೂ ಭಾಷೆಯ ಕೀರ್ತನಗಳಿಂದ ಎರಡೂ ಪ್ರದೇಶದ ಜನರನ್ನು ಅನೇಕ ಕಾಲದವರೆಗೆ ರಂಜಿಸಿದ್ದಾರೆ. ಶೇಡಬಾಳದ ಆದಿಸಾಗರ ಮಹಾರಾಜರು ಕನ್ನಡ ಲಾವಣಿಗಳನ್ನು ರಚಿಸಿ, ನೆರೆಯ ಮರಾಠಿ ಜನರಿಗೂ ಓದಲು ಅನುಕೂಲವಾಗಲೆಂದು ದೇವನಾಗರಿ ಲಿಪಿಯಲ್ಲಿ ಮುದ್ರಿಸಿ ಎರಡೂ ಭಾಷೆ-ಸಾಹಿತ್ಯಗಳ ಬಾಂಧವ್ಯದ ದೃಷ್ಟಿಯಿಂದ ಆದರ್ಶ ಪರಂಪರೆಯನ್ನು ನಿರ್ಮಿಸಿದುದು ಉಲ್ಲೇಖನೀಯ.

ಇಂಗ್ಲೀಷರ ಆಳಿಕೆಯ ಆರಂಭದೊಂದಿಗೆ ಉತ್ತರ ಕರ್ನಾಟಕದಲ್ಲಿ ಪತ್ರಿಕೆಗಳು ಆರಂಭವಾದುದು ಕಂಡು ಬರುವದು. ಅವುಗಳಲ್ಲಿ ಬಹಳಷ್ಟು ಮರಾಠಿ ಅಥವಾ ದ್ವಿಭಾಷಾ ಪತ್ರಿಕೆಗಳಾದುದು ವಿಶೇಷ ಸಂಗತಿ. ಲೋಕಮಾನ್ಯ ಟಿಳಕರ 'ಕೇಸರಿ' ಅಂದು ತುಂಬ ಪ್ರಭಾವಿ ಪತ್ರಿಕೆಯಾಗಿದ್ದು, ಅದನ್ನು ಕನ್ನಡ-ಮರಾಠಿಗರೆಲ್ಲರೂ ಅಭಿಮಾನದಿಂದ ಓದುತ್ತಿದ್ದ ಕಾಲವದು. ಇಂದಿಗೂ ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕಸ್ವಾಮಿ ಅವರು ಪ್ರಕಟಿಸುವ 'ರತ್ನತ್ರಯ' ಕನ್ನಡ-ಮರಾಠಿ-ಹಿಂದಿ ಮೂರು ಭಾಷೆಯಲ್ಲಿದ್ದು ಬಾಂಧವ್ಯಕ್ಕೆ ಉದಾಹರಣೆಯಾಗಿದೆ. ಕೊಲ್ಲಾಪುರ ಜಿಲ್ಲೆಯ ಬಾಹುಬಲಿ ಸಂಸ್ಥೆ ಕನ್ನಡ-ಮರಾಠಿ ಎರಡೂ ಭಾಷೆಗಳಲ್ಲಿ ಪ್ರತ್ಯೇಕವಾಗಿ 'ಸನ್ಮತಿ' ಮಾಸಪತ್ರಿಕೆಯನ್ನೂ ಕನ್ನಡ-ಮರಾಠಿ ಗ್ರಂಥಗಳನ್ನೂ ಪ್ರಕಟಿಸುತ್ತಿದೆ. ಸೊಲ್ಲಾಪುರದ ಜೀವರಾಜ ಗ್ರಂಥಮಾಲೆಯೂ ಕನ್ನಡ-ಮರಾಠಿ ಎರಡೂ ಭಾಷೆಯ ಗ್ರಂಥಗಳನ್ನು ಪ್ರಕಟಿಸುತ್ತಿದೆ.

ಡಾ. ದ. ರಾ. ಬೇಂದ್ರೆ, ಡಾ. ಶಂ. ಬಾ. ಜೋಶಿ, ಡಾ. ಬೆಟಗೇರಿ ಕೃಷ್ಣಶರ್ಮ, ಡಾ. ರಂ. ಶ್ರೀ ಮುಗಳಿ, ಶ್ರೀಮಂತಿ ಜಯದೇವಿತಾಯಿ ಲಿಗಾಡೆ: ಅವರು ಕನ್ನಡ-ಮರಾಠಿಗಳ ಬಾಂಧವ್ಯದ ಅರಿವನ್ನು ಜಾಗೃತಗೊಳಿಸಲು ಶ್ರಮಿಸಿರುವಂತೆ, ಮರಾಠಿಯ ಡಾ. ಪಂಡಿತ ಆವಳೀಕರರೂ ಪ್ರಯತ್ನಿಸಿರುವದುಂಟು. ಅವರ 'ಕರ್ನಾಟಕ ಮತ್ತು ಮರಾಠಿ ಸಾಹಿತ್ಯ' ಕೃತಿಯನ್ನು ಎಸ್. ಪಿ. ಪಾಟೀಲರು ಕನ್ನಡಕ್ಕೆ ಅನುವಾದಿಸಿದ್ದು, ಅದು ಕನ್ನಡ-ಮರಾಠಿಗಳ ಸಾಹಿತ್ಯಿಕ ಸಂಬಂಧವನ್ನು ವಿವೇಚಿಸುವ ಕೃತಿ ಎಂಬುದಾಗಿ ಗುರುತಿಸಲ್ಪಡುತ್ತಿದೆ. ಅದರಂತೆ ಇದೇ ಅನುವಾದಕರ 'ಹೆಣ್ಣು ಮತ್ತು ಇತರ ಅನುವಾದಿತ ಕಥೆಗಳು' ಮರಾಠಿ ಮಹಿಳೆಯರ ಉತ್ತಮ ಕಥೆಗಳನ್ನು ಕನ್ನಡ ಓದುಗರಿಗೆ ಪರಿಚಯಿಸುವ ಸಾರ್ಥಕ ಪ್ರಯತ್ನವೆಂದು ಪರಿಗಣಿಸಲ್ಪಟ್ಟಿದೆ. ಡಾ. ಎ. ಆರ್. ತೋರು ಅವರ ಈ ಕ್ಷೇತ್ರದ ಕಾಣಿಕೆಯೂ ವಿಶೇಷವಾದುದು. ಹೀಗೆ ತುಂಬ ಹಿಂದಿನಿಂದ ಇಂದಿನವರೆಗೂ ಎರಡೂ ಭಾಷೆಗಳ-ಸಾಹಿತ್ಯ ಸಂಬಂಧ ನಿಕಟವಾಗಿದ್ದರೂ ಈ ಎರಡು ಭಾಷೆಗಳ ತೌಲನಿಕ ಅಧ್ಯಯನದ ವ್ಯಾಪ್ತಿ ಸಾಹಿತ್ಯೇತರ ಕಾರಣಗಳಿಂದ ಕುಂಠಿತಗೊಂಡಿದೆಯೋ ಏನೋ ಎಂಬ ಭಾವನೆಯುಂಟಾಗುವಂತಿದೆ. ಅದು ಮರೆಯಾದಲ್ಲಿ ಈ ವಿಷಯದ ಮೇಲೆ ಇನ್ನಿಷ್ಟು ಬೆಳಕು ಬೀಳುವದು ಸಾಧ್ಯ.

ಎರಡು ಬೈಲೊ-ರಶ್ಯನ್ ಪದ್ಯಗಳು

ಅನು : ಬುದ್ದಣ್ಣ ಹಿಂಗಮಿರೆ

ಕೋಟೆ ಗೋಡೆಯ ಕಲ್ಲುಗಳು

ನಿಶ್ಯಕ್ತ ನರಗಳಂತೆ ಮಿಡಿಯುವ,
ಬುವಿಯ ಕಪೋಲದ ಮೇಲೆ ಬಿದ್ದಿರುವ
ನಾವು, ಒಮ್ಮೆ —

ಭದ್ರ, ಅಜೇಯ ಕೋಟೆಯ ಗೋಡೆಯಾಗಿದ್ದೆವು
ಜೀವಂತ.
ನಮ್ಮ ವಿಪರೀತ ಸಿಟ್ಟಿನಿಂದ
ಶಪಿತರಾದವರು, ಬಿದ್ದಿದ್ದೇವೆ ಇಂದು
ಕಲ್ಲಾಗಿ.

ನಿಗಿ ನಿಗಿ ಬೆಂಕಿಯಲ್ಲಿ ಸುಟ್ಟವರು ನಾವು,
ರಕ್ತ ಹೀರಿದ ಇಟ್ಟಿಗೆಗಳಾಗಿ,
ಕೊಳೆಯಾಗಿದ್ದೇವೆ ಮತ್ತೆ.

ನಮ್ಮ ಅಂತಿಮ ಇಚ್ಛೆಯೊಂದೇ
ನಿಮಗಾಗಿ ಶಾಂತಿ ಹಾಗೂ–
ಶುಭ.

—ರ್‍ಯಾಗಲ್ ಬರಾದುಲಿನ್

× × × ×

ಮೊದಲಿನಂತೆಯೆ ನಮ್ಮ ಸುತ್ತ
ಎಲ್ಲ ಸಂದರ್ಭಗಳಲ್ಲಿ;
ಸುತ್ತುತ್ತವೆ ದಣಿವಿಲ್ಲದೆ
ಈ ಕಾಡಕುದುರೆಗಳು.

ಭಾವಿಸಿರಬಹುದು ನೀವು, ಇನ್ನೂ
    ನಾ ಮೊದಲಿನಂತೆಯೆಂದು;
ಇನ್ನೂ ವಸಂತ ಋತುವನ್ನು
    ಪ್ರೀತಿಸುವ ಯುವತಿಯೆಂದು.

ಉಜ್ವಲ ಕಾಂತಿಯು ಕಳೆದುಕೊಂಡಿರುವ
    ನನ್ನೀ ಕಣ್ಣುಗಳು:
ಹಲವು ಗೆರೆ ಮೂಡಿವೆ ನಿಚ್ಚಳ
    ನನ್ನ ತುಟಿಗಳ ಸುತ್ತ.

ಚಕಿತಗೊಂಡಿರುವ ಕುದುರೆಗಳು
    ನನ್ನ ಹೊಸ್ತಿಲ ಬಳಿಯಲ್ಲಿ;
ಅಲ್ಲಾಡಿಸಿ ಆಯಾಲು, ಹೆಣೆಯುತ್ತಿವೆ
    ಡರ್ಘುನ್ನು ಸಂಕೋಲೆಗಳ.

—ದನುತಾ–ಬಿಚಿಲ್–ರ್ಝಾಗ್ನೆತಾ

ಶೂನ್ಯಸಂಪಾದನೆ

ಎಸ್. ಎಂ. ವೃಷಭೇಂದ್ರಸ್ವಾಮಿ

ಶಿವಶರಣರ ಕ್ರಾಂತಿ ವಿಚಾರಗಳ- ಆತ್ಮಶುದ್ಧಿ, ಅನುಭಾವ, ಹಾಗೂ ಸಾಮಾಜಿಕ ಮಾರ್ಗದರ್ಶನ-ದ ಅಧಿಕೃತ ದಾಖಲೆಗಳು ಅವರ ಸ್ವಯವಚನಗಳು. ವ್ಯಕ್ತಿತ್ವ ಸಿದ್ಧಿಯನ್ನು ಸಾಧಿಸಿದ ಚೇತನದ ಉಕ್ಕಂದಗಳಾಗಿ ಅನುಭಾವದ ಅಂತರಂಗವನ್ನು ಬಿಂಬಿಸುವ ನುಡಿಗಡಣವಾಗಿ, ಹಾಗೂ ಪರಿಸರದ ಬದುಕಿನ ಜ್ವಲಂತ ಚಿತ್ರಣವಾಗಿರುವ ವಚನಗಳು, ಜಗತ್ತಿನ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟತೆಯನ್ನು ಸಾಧಿಸಿವೆ. ಕಳೆದ ಎಂಟು ಶತಮಾನಗಳ ಜನಜೀವನದ ಮೇಲೆ ಪ್ರಭಾವವನ್ನು ಬೀರಿ, ನಮ್ಮ ಇಂದಿನ ವೈಜ್ಞಾನಿಕ ಯುಗಕ್ಕೂ ಆವಶ್ಯಕ ಹಾಗೂ ಮಾರ್ಗದರ್ಶಕವಾಗಬಲ್ಲ ಸ್ವಯಂ ಸತ್ವವನ್ನು ಪಡೆದಿರುವ ವಚನಗಳು ನಮ್ಮ ಗಂಭೀರ ಚಿಂತನೆಯನ್ನು ಆಹ್ವಾನಿಸುತ್ತಿವೆ. ಇವುಗಳನ್ನು ಆಧರಿಸಿ ಮೂಡಿ ಬಂದ ಕನ್ನಡ ಕಾವ್ಯ, ಪುರಾಣ, ಚಾರಿತ್ರ, ವ್ಯಾಖ್ಯಾನಗಳು ಸಮಗ್ರ ಅಧ್ಯಯನವನ್ನು ಪ್ರೇರೇಪಿಸುತ್ತಿವೆ. ಪರಂಪರೆಯ ದೃಷ್ಟಿ ಹಿಂದಾಗಿ, ಮೌಲಿಕ ವಿಮರ್ಶೆ, ಸಮಕಾಲೀನತೆಯ ಅನ್ವೇಷಣೆ, ಸಾರ್ವಕಾಲೀನತೆಯ ಸಂಶೋಧನೆ ಇಂದು ನಡೆಯಬೇಕಾಗಿದೆ. ಧಾರ್ಮಿಕ ಕೋಟೆಯ ಗೋಡೆಗಳನ್ನು ಒಡೆದು, ಮುಕ್ತವಿವೇಚನೆ, ತೌಲನಿಕ ಪರಿಶೀಲನೆಗಳತ್ತ ನಮ್ಮ ಗಮನ ಹರಿಯಬೇಕಾಗಿದೆ. ಆಧುನಿಕ ಆವಶ್ಯಕತೆ ಹಾಗೂ ಮಾನದಂಡಗಳನ್ನು ಬಳಸಿ, ಅಧ್ಯಯನ ಹಾಗೂ ಸಂಶೋಧನೆ ಕೈಕೊಂಡು, ನಮ್ಮ ಹಿಂದಿನ ಸಾಹಿತ್ಯವನ್ನು ಕರಗಿಸಿ, ಕಡಿಹಕ್ಕಿ ಬಡಿಹಕ್ಕಿ ತಂದು, ಅದರ ಶುದ್ಧ ಮೌಲಿಕತೆಯನ್ನು ಗುರುತಿಸಬೇಕಾಗಿದೆ. ಇದು ನಮ್ಮ ಜೀವನಾಲೋಕನದ- ಅದರಲ್ಲೂ ಮುಖ್ಯವಾಗಿ ನಮ್ಮ ಸಾಹಿತ್ಯಾವಲೋಕನದ ಆವಶ್ಯಕತೆಯಾಗಿದೆ. ಅನಿವಾರ್ಯವೂ ಆಗಿದೆ.

ಕ್ರಾಂತಿಯುಗದ ವೀರಶೈವ ಶರಣರ ವಿಚಾರಧಾರೆ, ವಚನ ಸಂಗ್ರಹ, ಸಂಪಾದನೆ, ವ್ಯಾಖ್ಯಾನಗಳ ಮೂಲಕ ಉಳಿದು ಬಂದಿದೆ, ಬೆಳೆದೂ ಬಂದಿದೆ. ಹನ್ನೆರಡನೆಯ ಶತಮಾನ ವಚನ ಸೃಷ್ಟಿಯುಗವಾದರೆ, ಮುಂದಿನ ಶತಮಾನಗಳು-ಮುಖ್ಯವಾಗಿ ಹದಿನೈದು, ಹದಿನಾರನೆಯ ಶತಮಾನಗಳು-ವಚನ ಸಂಪಾದನೆ ಹಾಗೂ ವ್ಯಾಖ್ಯಾನ ಯುಗ. ಮಹಲಿಂಗದೇವ, ಜಕ್ಕಣಾರ್ಯ, ಕಲ್ಲುಮಠದ ಪ್ರಭುದೇವ, ಗುಬ್ಬಿ ಮಲ್ಲಣಾರ್ಯ, ಮಗ್ಗೆಯ ಮಾಯಿದೇವ, ಸಿಂಗಳದ ಸಿದ್ಧಬಸವರಾಜ ಮುಂತಾದವರು

ವಚನಗಳನ್ನು ಸ್ಥಲಕಟ್ಟುಗಳಾಗಿ ಸಂಪಾದಿಸಿದರು, ವ್ಯಾಖ್ಯಾನಗಳನ್ನೂ ಬರೆದರು.[೧] ಅವರ ನಿಷ್ಠೆ, ಅನ್ವೇಷಣೆ, ಸಮನ್ವಯ ದೃಷ್ಟಿಗಳಿಂದ ಪ್ರೇರಿತನಾಗಿ ಶಿವಗಣಪ್ರಸಾದಿ ಮಹಾದೇವಯ್ಯ 'ಶೂನ್ಯ ಸಂಪಾದನೆ' ಯನ್ನು ರೂಪಿಸಿದ. ಶಿವಶರಣರ ವಚನಗಳಲ್ಲಿ ಮಿಣುಕುತ್ತಿರುವ ಅನುಭಾವದ ಸ್ಫುರಣವನ್ನೂ ಆಶ್ರಯಿಸಿ, ಸಂಯೋಜಿಸಿ, ಅರ್ಥೈಸಿ ಭಾವಪೂರ್ಣ ತತ್ವವಿಚಾರ ಕಾವ್ಯವನ್ನೂ ನೀಡಿದ ಪ್ರತಿಭಾಸಂಪನ್ನ ಈ ಶಿವಗಣ ಪ್ರಸಾದಿ. ಶಿವಶರಣರ ತತ್ವಜ್ಞಾನಕ್ಕೆ ಅಧಿಕೃತ ಗ್ರಂಥವಾಗಿ, ಶರಣ ಸಮುದಾಯದ ಚಾರಿತ್ರ ಚಿತ್ರಣದ ಕಾವ್ಯವಾಗಿ, ಅಲ್ಲಲ್ಲಿ ರಸ-ಭಾವ ಪ್ರೇರಕ ವರ್ಣನೆ, ಸಂಭಾಷಣೆ ಹಾಗೂ ಸನ್ನಿವೇಶ ವರ್ಣನೆಯ ಕೃತಿಯಾಗಿ, ಮಾನವನ ಚಿರಂತನ ಜ್ವಲಂತ ಸಮಸ್ಯೆ ಗಳ ಪ್ರಾತಿನಿಧಿಕ ಗ್ರಂಥವಾಗಿ, ಕನ್ನಡಕ್ಕೊಂದು ಹೆಮ್ಮೆಯಾಗಿ, ವಿಶ್ವವಿಚಾರಸಾಹಿತ್ಯ ಕ್ಕೊಂದು ಮಹತ್ವದ ಕೊಡುಗೆಯಾಗಿ ಸೃಷ್ಟಿಯಾಗಿದೆ 'ಶೂನ್ಯಸಂಪಾದನೆ'. ಅಲ್ಲದೆ ಅದು ನಿಂತ ನೀರಾಗದೆ, ಮುಂದಿನವರ ಸಂಸ್ಕರಣಗಳಲ್ಲಿ ವಿಷಯ ಸ್ಪಷ್ಟತೆ-(ಕೆಲವೊಮ್ಮೆ ಅನವಶ್ಯಕವಾಗಿ ಲಂಬಿಸಿ) ಶಿವಶರಣರ ವಿಚಾರ ಸಮಗ್ರತೆಯನ್ನು ಅಳವಡಿಸಿಕೊಂಡು ಪರಿಪೂರ್ಣತೆಯನ್ನು ಸಾಧಿಸಿದೆ. ಕೆಂಚವೀರಣ್ಣೊಡೆಯ (?), ಹಲಗೆ ದೇವರು, ಗುಮ್ಮಳಾಪುರದ ಸಿದ್ಧಲಿಂಗಯತಿ, ಗೂಳೂರು ಸಿದ್ಧವೀರಣ್ಣೊಡೆಯರ ಪರಿಷ್ಕರಣ ಗಳಿಂದಾಗಿ ಶೂನ್ಯಸಂಪಾದನೆ ಇಂದಿನ ಪೂರ್ಣ ಆಕಾರ ಪಡೆದಿದೆ. 'ಇದು ಪರಮ ಗುರುಮತ, ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನ, ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ ವೇದಾಂತ ಶಿರೋಮಣಿ... ಇದು ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣರಸಾಮೃತಪ್ರಸನ್ನಪ್ರಸಾದ ಇದು ಅಜ್ಞಾನ ತಿಮಿರಾಂಜನ ತಂತ್ರ ಮಪ್ಪ ಪ್ರಭುದೇವರ ಶೂನ್ಯ ಸಂಪಾದನೆ' ಎಂಬ ಹೇಳಿಕೆ ಕೃತಿಯ ಗುರಿ. ಹಾಗೂ ಕೃತಿಕರ್ತನ ಉದ್ದೇಶಗಳನ್ನು ಸ್ಪಷ್ಟಗೊಳಿಸುತ್ತದೆ. ಶೂನ್ಯಸಂಪಾದನೆಯ ಪ್ರಕಾರ, ಈ ಎಲ್ಲ ತಾತ್ವಿಕತೆಯ ನೆಲಗಟ್ಟು ಪ್ರಭುದೇವನ ವಚನಗಳು. ಷಟ್‌ಸ್ಥಲ ವಿವೇಚನೆಯ ಪ್ರಸಂಗದಲ್ಲಿಯಂತೂ ಪ್ರಭು ವಚನಗಳೇ ಪ್ರಮುಖ ಆಧಾರಗಳಾಗಿವೆ. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಮಹಾದೇವಿ, ಮುಂತಾದವರೊಡನೆ ಅನುಭವ ಮಂಟಪದಲ್ಲಿ ಚರ್ಚೆ ನಡೆದಂತೆ ಯೋಜಿಸಿ, ಅಲ್ಲಲ್ಲಿ ಸನ್ನಿವೇಶ ಹಾಗೂ ಪಾತ್ರಗಳ ಚಿತ್ರ, ಗುಣಶೀಲ ವಿವರಣೆಗಳಿಂದ 'ಶೂನ್ಯಸಂಪಾದನೆ' ಒಂದು ವಿಶಿಷ್ಟ ಸಾಹಿತ್ಯ ಕೃತಿಯೂ ಆಗಿದೆ. ಅಂತರಂಗ ಹಾಗೂ ಬಹಿರಂಗ ಶುದ್ಧಿಯ ಕಾರಣ ಗಳಾದ 'ಗುರು-ಲಿಂಗ-ಜಂಗಮ' ಸೇವೆ, ಕಾಯಕ-ದಾಸೋಹ, ಸರ್ವಾರ್ಪಣ, ಶಿವಯೋಗ ವಿಚಾರಗಳು ತೆರೆತೆರೆಯಾಗಿ ಮೂಡಿಬಂದಿವೆ ಇಲ್ಲಿ. 'ಹುಟ್ಟು-ಸಾವು-ಸಿದ್ಧಿ'ಯ ಮಾನವತ್ವದ ನಿರಂತರ ಸಮಸ್ಯೆ ಮುಖ್ಯಾಯಿ ಸಂಪಾದನೆಯಲ್ಲಿ, ಹಟ

೧. ಈ ವಿವರಗಳಿಗೆ ಪ್ರೊ. ಸಂ. ಶಿ. ಭೂಸನೂರಮಠ, ಡಾ॥ ತಿಪ್ಪೇರುದ್ರಸ್ವಾಮಿ, ಡಾ॥ ಚಿದಾ ನಂದ ಮೂರ್ತಿ, ಡಾ॥ ಆರ್. ಸಿ. ಹಿರೇಮಠ, ಡಾ॥ ಎಲ್. ಬಸವರಾಜು ಹಾಗೂ ಪ್ರಕೃತ ಲೇಖಕನ 'ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ' ಮುಂತಾದವುಗಳನ್ನು ಗಮನಿಸಬೇಕು.

ಯೋಗ–ಶಿವಯೋಗ ಇಷ್ಟಲಿಂಗ ವಿಚಾರ ಸಿದ್ಧರಾಮ ಹಾಗೂ ಗೋರಕ್ಷರ ಪ್ರಸಂಗದಲ್ಲಿ, ಮರುಳ ಶಂಕರದೇವರ ಪ್ರಸಂಗದಲ್ಲಿ ನಿಜಭಕ್ತಿ, ಪ್ರಸಾದ ಮಹಿಮೆಗಳ ಪ್ರಾತ್ಯಕ್ಷಿಕೆ, ವೀರ ವೈರಾಗ್ಯ, ಲಿಂಗನಿಷ್ಠೆ, ಅಕ್ಕನ ಪ್ರಸಂಗದಲ್ಲಿ, ನುಲಿಯ ಚಂದಯ್ಯಗಳ ಸಂಪಾದನೆಯಲ್ಲಿ ಶರಣತ್ವ ಹಾಗೂ ತತ್ವ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯಗಳ ಪ್ರಸಂಗದಲ್ಲಿ ಕಾಯಕ–ದಾಸೋಹ, ಸರ್ವಶರಣರ ಅವಸಾನ ಪ್ರಸಂಗದಲ್ಲಿ ಜೀವ–ದೇಹ–ಸಾಧನೆ–ಶೂನ್ಯ ಸಂಪಾದನೆಗಳ ವಿವಕ್ಷೆ ಮೂಡಿದೆ. ಹೀಗೆ ಶೂನ್ಯಸಂಪಾದನೆ ವಿಶ್ವ ಮಾನವ ಸಾಮಾನ್ಯ ನಿರಂತರ ಸಮಸ್ಯೆಗಳಿಗೆಲ್ಲ ಪರಿಹಾರೋಪಾಯ ಸೂಚಿಸುವ ವಿಶೇಷ ತತ್ವಗ್ರಂಥವಾಗಿದೆ. ಈ ಚಿಂತನೆಗಳೂ, ಬರಿಯ ಆದರ್ಶೀಕೃತವಾಗಿರದೆ, ವ್ಯಾವಹಾರಿಕವೂ, ತಾರ್ಕಿಕವೂ ಆಗಿ ಮೂಡಿರುವುದು ಇಲ್ಲಿನ ವಿಶೇಷ. ಇಲ್ಲಿ ಪ್ರಭುದೇವ, ಬಸವಣ್ಣ, ಮಹಾದೇವಿ, ಚಂದಯ್ಯ, ಘಟ್ಟಿವಾಳಯ್ಯಗಳು ಈ ಮಾನವೀಯತೆಯ ಪ್ರತಿನಿಧಿಗಳಾಗಿದ್ದಾರೆ, ಅಲ್ಲದೆ, ಮಾನವೀಯತ್ವದ ಸಾಧಕಿಗಳೂ ಆಗಿ ನುಡಿಯುತ್ತಾರೆ, ನಡೆಯುತ್ತಾರೆ. ಶಿವಯೋಗ ಸಿದ್ಧಿಯನ್ನು ಪಡೆದು, ವ್ಯೋಮಕಾಯನಾಗಿದ್ದ ಪ್ರಭುದೇವನೂ ಮಾನವರಂತೆ ನೆಲದ ಮೇಲೆಯೇ ಇದ್ದು, ಮಣ್ಣ ಮನೆಯ ಒಳಗೆ ಬೆಳಗುವ ಆತ್ಮಜ್ಯೋತಿಯನ್ನು ತೋರುವ ದೇವ ಮಾನವ ಗೌರೀಶಂಕರವಾಗಿದ್ದಾನೆ, ಆಡಿದ ಮಾತೆಲ್ಲ ಜ್ಯೋತಿರ್ಲಿಂಗವಾಗಿ, ಸ್ವಾನುಭಾವ ನುಡಿಯೆಲ್ಲ ಬೆಡಗಾಗಿ, ವಿಶ್ವವನ್ನೆಲ್ಲ ಅಪ್ಪಿಕೊಂಡು, ಮಹತ್ತಿನ ಸಾಧನೆಯ ಶೂನ್ಯ ಸಂಪಾದಕನಾಗಿದ್ದಾನೆ ಪ್ರಭುದೇವ. ಮಹಾಮಾನವನಾಗಿ, ಸಮಾಜದ ದೋಷ–ದೌರ್ಬಲ್ಯಗಳನ್ನು ಕುಟ್ಟಿ, ದಲಿತೋದ್ಧಾರ ಸಾಹಸಿಯಾಗಿ, ಎಲ್ಲರ 'ಅಣ್ಣ' ನಾಗಿದ್ದಾನೆ ಬಸವಣ್ಣ. ಹೀಗೆ, ಅನುಭಾವಿ ಶರಣರ ವಚನಗಳೇ ಇಟ್ಟಿಗೆಗಳಾಗಿ ನಿರ್ಮಿತವಾಗಿದೆ ಈ ಶೂನ್ಯಸಂಪಾದನೆಯ ಸೌಧ. ಆದರೂ, ಪ್ರಭುದೇವ ಹೆಣ್ಣಿಗೆ ಮರುಳಾದ ಸಂಗತಿ, ಸಿದ್ಧರಾಮನ ಲಿಂಗದೀಕ್ಷೆ, ಮಹಾದೇವಿಯ ವೈರಾಗ್ಯದ ನಿಲುಮೆ ಮುಂತಾದ ಸಂಗತಿಗಳು ಶರಣರನ್ನು 'ಆದರ್ಶಪೂಜ್ಯ'ರಾಗಿ ಸೇವಿಸುವ ಭಾವವೇಶ ಪೂರಿತ ನಂತರದ ಭಕ್ತರಿಗೆ ಒಪ್ಪಿತವಾಗದೆ, ಅವುಗಳ ಪರಿಷ್ಕರಣ, ವಿಶೇಷಾರ್ಥ ಚಿಂತನೆ, ಉತ್ಪ್ರೇಕ್ಷೆ–ಪವಾಡ ಚಿತ್ರಣಗಳತ್ತ ಹರಿದು, ಮಾನವರಾಗಿ ಬಾಳಿದ ಶಿವಶರಣರನ್ನೂ 'ದೇವ'ರನ್ನಾಗಿ ಮಾಡಿ, ಅವರ ಆದರ್ಶಗಳ ಅನುಸರಣೆಗಿಂತ, ಅವರ ಭಜನೆ–ಕೈಂಕರ್ಯಕ್ಕೇ ಮಾನವರನ್ನು ತಳ್ಳಿದ್ದು ವಿಪರ್ಯಾಸ ಪ್ರಸಂಗ. ಶಿವಗಣ ಪ್ರಸಾದಿಯ ಮಹಾಮಾನವತ್ವದ ಕನಸು. ಸ್ವಜಾತಿ–ಸ್ವಧರ್ಮ ಮಹತ್ವ ಸಾಧನೆಯೇ ಗುರಿಯಾಗಿ ಉಳ್ಳವರ ಕೈಯಲ್ಲಿ ನಷ್ಟವಾಗಿ, 'ಶೂನ್ಯ ಸಂಪಾದನೆ'ಯ ಮೂಲ ಅರ್ಥ, ಶಿವ ಶರಣತ್ವದ ಅರಿವು, ಬದುಕಿನ ಸಮಗ್ರವನ್ನು ಆಳಬೇಕಾದ 'ಶಿವಯೋಗ'–ಕಾಯಕ–ಪ್ರಸಾದ–ದಾಸೋಹಗಳೆಲ್ಲ 'ಜಾತಿ'ಯ ಮುಖವಾಡ ಪಡೆದುದು ದುರ್ದೈವದ ಮಹಾಪ್ರಸಂಗ. ಈ ಕಾರ್ಯಕ್ಕೆ ಕೈ ಹಾಕಿದ ಅನೇಕರಲ್ಲಿ ವೀರಶೈವ ಪುರಾಣ, ಕಾವ್ಯ ಕರ್ತೃಗಳೂ ಪ್ರಥಮ ಖಂಡನೀಯರು.

ಕರ್ನಾಟಕಕ್ಕೆ ಜೈನಧರ್ಮದ ಆಗಮನ ಹಾಗೂ ದಿಗಂಬರ-ಶ್ವೇತಾಂಬರ ಪಂಥಗಳ ಉಗಮ‡

ಶಾಂತಿನಾಥ ದಿಬ್ಬದ

ಧರ್ಮಗಳ ಬೀಡು ಭಾರತ. ಪ್ರಾಚೀನ ಕಾಲದಲ್ಲಿ ಹುಟ್ಟಿ ಅಂದಿನಿಂದ ಇಂದಿನ ವರೆಗೂ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಂಡು ಬಂದಿರುವ ಕೆಲವೇ ಭಾರತೀಯ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಜೈನ ಧಾರ್ಮಿಕ ಗ್ರಂಥಗಳು ಅದರ ಉಗಮ ಮತ್ತು ಅಸ್ತಿತ್ವಗಳ ಬಗ್ಗೆ ವಿಚಿತ್ರ ವಿವರಗಳನ್ನು ನೀಡುತ್ತವೆ. ಅವೆಲ್ಲ ವನ್ನೂ ಅತಿಶಯೋಕ್ತಿಯೆಂದು ಹೇಳಬಹುದಾದರೂ, ಸುಳ್ಳೆಂದು ಹೇಳಲಿಕ್ಕಾಗ ದಷ್ಟು ತರ್ಕಬದ್ಧತೆ ಅಲ್ಲಿದೆ. ಕೆಲವು ಜೈನೇತರ ಕೃತಿಗಳೂ[೧] ಜೈನಧರ್ಮದ ಪ್ರಾಚೀನತೆಯನ್ನು ಸ್ಪಷ್ಟವಾಗಿ ಸಾರಿವೆ. ಆದ್ದರಿಂದ ಕೇವಲ ಕಾಲ್ಪನಿಕ ಅಥವಾ ಊಹೆಗೆ ನಿಲುಕದ ಬಹಳ ಹಿಂದಿನ ಕಾಲದ ಚರಿತ್ರೆಯನ್ನು ಬದಿಗಿರಿಸಿ, ನಿಖರವಾದ ದಾಖಲೆಗಳಿಂದೊಡಗೂಡಿದ ಚಾರಿತ್ರಿಕ ಯುಗದಿಂದೀಚೆಗಿರುವ ಜೈನ ಮಹಾಪುರುಷ ರನ್ನು ಗುರುತಿಸಿ ತನ್ಮೂಲಕವಾಗಿ ಆ ಧರ್ಮದ ಪ್ರಾಚೀನತೆಯನ್ನು ದೃಢವಾಗಿ ನಿಶ್ಚಯಿಸಬಹುದು. ಈ ದೃಷ್ಟಿಯಿಂದ ಜೈನ ಧಾರ್ಮಿಕ ಮಹಾಪುರುಷರ ಚರಿತ್ರೆ ಯನ್ನು ಕೈಗೆತ್ತಿಕೊಂಡಾಗ ಗಮನಾರ್ಹವಾದ ವ್ಯಕ್ತಿಯೆಂದರೆ ಮೊದಲ ತೀರ್ಥಂಕರ ನೆನ್ನಿಸಿದ ವೃಷಭದೇವ. ಆತನ ಬಗ್ಗೆ ಭಾಗವತ ಪುರಾಣ, ಋಗ್ವೇದಾದಿಗಳಲ್ಲಿ ಉಲ್ಲೇಖಗಳಿವೆ. ಆದರೆ ಆತನ ತರುವಾಯದ ಕೆಲವು ತೀರ್ಥಂಕರರ ಬಗ್ಗೆ ನಮ್ಮಲ್ಲಿ ದಾಖಲೆಗಳಿಲ್ಲ. ಕೊನೆಯ ತೀರ್ಥಂಕರರಾದ ನೇಮಿನಾಥ, ಪಾರ್ಶ್ವನಾಥ, ವರ್ಧ ಮಾನರಂತೂ ಆಗಿಹೋದ ಐತಿಹಾಸಿಕ ಪುರುಷರೆಂಬುದು ನಿಸ್ಸಂಶಯ. ಇವರು

‡ ಮೇಲಿನ ಈ ಎರಡೂ ಕ್ರಿಯೆಗಳು ಒಂದೇ ಸಮಯಕ್ಕೆ ಜರುಗಿವೆಯಲ್ಲದೆ ಅವೆರಡನ್ನೂ ಸೂಚಿಸುವ ಸಾಕ್ಷಿಯೂ ಒಂದೇ ಆಗಿರುವುದರಿಂದ ಪ್ರಸ್ತುತ ಲೇಖನದಲ್ಲಿ ಅವೆರಡನ್ನು ಸೇರಿ ಸಿಯೇ ಅಭ್ಯಸಿಸಲಾಗಿದೆ. ಈ ವಿಷಯದ ಬಗ್ಗೆ ಪುರಾವೆಗಳನ್ನು ನಾವು ಕಾವ್ಯ, ಶಾಸನ ಹಾಗೂ ಇತಿಹಾಸಗಳಿಂದ ಪಡೆಯಬಹುದಾಗಿದ್ದು ಅಂಥ ಪ್ರಯತ್ನವೊಂದನ್ನು ಇಲ್ಲಿ ಮಾಡ ಲಾಗಿದೆ.

೧. ಋಗ್ವೇದ, ಯಜುರ್ವೇದ, ಮಾರ್ಕಂಡೇಯ ಪುರಾಣ, ಕೂರ್ಮಪುರಾಣ ಇತ್ಯಾದಿಗಳು. ಪ್ರಾಚೀನತೆಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದರೆ ಮಿರ್ಜಿ ಅಣ್ಣಾರಾಯರ 'ಜೈನ ಧರ್ಮ' ನೋಡಿ.

ತಮಗಿಂತಲೂ ಮೊದಲಿನಿಂದಲೂ ಪ್ರಚಲಿತವಾಗಿದ್ದ ಜೈನಧರ್ಮದ ಪುನರುತ್ಥಾನದ ಕಾರ್ಯವನ್ನು ಎಸಗಿದವರು. ಹೆಚ್ಚಾಗಿ ಈ ತೀರ್ಥಂಕರರೆಲ್ಲ ಹುಟ್ಟಿ ಬೆಳಗಿದುದು ಉತ್ತರ ಭಾರತದಲ್ಲಿಯೇ ಎಂಬುದು ಆಶ್ಚರ್ಯದ ಸಂಗತಿಯಾಗಿದೆ. ಹೀಗಾಗಿ ಜೈನ ಧರ್ಮವು ಉತ್ತರದಲ್ಲಿ ಸ್ವಾಭಾವಿಕವಾಗಿ ಪ್ರಾಧಾನ್ಯತೆಯನ್ನು ಪಡೆದಿತ್ತು.

ಇನ್ನು ಅದೇ ಕಾಲದ ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಜೈನ ಧರ್ಮ ಯಾವ ಸ್ಥಿತಿಯಲ್ಲಿತ್ತೆಂಬುದನ್ನು ಹೇಳುವುದು ಕಷ್ಟದ ಕಾರ್ಯ. ಸ್ಥೂಲ ವಾಗಿ ಸು. ೨೦೦೦ ವರ್ಷಗಳಿಗಿಂತಲೂ ಮೊದಲಿನಿಂದ ಕರ್ನಾಟಕದಲ್ಲಿ ಜೈನಧರ್ಮ ವಿದೆಯೆಂದು ನಂಬಿಕೆಯಿದೆ. ಅದು ಆರ್ಯ ಧರ್ಮಕ್ಕಿಂತ ಪ್ರಾಚೀನವಾದುದೆಂದೂ ಹೇಳಲಾಗಿದೆ.[೨] ಇದಕ್ಕಿಂತ ಹಿಂದಿನ ಕಾಲವನ್ನು ಸೂಚಿಸುವ ಇನ್ನೊಂದು ಆಧಾರ ಹೀಗಿದೆ : ಕ್ರಿ.ಪೂ. ೬ನೆಯ ಶತಮಾನದಲ್ಲಿ ಮಹಾವೀರ ತೀರ್ಥಂಕರರು ಧರ್ಮೋಪ ದೇಶಕ್ಕಾಗಿ ದಕ್ಷಿಣದ ಕಡೆಗೆ ಬಂದಾಗ ಕನ್ನಡ ನಾಡಿನ ಈ ಪ್ರದೇಶವನ್ನು ಜೀವಂಧರ ನೆಂಬ ಜೈನ ದೊರೆ ಆಳುತ್ತಿದ್ದನು. ಆತ ಮಹಾವೀರನಿಂದ ದೀಕ್ಷೆ ಪಡೆದು ಸನ್ಯಾಸಿ ಯಾದನು.[೩] ಒಟ್ಟಿನಲ್ಲಿ ಕ್ರಿ. ಪೂ. ಕಾಲಕ್ಕಿಂತ ಬಹಳ ಮೊದಲಿನಿಂದ ಭಾರತದಲ್ಲಿ ವ್ಯಾಪಿಸಿ ನಿಂತಿದ್ದ ಜೈನಧರ್ಮವು ಕರ್ನಾಟಕದಲ್ಲಿ ಕ್ರಿ. ಶ.ಕ್ಕೆ ಸ್ವಲ್ಪ ಕಾಲವಾದರೂ ಮೊದಲಿನಿಂದ ಅಸ್ತಿತ್ವವನ್ನು ಪಡೆದಿರಬೇಕೆಂದು ಹೇಳುವುದು ನ್ಯಾಯವಾಗಿದೆ. ಕರ್ನಾಟಕದಲ್ಲಿ ಜೈನಧರ್ಮದ ಹಳಮೆಯನ್ನು ಸಾರುವ ಇನ್ನೂ ಅನೇಕ ದಾಖಲೆ ಗಳಿವೆ; ಮಹಾವಂಶವೆಂಬ ಬೌದ್ಧಗ್ರಂಥದಲ್ಲಿ ಸಿಲೋನದಲ್ಲಿ ಕ್ರಿ. ಪೂ. ೪ನೆಯ ಶತ ಮಾನದಲ್ಲಿ ಜೈನರು ಇದ್ದರೆಂದು ಹೇಳಲಾಗಿದೆ. ಇದರಂತೆಯೇ ಆಗ ಕರ್ನಾಟಕ ದಲ್ಲಿಯೂ ಜೈನರಿದ್ದಿರಬೇಕೆಂದು ನಾವು ಊಹಿಸಬಹುದು. ಅಲ್ಲದೆ ಈಗಿನ ಆಂಧ್ರ ಪ್ರದೇಶದ ಉತ್ತರ ಭಾಗವಾಗಿದ್ದ ಕಲಿಂಗ ದೇಶದಲ್ಲಿ ಕ್ರಿ. ಪೂ. ೬ನೆಯ ಶತಮಾನ ದಲ್ಲಿ ಭಗವಾನ್ ಮಹಾವೀರನು ಧರ್ಮಪ್ರಚಾರ ಮಾಡಿದ ಬಗ್ಗೆ ಉಲ್ಲೇಖಗಳಿವೆ.[೪] ಈ ಉಲ್ಲೇಖಗಳನ್ನು ಜೀವಂಧರ ಚರಿತೆಯ ವಿವರಗಳೊಂದಿಗೆ ಹೋಲಿಸಿ ನೋಡಿ ದಾಗ ಸರಿಸುಮಾರಾಗಿ ಅದೇ ಕಾಲಕ್ಕೆ ಮಹಾವೀರ ಧರ್ಮಪ್ರಚಾರಕ್ಕೆಂದು ಕರ್ನಾಟ ಕಕ್ಕೆ ಬಂದಿರುವ ಸಂಗತಿ ಸತ್ಯವೆನ್ನಿಸುತ್ತದೆ. ಇನ್ನು ಉತ್ತರದಿಂದ ಬಂದ ಸಹಸ್ರಾರು ಮುನಿಗಳು ಶ್ರವಣಬೆಳುಗೊಳದಲ್ಲಿ ತಮ್ಮ ನೆಲೆಯನ್ನು ಸುಲಭವಾಗಿ ಕಂಡುಕೊಂಡಿರ ಬೇಕಾದರೆ ಅವರ ಆಗಮನಕ್ಕೆ ಮುನ್ನವೇ ಕರ್ನಾಟಕವು ಜೈನಧರ್ಮವನ್ನು ಹೊಂದಿರು ವುದಲ್ಲದೆ ಸಾಕಷ್ಟು ಧಾರ್ಮಿಕ ಅನುಕೂಲತೆಗಳನ್ನೂ ಪಡೆದಿರಬೇಕು. ಒಟ್ಟಿನಲ್ಲಿ ಈ ಎಲ್ಲ ವಿವರಗಳಿಂದ ವಿದಿತವಾಗುವ ಅಂಶವೆಂದರೆ ಉತ್ತರದಿಂದ ಜೈನಧರ್ಮವು ಕರ್ನಾಟಕಕ್ಕೆ ಬರುವ ಮುನ್ನವೇ ಕರ್ನಾಟಕದಲ್ಲಿ ಜೈನಧರ್ಮ ನೆಲೆನಿಂತಿತ್ತೆಂಬುದು.

೨. ಸೌಥ ಇಂಡಿಯನ್ ಫಿಲಾಸಾಫಿ– ಸಂ. ೧, ಡಾ. ರಾಧಾಕೃಷ್ಣನ್.

೩. ಜೀವಂಧರ ಚರಿತೆ– ಭಾಸ್ಕರ ಕವಿ.

೪. ಜೈನಿಸಮ್ ಇನ್ ಸೌಥ ಇಂಡಿಯಾ– ಡಾ. ಪಿ. ಬಿ. ದೇಸಾಯಿ.

ಕಾಲಕಾಲಕ್ಕೆ ಚಾಲನೆ ಕೊಟ್ಟು ದಿಗ್ದರ್ಶನ ಮಾಡುವ ಮುನಿಪುಂಗವರ ಆಧಿಕ್ಯ ದಿಂದಾಗಿ ಕ್ರಿ. ಪೂರ್ವದ ಮೊದಲು ಭಾರತದಲ್ಲಾಗಲಿ, ಕರ್ನಾಟಕದಲ್ಲಾಗಲಿ ಪ್ರಚ ಲಿತವಿದ್ದ ಜೈನ ಧರ್ಮದಲ್ಲಿ ಏಕತಾನತೆಯಿತ್ತು; ತನ್ನದೇ ಆದ ಬಿಗಿಯಾದ ಬಂಧ ವಿತ್ತು. ಹೀಗೆ ಪರಂಪರಾನುಗತವಾಗಿ ಸಾಗಿ ಬಂದ ಜೈನಧರ್ಮವು ಅಕಸ್ಮಾತ್ತಾಗಿ ಪ್ರಕೃತಿಯ ಕುಪಿತ ದೃಷ್ಟಿಗೆ ಸಿಲುಕಿ ತನ್ನಲ್ಲಿ ಕೆಲವು ಆಂತರಿಕ ಹಾಗೂ ಬಾಹ್ಯ ಬದಲಾವಣೆಗಳನ್ನು ಅನುಭವಿಸಿತು. ಆ ಬದಲಾವಣೆಗೆ ಸಂಬಂಧಿಸಿದ ವಿವರಗಳನ್ನು ಕಲೆಹಾಕಿ ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಆ ಬದಲಾವಣೆಗಳ ನಿಖರತೆಯನ್ನು ಸ್ಪಷ್ಟಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಮೊದಲಿನಿಂದಲೂ ಕರ್ನಾಟಕದಲ್ಲಿ ಇದ್ದ ಜೈನಧರ್ಮಕ್ಕೆ ಕ್ರಿ.ಪೂ. ಸು. ೩ನೆಯ ಶತಮಾನದಲ್ಲಿ ಉತ್ತರದಿಂದ ಬಂದ ಜೈನಮುನಿಗಳ ಮೂಲಕ ಮತ್ತೆ ಮಹಾಪೂರ ಬಂದಿತು. ಆದರೆ ಅದೇ ಸಂದರ್ಭದಲ್ಲಿ ಒಂದಾಗಿದ್ದ ಜೈನಧರ್ಮ ಒಡೆದು ಎರಡಾಗಿ ದಿಗಂಬರ-ಶ್ವೇತಾಂಬರಗಳೆಂಬ ಪಂಥಗಳನ್ನು ಪಡೆಯಿತು. ಈ ಘಟನೆಗೆ ಸಂಬಂಧಿ ಸಿದ ವಿವರಗಳನ್ನು ನೀಡುವ ಮೂಲಗಳು ಮೂರು : (೧) ಶ್ರವಣಬೆಳಗೊಳ ಶಾಸನ ಗಳು (೨) ವಡ್ಡಾರಾಧನೆ (೩) ಇತಿಹಾಸ. ಉತ್ತರದಿಂದ ಜೈನಧರ್ಮವು ದಕ್ಷಿಣಕ್ಕೆ (ಕರ್ನಾಟಕಕ್ಕೆ) ಬಂದಿತೆಂಬುದು ಶ್ರವಣಬೆಳುಗೊಳ ಶಾಸನಗಳಿಂದ ತಿಳಿದು ಬಂದರೆ; ಉತ್ತರದಿಂದ ಜೈನಧರ್ಮವು ದಕ್ಷಿಣಕ್ಕೆ ಬಂದಿತೆಂಬುದೂ, ಅದರೊಂದಿಗೇ ಆ ಧರ್ಮ ದಲ್ಲಿ ೨ ಪಂಥಗಳು ಹುಟ್ಟಿಕೊಂಡವೆಂಬುದೂ ವಡ್ಡಾರಾಧನೆಯಿಂದ ತಿಳಿದು ಬರು ತ್ತದೆ. ಇತಿಹಾಸ ಇವೆರಡನ್ನೂ ಸಮರ್ಥಿಸುತ್ತದೆ.

ಶ್ರವಣಬೆಳುಗೊಳದ ಚಿಕ್ಕಬೆಟ್ಟದಲ್ಲಿರುವ ಒಂದು ಶಾಸನವು ಭದ್ರಬಾಹುವಿಗೆ ಸಂಬಂಧಿಸಿದುದಾಗಿದ್ದು ಅತಿ ಪ್ರಾಚೀನವಾದುದಾಗಿದೆ. ಜೈನರ ಸಾಂಪ್ರದಾಯಿಕ ಹೇಳಿಕೆಯೊಂದನ್ನು ಇದು ದೃಢೀಕರಿಸುವ ಕಾರಣ ಇದಕ್ಕೆ ವಿಶೇಷ ಮಹತ್ವವಿದೆ. ಚಿಕ್ಕ ಬೆಟ್ಟದ ಪಾರ್ಶ್ವನಾಥ ಬಸದಿಯ ಬಲಗಡೆ ಬಂಡೆಯ ಮೇಲಿನ ಈ ಶಾಸನ ಪಾಠದ ಪ್ರಮುಖ ಭಾಗವನ್ನು ಇಲ್ಲಿ ಎತ್ತಿಕೊಡಲಾಗಿದೆ : (೪) ಭಗವತ್ಪರಮರ್ಷಿಗೌತಮ ಗಣಧರ ಸಾಕ್ಷಾಚ್ಛಿಷ್ಯ ಲೋಹಾರ್ಯ್ಯಜಮ್ಬುವಿಷ್ಣುದೇವಾಪರಾಜಿತಗೋವರ್ಧನ ಭದ್ರಬಾಹುವಿಶಾಖ ಪ್ರೋಷ್ಠಿಲಕೃತ್ತಿಕಾರ್ಯ್ಯ ಜಯನಾಮ ಸಿದ್ಧಾರ್ತ್ಥಧೃತಿಷೇಣ ಬುದ್ಧಿಲಾದಿಗುರು ಪರಮ್ಪರೀಣಕ್ಕ ಮಾಭ್ಯಾಗತ (೫) ಮಹಾಪುರುಷಸನ್ತತಿ ಸಮ ವದ್ಯೋತಿತಾನ್ವಯ ಭದ್ರಬಾಹುಸ್ವಾಮಿನಾ ಉಜ್ಜಯನ್ಯಾಮಷ್ಟಾಙ್ಗ ಮಹಾನಿಮಿತ್ತ ತತ್ವಜ್ಞೇನ ತ್ರೈಕಾಲ್ಯದರ್ಶಿನಾ ನಿಮಿತ್ತೇನ ದ್ವಾದಶ ಸಂವತ್ಸರ ಕಾಲ ವೈಷಮ್ಯ ಮುಪ ಲಭ್ಯ ಕಥಿತೇ ಸರ್ವಸ್ಸಙ್ಘ ಉತ್ತರಾಪಥಾದ್ದಕ್ಷಿಣಾ (೬) ಪಥಮ್ಪ್ರಸ್ಥಿತಃ ಕ್ರಮೇಣೈವ ಜನಪದಮನೇಕಗ್ರಾಮಶತಸ(ಂ)ಖ್ಯಮುದಿತ ಜನ ಧನ ಕನಕಸಸ್ಯಗೋಮಹಿಷಾಜಾದಿ

ಕುಲ ಸಮಾಕೀರ್ಣ್ಣವಾವಿಪ್ರವಾನತಃ ಆಚಾರ್ಯ್ಯ(ಃ) ಪ್ರಭಾಚಂದ್ರೋನಾಮಾವನಿತ ಲಲಲಾಮಭೂತೇsರಾಸ್ಮಿನ್ಕಟವಪ್ರನಾಮ . ..."೫

ಮಹಾವೀರನ ತರುವಾಯದ ಜೈನ ಗುರುಗಳಲ್ಲಿ ಒಬ್ಬರಾದ ಭದ್ರಬಾಹು ಸ್ವಾಮಿಯು ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷ ಬರಗಾಲ ಬರುವದೆಂದು ಅರಿತು ಮುನಿಗಣದೊಂದಿಗೆ ಉತ್ತರಾಪಥದಿಂದ ದಕ್ಷಿಣಾಪಥಕ್ಕೆ ವಲಸೆ ಬಂದು ಕೆಲ ಕಾಲದ ತರುವಾಯ ಶ್ರವಣಬೆಳುಗೊಳದಲ್ಲಿ ದೇಹ ಬಿಟ್ಟನೆಂಬುದು ಈ ಶಾಸನದ ವಿಷಯ.

ಇದಲ್ಲದೆ ಶ್ರವಣಬೆಳುಗೊಳದ ಇನ್ನೂ ಕೆಲವು ಶಾಸನಗಳು೬ ಭದ್ರಬಾಹು ಹಾಗೂ ಆತನ ಶಿಷ್ಯ ಚಂದ್ರಗುಪ್ತರ ವಿವರಗಳನ್ನು ಒಳಗೊಂಡಿವೆ. ಅದರ ಜೊತೆಗೆ ಕರ್ನಾಟಕಕ್ಕೆ ಜೈನ ಧರ್ಮ ಬಂದುದನ್ನೂ ದೃಢಪಡಿಸುತ್ತವೆ. ಇವು ಗಳಲ್ಲಿ ಹೆಚ್ಚು ಸುಮಾರಾಗಿ ೧೦ ನೆಯ ಶತಮಾನದ ತರುವಾಯದ ಶಾಸನಗಳಾಗಿವೆ ಯಲ್ಲದೆ ಜೈನ ಧರ್ಮವು ಕರ್ನಾಟಕಕ್ಕೆ ಬಂದುದರ ಸ್ಪಷ್ಟ ಕಾಲವನ್ನು ನಿರ್ದೇಶಿಸಿಲ್ಲ.

ಇನ್ನು ಈ ವಿವರಗಳನ್ನು ವಡ್ಡಾರಾಧನೆಯು ನೀಡುವ ಬಗೆಯನ್ನು ಮುಂದೆ ನೋಡಲಾಗಿದೆ : ಇದರಲ್ಲಿ ಐತಿಹಾಸಿಕ ಮಹತ್ವವನ್ನು ಪಡೆದುದು ಭದ್ರಬಾಹುಭಟಾ ರರ ಕಥೆ. ಉತ್ತರ ಹಿಂದುಸ್ತಾನದಲ್ಲಿ ೧೨ ವರ್ಷ ಕ್ಷಾಮ ತಲೆದೋರಿದಾಗ ಭದ್ರ ಬಾಹುಮುನಿಗಳು ತನ್ನ ಶಿಷ್ಯನಾದ ಚಂದ್ರಗುಪ್ತನನ್ನು ಹಾಗೂ ಇತರ ಶಿಷ್ಯಸಮು ದಾಯವನ್ನು ಕರೆದುಕೊಂಡು ಕರ್ನಾಟಕದ ಶ್ರವಣಬೆಳುಗೊಳಕ್ಕೆ ಬಂದುದೇ ಈ ಕಥೆಯ ವಸ್ತುವಾಗಿದೆ. ಅದರ ಪ್ರಕಾರ೭ "ಭದ್ರಬಾಹುಭಟಾರರು ದೇಶಸಂಚಾರ ಮಾಡುತ್ತ ಉಜ್ಜಯಿನಿಗೆ ಬರುತ್ತಾರೆ. ಅಲ್ಲಿದ್ದ ಸಂಪ್ರತಿ ಚಂದ್ರಗುಪ್ತ ಅವರಿಂದ ಶ್ರಾವಕರ ವ್ರತಗಳನ್ನು ಪಡೆಯುತ್ತಾನೆ. ಹೀಗಿದ್ದಾಗ ಭಟಾರರು ಒಮ್ಮೆ ಭಿಕ್ಷೆಗೆ ಹೋದಾಗ ಒಂದು ಸಣ್ಣ ಕೂಸು ಅಳುವುದನ್ನು ಕೇಳಿ, ಸಮೀಪಕ್ಕೆ ಹೋಗಿ ನೋಡ ಲಾಗಿ, ಮುಂದೆ ೧೨ ವರ್ಷಗಳ ಕಾಲ ಭಯಂಕರ ಬರಗಾಲ ಬೀಳುವುದಾಗಿ ಆ ಕೂಸಿ ನಿಂದ ಸೂಚನೆಯಾಗುತ್ತದೆ. ಅದಲ್ಲದೆ ಅಂದೇ ರಾತ್ರಿ ಸಂಪ್ರತಿ ಚಂದ್ರಗುಪ್ತನಿಗೆ ಹದಿನಾರು ದುಃಸ್ವಪ್ನಗಳು ಬೀಳುತ್ತವೆ. ಸ್ವಪ್ನಫಲವನ್ನಾತ ಮುನಿಗಳಿಂದ ಕೇಳಿ ತಿಳಿಯುತ್ತಾನೆ. ಒಂದು ದಿನ ಕಳೆದರೆ ರಾಜರು ದೀಕ್ಷೆಯನ್ನೇ ಪಡೆಯಲಾರರೆಂಬುದು ಗುರುಗಳ ಹೇಳಿಕೆ. ತ್ರಕ್ಷಣ ಸಂಪ್ರತಿ ಚಂದ್ರಗುಪ್ತ ತನ್ನ ಹಿರಿಗುವರನಾದ ಸಿಂಹ ಸೇನನಿಗೆ ಪಟ್ಟಗಟ್ಟಿ ಅನೇಕ ರಾಜಕುಮಾರರೊಂದಿಗೆ ದೀಕ್ಷೆ ಪಡೆದು ಭದ್ರಬಾಹು ಭಟಾರರೊಂದಿಗೆ ತಪೋನಿರತನಾಗುತ್ತಾನೆ. ಬರಲಿರುವ ಬರಗಾಲದಿಂದ ಪಾರಾ ಗಲು ಭದ್ರಬಾಹುಮುನಿಗಳು ಸಹಸ್ರಾರು ಋಷಿಗಳೊಂದಿಗೆ, ಚಂದ್ರಗುಪ್ತ ಮುನಿ

೫. ಎಪಿಗ್ರಾಫಿಯ ಕರ್ನಾಟಿಕಾ–ಶ್ರವಣಬೆಳುಗೊಳ–ಚಿಕ್ಕಬೆಟ್ಟ. ಪುಟ ೩

೬. ವಿವರಗಳಿಗಾಗಿ "ಎಪಿಗ್ರಾಫಿಯ ಕರ್ನಾಟಿಕಾ–ಶ್ರವಣಬೆಳುಗೊಳ" ನೋಡಿ.

೭. ಕಥೆಯ ಪ್ರಮುಖ ಅಂಶಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ಯನ್ನು ಕೂಡಿಕೊಂಡು ದಕ್ಷಿಣದ ಶ್ರವಣಬೆಳುಗೊಳಕ್ಕೆ ಬರುತ್ತಾರೆ. ಆದರೆ ಮೂವರು ಆಚಾರ್ಯರು ಮಾತ್ರ ದಕ್ಷಿಣದತ್ತ ಬಾರದೆ ಸಿಂಧುದೇಶದತ್ತ ಹೋಗುವರು. ಆಗಿನ ಆ ಮುನಿಗಳದೆಲ್ಲ ದಿಗಂಬರರೂಪ. ಹೀಗಿದ್ದಾಗ ಅಲ್ಲಿ ದಿಗಂಬರ ಯತಿ ಯೊಬ್ಬರು ಬರಗಾಲದ ಹಾವಳಿಗೆ ಸಿಕ್ಕು ರಾತ್ರಿ ಊಟಕ್ಕಾಗಿ ಊರಿನಲ್ಲಿ ಭಿಕ್ಷೆಗೆ ಹೋಗಿರುತ್ತಾರೆ. ಆಗ ವೇಳಾಸ್ವಾಮಿನಿಯೆಂಬ ಗರ್ಭಿಣಿ ಸ್ತ್ರೀ ಇವರನ್ನು ಕಂಡು ಹೆದರುತ್ತಾಳೆ. ಅವಳ ಗರ್ಭಪಾತವಾಗುತ್ತದೆ. ಇದರಿಂದ ನೊಂದುಕೊಂಡ ಶ್ರಾವಕರು ಮುನಿಗಳನ್ನು ಅರ್ಧಗಪ್ಪಡವನ್ನಾದರೂ ಉಡುವಂತೆ ಒತ್ತಾಯಿ ಸುತ್ತಾರೆ. ಅವರದನ್ನು ಒಪ್ಪಿಕೊಳ್ಳುತ್ತಾರೆ. ಕಾಲ ಕಳೆದು ಕ್ಷಾಮ ಮುಗಿದ ಮೇಲೆ ಈ ಆಚಾರ್ಯರು ಮಧ್ಯಪ್ರದೇಶಕ್ಕೆ ಬರುತ್ತಾರೆ. ಆಗ ಅಲ್ಲಿದ್ದ ವಿಶಾಖಾ ಚಾರ್ಯರು ಅರ್ಧಗಪ್ಪಡವನ್ನು ಬಿಟ್ಟು ದಿಗಂಬರತ್ವವನ್ನು ಸ್ವೀಕರಿಸಲು ಅವರಿಗೆ ತಿಳಿಸುತ್ತಾರೆ. ಕೆಲವರು ಮಾತ್ರ ಅದನ್ನು ಒಪ್ಪಿದರು. ಒಪ್ಪದಿದ್ದವರು ಕೆಲ ಕಾಲ ಆ ಅರ್ಧಗಪ್ಪಡದ ಸಂಪ್ರದಾಯವನ್ನೇ ಮುಂದುವರೆಸಿಕೊಂಡು ಬಂದರು. ಅದು ವಪ್ರವಾಳನೆಂಬ ರಾಜನ ವರೆಗೂ ಸಾಗಿ ಬಂತು. ಅವನು ಆ ರೂಢಿಯನ್ನು ತಿರಸ್ಕರಿಸಿದನು. ಆಗ ಉತ್ತರದ ಕಡೆಯ ಅವರೆಲ್ಲ ಶ್ವೇತವಸ್ತ್ರಧಾರಿಗಳಾದರು. ಮೂಲದಿಂದ ಹಳೆಯ ರೂಢಿಯನ್ನೇ ಉಳಿಸಿಕೊಂಡು ಬಂದ ದಕ್ಷಿಣದವರೆಲ್ಲ ದಿಗಂಬರರಾದರು."

ಹೀಗೆ ಈ ಕಥೆ ಅನೇಕ ವಿಷಯಗಳನ್ನು ಸ್ಪಷ್ಟಪಡಿಸುತ್ತದೆ. ಅವು ಹೀಗಿವೆ :

೧) ಸು. ಕ್ರಿ. ಪೂ. ೩ ನೆಯ ಶತಮಾನದ ಕೊನೆಗೆ ಕರ್ನಾಟಕಕ್ಕೆ ಜೈನ ಧರ್ಮವು ಉತ್ತರದಿಂದ ಬಂದದ್ದು.

೨) ಅದೇ ಕಾಲಕ್ಕೆ ಜೈನ ಧರ್ಮದಲ್ಲಿ ದಿಗಂಬರ-ಶ್ವೇತಾಂಬರ ಪಂಥಗಳು ಹುಟ್ಟಿದ್ದು

೩) ಭದ್ರಬಾಹುಗಳೊಂದಿಗೆ ಬಂದಾತ ಸಂಪ್ರತಿ ಚಂದ್ರಗುಪ್ತನೆಂಬುದು.

ಮೂರನೆಯ ಪುರಾವೆಯಾದ ಇತಿಹಾಸ ಈ ಘಟನೆಗಳಿಗೆ ಸಂಬಂಧಿಸಿದಂತೆ ನೇರ ದಾಖಲೆಗಳನ್ನೊದಗಿಸುವುದು ಕಡಿಮೆ. ಅದೂ ಕೂಡ ವಡ್ಡಾರಾಧನೆ ಹಾಗೂ ಶಾಸನಾಧಾರಗಳನ್ನೇ ಎತ್ತಿ ಹಿಡಿದಿದೆ. ಅಂತೆಯೇ ಮೌರ್ಯರ ಮನೆತನದ ಇತಿ ಹಾಸವನ್ನು ಗಮನಿಸಿ ಆ ಮೂಲಕವಾಗಿ ನಾವೇ ಒಂದು ನಿರ್ಧಾರಕ್ಕೆ ಬರಬೇಕಾಗು ತ್ತದೆ. ಕಾಲದ ದೃಷ್ಟಿಯಿಂದ ಮೌರ್ಯ ಸಂಪ್ರತಿ ಚಂದ್ರಗುಪ್ತನ ಅವಧಿ ಸು. ಕ್ರಿ. ಪೂ. ೩ ನೆಯ ಶತಮಾನವೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಕರ್ನಾಟಕದ ಉತ್ತರಭಾಗವು ಮೌರ್ಯರ ಅಡಳಿತಕ್ಕೆ ಒಳಪಟ್ಟಿತ್ತೆಂಬುದನ್ನು ಸೂಚಿಸುವ ೬ ಅಶೋಕನ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ.[೮] ಕಾರಣ ಸುಮಾರು ತನ್ನ

೮. ಕರ್ನಾಟಕದ ಸಂಕ್ಷಿಪ್ತ ಇತಿಹಾಸ— ಡಾ. ಸೂರ್ಯನಾಥ ಕಾಮತ, ಪು. ೧೧

ಕಾಲ ಅಥವಾ ಆದಕ್ಕೆ ಮುಂಚಿನಿಂದಲೇ ಸಂಪ್ರತಿ ಚಂದ್ರಗುಪ್ತನು ಕೂಡ ಕರ್ನಾಟಕದ ಪರಿಚಯುವನ್ನು ಪಡೆದಿರಬಹುದು. ಆ ಪರಿಚಯುವೇ ಅವನನ್ನು ತನ್ನ ಗುರುಗಳೊಂದಿಗೆ ಶ್ರವಣಬೆಳುಗೊಳಕ್ಕೆ ಬರುವಂತೆ ಪ್ರೇರೇಪಿಸಿರಬಹುದು.

ಕ್ರಿ. ಪೂ. ೪ ನೆಯ ಶತಮಾನದ ಸುಮಾರಿಗೆ ಉತ್ತರ ಪ್ರದೇಶದಲ್ಲಿ ಅನೇಕ ಸಲ ಬರಗಾಲ ಬಿದ್ದ ಬಗ್ಗೆ ಉದಾಹರಣೆಗಳಿವೆ. "ಈ ಕಾಲದ ಸೋಹಗೌರಾ ತಾಮ್ರಶಾಸನದಲ್ಲಿ ಕ್ಷಾಮಪೀಡಿತ ಜನರಿಗಾಗಿ ಧಾನ್ಯದ ಕಣಜಗಳನ್ನು ತ್ರಿವೇಣೀ, ಮಥುರಾ, ಚಂಚು, ಮೊದಾಮಾ ಮತ್ತು ಭದ್ರಾ ಮೊದಲಾದ ಸ್ಥಳಗಳಲ್ಲಿ ಶ್ರಾವಸ್ತಿಯ ಮಹಾಮಾತ್ರರು ಕಟ್ಟಿಸಿದ್ದರೆಂದು ಹೇಳಿದೆ. ಇದೇ ಕಾಲದ ಮಹಾಸ್ಥಾನ ಶಿಲಾಶಾಸನದಲ್ಲಿಯೂ ಧಾನ್ಯದ ಹಗೆಗಳನ್ನು ಬರಗಾಲದಲ್ಲಿ ಜನರಿಗೆ ಆಹಾರ ಕೊಡುವುದಕ್ಕೆ ತೆಗೆಸಿದ್ದರೆಂದೂ ಹೇಳಿದೆ.[೯] ಇದರಿಂದ ಚಂದ್ರಗುಪ್ತನ ಕಾಲಕ್ಕೆ ಭೀಕರ ಕ್ಷಾಮ ತಲೆದೋರಿದುದೂ ವಾಸ್ತವ ಘಟನೆಯೆಂಬುದು ವೇದ್ಯವಾಗುತ್ತದೆ.

ಹೀಗೆ ಶಾಸನ, ವಡ್ಡಾರಾಧನೆ ಹಾಗೂ ಇತಿಹಾಸ ಈ ಮೂರೂ ಮೂಲಗಳಿಂದ ಈ ವಿಷಯಗಳನ್ನು ದೃಢಪಡಿಸಬಹುದು.

ದಿಗಂಬರ-ಶ್ವೇತಾಂಬರಗಳ ಪರಂಪರೆ ಮುಖ್ಯವಾಗಿ ಮುನಿಗಳ ವೇಷಕ್ಕೆ ಸಂಬಂಧಿಸಿದುದಾಗಿದೆ. ಹೆಸರೇ ಸೂಚಿಸುವಂತೆ ದಿಗಂಬರ ಮುನಿಗಳು ನಗ್ನರೂಪದಲ್ಲಿರುತ್ತಾರೆ. ಶ್ವೇತಾಂಬರರು ಬಿಳಿಯ ಬಟ್ಟೆಗಳನ್ನು ಧರಿಸುತ್ತಾರೆ. ಈ ದಿಗಂಬರರನ್ನು ನಿರ್ಗ್ರಂಥರೆಂದೂ, ಶ್ವೇತಾಂಬರರನ್ನು ಶ್ವೇತಾಂಬರಿ, ಶ್ವೇತಪಟರು, ಶ್ವೇತಧಾರಿಗಳೆಂದೂ ಕರೆಯುವ ರೂಢಿಯಿದೆ. ಕೇವಲ ವೇಷಕ್ಕೆ ಸಂಬಂಧಿಸಿದ ಬಾಹ್ಯ ರೂಪದ ವ್ಯತ್ಯಾಸ ಮಾತ್ರ ಇವುಗಳಲ್ಲಿರದೆ ತಾತ್ವಿಕ ವಿಚಾರಗಳಿಗ ಸಂಬಂಧಿಸಿದಂತೆ ಹಲವಾರು ಆಂತರಿಕ ವ್ಯತ್ಯಾಸಗಳೂ ಉಂಟು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ನಗ್ನತೆ, ಸ್ತ್ರೀಮುಕ್ತಿ, ಮುನಿಭುಕ್ತಿ, ದಿವ್ಯಧ್ವನಿ, ಕವಲಾಹಾರ ಇತ್ಯಾದಿಗಳು. ಇವಲ್ಲದೆ ಸೂಕ್ಷ್ಮವಾದ ಲಳ ಭಿನ್ನಾಭಿಪ್ರಾಯಗಳು ಈ ಎರಡು ಪಂಥಗಳಲ್ಲಿವೆಯೆಂಬುದಾಗಿ ವಿದ್ವಾಂಸರು ಗುರುತಿಸಿದ್ದಾರೆ.[೧೦] ಶ್ವೇತಾಂಬರರ ಸಂಖ್ಯೆ ಉತ್ತರದಲ್ಲಿ ಅತಿಯಾಗಿದ್ದರೆ, ದಿಗಂಬರರ ಸಂಖ್ಯೆ ದಕ್ಷಿಣದಲ್ಲಿ ಹೆಚ್ಚಾಗಿದೆ. ಬಹುದಿನಗಳ ಹಿಂದೆ ದಿಗಂಬರ ಪಂಥದಲ್ಲಿಯೇ ಹೊಸದೊಂದು ಒಳಪಂಥ ಆರಂಭವಾಗಿದ್ದಿತು. ಅದೇ 'ಯಾಪನೀಯ ಸಂಘ'ವೆಂಬುದು. ದಿಗಂಬರ-ಶ್ವೇತಾಂಬರಗಳೆರಡರ ಸಮನ್ವಯದ ರೂಪ ಅದಾಗಿದ್ದಿತಾದರೂ ಬಹುಕಾಲ ಬಾಳಲಿಲ್ಲ.

ಇತ್ತೀಚೆಗೆ ಶ್ವೇತಾಂಬರರು ಉತ್ತರದಿಂದ ದಕ್ಷಿಣದ ಕಡೆಗೆ ಧಾವಿಸುತ್ತಿದ್ದಾರೆ. ವ್ಯಾಪಾರವನ್ನೇ ತಮ್ಮ ಪ್ರಮುಖ ಉದ್ಯೋಗವನ್ನಾಗಿರಿಸಿಕೊಂಡು ದಕ್ಷಿಣದಲ್ಲಿಯೇ

೯. ಕರ್ನಾಟಕದ ಇತಿಹಾಸ ಸಂ. ೧-ಪಂಚಮುಖಿ-ಪು-೭೩.

೧೦. ಜೈನ ವಾಙ್ಮಯ ಪರಿಶೋಧನೆ- ಪು. ೬೫, ಮಹೀಶವಾಡಿ.

ಅವರು ತಮ್ಮ ಸ್ಥಿರವಾದ ನೆಲೆಯನ್ನೂ ಕಂಡುಕೊಂಡಿದ್ದಾರೆ. ದಿಗಂಬರರು ಹೆಚ್ಚಾಗಿ ವ್ಯವಸಾಯುವನ್ನವಲಂಬಿಸಿ ಬದುಕುತ್ತಿದ್ದಾರೆ.

ಒಟ್ಟಿನಲ್ಲಿ ಈಗ ಲಭ್ಯವಾಗಿರುವ ಆಧಾರಗಳ ಪ್ರಕಾರ ಕ್ರಿ. ಪೂ. ೩ನೆಯ ಶತಮಾನದಲ್ಲಿ ಜೈನಧರ್ಮವು ಉತ್ತರದಿಂದ ದಕ್ಷಿಣಕ್ಕೆ ಬಂದಿತೆಂದೂ, ಅದೇ ಸಮಯದಲ್ಲಿಯೇ ಈ ಎರಡೂ ಪಂಥಗಳು ಉಗಮವಾದವೆಂದೂ, ಸ್ಥೂಲಭದ್ರಾಚಾರ್ಯರೆಂಬವರು ಶ್ವೇತಾಂಬರ ಸಂಪ್ರದಾಯದ ಸಂಸ್ಥಾಪಕರೆಂದೂ ಹೇಳಬೇಕಾಗುತ್ತದೆ. ಇವಲ್ಲದೆ ಹೊಸ ಸಾಕ್ಷಿಗಳು ಲಭ್ಯವಾದಾಗ್ಗೆ ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ನಿರೀಕ್ಷಿಸಬಹುದು.

ಬೆಳಕಾಗೇತಿ

ಧರಣೇಂದ್ರ ಕುರಕುರಿ

ಧಾರವಾಡದ ಕಡಪಾ ಮೈದಾನದಾಗ
ಸ್ವರ್ಗಾನs
ಹೆಡಮುರಗಿ ಕಟ್ಟಿ ಭೂಮಿ ಮ್ಯಾಗ
ಕೆಡವಿದಂಗ
ಭಾಷಣಾ ಮಾಡೂವಾಗ
ನಮ್ಮೂರಾಗ ಹಸದ ಹೊಟ್ಟೀ ಹೋರಾಟ ನಡದಿತ್ತು.

ಬಡವರ ಹೆಸರ ಹೇಳಿ
ಬೆಂಗಳೂರಾಗ ಬಜೆಟ್ ಮಾಡಿ
ಬೆಣ್ಣೀ ತಿನ್ನಾಕ ಬಡದಾಡೂವಾಗ
ನಮ್ಮೂರಾಗ ಬದುಕಿನ ಹರಾಜ ನಡದಿತ್ತು.

ಬೆವರ ಸುರಿಸಿದ ಬೆಳೀಗೆ
ಬೆಲಿ ಕೇಳಿದರ
ಬಂದೂಕ ತೋರಿಸಿ ಬೆದರಸೋವಾಗ
ಬಂಗಲೇದಾಗ ಭಾನಗಡಿ ನಡದಿತ್ತು.

ಕುಂತ ಖುರ್ಚಿ ಖಾಯಂ ಮಾಡಿಕೊಳ್ಳಾಕ
ಗೆದ್ದ ಎತ್ತಿನ
ಬಾಲಾ
ಹಿಡಕೊಂಡು ದಿಲ್ಲಿಗೆ ಎಡತಾಕೂವಾಗ
ನಮ್ಮೂರ ದಾರ್‍ಯಾಗ ಮುಳ್ಳ ಬೆಳದಿತ್ತು.

ದುಡ್ಡಿನ ದರ್ಪದ ಅಡಿಯೊಳಗ
ಗುಡಸಲ ಪುಡಿ–ಪುಡಿ ಆಗೂವಾಗ
ಪ್ರಜಾರಾಜ್ಯೋತ್ಸವ ಪಟ್ಟಣದಾಗ ನಡದಿತ್ತು.

ಕಾಯಬೇಕಾದವರು
ಹಾಡೇ ಹಗಲಿ ಹೆಣ್ಣಿನ
ಮಾನಾ ಹರಣ ಮಾಡೂವಾಗ
ಮುಗಲ ವ್ಯಾಗ
ಹೆಲಿಕಾಪ್ಟರು ಹಗಣಾ ಮಾಡಿಕೊಂತ
ಹಾರ್‍ಯಾಡತಿತ್ತು
ನಮ್ಮೂರಾಗ ಕತ್ತಲ ಕವದಿತ್ತು.

ಇಂದ ಹಳ್ಳ್ಯಾಗ
ಕೊಳ್ಳಿ ಹತ್ತೇತಿ, ಬೆಳಕಾಗೇತಿ
ಭರದಿಂದ ಬರತೈತಿ
ಹುಷಾರ !

ಗ್ರಾಮೀಣ ಪ್ರೌಢ ಮಹಿಳೆಯರಿಗೆ ಶಿಕ್ಷಣ

ಲಲಿತಾಂಬ ವೃಷಭೇಂದ್ರಸ್ವಾಮಿ

ನಮ್ಮ ದೇಶ ಹಳ್ಳಿಗಳ ದೇಶ ಬಹಳಷ್ಟು ಮಂದಿ ಹಳ್ಳಿಯಲ್ಲೇ ವಾಸಿಸುತ್ತಾರೆ. ವ್ಯವಸಾಯವೇ ಅವರ ಮುಖ್ಯ ಕಸುಬು. ಹಾಗಾಗಿ ಹಳ್ಳಿಗರೇ ನಮ್ಮ ದೇಶದ ಬೆನ್ನೆಲುಬು ಎಂಬುದು ಎಲ್ಲರಿಗೂ ಗೊತ್ತು. ಆದರೆ ದೇಶದ ಬೆನ್ನೆಲುಬಾದ ಹಳ್ಳಿಗರ ಸ್ಥಿತಿ ಮಾತ್ರ ಶೋಚನೀಯ. ಹಳ್ಳಿಗಳಲ್ಲಿ ಬಡತನ, ಅಜ್ಞಾನ, ಆಲಸ್ಯ, ಅನೈರ್ಮಲ್ಯ ತುಂಬಿ ತುಳುಕುತ್ತದೆ. ಬಹುಪಾಲು ಹಳ್ಳಿಗರ ಮುಖದ ಮೇಲೆ ಅಸಹಾಯಕತೆ, ಅನಾರೋಗ್ಯ, ದಿಙ್ಮೂಢ ಭಾವನೆ ಬರೆದಿಟ್ಟಂತೆ ಎದ್ದು ಕಾಣಿಸುತ್ತದೆ. ಈ ದೃಶ್ಯ ಹೃದಯವಿರುವ ಯಾವ ಮನುಷ್ಯನಿಗೂ ನೋವನ್ನುಂಟು ಮಾಡದಿರಲು ಸಾಧ್ಯವಿಲ್ಲ. ಹಳ್ಳಿಗಳ, ಹಳ್ಳಿಗರ ಸ್ಥಿತಿ ಸುಧಾರಿಸಬೇಕಾದರೆ ಅಲ್ಲಿಯ ಪ್ರೌಢರಿಗೆ ತಮ್ಮ ಜೀವನವನ್ನು ಹಸನುಮಾಡಿಕೊಳ್ಳುವಂತಹ ಜವಾಬ್ದಾರಿ, ತಿಳುವಳಿಕೆ ಅಗತ್ಯ. ಅಂದಾಗ ಅವರು ತಮ್ಮ ಸ್ಥಿತಿಯನ್ನು ಚೆನ್ನಾಗಿ ಮಾಡಿಕೊಂಡು, ಮುಂದಿನ ಪೀಳಿಗೆಯ ಉತ್ತಮ ಬೆಳವಣಿಗೆಗೆ ಬೇಕಾದ ಮಾರ್ಗದರ್ಶನ, ಪರಿಸರ ಸೌಲಭ್ಯಗಳನ್ನು ಒದಗಿಸಬಲ್ಲರು; ಕಿರಿಯರ ಬಗೆಗಿನ ತಮ್ಮ ಜವಾಬ್ದಾರಿಯನ್ನು, ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ಹಳ್ಳಿಗಳ ಸುಧಾರಣೆ ಇಲ್ಲದೆ ದೇಶದ ಪ್ರಗತಿ ಇಲ್ಲ ಎಂಬುದನ್ನು ಮನಗಂಡು ಸರ್ಕಾರ, ಸಮಾಜಗಳು ಈ ದಿಶೆಯಲ್ಲಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ; ದಿನಬೆಳಗಾದರೆ ಯೋಜನೆಗಳನ್ನು ಯೋಜಿಸಿಕೊಳ್ಳುತ್ತಿವೆ. ಆದರೂ ಬೃಹತ್ ಜನಸಂಖ್ಯೆಯುಳ್ಳ ಬೃಹದ್ರಾಷ್ಟ್ರದ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸುವುದು ಸಾಧ್ಯವಾಗಿಲ್ಲ.

ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದರೂ ಅವುಗಳ ಮೂಲ ಕಂಡುಹಿಡಿಯುವುದಗತ್ಯ. ಆ ರೀತಿ ನೋಡಿದಾಗ, ಹಳ್ಳಿಯ ಜನರಿಗೆ ಅವರಿಗೆ ಬೇಕಾದ ಶಿಕ್ಷಣದ ಕೊರತೆಯೇ ಮುಖ್ಯ ಕಾರಣವೆಂಬುದು ಕಂಡುಬರುತ್ತದೆ. ಹಿರಿಯರಿಗೆ ಸರಿಯಾದ ತಿಳುವಳಿಕೆಯನ್ನು ಕೊಡದೆ ಕಿರಿಯರ ಸುಧಾರಣೆಗೆ ಏನೇ ಪ್ರಯತ್ನಪಟ್ಟರೂ ಅದು ಯಶಸ್ವಿಯಾಗುವುದು ಕಷ್ಟ. ಆದುದರಿಂದ ಹಳ್ಳಿಯ ಹಿರಿಯರನ್ನು ಸುಶಿಕ್ಷಿತರನ್ನಾಗಿ ಮಾಡುವುದು ಮೊದಲ ಕರ್ತವ್ಯ.

ಹಳ್ಳಿಯ ಹಿರಿಯರಿಗೆ ಶಿಕ್ಷಣವೆಂದ ತಕ್ಷಣ, ಎಲ್ಲರ ಮನಸ್ಸಿಗೆ ಸಾಮಾನ್ಯವಾಗಿ ಹೊಳೆಯುವುದು ಪುರುಷರ ಬಗೆಗೆ ಮಾತ್ರ. ಹಳ್ಳಿಯ ಪರಿಸರದಲ್ಲಿ ಪ್ರೌಢ ಹೆಣ್ಣು

ಮಕ್ಕಳ ಶಿಕ್ಷಣದ ಬಗ್ಗೆ ಯೋಜಿಸುವುದಿರಲಿ, ಯೋಚನೆಯೂ ಬರುವುದಿಲ್ಲ. ಆದರೆ ಹಳ್ಳಿಗಳ ಸ್ಥಿತಿ ಸುಧಾರಿಸಬೇಕಾದರೆ ಅಲ್ಲಿಯ ಸ್ತ್ರೀಯರಿಗೆ ಶಿಕ್ಷಣ ಕೊಡುವುದು ಅನಿವಾರ್ಯ. ತಜ್ಞರು ಹೇಳಿದ, 'ಒಬ್ಬ ಪುರುಷ ಸುಶಿಕ್ಷಿತನಾದರೆ ಅವನೊಬ್ಬನು ಮಾತ್ರ ಸುಧಾರಿಸಿದವನಾಗುತ್ತಾನೆ. ಆದರೆ ಒಬ್ಬ ಮಹಿಳೆ ಸುಶಿಕ್ಷಿತಳಾದರೆ ಇಡೀ ಕುಟುಂಬವೇ ಸುಶಿಕ್ಷಿತವಾಗುತ್ತದೆ." ಎಂಬ ಮಾತು ನೂರಕ್ಕೆ ನೂರು ಸತ್ಯ.

ಈ ಹಿನ್ನೆಲೆಯಲ್ಲಿ ಹಳ್ಳಿಗರ ಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ನಮ್ಮ ಹಳ್ಳಿಗರ ಜೀವನಮಟ್ಟ, ಜೀವನದ ರೀತಿ-ನೀತಿಗಳನ್ನು ನೋಡಿದರೆ, ಅಲ್ಲಿ ಶ್ರೀಮಂತರ ಜೀವನಕ್ಕೂ ಬಡವರ ಜೀವನಕ್ಕೂ ಹೆಚ್ಚು ವ್ಯತ್ಯಾಸವಿಲ್ಲ. ಇದ್ದವರಿಗೂ ತಮ್ಮ ಜೀವನವನ್ನು ಆರೋಗ್ಯಯುತವನ್ನಾಗಿ ಮಾಡಿಕೊಳ್ಳುವ, ಸೌಲಭ್ಯಯುತವನ್ನಾಗಿ ಮಾಡಿಕೊಳ್ಳುವ, ನೆಮ್ಮದಿಯುತವನ್ನಾಗಿ ಮಾಡಿಕೊಳ್ಳುವ ತಿಳುವಳಿಕೆ ಇಲ್ಲದ ಕಾರಣ ಅವರ ಜೀವನವೂ ಇಲ್ಲದವರ ಜೀವನದಂತೆಯೇ ಸಮಸ್ಯಾಮಯವಾಗಿದೆ. ಹಳ್ಳಿಗರ ಮುಖ್ಯ ಉದ್ಯೋಗ ವ್ಯವಸಾಯ. ಆದರಲ್ಲಿ ಪುರುಷರೂ-ಸ್ತ್ರೀಯರೂ ಸಮನಾಗಿ ಹೊಲಗಳಲ್ಲಿ ದುಡಿಯುತ್ತಾರೆ. ಹೊಲಗಳಿಗೆ ಹೋಗದ ಕೆಲವು ಮನೆಯ ಹೆಣ್ಣುಮಕ್ಕಳಿಗೂ ಬಿಡುವೇನಿರುವುದಿಲ್ಲ. ಹೊಲಕ್ಕೆ ಹೋಗುವವರಿಗೆ ಬೇಕಾದ ವ್ಯವಸ್ಥೆ ಮಾಡುವಲ್ಲಿ ಅವರಿಗೂ ಸಾಕಷ್ಟು ಕೆಲಸವಿರುತ್ತದೆ. ಆದರೆ ಈ ಕೆಲಸವೆಲ್ಲಾ ವರ್ಷಕ್ಕೆ ಕೇವಲ ಆರುತಿಂಗಳಷ್ಟು ಸಮಯ ಮಾತ್ರ-ಉತ್ತುವಾಗ, ಬಿತ್ತುವಾಗ ಹಾಗೂ ಸುಗ್ಗಿಯಲ್ಲಿ. ಉಳಿದಾರು ತಿಂಗಳು ವ್ಯರ್ಥಾ ಕಾಲಯಾಪನೆ ಮಾಡುತ್ತಾರೆ. ಹಾಗಾಗಿ ಮನೆಯ ಬಾಗಿಲುಗಳಲ್ಲಿ ಕಟ್ಟೆಗಳ ಮೇಲೆ, ಗುಂಪು ಕೂಡಿಕೊಂಡು ಹರಟುವುದು ಹಳ್ಳಿಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಈ ಪರಿಸ್ಥಿತಿಯಿಂದಾಗಿ ಅವರಲ್ಲಿ ಸೋಮಾರಿತನ, ಬೇಜವಾಬ್ದಾರಿತನ ಬೆಳೆಯುವುದು ಸುಲಭವಾಗುತ್ತದೆ. ಆದುದರಿಂದ ಈ ವಾತಾವರಣವನ್ನು ಇಲ್ಲವಾಗಿಸಬೇಕಾದರೆ ಗ್ರಾಮೀಣ ಪ್ರೌಢ ಪುರುಷರಿಗೆ ಶಿಕ್ಷಣ ಕೊಡುವ ಜೊತೆಗೆ, ಪ್ರೌಢ ಮಹಿಳೆಯರಿಗೂ ಶಿಕ್ಷಣ ಕೊಡುವುದು ಅಗತ್ಯ.

ಶಿಕ್ಷಣ ಎಂದೊಡನೆ ನಾವು ಓದು-ಬರಹದ ಬಗೆಗಷ್ಟೇ ಚಿಂತಿಸುತ್ತೇವೆ. ಆದರೆ ಪ್ರೌಢ ವಯಸ್ಸಿನ ಹಳ್ಳಿಯ ಹೆಣ್ಣುಮಕ್ಕಳಿಗೆ ಕೇವಲ ಓದು-ಬರಹದಲ್ಲಿ ಯಾವ ಉಪಯೋಗವೂ ಕಾಣುವುದಿಲ್ಲ; ಆಸಕ್ತಿಯೂ ಮೂಡುವುದಿಲ್ಲ. ಅವರಿಗೆ ನೇರವಾಗಿ, ತೀವ್ರವಾಗಿ ತಮ್ಮ ಜೀವನವನ್ನು ಸುಧಾರಿಸಬಲ್ಲ, ಅವರ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಲ್ಲ, ಅವರ ಬಾಳನ್ನು ಸುಖಮಯಮಾಡಬಲ್ಲ, ಶೀಘ್ರಫಲ ಕೊಟ್ಟು, ಅವರ ಬದುಕಿಗೆ ನೆರವಾಗಬಲ್ಲ ಶಿಕ್ಷಣ ಕೊಟ್ಟರೆ ಮಾತ್ರ ಅವರು ಆಸಕ್ತಿಯಿಂದ ಭಾಗವಹಿಸಿ, ಸಹಕರಿಸಿ ಅದನ್ನು ಪಡೆಯಲು ಮುಂದಾಗುತ್ತಾರೆ. ಇಲ್ಲದಿದ್ದಲ್ಲಿ ಪ್ರೌಢ ಶಿಕ್ಷಣದ ಧೋರಣೆಗಳ ಗುರಿ ಎಷ್ಟೇ ಅಮೂಲ್ಯವಾಗಿದ್ದರೂ, ಆಶಾದಾಯಕ

ವಾಗಿದ್ದರೂ ಗುರಿ ಮುಟ್ಟುವುದಿರಲಿ, ಮಾರ್ಗ ಕ್ರಮಿಸುವುದೇ ಅಸಾಧ್ಯವಾಗಿ ಬಿಡುತ್ತದೆ. ಹಳ್ಳಿಗರಿಗೂ ಓದು ಬರಹ ಅಗತ್ಯವಾದರೂ ಕೇವಲ ಅದೇ ಶಿಕ್ಷಣದ ಗುರಿಯಾಗಬಾರದು. ಪ್ರೌಢ ಶಿಕ್ಷಣ ಕೊಡುವಾಗ ಓದು-ಬರಹದ ಮಹತ್ವ ಅರಿಯುವಂತೆ ಮಾಡಿ, ನಂತರ ಓದು-ಬರಹ ಪ್ರಾರಂಭಿಸುವುದೊಳ್ಳೆಯದು. ಅವರ ದಿನನಿತ್ಯ ಜೀವನಕ್ಕೆ ಸಾಕಾಗುವಷ್ಟು ಓದು-ಬರಹ ಕಲಿಸಿದರೆ ಸಾಕು. ಆಸಕ್ತಿ ಇದ್ದವರು ಅದನ್ನು ಬೆಳೆಸಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಸೌಲಭ್ಯಗಳನ್ನು ಗ್ರಂಥಾಲಯಗಳ ಮೂಲಕ ಮಾಡಬಹುದು.

ಪ್ರೌಢ ಶಿಕ್ಷಣದ ಗುರಿ ಹಳ್ಳಿಗಳ ಆರೋಗ್ಯ ಜೀವನವನ್ನು ಸುಧಾರಿಸಲು ಸಹಕಾರಿಯಾಗಬೇಕು; ಕುಟುಂಬ ಜೀವನದಲ್ಲಿ ಪ್ರೀತಿ-ವಿಶ್ವಾಸದಿಂದ ಬದುಕಲು ಬೇಕಾದ ತಿಳುವಳಿಕೆಯನ್ನು ಕೊಡುವಂತಿರಬೇಕು. ಅವರ ಜೀವನ ಮಟ್ಟ ಸುಧಾರಿಸಲು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ನೆರವಾಗಬೇಕು. ಪ್ರಜಾರಾಜ್ಯದ ಜವಾಬ್ದಾರಿಯುತ ಪ್ರಜೆಗಳಾಗಿ ಹೊಣೆಗಾರಿಕೆಯನ್ನು ನಿರ್ವಹಿಸುವಂತಹ ತಿಳುವಳಿಕೆಯನ್ನುಂಟುಮಾಡುವಂತಿರಬೇಕು. ನಂತರ ದಿನನಿತ್ಯ ಜೀವನವನ್ನು ನಡೆಸಲು ಅಗತ್ಯ ಬೇಕಾಗುವಷ್ಟು ಓದಲು ಬರೆಯಲು ಬರುವಂತಾಗಬೇಕು. ಇಷ್ಟು ಗುರಿಯನ್ನು ಪ್ರೌಢ ಶಿಕ್ಷಣ ಇಟ್ಟುಕೊಂಡರೂ ಸಾಕು.

ಆದರೆ ಬರೀ ಗುರಿ ಸಾಲದು. ಇದನ್ನು ವ್ಯವಸ್ಥಿತವಾಗಿ ಕಾರ್ಯಗತವಾಗುವಂತಹ ಯೋಜನೆ ಬೇಕು. ಇಷ್ಟು ವಿಶಾಲ ದೇಶದ ಕೋಟ್ಯಾಂತರ ಜನರಿಗೆ ಶಿಕ್ಷಣ ಕೊಡಬೇಕಾದರೆ ಹೇರಳ ಹಣ ಇದರಲ್ಲಿ ತೊಡಗಿಸಬೇಕಾಗುತ್ತದೆ. ಅಷ್ಟು ಹಣ ಪೋಲಾಗದೆ ಉದ್ದೇಶಿತ ಗುರಿ ಸಾಧಿಸಲು ಸಾಧ್ಯವಾಗುವಂತಹ ಯೋಜನೆ ಕೈಗೊಳ್ಳಬೇಕು. ಇಲ್ಲವಿದ್ದಲ್ಲಿ ನಮ್ಮ ಅನೇಕ ಯೋಜನೆಗಳಂತೆ ಹಣ ಖರ್ಚು ಮಾತ್ರ ಆಗುತ್ತದೆ. ಸ್ಥಿತಿಮಾತ್ರ ಮತ್ತೂ ಹದಗೆಟ್ಟು ಹೋಗುತ್ತದೆ. ಹಾಗಾಗದಂತೆ ಮಾಡುವ ಎಚ್ಚರಿಕೆಯ ಯೋಜನೆ ಅಗತ್ಯ. ಮೇಲೆ ಹೇಳಿದ ಐದು ಅಂಶಗಳ ಬಗೆಗೂ ಕೂಲಂಕಷವಾಗಿ ಯೋಚಿಸಿ, ಶಿಕ್ಷಣದ ಅವಧಿಯನ್ನು ನಿರ್ಣಯಿಸಬೇಕು. ಪ್ರತಿ ವಿಷಯಕ್ಕೂ ಸರಿಯಾದ ಪಠ್ಯಕ್ರಮ, ಬೋಧನಾರೀತಿ, ಬೋಧನೋಪಕರಣ, ಪಠ್ಯ ಪುಸ್ತಕಗಳು, ಶಿಕ್ಷಕರಿಗೆ ಬೇಕಾಗುವ ಆಧಾರ ಗ್ರಂಥ ಮೊದಲಾದವುಗಳನ್ನು ನಿಗದಿಪಡಿಸಬೇಕು. ಪ್ರತಿ ಕೇಂದ್ರಕ್ಕೂ ಒಂದೊಂದು ಜೋಡಣೆ ಇರಬೇಕು. ಆ ಕೇಂದ್ರಕ್ಕೆ ಇಂತಿಷ್ಟು ಹಳ್ಳಿಗಳ ಜವಾಬ್ದಾರಿ ವಹಿಸಬೇಕು. ಅಲ್ಲಿ ಇರತಕ್ಕ ಪ್ರೌಢಶಿಕ್ಷಣ ಕೊಡಬೇಕಾಗಬಹುದಾದ ಪ್ರೌಢ ಹೆಣ್ಣುಮಕ್ಕಳ ಸಂಖ್ಯೆಯನ್ನು ನಿರ್ಧರಿಸಿ, ಒಂದೊಂದು ಬ್ಯಾಚಿಗೆ ಎಷ್ಟು ಜನಕ್ಕೆ ಶಿಕ್ಷಣ ಕೊಡಲು ಸಾಧ್ಯವಾಗಬಹುದೆಂಬುದನ್ನು ತೀರ್ಮಾನಿಸಿ, ಎಷ್ಟು ಅವಧಿಯಲ್ಲಿ ಇಂತಹ ಕೋರ್ಸನ್ನು ಪರಿಣಾಮಕಾರಿಯಾಗಿ ಮುಗಿಸಲು ಸಾಧ್ಯವೆಂಬುದನ್ನು ಕಂಡುಹಿಡಿದು, ಪ್ರತಿ ಕೇಂದ್ರವೂ ಇಂತಿಷ್ಟು ಅವಧಿ

ಯಲ್ಲಿ ಇಷ್ಟು ಜನ ಪ್ರೌಢಮಹಿಳೆಯರಿಗೆ ಶಿಕ್ಷಣ ಕೊಡಬೇಕೆಂಬ ಜವಾಬ್ದಾರಿ ವಹಿಸ ಬೇಕು.

ಆರೋಗ್ಯ ಜೀವನಕ್ಕೆ ಬೇಕಾದ ಶುಚಿ-ರುಚಿಯಾದ ಅಡಿಗೆ, ಮನೆಯ ಶುಚಿತ್ವ ಹೇಗೆ ಕಾಪಾಡಿಕೊಳ್ಳಬೇಕು; ಶುದ್ಧ ನೀರು, ಹವೆ ಬೆಳಕಿನ ಮಹತ್ವ, ಮಕ್ಕಳು ತಮ್ಮ ಆರೋಗ್ಯ ರಕ್ಷಣೆಗೆ ಬೆಳೆಯಿಸಿಕೊಳ್ಳಬೇಕಾದಂತಹ ರೂಢಿಗಳು, ನಿದ್ದೆ, ವಿಶ್ರಾಂತಿ, ವ್ಯಾಯಾಮ ಇವುಗಳ ಮಹತ್ವ. ಕಾಲಕ್ಕೆ ತಕ್ಕಂತಹ ಉಡುಪಿನ ಪದ್ಧತಿ, ಸಮತೋಲನ ಆಹಾರ, ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬರುವ ಕಾಯಿಲೆಗಳು, ಮಕ್ಕಳ ಹಾಗೂ ರೋಗಿಗಳ ಶುಶ್ರೂಷೆ, ಗರ್ಭಿಣಿಯಾಗಿದ್ದಾಗ ಹಾಗೂ ಮಗುವಿಗೆ ಎದೆ ಹಾಲು ಕೊಡುವಾಗ ತನ್ನ ಆರೋಗ್ಯ ರಕ್ಷಣೆ ಹೇಗೆ ಮಾಡಿಕೊಳ್ಳಬೇಕು ಜೀವನದಲ್ಲಿ ನಿಯಮಿತತನದ ಮಹತ್ವ ಮುಂತಾದ ಆರೋಗ್ಯದ ಮೂಲಭೂತ ನಿಯಮಗಳನ್ನೊಳಗೊಂಡ ಪಠ್ಯಕ್ರಮವನ್ನು ಆರೋಗ್ಯಶಿಕ್ಷಣ ಒಳಗೊಂಡಿರಬೇಕು.

ಅವರ ಜೀವನದಲ್ಲಿ ಬರಬಹುದಾದ ಉದಾಹರಣೆಗಳನ್ನೊಳಗೊಂಡ ಪುಸ್ತಕ ಗಳನ್ನು ಅತೀ ಸರಳವಾದ ಭಾಷೆಯಲ್ಲಿ ಸ್ವಲ್ಪ ದಪ್ಪ ಅಕ್ಷರಗಳಲ್ಲಿ ಸುಂದರವಾದ ಸಣ್ಣ, ಸಣ್ಣ ಪುಸ್ತಕಗಳನ್ನು ಪ್ರಕಟಿಸಬೇಕು. ಅದರಲ್ಲಿಯೇ ಎಲ್ಲೆಲ್ಲಿ ಯಾವ ಯಾವ ನಾಟಕಗಳನ್ನೂ, ಚಲನಚಿತ್ರಗಳನ್ನೂ ತೋರಿಸಬೇಕು, ಯಾವ ಯಾವ ಪ್ರ್ಯಾಕ್ಟಿಕಲ್ ಮಾಡಬೇಕು ಎಂಬುದನ್ನೂ ನಮೂದಿಸಿರಬೇಕು. ಈ ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸಗಳನ್ನು ಕೊಡಲು ಪ್ರ್ಯಾಕ್ಟಿಕಲ್ಸ್‌ನ್ನು ತೋರಿಸಲು ಎಷ್ಟು ಅವಧಿಬೇಕು ಎಂಬುದನ್ನು ನಿರ್ಧರಿಸುವುದರಿಂದ ವೃಥಾ ಕಾಲಯಾಪನೆಯಾಗದೆ ನಿರೀಕ್ಷಿತ ಅವಧಿ ಯಲ್ಲಿ ಯೋಜನಾಬದ್ಧವಾಗಿ ಕೆಲಸವನ್ನು ನಿರ್ವಹಿಸುವುದು ಸಾಧ್ಯವಾಗುತ್ತದೆ.

ನಮ್ಮ ಹಳ್ಳಿಗಳಲ್ಲಿ ಈಗಲೂ ಒಟ್ಟು ಕುಟುಂಬಗಳಿವೆ. ಅವರೆ ಅಲ್ಲಿ ಕೌಟುಂಬಿಕ ಸಮಸ್ಯೆಗಳೂ ಹೆಚ್ಚು, ಕುಟುಂಬದ ಅನೇಕರ ಜೀವನ ಸಮಸ್ಯಾಮಯ ವಾಗಿ ಇರುತ್ತದೆ. ಮುಖ್ಯವಾಗಿ ವಿರಸವಾದ ಅತ್ತೆ-ಸೊಸೆಯರ ಸಂಬಂಧ, ಅತ್ತಿಗೆ-ನಾದಿನಿಯರ ಸಂಬಂಧ, ನೆಗೆಣ್ಣಿಯರ ಸಂಬಂಧ. ಅದರಿಂದ ಕೌಟುಂಬಿಕ ನೆಮ್ಮದಿಯೇ ಕಲಕಿಹೋಗಿ ಕುಟುಂಬದ ಪ್ರಗತಿ ಕುಂಠಿತವಾಗಿಬಿಡುತ್ತದೆ. ಇದಕ್ಕೆ ಕುಟುಂಬದ ಹೆಣ್ಣುಮಕ್ಕಳಲ್ಲಿರುವ ಸಂಕುಚಿತ ಸ್ವಭಾವ, ಸ್ವಾರ್ಥ, ದ್ವೇಷ, ಮೋಸ, ಅಸೂಯೆ, ಅಹಂಕಾರ, ನೈಚ್ಯಾನುಸಂಧಾನ (inferiority complex) ಮುಂತಾದ ಸಂಸ್ಕಾರವಿಲ್ಲದ ಸ್ವಭಾವಗಳೂ, ತಪ್ಪು ತಿಳುವಳಿಕೆಗಳೂ ಮನಸ್ತಾಪ ಗಳೂ ಕಾರಣ. ಆದುದರಿಂದ, ಕುಟುಂಬದಲ್ಲಿ ಸಹಕಾರ ಪ್ರೀತಿ, ವಿಶ್ವಾಸಗಳನ್ನು ಮೂಡಿಸಲು ಸಹಾಯಕವಾಗುವಂತಹ ಉದಾಹರಣೆ ಸಹಿತವಾದ ಉಪನ್ಯಾಸಗಳನ್ನು ಕೊಡಬೇಕು. ಅಲ್ಲದೆ ಸಹಕಾರ, ಪ್ರೀತಿ, ವಿಶ್ವಾಸಗಳು ಜೀವನದಲ್ಲಿ ಹಾಸು ಹೊಕ್ಕಾಗಿದ್ದರೆ ಹೇಗೆ ಪ್ರಗತಿಯನ್ನು ಉಂಟು ಮಾಡಬಲ್ಲವು, ಇವಿಲ್ಲದ ಕುಟುಂಬ

ಗಳು ಹೇಗೆ ವಿನಾಶ ಹೊಂದುತ್ತವೆ ಎಂಬ ವಿಚಾರಗಳನ್ನು, ನೋಡುವವರ ಮೇಲೆ ಪರಿಣಾಮವನ್ನುಂಟು ಮಾಡುವಂತೆ ರಚಿಸಿದ ನಾಟಕಗಳನ್ನೂ, ಚಲನಚಿತ್ರಗಳನ್ನೂ ಪ್ರದರ್ಶಿಸಿ ಬೋಧಿಸಬೇಕು.

ಹಳ್ಳಿಗರ ಆರೋಗ್ಯಕರ ನೆಮ್ಮದಿಯ ಜೀವನಕ್ಕೆ ಬರೀ ತಿಳುವಳಿಕೆ ಸಹಾಯಕ ವಾಗುವುದಿಲ್ಲ. ಅದರ ಪ್ರಕಾರ ಬದುಕಲು ಹಣವೂ ಬೇಕು. ಎಲ್ಲರಿಗೂ ಸರ್ಕಾರವೇ ಬೇಕಾದ ಹಣವನ್ನು ಅನವರತವೂ ಪುಕ್ಕಟೆಯಾಗಿ ಕೊಡುತ್ತಾ ಹೋಗುವುದು ಸಾಧ್ಯ ವಿಲ್ಲ. ಆದುದರಿಂದ ಅವರು ಆರ್ಥಿಕವಾಗಿ ತಮ್ಮ ಕಾಲಮೇಲೆ ನಿಲ್ಲುವಂತಹ ಶಕ್ತಿಯನ್ನು ಕೊಡಬಲ್ಲ ಶಿಕ್ಷಣ ಕೊಟ್ಟರೆ, ಹೆಣ್ಣುಮಕ್ಕಳು ಅದರಿಂದ ಲಾಭಪಡೆದು ತಮ್ಮ ಜೀವನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಲ್ಲರು. ಕೆಲವು ಸಾರಿ ತಮಗೆ ಅವಶ್ಯವೆನಿಸಿದ ಸಾಮಾನುಗಳನ್ನು ಕುಟುಂಬಕ್ಕೆ ಹೊರೆಯಾಗದಂತೆ ಕೊಳ್ಳಲು, ಮತ್ತು ಪ್ರತಿ ಸಣ್ಣ ಪುಟ್ಟ ವಿಷಯಕ್ಕೂ ಪುರುಷನ ಕೃಪೆಗೆ ಕಾಯದೇ ಇರಲೂ ಸಾಧ್ಯವಾಗುತ್ತದೆ. ಅಸಹಾಯಕ ಹೆಣ್ಣುಮಕ್ಕಳು ಸ್ವಯಾರ್ಜನೆಯಿಂದ ಗೌರವ ಯುತರಾಗಿ ಜೀವನ ಮಾಡಲು ಸಹಾಯಕವಾಗುತ್ತದೆ. ಜೊತೆಗೆ ವಯಸ್ಕ ಹೆಣ್ಣು ಮಕ್ಕಳು ತಮ್ಮ ಬಿಡುವಿನ ವೇಳೆಯನ್ನು ವೃಥಾ ಹರಟುವುದರಲ್ಲಿಯೂ, ಕುಟುಂಬಗಳ ಸಮಸ್ಯೆಗಳನ್ನು ಹೆಚ್ಚಿಸುವುದರಲ್ಲಿಯೂ ಕಳೆಯದೆ ಸದುಪಯೋಗಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ವಿಷಯವು ಉಪನ್ಯಾಸಗಳನ್ನಲ್ಲದೆ ಪ್ರಾಕ್ಟಿಕಲ್ಸ್‌ನ್ನೂ ಒಳಗೊಂಡಿರಬೇಕು. ಇಲ್ಲಿ ಟೇಲರಿಂಗ, ಕಸೂತಿ ಕೆಲಸ, ಉಣ್ಣೆಯ ಸಿದ್ಧವಸ್ತು ಗಳನ್ನು ತಯಾರಿಸುವುದು. ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು, ಖುರ್ಚಿ ಹೆಣೆಯುವುದು, ಮನೆಗೆ ಬಣ್ಣಹಾಕುವುದು, ಫರ್ನಿಚರ್‌ಗೆ ವಾರ್ನಿಷ್ ಮಾಡುವುದು, ಸಾಬೂನು, ಸಾಬೂನಿನ ಪುಡಿಗಳನ್ನು ತಯಾರಿಸುವುದು, ಉಪ್ಪಿನ ಕಾಯಿ, ಹಪ್ಪಳ, ಸಂಡಿಗೆ, ಮಸಾಲಿಪುಡಿ, ಚಟ್ನಿಪುಡಿಗಳನ್ನು ತಯಾರಿಸುವುದು, ಬೇಕ್ರಿ ಪದಾರ್ಥಗಳನ್ನು ಜಾಮ, ಜೆಲ್ಲಿಗಳನ್ನು ತಯಾರಿಸುವುದು ಮುಂತಾದ ಗೃಹೋಪಯೋಗಿ ಹಾಗೂ ಹೆಣ್ಣುಮಕ್ಕಳಿಗೆ ಸುಲಭ ಸಾಧ್ಯವಾಗುವಂತಹ, ತಮ್ಮ ಮನೆಗೆಲಸ ಮಾಡಿಕೊಂಡು' ಬಿಡುವು ಸಿಕ್ಕಾಗ ಮಾಡಬಹುದಾದಂತಹ, ನಿತ್ಯ ಜೀವನಕ್ಕೆ ಅವಶ್ಯಕ ಎಂಬಂತಹ ಕೆಲಸಗಳಲ್ಲಿ ತರಬೇತಿ ಕೊಡುವ ವ್ಯವಸ್ಥೆ ಬೇಕು. ಈ ತರಬೇತಿಗೆ ಬೇಕಾದ ಕಚ್ಚಾ ಸಾಮಾನುಗಳನ್ನು ಸರಕಾರವು ಸಂಸ್ಥೆಗೆ ತೆರಿಗೆ ಇಲ್ಲದೆ ಒದಗಿಸಿದರೆ ಇಂತಹ ಕೋರ್ಸುಗಳನ್ನು ತೆರೆಯಲು ಅನುಕೂಲವಾಗುತ್ತದೆ. ಇಲ್ಲಿ ತಯಾರಾಗುವ ಸಾಮಾನುಗಳಿಗೆ ಮಾರುಕಟ್ಟೆ ಸಿಕ್ಕುವಂತೆ ಏರ್ಪಡಿಸಿ, ಅಲ್ಪಲಾಭಕ್ಕೆ ಎಂದರೆ ಸಾಮಾನುಗಳು ಬೇಗ ಮಾರಾಟವಾಗಲು ಅನುಕೂಲವಾಗುವಂತೆ ಮಾಡ ಬೇಕು. ಕಚ್ಚಾ ಸಾಮಾನಿನ ಬೆಲೆಯನ್ನು ಮಾತ್ರ ಕೇಂದ್ರದವರು ತೆಗೆದುಕೊಂಡು ಲಾಭವನ್ನು ಅದನ್ನು ತಯಾರಿಸಿದ ಹೆಣ್ಣುಮಕ್ಕಳಿಗೆ ಕೊಟ್ಟರೆ, ಅವರು ಪ್ರೋತ್ಸಾ ಹಿತರಾಗುವುದಲ್ಲದೆ ಈ ಕೆಲಸಗಳ ಬಗೆಗೆ ಆಸಕ್ತಿಯನ್ನು ಪಡೆಯುತ್ತಾರೆ.

ಪ್ರಜಾರಾಜ್ಯದಲ್ಲಿ ಪ್ರತಿಯೊಬ್ಬರೂ ಹೊಣೆಗಾರಿಕೆಯಿಂದ ನಡೆದಾಗ ಮಾತ್ರ ಅದು ಯಶಸ್ವಿಯಾಗಲು ಸಾಧ್ಯ. ಭಾರತದ ವಯಸ್ಕರಲ್ಲಿ ಅರ್ಧಭಾಗ ಹೆಣ್ಣುಮಕ್ಕಳಿರುವಾಗ ಅಷ್ಟುಜನ ತಮ್ಮ ಹೊಣೆಗಾರಿಕೆಯನ್ನು ಅರಿಯದವರಾಗಿ, ಬೇಜವಾಬ್ದಾರಿಯಿಂದ ಬದುಕಿದರೆ ಅದರ ದುಷ್ಪರಿಣಾಮ ದೇಶದ ಮೇಲೆ ಆಗಿಯೇ ತೀರುತ್ತದೆ. ಆದ್ದರಿಂದ ಪ್ರಜಾರಾಜ್ಯದ ಹೊಣೆಗಾರಿಕೆಯುಳ್ಳ ಪ್ರಜೆಯು ತಿಳಿದುಕೊಳ್ಳಬೇಕಾದ ಎಲ್ಲ ವಿಚಾರಗಳನ್ನೂ ಇವರಿಗೂ ತಿಳಿಸುವ ಏರ್ಪಾಟಾಗಬೇಕು.

ಜೊತೆ-ಜೊತೆಯಾಗಿ ಅಕ್ಷರಜ್ಞಾನವನ್ನೂ ಕೊಡಬೇಕು. ಇದಕ್ಕೆ ಹಿನ್ನೆಲೆಯಾಗಿ ಕೋರ್ಸಿನ ಪೂರ್ಣ ಅವಧಿಯಲ್ಲಿ ಆ ಹೆಣ್ಣುಮಕ್ಕಳು, "ನಮಗೆ ಓದು-ಬರಹ ಬಾರದು, ಅದು ಅಗತ್ಯ ಅದನ್ನು ಕಲಿಯಬೇಕು" ಎಂಬ ಆಸ್ಥೆ ಮೂಡಿಸುವ, ಆವಶ್ಯಕವೆನಿಸುವ ಪರಿಸರ ನಿರ್ಮಿಸುವುದಗತ್ಯ. ಅವರಿಗೆ ಇಷ್ಟವಾಗುವಂತಹ ಸಂಗತಿಗಳನ್ನೊಳಗೊಂಡ ಸರಳ ಪ್ರಾಥಮಿಕ ಪುಸ್ತಕ ರಚನೆಯೂ ಮಹತ್ವವಾದುದು. ಅವರ ಮನಸ್ಸನ್ನು ಓದಿನ ಕಡೆಗೆ ಹರಿಸಲು ಸುಂದರವಾದ, ಸಣ್ಣ ಸಣ್ಣ ಸರಳವಾದ ಪುಸ್ತಕಗಳನ್ನು ಕೇಂದ್ರದ ಗ್ರಂಥಾಲಯವು ಓದುಗರಿಗೆ ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು.

ಈ ಶಿಕ್ಷಣ ವಯಸ್ಕ ಹಳ್ಳಿಯ ಹೆಣ್ಣುಮಕ್ಕಳನ್ನು ಆಕರ್ಷಿಸುವಂತಿರಬೇಕು. ಕೇವಲ ಉಪನ್ಯಾಸಗಳಿಂದ ಅವರು ಆಕರ್ಷಿತರಾಗುವುದು ಕಠಿಣ. ಎಲ್ಲ ಶಿಕ್ಷಕರಿಗೂ ಆಸಕ್ತಿ ಕೆರಳಿಸುವಂತಹ ರೀತಿಯಲ್ಲಿ ಉಪನ್ಯಾಸ ಕೊಡಲು ಬರುವುದಿಲ್ಲ. ಆದುದರಿಂದ ವಿಷಯಕ ಜ್ಞಾನವನ್ನು ಕೊಡುವಾಗ ಅವರ ದಿನನಿತ್ಯ ಜೀವನದ ಉದಾಹರಣೆಗಳನ್ನು ಒಳಗೊಂಡು ಉಪನ್ಯಾಸ ಕೊಟ್ಟರೆ ಅವರಿಗೆ ಅದರಲ್ಲಿ ತಮಗೇನೋ ಬೇಕಾದುದು ಇದರಲ್ಲೇ ಇದೆ ಎನ್ನಿಸುತ್ತದೆ. ಅಲ್ಲದೆ ಹೇಳಿದ ವಿಚಾರಗಳು ಅವರ ಮನಸ್ಸಿನ ಮೇಲೆ ಪೂರ್ಣ ಹಾಗೂ ತೀವ್ರ ಪರಿಣಾಮ ಮಾಡಲು ನಾಟಕಗಳು ಹಾಗೂ ಚಲನಚಿತ್ರಗಳು ಬಹಳ ಉಪಯುಕ್ತ. ಅವು ನೋಡುವವರ ಮತ್ತು ಕೇಳುವವರ ಹೃದಯವನ್ನು ನೇರವಾಗಿ ಮುಟ್ಟಿ ವ್ಯಕ್ತಿಗಳ ಮೇಲೆ ಅತ್ಯಂತ ಪ್ರಭಾವವನ್ನು ಬೀರಬಲ್ಲವು. ಆದುದರಿಂದ ಯಾವುದು ಒಳಿತು ಅವರು ತಿಳಿದುಕೊಳ್ಳಲೇಬೇಕು; ಯಾವುದು ಕೆಡುಕು ಅವರು ಖಂಡಿತಾ ಅದನ್ನು ಮಾಡಬಾರದು ಎಂಬ ಅಂಶಗಳನ್ನು ವಿಷಯವನ್ನಾಗಿಟ್ಟುಕೊಂಡು ಸಮರ್ಥ ನಾಟಕಕಾರರಿಂದ ಸಣ್ಣ ನಾಟಕಗಳನ್ನು ರಚಿಸಬೇಕು. ಅವುಗಳನ್ನು ಕೇಂದ್ರ, ಕೇಂದ್ರಗಳಿಗೆ ಹೋಗಿ ಪ್ರದರ್ಶಿಸಿ ಬರಲು, ವಯಸ್ಕರ ಶಿಕ್ಷಣ ಸಮಿತಿಯು ಒಂದು ನಾಟಕ ತಂಡವನ್ನು ನೇಮಕಮಾಡಿಕೊಂಡರೆ ಬಹಳ ಉಪಯುಕ್ತ. ಪಠ್ಯಕ್ರಮಕ್ಕೆ ಅನುಗುಣವಾಗಿ ಅಗತ್ಯ ವಿಷಯಗಳ ಬಗೆಗೆ ಎಂದರೆ ಆರೋಗ್ಯ ಜೀವನದ ಸತ್ಪರಿಣಾಮಗಳು, ಅನಾರೋಗ್ಯ ಜೀವನದ ದುಷ್ಪರಿಣಾಮಗಳು, ಹೊಣೆಗಾರ ಪ್ರಜೆಯಾಗಿ ನಡೆಯುವುದರಿಂದ ದೇಶದಲ್ಲುಂಟಾಗುವ ಸುಸ್ಥಿತಿ,

ಬೇಜವಾಬ್ದಾರಿಯಿಂದ, ಅಜ್ಞಾನದಿಂದ ವರ್ತಿಸಿದರೆ ದೇಶದ ಮೇಲೆ ಆಗುವಂತಹ ದುಷ್ಪರಿಣಾಮಗಳು, ಕಷ್ಟಪಟ್ಟು ದುಡಿದು ಆರ್ಥಿಕ ಸ್ಥಿತಿ ಸುಧಾರಿಸಿಕೊಂಡು ನೆಮ್ಮದಿಯಿಂದ ಬಾಳುವ ಜನರು, ಗೃಹಣಿಯು ತಾಯಿಯಾಗಿ, ಕುಟುಂಬದ ಹೊಣೆಗಾರಿಕೆ ವ್ಯಕ್ತಿಯಾಗಿ ನಿರ್ವಹಿಸಬೇಕಾದ ಕರ್ತವ್ಯಗಳು, ಆರೋಗ್ಯದ ಬಗೆಗೆ ಆಕೆ ವಹಿಸಬೇಕಾದ ಜವಾಬ್ದಾರಿಗಳು— ಇಲ್ಲದಿದ್ದರೆ ಆಗಬಹುದಾದ ಅಪಾಯಗಳು, ಅನಾಹುತಗಳು ಮುಂತಾದ ವಿಷಯಗಳ ಬಗ್ಗೆ ಸಣ್ಣ ಸಣ್ಣ ಚಲನಚಿತ್ರಗಳನ್ನು ತಯಾರಿಸಿ ವೇಳಾ ಪತ್ರಿಕೆಯ ಪ್ರಕಾರ ಅವನ್ನು ಪ್ರದರ್ಶಿಸಬೇಕು. ಆ ಚಲನಚಿತ್ರಗಳು ತುಂಬಾ ಆಕರ್ಷಕವಾಗಿರುವುದಲ್ಲದೆ, ನಿರೂಪಣೆಯೂ ಸಹ ತುಂಬಾ ಪರಿಣಾಮಕಾರಿಯಾಗುವಂತಿರಬೇಕು.

ಈ ಯೋಜನೆಗಳನ್ನು ಬಹಳ ಎಚ್ಚರಿಕೆಯಿಂದ ಕಾರ್ಯಗತಗೊಳಿಸುವ ಏರ್ಪಾಟು ಬೇಕು. ಎಲ್ಲಿಯೂ ಹಣದ ಅಥವಾ ಸಮಯದ ಅಪವ್ಯಯವಾಗಲು ಆಸ್ಪದವಿರಬಾರದು. ಪ್ರತಿ ಕೇಂದ್ರದ ಮುಖ್ಯಸ್ಥನು ದಕ್ಷನೂ, ತನ್ನ ಕೆಲಸದ ಬಗ್ಗೆ ಸರಿಯಾದ ತಿಳುವಳಿಕೆ ಇದ್ದವನೂ, ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ ಹಾಗೂ ಅನುಭವ ಇದ್ದವನೂ, ಹಳ್ಳಿಗರ ಜೀವನದ ಪರಿಚಯವಿದ್ದು ಅದರ ಪ್ರಗತಿಯ ಬಗ್ಗೆ ಕಳಕಳಿ ಇದ್ದವನಾಗಿರಬೇಕು. ಕೆಲಸದ ನೌಕರರನ್ನು ಆಯ್ಕೆ ಮಾಡುವಾಗ ಯಾವುದೇ ರೀತಿಯ ಕಾದಿಡುವಿಕೆಯಾಗಲೀ, ನಿರ್ಬಂಧವಾಗಲೀ ಇರಬಾರದು. ಮೇಲಿನ ಅಂಶಗಳಿಗೆ ಮಾತ್ರ ಮಹತ್ವಕೊಡಬೇಕು. ಹಾಗಾದರೆ ಮಾತ್ರ ಪ್ರಯತ್ನಗಳು ಫಲಕೊಡಲು ಸಾಧ್ಯ. ಸ್ವಾರ್ಥಪರರಾದ ಪ್ರಭಾವೀ ವ್ಯಕ್ತಿಗಳ ಹಿಡಿತಕ್ಕೆ ಈ ಕೇಂದ್ರಗಳು ಒಳಗಾದರೆ ಯೋಜನೆಗಳೆಲ್ಲಾ ಬುಡಮೇಲಾಗುವುದಲ್ಲದೆ, ದೇಶದ ಹಿತಕ್ಕೂ ಧಕ್ಕೆಯುಂಟಾಗುತ್ತದೆ.

ನೆರಳು

ದೇವೇಂದ್ರಕುಮಾರ ಹಕಾರಿ

ಕಾಲ ಚಕ್ರಕ್ಕೆ ಹೆಗಲುಕೊಟ್ಟ ಸೂರ್ಯನ ಜೊತೆ
ಕಣ್ದೆರೆದು, ಸದಾ,
ಹೊತ್ತು ಹೊತ್ತಿಗೆ ಎಲ್ಲವನ್ನೂ ಹೊತ್ತು
ಎಲ್ಲರನ್ನೂ ಯಾವುದೇ ಅಳತೆಗೂ
ಹಿಗ್ಗಿಸುವ ಕುಗ್ಗಿಸುವ ಮಾಂತ್ರಿಕ ನೆರಳು
ಉಂಗುರಸ್ಪರ್ಶ ಕಳಚಿಕೊಂಡು,
ಕರಗಿ ಹೋಗುತ್ತವೆ ಕಪ್ಪಿನಲ್ಲಿ, ಇರುಳು.

ಹಗಲಗೆಳೆಯರೇ ಇರುಳು ಅಪರಿಚಿತರು
ಇರುಳಗೆಳೆಯರೇ ಹಗಲು ಅ-ಪರಿಚಿತರಾಗಿ
ಪರಚುತ್ತಾರೆ, ತಿರುಚುತ್ತಾರೆ.

ಎಲ್ಲರನ್ನೂ ಯಾವುದೇ ಅಳತೆಗೆ ಬೆಳೆಸುವ
ಇಳಿಸುವ ನೆರಳು :
— ರಾತ್ರಿ,
ಯಾರ ಜೊತೆಗೂಡುವುದು ಯಾರ ನೆರಳು
ಬಲ್ಲವರು ಯಾರು ?
ಯಾವ ಬಣ್ಣಗಳಲ್ಲಿ ನಿರ್ದಯದಿ ತನ್ನನ್ನು
ಕಳೆದುಕೊಳ್ಳುತ್ತದೆಯೋ
ಯಾರು ಬಲ್ಲವರು ? —
ಉರುಳುಹಾಕಿ ಎಳೆದಾಡುತ್ತವೆ ಹಗಲು
ಬೀಸಾಡುತ್ತವೆ ರಾತ್ರಿ, ಕ್ರೂರ ಮೌನದಲಿ.

ಈಗೀಗ ಗೆಳೆಯ ನನಗಿಂತ ನಿನಗಿಂತ ಈ
ನೆರಳುಗಳು ಮಾತ್ರ ಜೀವಂತವಾಗುತ್ತಿವೆ.
ಯಾಕೆ ಗೊತ್ತೇ ಗೆಳೆಯ ?

ಚಂಡಮಾರುತವಾಗಿ ದಿಕ್ಕು ದಿಕ್ಕನು ಉಡುಗಿ
ಮೋಡ ಮೋಡದಿ ಗುಡುಗಿ
ಎರಗಿ ಸಿಡಿಲಾಗಿ, ಮುಗಿಲಾಗಿ ಕರಗಿ
ಸುರಿಯಬೇಕಾದವರು—
ಅವರೆ ತಲೆತಗ್ಗಿಸುತ ಕುರಿಯ ಕಾಲಲಿ ನುಸುಳಿ
ಸೆರಗು ಬೀಸುವ ಗಂಡು-ಜೋಗತಿಯ ಕುಣಿತ—
ಲಯಗತ್ತಿನಲಿ ಸೆರೆಸಿಕ್ಕುವ ಉದೋ ಹಾಡಿ,
ಹಾಡಿ ಮರುಳಾಗಿದ್ದಾರೆ, ನೆರಳಾಗಿದ್ದಾರೆ.
ಅದಕಾಗಿಯೋ ಗೆಳೆಯ ಈಗೀಗ. ನನಗಿಂತ
ನಿನಗಿಂತ ಈ ನೆರಳು ಜೀವಂತವಾಗುತ್ತಿವೆ.

ಮೈಲಾರಲಿಂಗ ಮತ್ತು ಪರಿವಾರ ದೇವತೆಗಳು

ಎಂ. ಬಿ. ನೇಗಿನಹಾಳ

ಮೈಲಾರ ದೇವರ ಬಗೆಗೆ ವಿದ್ವಾಂಸರಲ್ಲಿ ಹಲವಾರು ರೀತಿಯ ತಪ್ಪು ಕಲ್ಪನೆಗಳುಂಟಾಗಿವೆ. ಅದಕ್ಕೆ ಕಾರಣ ಈ ಸಂಪ್ರದಾಯದ ಸರಿಯಾದ ಪರಿಚಯ ಇಲ್ಲದಿರುವುದೇ ಆಗಿದೆ. ಪ್ರಾಚೀನ ಕನ್ನಡ ಕೃತಿಗಳಲ್ಲಿರುವ ಉಲ್ಲೇಖಗಳಲ್ಲಿ ಹೆಚ್ಚಿನವು ಇಂಥ ತಪ್ಪು ಕಲ್ಪನೆಗಳಿಗೆ ಇನ್ನಷ್ಟು ಸಹಾಯಕವಾಗಿವೆ. ಪ್ರಾಚೀನರ ವಿಷಯಕ್ಕೆ ಹೇಳಬೇಕೆಂದರೆ, ಅವರಲ್ಲಿದ್ದ ತಪ್ಪು ಕಲ್ಪನೆಗಳಿಗೆ ಅವರಿಗಿದ್ದ ಅಲ್ಪ ಪರಿಚಯ ಒಂದು ಕಾರಣವಾದರೆ ತಂತಮ್ಮ ಮತಗಳ ಅಭಿನಿವೇಶ ಅದಕ್ಕೂ ಪ್ರಬಲವಾಗಿದ್ದ ಮತ್ತೊಂದು ಕಾರಣ. ಈ ಸಂಪ್ರದಾಯವು ಬಹು ವ್ಯಾಪಕವಾಗಿದ್ದರೂ ಒಂದು ಮತ ವಿಶೇಷವಾಗಿ ಬೆಳೆದು ಬರದೆ, ಸರ್ವಜನ ಸುಲಭವಾಗಿ ಮತೀಯತೆಯ ಬಿಗಿ ಚೌಕಟ್ಟಿನಿಂದ ಹೊರಗೆ ನಿಂತು ಸರ್ವಜಾತಿಗಳವರಿಗೂ ಮುಕ್ತವಾಗಿ ಉದ್ದಕ್ಕೂ ಸಾಗಿಬಂದಿದೆ. ಇದರಿಂದಾಗಿ ಆಚರಣೆಯಲ್ಲಿ ಹೆಚ್ಚಿನ ಪರಿಷ್ಕಾರಗಳು ನಡೆಯದೆ ಜಾನಪದೀಯ ಅಂಶಗಳು ದೊಡ್ಡ ಪ್ರಮಾಣದಲ್ಲಿ ಉಳಿದು ಬಂದಿವೆ. ಕರ್ನಾಟಕದ ಉಚ್ಚವರ್ಗವು ಇದರ ಬಗೆಗೆ ಮಮತ್ವವನ್ನು ತಾಳದೇ ಹೋದುದರಿಂದ ಸಂಪ್ರದಾಯವನ್ನು ಸಮರ್ಥಿಸುವ ಗ್ರಂಥಗಳಾಗಲೀ ಪುರಾಣಗಳಾಗಲೀ ಕನ್ನಡದಲ್ಲಿ ವಿಶೇಷವಾಗಿ ರಚನೆಗೊಂಡಂತೆ ಕಾಣಲಿಲ್ಲ. ಸರ್ವಜಾತಿ ಸಾಧಾರಣವಾದ ಭಕ್ತಿಯೊಂದೇ ಈ ಸಂಪ್ರದಾಯದ ಮೂಲ ಆಸ್ತಿಯಾಯಿತು. ಮೇಲಾಗಿ ವೈದಿಕ, ಜೈನ ಮತ್ತು ವೀರಶೈವ ಪಂಗಡಗಳು ಕರ್ನಾಟಕದಲ್ಲಿ ತಮ್ಮ ಪ್ರಭಾವ ಬೀರಲು ಪೈಪೋಟಿ ನಡೆಸುತ್ತಿದ್ದವು. ಆದ್ದರಿಂದ ಜನಸಾಮಾನ್ಯರಲ್ಲಿ ತಮ್ಮ ಮತ ಪ್ರಭಾವವನ್ನು ಬೆಳೆಯಿಸಲು ಅಡ್ಡಿಯಾಗಿ ತೋರಿದ ಈ ಸಂಪ್ರದಾಯವನ್ನೂ ಇದರ ಅನುಯಾಯಿಗಳನ್ನೂ ಸಂದರ್ಭ ಸಿಕ್ಕಾಗಲೆಲ್ಲ ಜರೆಯುತ್ತ ಬಂದರು. ಅದೇ ರೀತಿ ತಂತಮ್ಮ ಮತಗ್ರಂಥಗಳಲ್ಲಿ ಈ ದೇವತೆಯನ್ನು ಕುರಿತಂತೆ ಇರುವ ಕತೆಗಳನ್ನು ಮನಬಂದ ರೀತಿಯಲ್ಲಿ ತಿರುಚಿ ಹೇಳಿದರು. ಇದರಿಂದ ಈ ಕಾಲದ ವಿಮರ್ಶಕ ವಿದ್ವಾಂಸರಿಗೂ ಹಲವು ವಿಷಯಗಳಲ್ಲಿ ತಪ್ಪುಕಲ್ಪನೆ ಉಂಟಾಗಲು ಅವಕಾಶವಾಯಿತು.

ಆದರೆ ಮಹಾರಾಷ್ಟ್ರದಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಅಲ್ಲಿಯ ಬ್ರಾಹ್ಮಣ ಸಮುದಾಯವು ಈ ಸಂಪ್ರದಾಯದತ್ತ ವಿಶೇಷ ಆಕರ್ಷಿತವಾಯಿತು. ತತ್ಫಲವಾಗಿ ಅಲ್ಲಿ ಸಂಸ್ಕೃತ–ಮರಾಠಿ ಭಾಷೆಗಳಲ್ಲಿ ಮೈಲಾರಲಿಂಗನನ್ನು ಕುರಿತಂತೆ ಪುರಾಣಗಳೂ ಆಚ

ರಣಾ ವಿಧಿನಿರೂಪಕ ಗ್ರಂಥಗಳೂ ಸಹಸ್ರನಾಮಾವಳಿಗಳೂ ಹುಟ್ಟಿಕೊಂಡು ಬಂದವು, ಅಷ್ಟೇ ಅಲ್ಲದೆ ಸ್ಕಂಧ ಪುರಾಣ, ಪದ್ಮ ಪುರಾಣಗಳಂಥ ಆಧಾರಭೂತ ಕೃತಿಗಳಲ್ಲಿಯೂ ಈ ದೇವತೆಯ ಮಹಾತ್ಮ್ಯಗಳು ಸೇರಿಕೊಂಡವು. ಮೂಲಭೂತವಾಗಿ ಕರ್ನಾಟಕದವನಾದ ಈ ದೇವತೆಯ ಬಗೆಗೆ ಮಹಾರಾಷ್ಟ್ರದ ವಿದ್ವಾಂಸರು ಸಂಶೋಧನೆಗಳನ್ನು ಕೈಕೊಂಡು ಗ್ರಂಥಗಳನ್ನು ಕೂಡ ರಚಿಸಿದ್ದಾರೆ, ಪರಂಪರೆಯಿಂದ ಬಂದ ಸಂಸ್ಕೃತ–ಮರಾಠಿ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಆದರೂ ಅವರು ಸಂಶೋಧಿಸಿದ ಸಂಗತಿಗಳಲ್ಲಿ ಹಲವಾರು ಬಗೆಯ ಕೊರತೆಗಳಿವೆ ಎಂದು ಅವರೇ ಒಪ್ಪಿದ್ದಾರೆ. ಆದ್ದರಿಂದ ಈ ವಿಷಯಕ್ಕೆ ಕರ್ನಾಟಕದಲ್ಲಿ ಸಂಪೂರ್ಣವಾದ ಸಂಶೋಧನೆ ನಡೆಯಬೇಕಾಗಿದೆ. ಸದ್ಯಕ್ಕೆ ಈ ದೇವತಾಪರಿವಾರದ ಲಘುಪರಿಚಯವಾದರೂ ಇರಬೇಕಾದುದು ಅಪೇಕ್ಷಣೀಯ.

ಈ ಸಂಪ್ರದಾಯದ ಪ್ರಧಾನದೇವತೆ ಮೈಲಾರಲಿಂಗ ಅಥವಾ ಏಳುಕೋಟಿ ಎಂಬ ಪುರುಷದೇವತೆ. ಭಕ್ತರಿಗೆ ಈತ ಪ್ರತ್ಯಕ್ಷ ಶಿವನೆ. ರಾಕ್ಷಸರ ವಧಾರ್ಥ ಭೂಲೋಕಕ್ಕೆ ಬಂದು ಕಂಥೆಯ ವೇಷತೊಟ್ಟನು. ಮಲ್ಲಾರಿ ಸಹಸ್ರನಾಮಾವಳಿಯಲ್ಲಿ[೧] ಮುಂದಿನಂತೆ ವರ್ಣನೆಯಿದೆ:

ಧ್ಯಾಯೇನ್ಮಲ್ಲಾರಿದೇವಂ ಕನಕಗಿರಿನಿಭಂ ಮ್ಹಾಳಸಾ ಭೂಷಿತಾಂಕಮ್ ।
ಶ್ವೇತಾಶ್ವಂ ಖಡ್ಗಹಸ್ತಂ ವಿಬುಧಬುಧಗಣೈಃ ಸೇವ್ಯಮಾನಂ ಕೃತಾರ್ಥೈಃ ॥ ॥೧॥
ಯುಕ್ತಾಂಘ್ರಿಂ ದೈತ್ಯಮೂರ್ಧ್ನಿಂ ಡಮರು ವಿಲಸಿತಂ ನೈಶಚೂರ್ಣಾಭಿರಾಮ್ ।
ನಿತ್ಯಂ ಭಕ್ತೇಷು ತುಷ್ಟಂ ಶ್ವಗಣ ಪರಿವೃತಂ ನಿತ್ಯಯೋಂಕಾರ ರೂಪಮ್ ॥೨॥

'ಶ್ರೀತತ್ವನಿಧಿ'ಯಲ್ಲಿ ಮುಂದಿನ ಕೆಲವು ಸ್ತೋತ್ರಗಳಿವೆ :

ಆದ್ಯಾಷ್ಟಕಂ ಸುವರ್ಣಾಭಂ ತ್ರಿಶೂಲಂ ಡಮರುಂ ತಥಾ ।
ಪಾಶಂ ಚಾಸಿ ದಧಾನಂ ಚ ಧಾಯೇತ್ಸರ್ವಾಂಗ ಸುಂದರಮ್ ॥[೨] ॥೩॥

ಶುಭಾಂಗಂ ಭೂಷಣೈರ್ಯುಕ್ತಂ ಹರಿದ್ರಾಚೂರ್ಣಸಂಯುತಮ್ ।
ಪೀತಾಂಬರಮುದಾರಾಂಗಂ ಭಜತಾಂ ಕಾಮದಂ ಸದಾ ॥೪॥

ತ್ರಿಶೂಲಂ ಡಮೃಗಂ ಖಡ್ಗಂ ವರದಂಚ ಕರಾಂಬುಜೈಃ ।
ಬಿಭ್ರಾಣಂ ಪ್ರಾಣಿ ರಕ್ಷಣಾರ್ಥಂ ಸರ್ವಕಾಲಮತಂದ್ರಿತಮ್ ॥೫॥

ದೇವಾನಾಮ್ ರಕ್ಷಣಾರ್ಥಾಯ ದಾನವಾನಾಮ್ ವಧಾಯ ಚ ।
ಮೈಲಾರಂ ರೂಪಮಾಸ್ಥಾಯ ಶಂಕರಃ ಶಂಕರೋಽ ಭವತ್ ॥ ॥೬॥

---

೧. ಶ್ರೀ ರಾ. ಚಿ. ಢೇರೆ : 'ಖಂಡೋಬಾ' ಪು. ೫೦.
ಮಲ್ಲಾರಿ ಸಹಸ್ರನಾಮಾವಳಿ ಪು. ೩.
೨. ಅದೇ : ಪು. ೪೯. ೩. ಅದೇ : ಪು. ೪೯.

ಗಜಸಿಂಹ ವರಾಹಾರ್ಕ್ಷ ವ್ಯಾಘ್ರರೂಪಧರಾನ್ ಖಲಾನ್ ।
ದುಷ್ಟಾನ್ ಶತ್ರೂನ್ ವಿನಿಘ್ನಂತುಂ ತುರಗೇಣ ಚಚಾರಹ ॥[೩] ॥೭॥

ಆತನ ಇನ್ನೊಂದು ಧ್ಯಾನ :

ಸಿತಹಯ ವರ ಪತ್ರಂ ಹಾರಸಂಭೂಷಿತಾಂಗಮ್ ।
ಪರಿವೃತವತಿ ಘೋರೈಃ ಸಪ್ತಭಿಃ ಸಾರಮೇಯೈಃ[೪] ॥೮॥

ಮೈಲಾರ ದೇವಸ್ಥಾನದ ಕಾಗದ ಪತ್ರಗಳಲ್ಲಿ ಮುಂದಿನ ಒಂದು ಪದ್ಯ ಕಂಡು ಬರುತ್ತದೆ :

ಖಡ್ಗಂ ಕಪಾಲಂ ಢಮರುಂ ತ್ರಿಶೂಲಂ
ಭುಜೈಶ್ಚತುರ್ಭಿಚತುರಂ ? ವಹಂತಂ ।
ಆಶೇಷು ಸಂಪತ್ಸುಖದಾಯಕಾಕ್ಷಂ ।
ಮಲ್ಲಾರಿನಾಥಂ ಮನಸಾ (ನಮಸಾ) ಸ್ಮರಾಮಿ ॥೧೦॥

ಮೇಲಿನ ಧ್ಯಾನಶ್ಲೋಕ ಮತ್ತು ಸ್ತುತಿಗಳಿಂದ ಈ ದೇವತೆಯ ಸ್ವರೂಪವು ಮುಂದಿನಂತೆ ವ್ಯಕ್ತವಾಗುತ್ತದೆ :

ಮೈಲಾರನಿಗೆ ಚತುರ್ಭುಜಗಳು. ಅವುಗಳಲ್ಲಿ ತ್ರಿಶೂಲ, ಡಮರು, ಖಡ್ಗಗಳು ಶೋಭಿಸುತ್ತವೆ. ಇನ್ನೊಂದು ಕೈಯು ವರದ ಹಸ್ತವೆಂದು ಒಂದು ಕಡೆ ಹೇಳಿದ್ದರೆ ಕಪಾಲವಿರುವುದಾಗಿ ಮತ್ತೊಂದರಲ್ಲಿ (ಪ. ೯) ಹೇಳಿದೆ. ಮೈಗೆ ನೈಶಚೂರ್ಣ ಎಂದರೆ ಅರಿಸಿನದಿಂದ ತೊಡೆದು ಕನಕಗಿರಿಯಂತೆ ಶೋಭಾಯಮಾನನಾಗಿ ತೋರುತ್ತಾನೆ. ಶ್ವೇತ ಹಯಾರೂಢನಾಗಿದ್ದು ಎಡಭಾಗದಲ್ಲಿ ಗಂಗಾಮ್ಹಾಲಸಿಕಾ (ಗಂಗಿಮಾಳವ್ವ) ಸಂಯುತನಾಗಿದ್ದಾನೆ. ತನ್ನ ಪಾದವನ್ನು ದೈತ್ಯನ ಶಿರದ ಮೇಲೆ ಇಟ್ಟು ಕೊಂಡಿದ್ದಾನೆ. ಸುತ್ತಲೂ ಭಯಂಕರವಾದ (ಏಳು) ಶ್ವಾನಗಳು ಸುತ್ತುವರಿದಿವೆ. ದಾನವರನ್ನು ವಧಿಸಿ, ಶರಣಾಗತರನ್ನು ರಕ್ಷಿಸಲೋಸುಗ ಕಲ್ಯಾಣಕಾರಕನಾದ ಸಾಕ್ಷಾತ್–ಶಂಕರನು ಮೈಲಾರನ (ಮೇಲೆ ವರ್ಣಿಸಿದ) ರೂಪತಾಳಿ ಅವತರಿಸಿ ಬಂದಿದ್ದಾನೆ. ಇದು ಒಟ್ಟು ಮೈಲಾರಲಿಂಗನನ್ನು ಕುರಿತಂತೆ ಇರುವ ಸ್ವರೂಪವೆನ್ನಬಹುದು— ವಿಶೇಷವಾಗಿ ಗ್ರಾಂಥಿಕವಾದ ಪರಂಪರೆಯಲ್ಲಿ.

ಜಾನಪದ ಪರಂಪರೆಯಂತೆ, ಈತನ ಸ್ವರೂಪವು ಅವನ ಭಕ್ತರಾದ ಗೊರವರು ಕಟ್ಟಿಕೊಂಡಿರುವ ರೀತಿಯ ವೇಷ–ಭೂಷಣಗಳಿಂದ ಕೂಡಿದ್ದಾಗಿರುವುದಂತೆ. ಎಂದರೆ ಮೈಮೇಲೆ ಕಂಬಳಿಯಿಂದ ಮಾಡಿದ ಕಂಥೆ (ನಿಲುವಂಗಿ), ತಲೆಯ ಮೇಲೆ ಮುರಗಿ–ಮುಂಡಾಸ, ಕೈಯಲ್ಲಿ ತ್ರಿಶೂಲ, ಡಮರು, ಭಂಡಾರದ ಬಕ್ಷ (ಚೀಲ) ಹುಲಿ ಅಥವಾ ಜಿಂಕೆಯ ಚರ್ಮದಿಂದ ಮಾಡಿದ್ದು — ಗಂಟೆ, ಮತ್ತು ಡೋಣೆ ಇವು ಸಾಮಾನ್ಯ. ಜಾನಪದ ಹಾಡುಗಳಲ್ಲಿ ಈ ಸ್ವರೂಪ ವರ್ಣನೆ ಕಂಡುಬರುತ್ತದೆ.

೪, ಅದೇ : ಪು. ೫೦.

ಈ ದೇವತೆಯನ್ನೇ ಅನೇಕ ವೇಳೆ 'ಮಾರ್ತಾಂಡ ಭೈರವ' ನೆಂದು ಕರೆಯುವುದೂ ಕಂಡುಬರುತ್ತದೆ. ಶಿವನ ಸಂಹಾರ ಮೂರ್ತಿಗಳಲ್ಲಿ ಭೈರವನ ಸ್ವರೂಪವು ಪ್ರಧಾನವಾದುದು. ಭೈರವ ಸ್ವರೂಪದಲ್ಲಿ ಒಟ್ಟು ಅರವತ್ನಾಲ್ಕು ಪ್ರಭೇದಗಳಿವೆ. ಈ ಅರವತ್ನಾಲ್ಕನ್ನೂ ಎಂಟು ವರ್ಗಗಳಾಗಿ ವಿಭಾಗಿಸಿದೆ. ಅವುಗಳಲ್ಲಿ 'ಅಸಿತಾಂಗ ಭೈರವ' ಎಂಬುದೂ ಒಂದು. ವರ್ಗ, ಪಿಶಾಲಾಕ್ಷ, ಮಾರ್ತಾಂಡ, ಮೋದಕಪ್ರಿಯ, ಸ್ವಚ್ಛಂದ, ವಿಘ್ನಸಂತುಷ್ಟ, ಖೇಚರ' ಮತ್ತು ಸಚಾರಚರ ಎಂಬವು ಅಸಿತಾಂಗ ಭೈರವರಲ್ಲಿ ಬರುವ ಅಷ್ಟ ಮೂರ್ತಿಗಳು. ಈ ವರ್ಗದ ಭೈರವರು ಸುವರ್ಣ ವರ್ಣದವರಾಗಿದ್ದು ಚತುರ್ಭುಜಗಳಿರುವುದು ಇವರ ವೈಶಿಷ್ಟ್ಯ. ತ್ರಿಶೂಲ, ಡಮರು, ಪಾಶ ಮತ್ತು ಖಡ್ಗಗಳು ಕ್ರಮವಾಗಿ ಇವರ ಕೈಯಲ್ಲಿರುವ ಆಯುಧಗಳು.[೫] ಮೇಲಿನ ಸಂಸ್ಕೃತ ಶ್ಲೋಕಗಳಲ್ಲಿ ಮೂರನೆಯದು ಈ ವಿವರವನ್ನು ಸಮರ್ಥಿಸುತ್ತದೆ.

ಅನಂತಾನಂದಗಿರಿಯ ಶಂಕರ ವಿಜಯದಲ್ಲಿ[೬] ಮಲ್ಲಾರಿ – ಶಿವನಉಲ್ಲೇಖವಿದ್ದುದು ತಿಳಿದುಬಂದಿದೆ ಅದರಲ್ಲಿ ಮಲ್ಲಾರಿ-ಶಿವನ ವಾಹನವು ಹಯದ ಬದಲು ಶ್ವಾನವೆಂದು ಹೇಳಿದೆ. ಅನಂತಾನಂದಗಿರಿಗೆ ಮೈಲಾರ ದೇವತೆಯ ಸ್ವರೂಪ-ವಿಷಯಕ್ಕೆ ಸರಿಯಾದ ತಿಳುವಳಿಕೆ ಇರಲಿಲ್ಲವೆಂದು ವ್ಯಕ್ತವಾಗುತ್ತದೆ. ಇದೇ ರೀತಿ 'ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು'[೭] ಎಂಬ ಬಸವಣ್ಣನವರ ವಚನಕ್ಕೂ ಅನ್ವಯಿಸುತ್ತದೆಂದು ಹೇಳಬಹುದು. ಅಥವಾ ಯಾರೋ ತಿಳುವಳಿಕೆ ಇಲ್ಲದವರು ರಚಿಸಿದ ಮೂರ್ತಿಗಳು ಇವರ ಕಣ್ಣಿಗೆ ಬಿದ್ದಿರಬಹುದಾದ ಸಾಧ್ಯತೆಯೂ ಇದೆ.

ಮೈಲಾರ ಮತ್ತು ದೇವರಗುಡ್ಡಗಳಲ್ಲಿರುವ ಸ್ವಯಂಭೂಲಿಂಗಗಳ ಹಿಂಭಾಗದಲ್ಲಿ ಪೀಠದ ಮೇಲೆ ಕುಳಿತಿರುವಂತೆ ರಚಿಸಿದ ದೇವತಾ, ಮೂರ್ತಿಗಳಿವೆ. ಸ್ವಯಂಭೂಲಿಂಗಗಳಿಗೆ ಇಲ್ಲಿ ಪೂಜ್ಯನ ಪ್ರಾಧಾನ್ಯವಿದೆ. ಅಭಿಷೇಕಾದಿಗಳು ಜರಗುವುದು ಸ್ವಯಂಭೂಲಿಂಗಗಳಿಗೇ. ಮೈಲಾರದ ಮೂರ್ತಿಯು ಚತುರ್ಭುಜಗಳಲ್ಲಿ, ಬಿಡುಗಡೆಗೆ ಖಡ್ಗ ತ್ರಿಶೂಲಗಳೂ ಎಡಗೈಗಳಲ್ಲಿ ಡಮರು ಮತ್ತು ಪಾನಪಾತ್ರಗಳೂ ಇವೆ. ಮೈಮೇಲೆ ಸರ್ಪಾಭರಣಗಳಿದ್ದು ಜಡೆಯನ್ನು ಸುತ್ತಿ ಕಟ್ಟಿದಂತಿದ್ದು ಅದಕ್ಕೂ ಸರ್ಪವೊಂದನ್ನು ಕಟ್ಟಲಾಗಿದೆ. ಮೈಲಾರದಲ್ಲಿಯ ಮೂರ್ತಿ ಮಣ್ಣಿನದಾಗಿದೆ. ಎಂತಲೆ ಅದನ್ನು ಮಣ್-ಮೈಲಾರ ಎಂದು ಕರೆಯುವುದು ರೂಢಿಯಾಗಿದೆ. ದೇವರಗುಡ್ಡದಲ್ಲಿರುವ ಮೂರ್ತಿ ಸಾಮಾನ್ಯವಾಗಿ ಇದೇ ತೆರನಾಗಿದೆ.

ಉತ್ಸವ ಮೂರ್ತಿಗಳಲ್ಲಿ ಕೆಲವು ವಾಮಭಾಗದಲ್ಲಿ ಗಂಗಿಮಾಳವ್ವ ನಿಂದೊಡಗೂಡಿದ ಅಶ್ವಾರೋಹಿ ಮೂರ್ತಿಗಳಾಗಿವೆ. ಶಿವನು ರಕ್ಕಸರ ಸಂಹಾರಕ್ಕೆ ಅಶ್ವಾ

೫. ಟಿ. ಗೋಪಿನಾಥರಾವ ಟಿ. Hindu Iconography ಪು. ೧೮೦.

೬. ಅದೇ : ಪು. ೧೯೧-೧೯೨

೭. ಬಸವಣ್ಣನವರ ಷಟ್ಸ್ಥಳದ ವಚನಗಳು. (ಸಂ : ಶಿ. ಶಿ. ಬಸವನಾಳ) ವಚನಸಂಖ್ಯೆ ೨೮೦.

ರೋಹಿಣಿಯಾಗಿ ಹೊರಡುವನು ಎಂದು ಭಾವಿಸಲಾಗುವುದರಿಂದ ಅಂಥ ಪ್ರತೀಕಗಳಿಗೂ ಹೆಚ್ಚಿನ ಮಹತ್ವವಿದೆ. ಈ ಸ್ವರೂಪದ ಮೂರ್ತಿಗಳು ಭಕ್ತರ ಮನೆಗಳಲ್ಲಿ ನಿತ್ಯಪೂಜೆಗೆ ಸಲ್ಲುತ್ತವೆ. ಮೊದಲಲ್ಲಿ ಇವು ತಾಮ್ರ ಮುಂತಾದ ತಗಡಿನ ಮೇಲೆ ಅಂಟಿಸಿದ ಉಬ್ಬುಮೂರ್ತಿಗಳಾಗಿರುತ್ತಿದ್ದವು. ಈಗ ಪ್ರತ್ಯೇಕವಾದ ಅಶ್ವಾರೋಹಿ ಮೂರ್ತಿಗಳಿರುವುದು ಕಂಡು ಬರುತ್ತದೆ. ಇವನ್ನು ಬೆಳ್ಳಿ, ಬಂಗಾರ, ಪಂಚಲೋಹ, ಹಿತ್ತಾಳಿ ಮುಂತಾದ ಲೋಹಗಳಿಂದ ತಯಾರಿಸಲಾಗುವುದು. ಮೈಲಾರ ಮುಂತಾದ ದೇವಸ್ಥಾನಗಳಲ್ಲಿ ಮೇಲೆ ವರ್ಣಿಸಿದ ಪ್ರತಿಷ್ಠಿಸಿದ ಮೂರ್ತಿಯಜತೆಗೆ ಇಂಥ ಮೂರ್ತಿಗಳೂ ಇವೆ. ಬೇರೆ ಬೇರೆ ಉತ್ಸವ ಸಂದರ್ಭಗಳಲ್ಲಿ ಇವು ಪೂಜೆಗೊಳ್ಳುತ್ತವೆ. ಇದೇ ಸ್ವರೂಪದ ಭಾವಚಿತ್ರಗಳು ಈಗ ಎಲ್ಲೆಡೆ ಪ್ರಚಾರದಲ್ಲಿವೆ. ಈ ಚಿತ್ರಗಳನ್ನು ಮೂಲತಃ ಮಹಾರಾಷ್ಟ್ರದ ಜೆಜೂರಿ ದೇವಸ್ಥಾನದವರು ಮುದ್ರಿಸಿ ಪ್ರಚುರಪಡಿಸಿದರು.

ಮೈಲಾರಲಿಂಗ ಮೇಲೆ ವಿವರಿಸಿದ ರೀತಿಯಲ್ಲಿ ಅಶ್ವಾರೂಢನಾಗಿ ರಾಜಠೀವಿಯಿಂದ ಹೊರಟು ಮಣಿಮಲ್ಲರೆಂಬ ದೈತ್ಯರನ್ನು ಸಂಹರಿಸಲು ಭೂಲೋಕಕ್ಕೆ ಬಂದನಂತೆ. ಹಾಗೂ ಸ್ವಯಂಭೂಲಿಂಗವಾಗಿ ಮೊದಲು ಉದ್ಭವಗೊಂಡನು. ಸ್ವಯಂಭೂ ಸ್ವರೂಪದಲ್ಲಿ ಭೂಲೋಕದಲ್ಲಿ ಅವತರಿಸಿದ್ದು ಮಾರ್ಗಶೀರ್ಷ ಮಾಸದ ಶುದ್ಧ ಷಷ್ಠೀ, (ಚಂಪಾಷಷ್ಠಿ) ಶತತಾರಕಾ ನಕ್ಷತ್ರ ಭಾನುವಾರದಂದು ಪ್ರೇಮಪುರದ ಒಂದು ವಟವೃಕ್ಷದ ಅಡಿಯಲ್ಲಿ ಹುತ್ತಿನ ಕೆಳಗಡೆ. ಈ ರೀತಿಯ ಅವತಾರದ ನಂಬಿಕೆಯು ಕರ್ನಾಟಕ ಮಹಾರಾಷ್ಟ್ರದ ಎಲ್ಲ ದೇವಸ್ಥಾನಗಳಲ್ಲಿಯೂ ಗ್ರಂಥಗಳಲ್ಲಿಯೂ ಜಾನಪದ ಸಾಹಿತ್ಯ-ಕಥೆಗಳಲ್ಲಿಯೂ ಏಕಪ್ರಕಾರವಾಗಿದೆ.

ಶಿವನು ಈ ರೀತಿ ಅವತರಿಸಿದುದು ಮೈಲಾರದಲ್ಲಿ ಎಂದೂ ದೇವರಗುಡ್ಡದ ಸಮೀಪ ಸಿಡಗಿನಹಾಳ ಗ್ರಾಮದ ಪಶ್ಚಿಮದ ಕರಿಯಾಲದಲ್ಲಿ ಎಂದೂ ನಂಬಿಕೆ ಇದೆ. ಸಿಡಗಿನ ಹಾಳದಲ್ಲಿ ಈಗಲೂ ಭಾರಿಗಾತ್ರದ (ಕರಿಯ) ಆಲದ ಮರವಿದ್ದು ಎರಡು-ಮೂರು ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಹಬ್ಬಿದೆ. ಅದನ್ನು ನೋಡಿದರೆ ಅದು ಹಲವಾರು ಶತಮಾನಗಳಷ್ಟು ಹಳೆಯದೆಂಬುದು ನಿಸ್ಸಂಶಯ. ಜತೆಗೆ ಆ ಪರಿಸರದಲ್ಲಿಯೆ 'ಮಜ್ಜನಬಾವಿ' ಎಂಬ ಪುರಾತನವಾದ ದೊಡ್ಡಬಾವಿಯಿದ್ದು ಹಳೆಯ ದೇವಾಲಯದ ಅವಶೇಷಗಳು ಅಲ್ಲೆಲ್ಲ ಹರಡಿಹೋಗಿವೆ. ರಾಕ್ಷಸರು ಸಿಕ್ಕಿದ್ದು ಅಲ್ಲಿಯೇ. ಅವರಲ್ಲಿ ಮಲ್ಲಾಸುರನನ್ನು ಹೊರತುಪಡಿಸಿ ಉಳಿದೆಲ್ಲ ರಾಕ್ಷಸರನ್ನು ಸಂಹರಿಸಿದ್ದು ಈ ಪ್ರದೇಶದಲ್ಲಿಯೇ ಎಂದು ಹೇಳಲಾಗುತ್ತದೆ. ಮಲ್ಲಾಸುರನನ್ನು ಸಂಹರಿಸಿದ್ದು ಮಾತ್ರ ಮೈಲಾರದಲ್ಲಿ. ಮೈಲಾರವು ನಿರ್ಣಾಯಕ ಸ್ಥಳ. ಆದುದರಿಂದ ಅದೇ ಮುಖ್ಯವಾದ ಕ್ಷೇತ್ರ. ಮೈಲಾರದಲ್ಲಿಯೂ ಸ್ವಯಂಭೂ ಲಿಂಗವಿದೆ, ಜತೆಗೆ ಆಲದ ಮರವೂ ದೇವಾಲಯದ ಸಮೀಪದಲ್ಲಿದೆ. ಈ ಮರವೂ ಮೂಲತಃ ಬಹಳ ದೊಡ್ಡಗಾತ್ರದ್ದಿತ್ತೆಂದು ತಿಳಿದು ಬರುತ್ತದೆ. ಈಗ ಇದರ ಸ್ವಲ್ಪಭಾಗ ಮಾತ್ರ

ಉಳಿದಿದೆ. ಈ ಪರಿಸರದಲ್ಲಿ ಜನವಸತಿ ಉಂಟಾಗಿರುವುದೇ ಅದರ ಗಾತ್ರ ಕುಗ್ಗಲು ಕಾರಣವಾಗಿದೆ.

ಸಂಸ್ಕೃತ ಮಲ್ಲಾರಿ ಮಹಾತ್ಮ್ಯವು ಶಿವನು ಸ್ವಯಂಭೂ ಲಿಂಗವಾಗಿ ಅವತರಿಸಿದ್ದು ಪ್ರೇಮಪುರದ ವಟವೃಕ್ಷದ ಅಡಿಯಲ್ಲಿ ಎಂದು ಹೇಳುತ್ತದೆ. ಪ್ರೇಮಪುರವೆಂಬ ಹೆಸರು ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ತರಲಾ (ವಾಸ್ತವವಾಗಿ ತಾರಳೀ) ನದಿಯ ಮೈಲಾರಲಿಂಗನ ಕ್ಷೇತ್ರಕ್ಕೆ ಇದ್ದುದಾಗಿ ತಿಳಿದು ಬರುತ್ತದೆ. ಮಹಾರಾಷ್ಟ್ರದಲ್ಲಿ ಪ್ರಸಿದ್ಧವಾಗಿರುವ ಈ ಹೆಸರಿನ ಇನ್ನೊಂದು ಕ್ಷೇತ್ರವೆಂದರೆ ಬೀದರ ಜಿಲ್ಲೆಯ 'ಮೈಲಾಪುರ' ಎಂಬುದು. ಹಲವಾರು ಸಂಗತಿಗಳನ್ನು ಪರಿಶೋಧಿಸಿ ಶ್ರೀ ಢೇರೆ ಅವರು ಮಲ್ಲಾರಿ ಮಹಾತ್ಮ್ಯದಲ್ಲಿ[೮] ಹೇಳಿದ ಪ್ರೇಮಪುರವೆಂದರೆ ಬೀದರ ಜಿಲ್ಲೆಯ ಕ್ಷೇತ್ರವೇ ಎಂದು ಹೇಳಿದ್ದಾರೆ.[೯] ಅವರೇ ಇದು 'ಪೇಂಬರ' ಎಂಬ ರೂಪದಲ್ಲಿಯೂ ಮರಾಠಿ ಕೃತಿಗಳಲ್ಲಿ ತೋರಿಬರುವುದೆಂದು ಹೇಳುತ್ತಾರೆ. ಕನ್ನಡ ಸಾಹಿತ್ಯ ಕೃತಿಗಳಲ್ಲಿ 'ಪೆಂಬೇರ', 'ಪಿಂಬೇರ', 'ಪೆಂಬೂರ' ಎಂದು ಸ್ವಲ್ಪ ಪರಿವರ್ತಿತ ರೂಪದಲ್ಲಿ ಇದು ಕಾಣಿಸಿಕೊಂಡಿದೆ. ಶ್ರೀ ಹಾಲಭಾವಿಯವರು ಸಾತಾರಾ ಜಿಲ್ಲೆಯ ತಾರಳಿ ನದೀದಂಡೆಯ ಕ್ಷೇತ್ರದೊಡನೆ ಇದನ್ನು ಸಮೀಕರಿಸಿದ್ದಾರೆ.[೧೦] ಆದರೆ ಮೈಲಾರ ಕ್ಷೇತ್ರ (ಬಳ್ಳಾರಿ ಜಿಲ್ಲೆ, ಹೂವಿನಹಡಗಲಿ ತಾಲೂಕು) ಕ್ಕೂ ಮೂಲತಃ ಪ್ರೇಮಪುರವೆಂಬ ಹೆಸರು ಇದ್ದುದಾಗಿ ಅಲ್ಲಿಯ ಸ್ಥಾನಿಕರಿಂದ ತಿಳಿದು ಬರುತ್ತದೆ.

ಮಹಾರಾಷ್ಟ್ರದ ವಿದ್ವಾಂಸರಾದ ಡಾ. ಖರೆ ಮತ್ತು ಶ್ರೀ ಢೇರೆ ಇಬ್ಬರೂ ತಮ್ಮ ಸಮಗ್ರ ಪರಿಶೋಧನೆಯ ನಂತರ ಈ ಸಂಪ್ರದಾಯದ ಮೂಲ ಕ್ಷೇತ್ರವು ಬಳ್ಳಾರಿ ಜಿಲ್ಲೆಯ ಮೈಲಾರವೇ ಎಂಬ ನಿರ್ಣಯಕ್ಕೆ ಬಂದಿದ್ದಾರೆ.[೧೧] ಆದುದರಿಂದ ಮೈಲಾರದ ಕ್ಷೇತ್ರವೇ ಪ್ರೇಮಪುರವೆಂಬ ಹೆಸರಿನಿಂದ ಪ್ರಾಚೀನ ಕಾಲದಲ್ಲಿ ಪ್ರಸಿದ್ಧವಾಗಿತ್ತೆಂದು ತಿಳಿಯಬಹುದು.

ಸಂಸ್ಕೃತ ಮತ್ತು ಮರಾಠಿ ಲೇಖಕರಿಗೆ ಬೀದರ ಜಿಲ್ಲೆಯ ಕ್ಷೇತ್ರವು ತೀರ ಸಮೀಪದ್ದಾಗಿದ್ದುದರಿಂದ ಮಲ್ಲಾರಿ ಮಹಾತ್ಮ್ಯದಲ್ಲಿ ಅದರ ಉಲ್ಲೇಖವು ಪ್ರಾಮುಖ್ಯ ಪಡೆದಿದೆ. ಮಹಾರಾಷ್ಟ್ರದಲ್ಲಿ ಪ್ರೇಮಪುರ, ಪಾಲಿ, ನಳದುರ್ಗ, ಜೆಜೂರಿ ಈ ಕ್ರಮ ದೇವಸ್ಥಾನಗಳನ್ನು ಹೆಸರಿಸುವಲ್ಲಿ ಇದೆಯೆಂದು ತಿಳಿದು ಬರುತ್ತದೆ.

ಜೆಜೂರಿ ಕ್ಷೇತ್ರವು ಈಗ ಮಹಾರಾಷ್ಟ್ರದಲ್ಲಿ ಬಹು ಪ್ರಸಿದ್ಧವಾಗಿದೆ. ಪುಣೆಯ ಆಗ್ನೇಯಕ್ಕೆ ಸು. ೩೦ ಮೈಲುಗಳ ಮೇಲೆ ಒಂದು ಗುಡ್ಡದ ಮೇಲೆ ದೇವಸ್ಥಾನ

೮. ಸಂಸ್ಕೃತ ಮಲ್ಲಾರಿ ಮಹಾತ್ಮ್ಯವು ಕ್ರಿ. ಶ. ೧೨೬೦ ರಿಂದ ೧೫೪೦ ರ ಮಧ್ಯದಲ್ಲಿ ರಚನೆಗೊಂಡಿರಬೇಕೆಂದು ಶ್ರೀ ಢೇರೆ. ನಿರ್ಧರಿಸಿದ್ದಾರೆ. (ಖಂಡೋಬಾ. ಪು. ೯.)

೯. ಖಂಡೋಬಾ. ಪು. ೧೪೪.

೧೦. ಶ್ರೀ ಹಾಲಭಾವಿ : ಶಂಕರದಾಸಿಮಯ್ಯನ ಪುರಾಣ : ಪ್ರಸ್ತಾವನೆ. ಪು. ೪೬

೧೧. ಮಹಾರಾಷ್ಟ್ರಾಂಚೀ ಚಾರ ದೈವತೆ. ಪು. ೧೬೮. ಮತ್ತು ಶ್ರೀ ಢೇರೆ : ಖಂಡೋಬಾ. ಪು. ೨ ಮತ್ತು ೮೧.

ಏದೆ. ಈ ದೇವಸ್ಥಾನವೂ ಸಾಕಷ್ಟು ಪ್ರಾಚೀನವಾಗಿದೆ. ಅಲ್ಲಿರುವ ಒಂದು ಶಿಲಾ ಶಾಸನವು ಹದಿಮೂರನೆಯ ಶತಮಾನದ್ದಾಗಿದೆ. ಅದರಲ್ಲಿ ದೇವಸ್ಥಾನ ಮತ್ತು ಕ್ಷೇತ್ರಾಧಿಪದೈವತದ ಖಚಿತವಾದ ನಿರ್ದೇಶವಿಲ್ಲ. ಆದರೂ ಶಾಸನಕಾಲಕ್ಕಾಗಲೇ ದೇವಸ್ಥಾನವು ಅಸ್ತಿತ್ವದಲ್ಲಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ.[೧೨] ಮಹಾ ರಾಷ್ಟ್ರದ ಹೋಳ್ಕರ ರಾಜಮನೆತನದ ಕುಲದೇವರಾದುದರಿಂದ ಈ ದೇವಸ್ಥಾನದ ಮಹತಿ ಅನಂತರ ಕಾಲದಲ್ಲಿ ಬಹಳ ಹೆಚ್ಚಿದೆ. ಆದರೆ ಆಗಾಗ ಅಲ್ಲಿಯ ಪೂಜಾರಿ ಗಳೂ ಗೊರವರೂ ಇಷ್ಟು ದೂರವಿರುವ ದೇವರಗುಡ್ಡ ಮತ್ತು ಮೈಲಾರಗಳಿಗೆ ಬಂದು ದರ್ಶನ ಪಡೆದು ಹೋಗುವರು. ಈ ಪದ್ಧತಿ ಈಗಲೂ ಅಸ್ತಿತ್ವದಲ್ಲಿದೆ. ಇದರಿಂದಲೂ ಮೈಲಾರದ ಕ್ಷೇತ್ರವೇ ಮೂಲದ್ದೆಂಬ ಸಂಗತಿ ದೃಢಪಡುತ್ತಿದೆ.

ಈ ಕಾರಣದಿಂದ ಏಳುಕೋಟಿ (< ಏೞ್ಕೋಟಿ < ಏೞ್ಕೋಟ್ಟಿ) ಎಂಬ ದೇವತೆ ಮೈಲಾರನೆಂದು ಹೆಸರುಗೊಂಡು ಹಳಗನ್ನಡ ಸಾಹಿತ್ಯದಲ್ಲಿಯೂ ಶಾಸನ ಗಳಲ್ಲಿಯೂ ಉಲ್ಲೇಖಗೊಂಡಿದ್ದಾನೆ. ಮೈಲಾರ ಎಂಬುದು ಮೈರಾಲ ಎಂಬ ರೂಪದಲ್ಲಿ ಮರಾಠಿ-ಸಂಸ್ಕೃತ ಕೃತಿಗಳಲ್ಲಿ ಗೋಚರಿಸುತ್ತದೆ. ಇದಲ್ಲದೆ ದೇವರಿಗೆ ಇನ್ನೂ ಹಲವು ಹೆಸರುಗಳು ಪ್ರಚಲಿತವಾಗಿವೆ. ಮಾರ್ತಾಂಡ, ಮಾರ್ತಾಂಡ-ಭೈರವ, ಮೇಂಗನಾಥ ಎಂಬಂಥ ಹಸರುಗಳು ಗ್ರಂಥಸ್ಥ ಕೃತಿಗಳಲ್ಲಿ ಕಂಡುಬರು ತ್ತವೆ. ಜತೆಗೆ ಮಲ್ಹಾರ, ಮಲ್ಲಾರ, ಮಲ್ಲಾರಿ. ಮಲ್ಲಿಕಾರ್ಜುನ, ಮಲ್ಲಯ್ಯ, ನಿ(ಲಿ)ಂಗಯ್ಯ, ನೀಲ, ನೀಲಗಿರಿ, ಗುಡ್ಡದಯ್ಯ ಎಂಬವೂ ಅಷ್ಟೇ ಜನಪ್ರಿಯ ವಾಗಿವೆ. ಇತ್ತಿತ್ತ 'ಮಾಲತೀಶ' ಅಥವಾ ಮಾಲತೇಶ ಎಂಬ ಹೆಸರೂ ರೂಢ ವಾಗುತ್ತಿದೆ (ಇದರಲ್ಲಿ ಮಾಲತಿ / ಮಾಳಚಿಯ ಪತಿ ಎಂಬ ಅಂಶ ವ್ಯಕ್ತವಾಗು ತ್ತದೆ). ಮಹಾರಾಷ್ಟ್ರದಲ್ಲಿ ಖಂಡೋಬಾ, ಖಂಡೇರಾಯ. ಏಳಕೋಟ ಇವು ವಿಶೇಷ ಪ್ರಚಾರದಲ್ಲಿರುವುದು ಕಂಡು ಬರುತ್ತದೆಯಲ್ಲದೆ ಅಜಮತ್‌ಖಾನ, ಮಲ್ಲುಖಾನ ಎಂಬ ಮುಸ್ಲಿಮ್ ಹೆಸರುಗಳೂ ಇರುವುದಾಗಿ ತಿಳಿದು ಬರುತ್ತದೆ.

ಗಂಗಿಮಾಳವ್ವ–ಮಾಳಚಿ : ಮೈಲಾರ–ದೇವರಗುಡ್ಡಗಳಲ್ಲಿ ಈಗಿರುವ ಮಾಳ ಚಿಯ ಮೂರ್ತಿಗಳು ಮೈಲಾರಲಿಂಗನ ತದ್ವತ್ತಾದ ಸ್ತ್ರೀ ಮೂರ್ತಿಗಳಾಗಿವೆ. ಎಂದರೆ ಬಲದ ಕೈಗಳಲ್ಲಿ ಖಡ್ಗ, ತ್ರಿಶೂಲಗಳೂ ಎಡದ ಕೈಯಲ್ಲಿ ಪಾನಪಾತ್ರ-ಡಮರುಗಳೂ ಇವೆ. ಮಾಳಚಿ ಅಥವಾ ಗಂಗಿ ಮಾಳವ್ವನು 'ಪಟ್ಟದ ಹೆಂಡತಿ'ಯಾದುದರಿಂದ ಮೈಲಾರಲಿಂಗನ ದೇವಾಲಯಗಳ ಪಕ್ಕದಲ್ಲಿಯೇ ಅವಳ ದೇವಾಲಯಗಳಿವೆ. ಜತೆಗೆ ಮೂರ್ತಿಯ ಮುಂದುಗಡೆಯಲ್ಲಿ ಉದ್ಭವಲಿಂಗಗಳಿವೆ.

ಗಂಗಿ ಮಾಳವ್ವ ಅಥವಾ ಮಾಳಚಿಗಾಗಿಯೇ ಪ್ರತ್ಯೇಕವಾದ ದೇವಸ್ಥಾನಗಳು ಪ್ರಾಚೀನಕಾಲದಲ್ಲಿ ಇದ್ದ ಬಗ್ಗೆ ಉಲ್ಲೇಖಗಳಿವೆ. ದೇವಿಹೊಸೂರಿನಲ್ಲಿ ಅಂಥ

೧೨. ಖಂಡೋಬಾ ಪು. ೮೦.

ಮಂದಿರವೊಂದು ೧೧ನೆಯ ಶತಮಾನದಲ್ಲಿದ್ದ ಬಗ್ಗೆ ಆ ಊರಿನಲ್ಲಿನ ಎರಡು ಶಾಸನಗಳೂ ಸಾಕ್ಷಿ ನುಡಿಯುತ್ತಿವೆ. ಅಲ್ಲದೆ ಶಾಸನಗಳಿರುವ ಸ್ಥಾನದಲ್ಲಿ ಇಂದಿಗೂ ಹಾಳು ಬಿದ್ದ ದೇವಾಲಯ ಕೂಡ ಇದೆ. ಮಂದಿರವು ಪೂರ್ಣ ಶಿಥಿಲವಾಗಿಲ್ಲ. ಈಗಲೂ ಉಪಯೋಗಿಸಬಹುದಾದ ಸ್ಥಿತಿಯಲ್ಲಿದೆ. ಮುಖ್ಯ ಮಂದಿರದ ಸುತ್ತಲೂ ಇರುವ ಆವಾರದಲ್ಲಿ ಶಿವಲಿಂಗಗಳೂ ಚಿಕ್ಕ ಚಿಕ್ಕ ದೇವಮಂದಿರಗಳೂ ಇವೆ. ಆದರೆ ಇವುಗಳನ್ನು ಈಗ ಗುರುತಿಸಿ ಹೆಸರಿಸುವುದು ಕಷ್ಟ. ಇದೀಗ ಇಲ್ಲಿದ್ದ ದೇವಿಯ ಮೂರ್ತಿಯನ್ನು ಊರಲ್ಲಿರುವ ಮತ್ತೊಂದು ದೇವಸ್ಥಾನದಲ್ಲಿಟ್ಟು ಪೂಜಿಸಲಾಗುತ್ತಿದೆ. ಊರ ಜನ 'ಬನಶಂಕರಿ' ಎಂದು ಈಗ ಈ ದೇವತೆಯನ್ನು ಕರೆಯುತ್ತಾರೆ. ಮಹಾರಾಷ್ಟ್ರದ ನೇವಾಸೆ ಮತ್ತು ಗೋವೆಯ ಮ್ಹಾಡದೋಳಗಳಲ್ಲಿ ಈಗಲೂ ಪ್ರತ್ಯೇಕವಾದ ದೇವಾಲಯಗಳಿವೆ. ಮ್ಹಾಡದೋಳದ ದೇವಿಯನ್ನು ಈಗ 'ಮ್ಹಾಳಸಾ-ನಾರಾಯಣಿ' ಎಂದು ಕರೆಯುವುದಾಗಿ ತಿಳಿದು ಬರುತ್ತದೆ.[೧೩]

ಕುರುಬತೆವ್ವ– ಕುರುಬರ ಮಾಳವ್ವ– ಬನಾಯಿ–ಬಾಣಾಯಿ :

ಇವಳು ಮೈಲಾರಲಿಂಗನ ಎರಡನೆಯ ಹೆಂಡತಿ. ಜಾತಿಯಿಂದ ಕುರುಬಳಂತೆ. ಹಟದಿಂದ ಇವಳನ್ನು ಮೈಲಾರಲಿಂಗ ತಂದನು. ಗಂಗಿ ಮಾಳವ್ವನಂತೆ ಇವಳಿಗೂ ಹೆಗ್ಗಡೆಯೇ ಅಣ್ಣ. ಮಹಾರಾಷ್ಟ್ರದ ಸೀಮಾಗಾವದಲ್ಲಿರುವ ಇವಳ ಮೂರ್ತಿ ತಾಮ್ರದಿಂದ ಮಾಡಿದ್ದಿದ್ದು ನಿಂತ ಭಂಗಿಯಲ್ಲಿರುವುದಾಗಿ ತಿಳಿದುಬರುತ್ತದೆ.[೧೪] ಅಲ್ಲಿರುವ ಮ್ಹಾಳಸೆಯಂತೆಯೇ ಕೈಯಲ್ಲಿ ಕಮಲ ಕಳಿಕೆ ಮತ್ತು ಪಾನಪಾತ್ರಗಳನ್ನು ಹಿಡಿದಿದ್ದಾಳಂತೆ. ದೇವರಗುಡ್ಡ–ಮೈಲಾರಗಳಲ್ಲಿ ಗಂಗಿ ಮಾಳವ್ವನ ಮೂರ್ತಿಯಂತೆಯೇ ಇವಳ ಮೂರ್ತಿಗಳೂ ಇವೆ. ಮೈಲಾರದಲ್ಲಿ ಮುಖ್ಯ ದೇವಾಲಯದ ಆವಾರದ ಹೊರಗಡೆಯಲ್ಲಿದೆ. ದೇವರಗುಡ್ಡದಲ್ಲಿ ಇವಳ ದೇವಸ್ಥಾನವು ಮುಖ್ಯ ದೇವಾಲಯದಿಂದ ಸು. ೨ ಫರ್ಲಾಂಗ ದೂರದಲ್ಲಿ ಉತ್ತರಕ್ಕಿದೆ.

ಮರಾಠಿ ಜಾನಪದ ಸಾಹಿತ್ಯದಲ್ಲಿ ಇವಳನ್ನು ಬನಾಯಿ ಬಾನೂ, ಬಾಣಾಯಿ ಎಂದು ಸಂಬೋಧಿಸಿದ್ದುದಾಗಿ ತಿಳಿದುಬರುತ್ತದೆ ದೇವೀಹೊಸೂರಿನಲ್ಲಿ ಈಗ 'ಬನಶಂಕರಿ' ಎಂದು ದೇವಿಯನ್ನು ಕರೆಯುತ್ತಿರುವ ಸಂಗತಿಯನ್ನು ಈಗಾಗಲೇ ಸೂಚಿಸಲಾಗಿದೆ ಬನಾಯಿ (ಬನ+ಆಯಿ) ಅಂದರೆ ಬನದ ತಾಯಿ ಎಂಬುದು ಹಳಗನ್ನಡ ಸಾಹಿತ್ಯ– ಶಾಸನಗಳಲ್ಲಿ ತೋರುವ 'ಬನದಬ್ಬೆ' ಎಂಬ ರೂಪದ ಭಾಷಾಂತರದಂತೆ ಕಂಡು ಬರುತ್ತದೆ. ಇದು ವಿಚಾರಣೀಯವಾದ ಅಂಶವಾಗಿದೆ. ಈ ಕುರಿತು ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯ.

---

೧೩. ಅದೇ ಪು. ೧೪೫.

೧೪. ಅದೇ ಪು. ೫೪.

ಘೃತಮಾರಿ–ತುಪ್ಪದ ಮಾಳವ್ವ :

ಮಲ್ಲಾರಿ ಮಹಾತ್ಮ್ಯದಲ್ಲಿ ಇವಳನ್ನು ಘೃತಮಾರಿ ಎಂದು ಕರೆದಿದೆ. ಜಾನಪದರಲ್ಲಿ ಇವಳನ್ನು 'ತುಪ್ಪದ ಮಾಳವ್ವ' ಎಂದು ಕರೆಯುವುದು ವಾಡಿಕೆ. 'ತುಪ್ಪದ ಮಾಳವ್ವ' ಎಂಬುದನ್ನೇ ಸಂಸ್ಕೃತೀಕರಿಸಿ 'ಘೃತಮಾರಿ' ಎಂದು ಕರೆದಿದೆ. ಇವಳು ರಾಕ್ಷಸರೊಡನೆ ಯುದ್ಧಕ್ಕೆ ಹೊರಡುವ ಮುಂಚೆ ಶಿವನ ಜಡೆಯಿಂದ ಉದ್ಭವಿಸಿದಳಂತೆ. ರಾಕ್ಷಸ ವಧೆಯಲ್ಲಿ ಇವಳ ಪಾತ್ರ ಪ್ರಧಾನವಾದುದಂತೆ. ಇವಳ ಘೋರರೂಪವನ್ನು ಕಂಡು ಮುನಿಗಳು ಶಾಂತಿಗಾಗಿ ತುಪ್ಪದಿಂದ ಅಭಿಷೇಕ ಮಾಡಿದರು. ಆದುದರಿಂದ ಇವಳಿಗೆ ಈ ಹೆಸರು ಬಂತೆಂದು 'ಮಹಾತ್ಮ್ಯ'ವು ಹೇಳುತ್ತದೆ. ಭಕ್ತರು ಈಗಲೂ ಈ ಮೂರ್ತಿಯನ್ನು ತುಪ್ಪದಿಂದ ಅಭಿಷೇಕ ಮಾಡುವದು ವಾಡಿಕೆ. ಇದರಿಂದ ಹೈನ ಸಮೃದ್ಧವಾಗುವುದೆಂದು ಭಕ್ತರು ನಂಬುತ್ತಾರೆ. ಅಂತಲೇ ಇವಳಿಗೆ 'ತುಪ್ಪದ ಮಾಳವ್ವ' ಎಂಬ ಹೆಸರು ಬಂದುದು ಸಾರ್ಥಕ. ದೇವರಗುಡ್ಡದಲ್ಲಿ ಇವಳಿಗಾಗಿ ಮುಖ್ಯದೇವಾಲಯದ ಆವರಣದಲ್ಲಿಯೇ ಗುಡಿಯಿದೆ. ಮೂರ್ತಿ ಶಿಲ್ಪವು ಗಂಗಿಮಾಳವ್ವನಂತೆಯೆ ಇದೆ. ಕೈಯಲ್ಲಿ ಕ್ರಮವಾಗಿ ಖಡ್ಗ, ತ್ರಿಶೂಲ, ಡಮರು ಮತ್ತು ಪಾನಪಾತ್ರಗಳಿವೆ.

ರಣದಮ್ಮ :

ಯುದ್ಧದಲ್ಲಿ ಶಿವನ ಕಣ್ಣುಗಳಿಂದ ಹೊರಟ ಕೋಪಾಗ್ನಿಯಿಂದ ಇವಳು ಹುಟ್ಟಿದಳಂತೆ. ಇವಳಿಗಾಗಿಯೂ ದೇವರಗುಡ್ಡ ಪರಿಸರದಲ್ಲಿ ಪ್ರತ್ಯೇಕ ದೇವಾಲಯವಿದೆ.

ಕೋಮಾಲೆ :

ಇವಳಿಗಾಗಿ ಸಿಡಗಿನಹಾಳದಲ್ಲಿ ಪ್ರತ್ಯೇಕ ದೇವಾಲಯವಿದೆ. ಇವಳನ್ನು ಕೂಡ ಮೈಲಾರಲಿಂಗನು ಗಂಗಿಮಾಳವ್ವನ ಮೇಲಿನ ಹಟದಿಂದ ತಂದನೆಂದು ಕಥೆಯಿದೆ. ಇವಳೂ ಕುರಬರವಳೇ.

ದೇವರಗುಡ್ಡದ ಪರಿಸರದಲ್ಲಿ ಮಾತ್ರ ರಣದಮ್ಮ, ಕೋಮಾಲೆ, ತುಪ್ಪದ ಮಾಳವ್ವ ಮತ್ತು ಕುರುಬತೆವ್ವ ಇವರಿಗೆ ಪ್ರತ್ಯೇಕ ದೇವಾಲಯಗಳಿವೆ. ಮೈಲಾರದಲ್ಲಿ ಮತ್ತು ಇತರೆಡೆಗಳಲ್ಲಿ ಮೈಲಾರಲಿಂಗನಿಗೆ ಹೆಂಡಂದಿರಿರುವುದು ಇಬ್ಬರು ಮಾತ್ರ. ಒಬ್ಬಳು ಗಂಗಿ ಮಾಳವ್ವ ಇನ್ನೊಬ್ಬಳು ತುಪ್ಪದ ಮಾಳವ್ವ (ಮರಾಠಿ–ಬಾಣಾಯಿ) ಎಂಬ ನಂಬಿಕೆ ಇದೆ. ಗುಡಿಗಳ ವಿಷಯವೂ ಹಾಗೆಯೆ. ಆದುದರಿಂದ ತುಪ್ಪದ ಮಾಳವ್ವ, ಕುರುಬತೆವ್ವ, ರಣದಮ್ಮ, ಕೋಮಾಲೆ, ಬನಾಯಿ-ಬಾಣಾಯಿ ಇವು ಒಬ್ಬ ದೇವತೆಯ ಬೇರೆ ಬೇರೆ ಹೆಸರುಗಳೇ ಎಂದು ಹೇಳಬಹುದು.

ಚಿಕ್ಕಯ್ಯ–ಜುಂಜಯ್ಯ :

ಇವರಿಬ್ಬರೂ ಮೈಲಾರಲಿಂಗ–ಮಾಳವ್ವನ ಮಕ್ಕಳು. ಆದುದರಿಂದ ಭಕ್ತರಿಗೆ ಇವರೂ ಪೂಜ್ಯರು. ಚಿಕ್ಕಯ್ಯನೆಂದರೆ ಷಣ್ಮುಖನೆಂದೂ ಜುಂಜಯ್ಯ ಅಥವಾ ದೊಡ್ಡಯ್ಯನೆಂದರೆ ಗಣಪತಿಯೆಂದೂ ಹೇಳುವರು. ದೇವರಗುಡ್ಡದಲ್ಲಿ ಚಿಕ್ಕಯ್ಯ ಮತ್ತು ಜುಂಜಯ್ಯರಿಗಾಗಿ ಪ್ರತ್ಯೇಕ ದೇವಾಲಯಗಳಿಲ್ಲ. ಮುಖ್ಯದೇವತೆಯ ಮುಂಭಾಗದ ಎಡ–ಬಲಗಳಲ್ಲಿ ಇವರಿಗೆ ಸ್ಥಾನ ಕಲ್ಪಿಸಲಾಗಿದೆ. ಅಲ್ಲಿ ಚಿಕ್ಕಯ್ಯನ ಮಾನುಷಾಕಾರದ ಮೂರ್ತಿ ಇಲ್ಲ. ಬದಲು ಒಂದು ಶಿಲಾಗೋಳವಿದ್ದು ಅದಕ್ಕೇ ಮುಖದಂತೆ ಅಲಂಕಾರ ಮಾಡಲಾಗಿದೆ. ದೊಡ್ಡಯ್ಯನೆಂದಿರುವ ವಿಗ್ರಹವು ಗಣಪತಿಯದೇ ಆಗಿದೆ. ಮೈಲಾರದಲ್ಲಿ ಮಾತ್ರ ಇಬ್ಬರಿಗೂ ಪ್ರತ್ಯೇಕ ದೇವಾಲಯಗಳಿವೆ. ಇಬ್ಬರಿಗೂ ಪೂರ್ಣ ಪ್ರಮಾಣದ ಮೂರ್ತಿಗಳಿರದೆ ಕೇವಲ ಶಿರೋಭಾಗಗಳು ಮಾತ್ರ ಇವೆ. ಕಲ್ಲಿನ ಪೀಠಗಳ ಮೇಲೆ ಅವನ್ನು ಪ್ರತಿಷ್ಠಿಸಲಾಗಿದೆ. ಮೂರ್ತಿ ಶಿಲ್ಪದಲ್ಲಿ ಇದೊಂದು ವಿಶೇಷವೆಂದು ಹೇಳಬಹುದು. ಚಿಕ್ಕಯ್ಯನ ಶಿರದಮೇಲೆ ಕಿರೀಟಾದಿಗಳಿಲ್ಲ. ಜುಂಜಯ್ಯನ ಮೂರ್ತಿಗೆ ಕಿರೀಟದಂತಿರುವ ಟೊಪ್ಪಿಗೆಯೂ ಕಿವಿಯಲ್ಲಿ ಕುಂಡಲಗಳೂ ಇವೆ.

ಚಿಕ್ಕಯ್ಯ–ಜುಂಜಯ್ಯರಿಗಾಗಿ ವಿಶೇಷ ಪೂಜೆಗಳೂ ಇವೆ. ಆದರೆ ಇವರಿಗಾಗಿ ಸ್ವತಂತ್ರವಾಗ ದೇವಾಲಯಗಳನ್ನು ನಿರ್ಮಿಸಿದ ಬಗೆಗೆ ಪ್ರಾಚೀನಕಾಲದ ದಾಖಲೆಗಳು ಕಂಡುಬರುವುದಿಲ್ಲ. ಮಲ್ಲಾರಿ ಮಹಾತ್ಮ್ಯದಲ್ಲಿ ಷಣ್ಮುಖ–ಗಣಪತಿಯರ ಉಲ್ಲೇಖವಿರುವುದು ಇವರನ್ನು ಕುರಿತೇ ಎಂದು ಹೇಳಬಹುದು.

ಬ್ರಹ್ಮಶಿವನ ಸಮಯಪರೀಕ್ಷೆಯಲ್ಲಿ ಒಂದೆಡೆ ಚಿಕ್ಕಯ್ಯನ ಉಲ್ಲೇಖ ಬಂದಿದೆ.

ಉದಾ :—

ಒಕ್ಕಲಿಗನಕ್ಕೆ ಪಂಚಮ
ನಕ್ಕೆಮ ಸದ್ವೃತ್ತಿಯಾಗೆ ಕಾಲಂಕರ್ಚ।
ಲ್ತಕ್ಕುದು ಜೈನಂಗೇಕೆನೆ
ಚಿಕ್ಕಯ್ಯಂ ಶೂದ್ರನೆಂದು ಕಚ್ಚರೆ ಕುಲಜರ್॥ ೫–೧೪೧

ಒಕ್ಕಲಿಗಂ ಋಷಿಯಾದೊಡೆ
ಚಿಕ್ಕಯನೆ (ನ ?) ಕಾಲನೆಂತು ಕರ್ಚುವರದಜಿಂ।
ಒಕ್ಕಲಿಗಂ ಬ್ರತಿಯಾದಂ
ದಕ್ಕುಂಕರ್ಚಲ್ಕೆ ಮದಮನುಳಿಗೆ ಕುಲಜ್ಞಂ॥ ೫-೧೪೨

'(ಜೈನೇತರರಾದ)ಉಚ್ಚ ಕುಲದವರು ಚಿಕ್ಕಯ್ಯನು ಶೂದ್ರನಾಗಿದ್ದರೂ ಆತನ ಕಾಲು ತೊಳೆಯುವರು. ಆದುದರಿಂದ ಜೈನವ್ರತಧಾರಿಯಾದ ಮುನಿ ಜನ್ಮದಿಂದ ಒಕ್ಕಲಿಗ

ಶೂದ್ರನೆಂದು ಭಾವಿಸಿ ಮದದಿಂದ ಅವನ ಕಾಲು ತೊಳೆಯಲು ನಿರಾಕರಿಸತಕ್ಕದ್ದಲ್ಲ' ಎಂದು ಇಲ್ಲಿಯ ಪದ್ಯಗಳ ಭಾವ. ಇಲ್ಲಿ ಬಂದಿರುವ 'ಚಿಕ್ಕಯ್ಯ' ಎಂಬ ಶಬ್ದಕ್ಕೆ ಕಠಿಣಪದ ಕೋಶದಲ್ಲಿ 'ಮೈಲಾರನ ಒಂದು ಹೆಸರು' ಎಂದು ಸಂಪಾದಕರಾದ ಡಾ ಬಿ. ಎಸ್. ಕುಲಕರ್ಣಿಯವರು ಅರ್ಥಹೇಳಿದ್ದಾರೆ. ಚಿಕ್ಕಯ್ಯನೆಂದರೆ ಮೈಲಾರನನ್ನು ಕುರಿತಿರದೆ ಆತನ ಭಕ್ತರನ್ನು-ಎಂದರೆ ಗೊರವರನ್ನು ಬ್ರಹ್ಮಶಿವ ಹೆಸರಿಸಿದ್ದಾನೆಂದು ಹೇಳಬಹುದು. ಮೈಲಾರನ ಗೊರವರು ತಮ್ಮನ್ನು ಅವನ ಶಿಷ್ಯರೆಂದು ಭಕ್ತರೆಂದು ಹೇಳುವ ಬದಲು ಮಕ್ಕಳೆಂದು ಹೇಳಿಕೊಳ್ಳುವುದೂ ಉಂಟು. ಆದುದರಿಂದ ಅವರಿಗೆ ಜನಸಾಮಾನ್ಯರಲ್ಲಿ ಆ ಹೆಸರು ರೂಢವಾಗಿರುವಂತೆ ತೋರುತ್ತದೆ. ಮೈಲಾರಲಿಂಗನು ಕುಲದೇವತೆಯಾಗಿರುವ ಮನೆತನಗಳಲ್ಲಿ ಗೊರವರನ್ನು ಕರೆದು ಪೂಜಿಸುವುದು ಈಗಲೂ ರೂಢಿಯಲ್ಲಿದೆ. ಗೊರವರು ಯಾವ ಜಾತಿಯವರಾದರೂ ಅವರು ಭಕ್ತರಿಗೆ ಪೂಜಾರ್ಹರು. ಬ್ರಾಹ್ಮಣ ಭಕ್ತರು ಕೂಡ ಇದನ್ನು ಮೀರದೆ ಪಾಲಿಸುವರು. ಆದುದರಿಂದ ಬ್ರಹ್ಮಶಿವನು ಹೇಳುವ ಚಿಕ್ಕಯ್ಯನೆಂದರೆ ಮೈಲಾರಲಿಂಗ ದೇವತೆಯಾಗಿರದೆ ಆತನ ನೈಷ್ಠಿಕ ಭಕ್ತರಾದ ಗೊರವರೇ ಎಂದು ಹೇಳಬಹುದು. ಚಿಕ್ಕಯ್ಯನ ಸ್ವರೂಪವೇ ತಾವೆಂದು ಹೇಳಿಕೊಂಡು ಗೊರವರು ಆಗಲೂ ಸಂಚರಿಸುತ್ತಿದ್ದರೆಂದು ಇದರಿಂದ ತಿಳಿಯಬಹುದಾಗಿದೆ. ಮೈಲಾರಲಿಂಗನ ದೇವಸ್ಥಾನಗಳು ಇರುವಲ್ಲೆಲ್ಲ ಚಿಕ್ಕಯ್ಯ-ಜುಂಜಯ್ಯರ ಸ್ಥಾನಗಳು ಇರಲೇಬೇಕು. ಪ್ರತ್ಯೇಕ ಗುಡಿಗಳಿಲ್ಲದಿದ್ದರೂ ದೇವಾಲಯದ ಪರಿಸರದಲ್ಲಿ ಇವರಿಗೆ ಸ್ಥಾನ ಕಲ್ಪಿತವಾಗಿರುವುದು ಎಲ್ಲೆಡೆ ಕಂಡುಬರುತ್ತದೆ. ಆದ್ದರಿಂದ ಇವರೂ ಕೂಡ ಈ ಸಂಪ್ರದಾಯದ ಅವಿಭಾಜ್ಯ ಅಂಗ.

ಹೆಗ್ಗಡೆ :

ಈ ಸಂಪ್ರದಾಯದಲ್ಲಿ ಹೆಗ್ಗಡೆಯೂ ಒಬ್ಬ ಪ್ರಧಾನದೇವತೆ. ಹೆಗ್ಗಯ್ಯ, ಹೆಗ್ಗಪ್ಪ, ಹೆಗ್ಗಣ್ಣ, ಪರುದಾನಿ (< ಪ್ರಧಾನಿ) ಮೊದಲಾದ ಹೆಸರುಗಳು ಈತನಿಗೆ ಇವೆ. ಅನೇಕ ವೇಳೆ 'ಹೆಗ್ಗಯ್ಯ ಪರುದಾನಿ' ಎಂದು ದ್ವಿರುಕ್ತಿಗೊಳಿಸುವುದೂ ಉಂಟು. ಮೈಲಾರಲಿಂಗನ ಪ್ರತಿಯೊಂದು ದೇವಾಲಯದಲ್ಲಿ ಈತ ಇರಲೇಬೇಕು. ಈತನಿಗೆ ಪ್ರತ್ಯೇಕ ಮಂದಿರವಿದ್ದು ಇತರ ದೇವರುಗಳ ಸಮುದಾಯದಿಂದ ಸ್ವಲ್ಪ ಅಂತರದಲ್ಲಿ ಅದು ಕಂಡುಬರುತ್ತದೆ. ಈತ ಕ್ಷೇತ್ರಪಾಲಕ ದೇವತೆ. ಕ್ಷೇತ್ರಕ್ಕೆ ಬರುವ ಭಕ್ತರು ಸುಖವಾಗಿ ತಮ್ಮ ಊರುಗಳಿಗೆ ಮುಟ್ಟುವಂತೆ ಈತ ನೋಡಿಕೊಳ್ಳುವನೆಂದು ನಂಬಿಕೆಯಿದೆ. ಭಕ್ತರು ಈತ ಪ್ರತ್ಯಕ್ಷ ವಿಷ್ಣುವೇ ಎಂದೂ ತಿರುಪತಿಯ ತಿಮ್ಮಪ್ಪನೆಂದೂ ತಿಳಿಯುವರು. ಈ ವಿಷಯಕ್ಕೆ ಒಂದು ಆಖ್ಯಾಯಿಕೆಯೂ ಇದೆ. ಗಂಗಿಮಾಳವ್ವ ಮತ್ತು ತುಪ್ಪದ ಮಾಳವ್ವ ಇವರಿಬ್ಬರಿಗೂ ಈತ ಅಣ್ಣ. ಆದುದರಿಂದ ಮೈಲಾರಲಿಂಗನ ಬೀಗ (ಭಾವ) ಈತ. ಜಾನಪದ ಸಾಹಿತ್ಯದಲ್ಲಿ ಈ ವಿಷಯಕ್ಕೆ ಮೇಲಿಂದಮೇಲೆ ಉಲ್ಲೇಖಗಳು ಬರುತ್ತವೆ.

ಮಹಾರಾಷ್ಟ್ರದಲ್ಲಿ ಈತನನ್ನು ಈಗಲೂ 'ಹೇಗಡೆ ಪ್ರಧಾನ' ಎಂದು ಸಂಬೋಧಿಸುವರು. ಶ್ರೀ ಢೇರೆಯವರು ಬ್ರಹ್ಮಶಿವನು ಹೇಳುವ 'ಮನೆವೆರ್ಗಡೆ ಚಟ್ಟಪ'ನೆಂದರೆ ಈತನೇ ಇರಬಹುದೆಂದು ಊಹಿಸುತ್ತಾರೆ.[೧೫] ಅವರ ಊಹೆಯಲ್ಲಿ ಸತ್ಯಾಂಶವಿರುವ ಸಾಧ್ಯತೆಯಿದೆ. ಬ್ರಹ್ಮಶಿವನು ಕ್ಷೇತ್ರಪಾಲಕನಾದ ಈ ದೇವತೆಯೆ ಮೈಲಾರನನ್ನು ಪ್ರತಿಷ್ಠಿಸಿದನೆಂದು ಭಾವನೆ ಮಾಡಿಕೊಂಡಂತೆ ತೋರುತ್ತದೆ.

ಈತನಿಗೂ ವಿಶಿಷ್ಟವಾದ ಆರಾಧನೆಗಳಿವೆ. ಮೈಲಾರದಲ್ಲಿರುವ ಮೂರ್ತಿಯು ಭಿನ್ನವಾಗಿರುವದರಿಂದ ಇದೀಗ ಅಲ್ಲಿ ಬೇರೆ ಮೂರ್ತಿಯನ್ನು ಪ್ರತಿಷ್ಠಿಸಲಾಗಿದೆ. ಭಿನ್ನಗೊಂಡಿರುವ ಮೂರ್ತಿ ಚತುರ್ಭುಜದ್ದಾಗಿದ್ದು ಎರಡು ಕೈಗಳಲ್ಲಿ ಪಾಶ ಮತ್ತು ಹಲಾಯುಧಗಳು ಕಂಡುಬರುತ್ತವೆ.[೧೬] ದೇವರಗುಡ್ಡದಲ್ಲಿರುವ ಮೂರ್ತಿಯು ಕೈಯಲ್ಲಿ ತ್ರಿಶೂಲ, ಖಡ್ಗ, ಡಮರು ಮತ್ತು ಪಾನಪಾತ್ರ (ಕಪಾಲ) ಗಳಿರುವುದು ಕಂಡುಬರುತ್ತದೆ.

ಹೀಗೆ ಈ ಪರಂಪರೆಯಲ್ಲಿ ಆರು ಜನ ದೇವತೆಗಳು ಸಮಾವಿಷ್ಟರಾಗಿದ್ದಾರೆ. ಇದಲ್ಲದೆ ಸಿಬಾರಗಟ್ಟೆ, ತ್ರಿಶೂಲ, ಡಮರು, ಮೈಲಾರಲಿಂಗನ ವಾಹನವಾದ ಕುದುರೆ ಪಾದರಕ್ಷೆಗಳು ಭಂಡಾರ (ಅರಿಷಣ), ಮೈಲಾರ–ದೇವರ ಗುಡ್ಡಗಳಲ್ಲಿರುವ ಬಿಲ್ಲುಗಳು ಇವುಗಳಿಗೂ ಪೂಜ್ಯತೆ ಸಲ್ಲುತ್ತದೆ.

ಮೇಲೆ ಹೇಳಿದಂತೆ ಈ ಸಮುದಾಯದ ದೇವತೆಗಳ ಪೈಕಿ ಗಂಗಿಮಾಳವ್ವ ಅಥವಾ ಮಾಳಚಿ (ಮರಾ–ಮ್ಹಾಳಸಾ) ದೇವತೆಗಾಗಿಯೆ ಪ್ರತ್ಯೇಕ ದೇವಾಲಯಗಳಿದ್ದುದು ತಿಳಿದುಬರುತ್ತದೆ. ಇನ್ನುಳಿದ ದೇವತೆಗಳಿಗೆ ಪ್ರತ್ಯೇಕ ದೇವಾಲಯಗಳಿರುವ ಸಾಧ್ಯತೆ ಇದೆ. ಈ ದೆಸೆಯಲ್ಲಿ ಹೆಚ್ಚಿನ ಸಂಶೋಧನೆಯಾಗಬೇಕು.

---

೧೫. ಅದೇ ಪು. ೫೬.

೧೬. ಶ್ರೀ ಢೇರೆಯವರು ಪಾಶ ಮತ್ತು ಅಂಕುಶಗಳಿವೆಯೆಂದು ಹೇಳಿದ್ದಾರೆ. (ಖಂಡೋಬಾ. ಪು. ೫೬) ಆದರೆ ಈಗಲೂ ಇರುವ ಆ ಹಳೆಯ ಭಿನ್ನ ಮೂರ್ತಿಯನ್ನು ಪರೀಕ್ಷಿಸಿದರೆ ಅವರ ವರ್ಣನೆ ತಪ್ಪೆಂದು ಕಂಡುಬರುತ್ತದೆ.

ಅಕ್ಕನ ಅರಿವಿನ ಕಣ್ಣು

ಬಿ. ಎ. ಸನದಿ

ಹನ್ನೆರಡನೆಯ ಶತಮಾನದಲ್ಲಿ ಬಾಳಿ ಬೆಳಗಿ ಹೋದ ಶರಣಸಮೂಹದಲ್ಲಿ ಮಹಾದೇವಿಯಕ್ಕ ಧ್ರುವತಾರೆಯೆಂಬ ಮಾತು ಕೇವಲ ಮುಗ್ಧ ಮನೋಭಾವದ ಪ್ರತೀಕವಲ್ಲ; ಯಾವ ತಾರ್ಕಿಕ ಒರೆಗಲ್ಲಿಗೆ ಉಜ್ಜಿ ನೋಡಿದರೂ ಸತ್ಯವೆಂದೇ ಸಾಬೀತಾಗುವ ಸಂಗತಿ. ಯಾವ ಭಾಷಾಸಾಹಿತ್ಯ ಚರಿತ್ರೆಯಲ್ಲೂ ಅಕ್ಕನಿಗೆ ತಕ್ಕ ತಂಗಿಯೊಬ್ಬಳು ಸಿಕ್ಕಾಳೆಂದು ಹೇಳಲಾಗದು. ಅವಳು ಕರ್ನಾಟಕದಲ್ಲಿ ಉಡುತಡಿ ಯಂಥ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಕನ್ನಡದಲ್ಲಿ ತನ್ನ ಅಂತರಂಗ-ಬಹಿರಂಗಾ ನುಭವಗಳನ್ನು ಸುಂದರವಾದ ವಚನಗಳಲ್ಲಿ ಎರಕ ಹೊಯ್ದಿಟ್ಟುದೊಂದು ಆಕಸ್ಮಿಕ ವೆನ್ನಬೇಕು. ಅವಳ ಕಾಲದ ಶಿವಶರಣರ, ಸದ್ಭಕ್ತರ ಮನೆಗಳಲ್ಲಿ ಹಲವಾರು ಹೆಂಗೂಸುಗಳು ಹುಟ್ಟಿ ಬೆಳೆದಿರಬಹುದು. ಕೆಲವರು ಹೆಸರಾಂತ ಶರಣರಾಡುಂಬೊಲ ದಲ್ಲಿ ಆಡಿ-ಹಾಡಿ ಹೆಸರು ಗಳಿಸಿರಲೂಬಹುದು. ಆದರೆ ಅಕ್ಕಮಹಾದೇವಿಯಂತೆ ಪರಿಪೂರ್ಣ 'ಶಿವಭಾವಸಮರತಿ'ಯ ಶಿಖರಕ್ಕೇರಿದ ಶರಣೆ ಇನ್ನೊಬ್ಬರಿಲ್ಲ; ಅಕ್ಕ ನಷ್ಟು ಪರಿಣಾಮಕಾರಿಯಾಗಿ ಕನ್ನಡ ವಚನಸಾಹಿತ್ಯದಲ್ಲಿ ತಾತ್ವಿಕ ಸತ್ವದೊಡನೆ ಕಾವ್ಯಸೌಂದರ್ಯವನ್ನೂ ಮೇಳವಿಸಿ ಹಾಡಿದ ವಚನಕಾರ್ತಿ ಮತ್ತೊಬ್ಬರಿಲ್ಲ.

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲಚೆನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ

ಎಂದು ಕಲ್ಯಾಣದ ಅನುಭವಮಂಟಪದಲ್ಲಿ ಚೆನ್ನಬಸವಣ್ಣನೆತ್ತಿದ ಅಭಿಮಾನ ದುಂದ್ಗಾರಕ್ಕೆ ಅಂದಿನ-ಮುಂದಿನ ಶರಣಶಿರೋಮಣಿಗಳೂ ವಿದ್ವನ್ಮಣಿಗಳೂ ದನಿ ಗೂಡಿಸಿದುದುಂಟು. ಮೇಲಿನ 'ಕೋಷ್ಟಕ'ದ ಪ್ರಕಾರ ಆದ್ಯರ ಅರವತ್ತು-ವಚನ ಗಳಿಗೆ ಸಮವೆನಿಸುವಂಥ ಒಂದೊಂದು ವಚನರಚನೆಯ ಹೆಗ್ಗಳಿಕೆ ಅಕ್ಕನದು ! The 'Excitement of Science' ದಲ್ಲಿ John Rader Platt ವೈಯಕ್ತಿಕ ಪ್ರತಿ ಭೆಯ ಕುರಿತು ಬರೆಯುತ್ತ Seventeen Johnsons and Popes will not

make a Shakespeare ಎಂದ ಮಾತನ್ನಿಲ್ಲಿ ನೆನೆಯಬಹುದು. ಇಲ್ಲಿ ಹದಿನೇಳರ ಅಂಕಿಗೆ ಅಂಥ ವಿಶೇಷ ಮಹತ್ವವೇನಿಲ್ಲವಾದರೂ ಷೇಕ್ಸಪಿಯರನ ಸತ್ವದ ಶ್ರೇಷ್ಠತೆ ಮಾತ್ರ ಗಮನಿಸಬೇಕಾದ ಅಂಶ. ಹಾಗೆಯೇ ಕನ್ನಡ ವಚನಕಾರರಲ್ಲಿ ಅಕ್ಕನದೂ! ಮುಗಿಲು ಹರಿದು ಬಿದ್ದಡೆ ತನಗೆ ಮಜ್ಜನಕ್ಕೆರೆದರೆಂದು ಭಾವಿಸುವ ದೃಢಚಿತ್ತದಿಂದ ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬಷ್ಟು ಭಕ್ತಿಯ ಪರಾಕಾಷ್ಠೆಯನ್ನು ಮೆರೆದ ಮಹಾದೇವಿಯ ಜೀವನಾನುಭವವೆಲ್ಲ ಶಿವಾನುಭವವಾಗಿ ಅವಳ ಕಾವ್ಯಖಂಡದಲ್ಲಿ ಆವಿಷ್ಕಾರಗೊಂಡದ್ದೊಂದು ಅಪೂರ್ವ ಯೋಗ.

'ಕಾಯದೊಳಗೆ ಅಕಾಯವಾದ, ಜೀವದೊಳಗೆ ನಿರ್ಜೀವವಾದ, ಭಾವದೊಳಗೆ ನಿರ್ಭಾವವಾದ' ಅಕ್ಕನ ಬದುಕು ಹೆಜ್ಜೆಹೆಜ್ಜೆಗೂ ಹೊಸ ತಿರುವುಗಳನ್ನು ಪಡೆದು ಕೊನೆಗೆ 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ' ನನ್ನರಸುತ್ತ ನಡೆದದ್ದು ಸಾಮಾನ್ಯ ಜನಕ್ಕೆ ಅತ್ಯಂತ ಸೋಜಿಗವನ್ನುಂಟುಮಾಡುವ ಸಂಗತಿ. ಅಕ್ಕ ತನ್ನ ಅಲ್ಪಾವಧಿಯ ಬದುಕಿನಲ್ಲಿ ಕೈಕೊಂಡುದೊಂದು ಮಹಾಪ್ರಯಾಣವೇ ಸರಿ. ಈ ಮಹಾಪ್ರಯಾಣದ ಪ್ರಮುಖ ನಿಲ್ದಾಣಗಳಲ್ಲಿ ಮೊದಲನೆಯದು ಉಡುತಡಿ, ಎರಡನೆಯದು ಕಲ್ಯಾಣ, ಮೂರನೆಯದು ಶ್ರೀಶೈಲದ ಕದಳೀವನ. ಈ ಮಹಾಪ್ರಯಾಣದುದ್ದಕ್ಕೂ ಅಕ್ಕ ಕಂಡುಂಡ ಅನುಭವಗಳೆಲ್ಲ ಜಗದ ಹೊರತು; ಅವಳು ಹಾಡಿಕೊಂಡಿದ್ದೆಲ್ಲ ಶಿವನ–ಚನ್ನಮಲ್ಲಿಕಾರ್ಜುನದೇವನ— ಕುರಿತು. ತನ್ನ ಸುತ್ತಲಿನ ಸೃಷ್ಟಿಯೊಳಗೆಲ್ಲ ಶಿವಭಾವದ ಆವಿಷ್ಕಾರವನ್ನೇ ಕಂಡರಿಸಿದ ಶಿವದೃಷ್ಟಿ ಅಕ್ಕನದು. ಅವಳ ಒಂದೊಂದು ವಚನವೂ ಅವಳ ಶಿವಭಾವವೇ ಹರಳುಗೊಂಡು ನಿಂತಂತಿದೆ. ಅಕ್ಕನ ಪ್ರಖರ ವೈರಾಗ್ಯದ ಸೂರ್ಯ ಪ್ರಕಾಶದಿಂದ ಅವಳ ವಚನದ ಒಂದೊಂದು ಇಬ್ಬನಿಯಲ್ಲೂ ಶಿವನೊಲುಮೆಯ ಸಪ್ತರಂಗ ಕಂಗೊಳಿಸುವಂತಾಗಿದೆ.

ಅಕ್ಕನದು ಜನ್ಮತಃ ಶಿವದೃಷ್ಟಿ. ಅಂತೆಯೇ ಅವಳ ಬದುಕಿನುದ್ದಕ್ಕೂ ಅವಳು ಕಂಡದ್ದು ಶಿವಸೃಷ್ಟಿ. ಈ ಶಿವಸೃಷ್ಟಿಯಲ್ಲಿ ಅಡಕಗೊಂಡಿರುವ ಅಗೋಚರ ರಹಸ್ಯಗಳ ಪರಿಶೋಧನೆಗೆ ತೊಡಗಿದ ಅಕ್ಕನ ಕಣ್ಣು ಇಡಿಯ ಶರಣ ಸಮಾಜದ ಕಣ್ಣು ತೆರೆಸಿತು. ಮಹಿಳಾ ಜೀವನದ ಹಿರಿಮೆಯನ್ನು ಮೆರೆಸಿತು. 'ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ಮರದ ಮರೆಯ ತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವ' ಕಂಡು ಅನುಭವಿಸಿದ ಅಕ್ಕಳ ಕಣ್ಣೊಳಗಿನ ಕಣ್ಣು ಅದ್ಭುತ ತೇಜದ ಸಂಕೇತವೇ ಹೌದು. ಗೋಚರವಾದ ಲೋಕಾನುಭವಗಳ ಮೂಲಕ ಅಗೋಚರವಾದ ಆಧ್ಯಾತ್ಮಲೋಕದತ್ತ, ಕಣ್ಣಿಗೆ ಕಾಣುವ ಆಕಾರಗಳಾಚೆಗಿರುವ ನಿರಾಕಾರ ಚೈತನ್ಯದತ್ತ ಚಾಚುವ ಅವಳ ಅರಿವಿನ ಕಣ್ಣು ಅರಳಿದ ಕ್ರಮ ವಿಸ್ಮಯಕಾರಿಯಾದದ್ದು. ಅಕ್ಕನ ಅಂತರಂಗದಲ್ಲಿಯೇ 'ಚಿನ್ನದೊಳಗಿನ ಬಣ್ಣದಂತೆ' ಅಭಿನ್ನವಾಗಿ ಅವಿಚ್ಛಿನ್ನ

ವಾಗಿ ಬೆರೆತು ಬೆಳೆದು ಬಂದ ಅವಳ ಭಕ್ತಿ-ಜ್ಞಾನ-ವೈರಾಗ್ಯ ಭಾವಗಳು ಬೆಳಕಿಗೆ ಬಂದ ಪರಿಯಯನ್ನರಿಯುವುದೂ ಒಂದು ರೋಮಾಂಚನಕಾರೀ ಅನುಭವವೇ; ಅವಳ ಮನಸ್ಸು ಮತ್ತು ಶರೀರ ಸಂಕೀರ್ಣತೆಯ (Mind–Body Complex) ಅಧ್ಯಯನವೂ ಒಂದ ವಿಲಕ್ಷಣ ಅನುಭವವೇ.

ಸಂವೇದನಾಶೀಲ ಮನುಷ್ಯನ ಇಂದ್ರಿಯ ಗಮ್ಯ ಅಮೂರ್ತ ಅನುಭವಗಳು ಅವನ ಚಿಂತನ–ಮಂಥನಗಳ ಮೂಲಕ ಮೂರ್ತ ರೂಪ ಹೊಂದಿ ಕಲಾತ್ಮಕ ಅಭಿವ್ಯಕ್ತಿ ಪಡೆದಾಗ ಸಾಹಿತ್ಯಪಾಕ ಸಿದ್ಧಗೊಳುತ್ತದಷ್ಟೆ ? ಅಂತೆಯೇ ಅಕ್ಕನ ಲೋಕಾನುಭವವೆಲ್ಲ ಶೋಕಾನುಭವವಾಗುವ ಅಪಾಯದಿಂದ ಪಾರಾಗಿ ಶಿವಾನುಭವವಾಗಿ ಪರಿಪಾಕಗೊಂಡ ರೀತಿಯಲ್ಲಿ ಅವಳ ಇಂದ್ರಿಯಗಳೆಲ್ಲ ಮುಖ್ಯವಾಗಿ ಅವಳ ಅರಿವಿನ ಕಣ್ಣು ಬಲು ಎಚ್ಚರಿಕೆಯಿಂದ ದುಡಿದುದುಂಟು; ಮಿಡಿದುದುಂಟು. ಒಮ್ಮೊಮ್ಮೆ ಲೋಕದ ನಡೆ–ನುಡಿಗಳಲ್ಲಿ ವಿಸಂಗತಿಗಳನ್ನು ಕಂಡು ಕನಲಿದಾಗ ಅವಳ 'ಹೆಣ್ಣು ರೂಪದೊಳಗಿನ ಗಂಡುದನಿ' ಗಡುಸಾಗಿ ಸಿಡಿದುದೂ ಉಂಟು. ಅಂತೆಯೇ ಅವಳ ವಚನರಾಶಿಯೊಳಗೆ ಸಿವುಡು ಸಿವುಡಾಗಿ ಕೂಡಿಬಿದ್ದ ವಿವಿಧ 'ಮೂಡು'ಗಳ ಹಿನ್ನೆಲೆ ಅಂದಿನವರಂತೆ ಇಂದಿನವರ ಆಸಕ್ತಿಯನ್ನೂ ಕೆರಳಿಸುತ್ತದೆ. ಅಕ್ಕನ ಪ್ರಾಯದಲ್ಲಿಯೇ ಪಕ್ವಗೊಂಡ ಅವಳ ಶಿವದೃಷ್ಟಿಯ ಮೂಲಕ ನಡೆದ ಕಾವ್ಯ ಸೃಷ್ಟಿ ನಮ್ಮನ್ನು ಬೆರಗುಗೊಳಿಸುತ್ತದೆ. ಗಾಳಿ ಬಿಟ್ಟ ಕಡೆಗೆ ತೇಲಿ ಹೋಗುವ, ಆದರೂ ಕಣ್ಣಿಗೆ ಮೋಹಕವಾಗಿ ಕಾಣುವ, ಬೂರಲರಳೆಯ ಉಂಡೆಯಂತಾಗದೆ ಅವಳ ಅನುಭವದ ಗಣಿಯಿಂದ ಹೊರಟ ಚೊಕ್ಕಚಿನ್ನವಾಗಿ, ಕಸರಿಲ್ಲದ ಕಸವರವಾಗಿ ಮೂಡಿ ಬಂದು, ಕಣ್ಮನಗಳನ್ನೂ ತುಂಬಿ ನಿಂದು, ಚಿಂತನೆಗೆ 'ತೊಡಗಿಸುವ' ಅಕ್ಕನ ವಚನಗಳಲ್ಲಿ ಅವಳ 'ಜಾಗೃತ ದೃಷ್ಟಿ'ಯ ವೈಶಿಷ್ಟ್ಯವನ್ನು ಗುರುತಿಸಬಹುದಾಗಿದೆ. ಅಕ್ಕನ ಅಂತರ್‌ದೃಷ್ಟಿ ಇಷ್ಟೊಂದು ತ್ವರಿತಗತಿಯಲ್ಲಿ ಅರಳಬೇಕಾದರೆ ಅವಳ ಹೊರಗಣ್ಣೂ ಬಲು ಚುರುಕಾಗಿ ಕೆಲಸ ಮಾಡಿರಲೇಬೇಕೆಂಬುದು ಅವಳ ವಚನಗಳಿಂದಲೇ ಸಿದ್ಧವಾಗುತ್ತದೆ.

ಚೆನ್ನಬಸವಣ್ಣನವರಿಂದ ಅಷ್ಟೊಂದು ಅದ್ಭುತ ಪ್ರಮಾಣಪತ್ರ ದೊರೆಯುವುದಕ್ಕೆ ಅಕ್ಕನ ಆಧ್ಯಾತ್ಮಿಕ ವಿಕ್ರಮದೊಡನೆ ಅವಳ ವಚನಸೃಷ್ಟಿಯಲ್ಲಿ ಕೌಶಲ್ಯ ಪೂರ್ಣವಾಗಿ ಅಡಕಗೊಂಡ ಅವಳ ಲೋಕ ನಿರೀಕ್ಷಣಶಕ್ತಿಯೂ ಒಂದು ಕಾರಣವಾಗಿರಬಹುದು. ತಾನು ಕಂಡುಂಡ ಒಳ ಹೊರಗಿನ ಅನುಭವಗಳನ್ನು ಮನಂಬುಗುವಂತೆ ಚಿತ್ರಿಸುವ, ಮನವರಿಕೆಯಾಗುವಂತೆ ವಿಶ್ಲೇಷಿಸುವ, ಅಲೌಕಿಕ ಆನಂದವನ್ನು ಅನಾವರಣಗೊಳಿಸುವ ಅಕ್ಕನ ಕಲಾತ್ಮಕತೆ ಅಕ್ಕನಿಗೇ ಮೀಸಲು. ಅವಳು ಇಡಿಯ ವಿಶ್ವದ ರಮ್ಯ ರಹಸ್ಯಗಳನ್ನೆಲ್ಲ ಇಂದ್ರಿಯಗಮ್ಯ ಅನುಭವಗಳನ್ನಾಗಿ ಪರಿಭಾವಿಸಿ, ತನ್ನ ಬೆರಗುಗಣ್ಣುಗಳಲ್ಲಿ ತುಂಬಿಕೊಂಡ ಒಂದೊಂದೇ ಅನುಭವಕ್ಕೆ ನಿಚ್ಚಳವಾದ ಶಬ್ದ ಸಮುಚ್ಚಯದ

ಹೆಣೆಕೆಹಾಕಿ ಲೋಕದ ಮುಂದಿರಿಸಿದ್ದಾಳೆ. 'ವನವೆಲ್ಲ ನೀವೆ, ವನದೊಳಗಣ ದೇವತರುವೆಲ್ಲ ನೀವೆ, ತರುವಿನೊಳಗಾಡುವ ಖಗಮೃಗವೆಲ್ಲ ನೀವೆ, ಚೆನ್ನಮಲ್ಲಿಕಾರ್ಜುನನಾ ಸರ್ವಭರಿತನಾಗಿ ಎನಗೆ ಮುಖದೋರಾ' ಎಂದು ಮೊರೆಯಿಡುವ ಅಕ್ಕ ತನ್ನ ಬದುಕಿನುದ್ದಕ್ಕೂ ಕಂಡ ಬಾಹ್ಯ ಪ್ರಪಂಚವನ್ನು ಭಾವ ಪ್ರಪಂಚದಲ್ಲಿ ಪರಿಭಾವಿಸಿದ್ದು, ಆ ಭಾವ ಪ್ರಪಂಚವನ್ನೇ ಅನುಭಾವ ಪ್ರಪಂಚವಾಗಿ ಮಾರ್ಪಡಿಸಿದ್ದು, ತನ್ನ ಅನುಭಾವದೃಷ್ಟಿಯನ್ನು ಕಾವ್ಯಮಯ ವಚನಗಳಲ್ಲಿ ದಾಖಲೆಗೊಳಿಸಿದ್ದು 'ಏಕಮೇವಾದ್ವಿತೀಯ' ಸಾಧನೆಯೇ ಹೌದು. ಅಕ್ಕನ ಈ ಸೂಕ್ಷ್ಮ ಸೃಜನಶೀಲ ದೃಷ್ಟಿಯದೊಂದು ಅಲೆಯಂತಿರುವ ವಿಲಿಯಮ್ ವರ್ಡ್ಸ್‌ವರ್ತ್ ಕವಿಯ ಕಾವ್ಯ ಭಾಗವೊಂದನ್ನಿಲ್ಲಿ ಸ್ಮರಿಸಿಕೊಳ್ಳಬೇಕೆನಿಸುತ್ತದೆ.

"To every natural form, rock, fruit or flower
Even the loose stones that cover the high way
I gave a moral life: I saw them feel
Or linked them to some feeling : the great mass
Lay bedded in some quickening soul, and all
That I beheld respired with inward meaning"

ಹೊರಜಗತ್ತಿನ ಜಡ ವಸ್ತು-ಒಡವೆಗಳಿಗೆಲ್ಲ ಜೀವಚೇತನವಿತ್ತು ಅವುಗಳ ಅಂತಸ್ಥ ಅರ್ಥಾನ್ವೇಷಣೆ ನಡೆಸುವ, ಆ ಅರ್ಥಗಳನ್ನು ಪರಮಾರ್ಥಸಾಧನೆಯಲ್ಲಿ ತೊಡಗಿಸುವ ಅಕ್ಕನಡಿಗಡಿಗೂ ದಾರಿದೀಪವಾದದ್ದು ಅವಳ ಅವಿಚಲ ದೈವಿಕ ಶ್ರದ್ಧೆ; ಸ್ವವಿವೇಕದ ಮೇಲಿನ ಅದಮ್ಯ ವಿಶ್ವಾಸ. ಇಡಿಯ ಶರಣಸಮೂಹದೊಳಗೆಲ್ಲ ಅಕ್ಕನ ನೀತಿಯೇ ನೀತಿ; ಅಕ್ಕನ ರೀತಿಯೇ ರೀತಿ. ಪ್ರತಿಯೊಬ್ಬ ಶರಣನೂ ತನ್ನ ಇಷ್ಟದೇವನಿಗೆ ನಿಷ್ಠನಾಗಿದ್ದು ಶರಣಜೀವನ ಸಂಪನ್ನತೆಯ ಸಂವರ್ಧನೆಗಾಗಿ ದುಡಿದುಕೊಂಡದ್ದೇನೋ ನಿಜ. ಆದರೆ ತನ್ನ ಜ್ಞಾನೇಂದ್ರಿಯಗಳ ಮೂಲಕ ಕಂಡ ವಿಶ್ವಚೇತನವನ್ನು ಅರ್ಥೈಸುವ, ತಾನು ಕಂಡುಕೊಂಡು ಸತ್ಯದ ಬೆಳಕಿನಲ್ಲಿ ಪರಮಾರ್ಥ ಪಥದಲ್ಲಿ ಮುನ್ನಡೆಯುವ ಅಕ್ಕನಂಥ ನಿಶ್ಚಲ ಛಲ ಇನ್ನಾವ ಶರಣ-ಶರಣೆಯರಲ್ಲಿಯೂ ಕಂಡು ಬರಲಿಲ್ಲವೆಂದೇ ಹೇಳಬೇಕು.

ಅಕ್ಕನ ಆಧ್ಯಾತ್ಮಿಕ ಜೀವನ-ಸಾಧನೆಯಲ್ಲಿ ಅವಳ ಮೈ-ಮನಗಳೆರಡೂ ಸಮಸಮವಾಗಿ ತೊಡಗಿದ್ದುವೆಂಬ ಸಂಗತಿಗೆ ಸಾಕ್ಷಿಯಾದ ಅವಳ ಭಾವಪೂರ್ಣ ವಚನವೊಂದನ್ನು ಇಡಿಯಾಗಿಯೇ ಅವಲೋಕಿಸಿದರೆ ವಾಸಿ :

ನಾನು ಮಜ್ಜನವ ಮಾಡುವುದಕ್ಕೆ ಮುನ್ನವೆ
    ಜಂಗಮಕ್ಕೆ ಮಜ್ಜನವ ಮಾಡಿಸುವೆ
ನಾನು ಸೀರೆಯನುಡುವುದಕ್ಕೆ ಮುನ್ನವೆ
    ಜಂಗಮಕ್ಕೆ ದೇವಾಂಗವನುಡಿಸುವೆ

ನಾನು ಪರಿಮಳವ ಲೇಪಿಸುವುದಕ್ಕೆ ಮುನ್ನವೆ
ಜಂಗಮಕ್ಕೆ ಸುಗಂಧದ್ರವ್ಯಂಗಳ ಲೇಪಿಸುವೆ
ನಾನು ಅಕ್ಷತೆಯ ನೀಡುವುದಕ್ಕೆ ಮುನ್ನವೆ
ಜಂಗಮಕ್ಕೆ ಅಕ್ಷತೆಯ ನೀಡುವೆ
ನಾನು ಪುಷ್ಪವ ಮುಡಿಯುವುದಕ್ಕೆ ಮುನ್ನವೆ
ಜಂಗಮಕ್ಕೆ ಪರಿಮಳಪುಷ್ಪವ ಮುಡಿಸುವೆ
ನಾನು ಧೂಪವಾಸನೆಯ ಕೊಳ್ಳದ ಮುನ್ನವೆ
ಜಂಗಮಕ್ಕೆ ಧೂಪವಾಸನೆಯ ಕೊಡುವೆ
ನಾನು ದೀಪಾರತಿಯ ನೋಡದ ಮುನ್ನವೆ
ಜಂಗಮಕ್ಕೆ ಆರತಿಯ ನೋಡಿಸುವೆ
ನಾನು ಸಕಲ ಪದಾರ್ಥ ಸ್ವೀಕರಿಸದ ಮುನ್ನವೆ
ಜಂಗಮಕ್ಕೆ ಮೃಷ್ಟಾನ್ನವ ನೀಡುವೆ
ನಾನು ಪಾನಂಗಳ ಕೊಳ್ಳದ ಮುನ್ನವೆ
ಜಂಗಮಕ್ಕೆ ಪಾನಂಗಳ ಕೊಡುವೆ
ನಾನು ಕೈಯ ತೊಳೆಯದ ಮುನ್ನವೆ
ಜಂಗಮಕ್ಕೆ ಹಸ್ತಪ್ರಕ್ಷಾಲನ ಮಾಡಿಸುವೆ
ನಾನು ವೀಳೆಯವ ಮಾಡುವುದಕ್ಕೆ ಮುನ್ನವೆ
ಜಂಗಮಕ್ಕೆ ತಾಂಬೂಲವ ಕೊಡುವೆ
ನಾನು ಗದ್ದಿಗೆಯ ಮೇಲೆ ಕುಳಿರುವುದಕ್ಕೆ ಮುನ್ನವೆ
ಜಂಗಮಕ್ಕೆ ಉನ್ನತಾಸನವನಿಕ್ಕುವೆ
ನಾನು ಸುನಾದಂಗಳ ಕೇಳುವುದಕ್ಕೆ ಮುನ್ನವೆ
ಜಂಗಮಕ್ಕೆ ಸಂಗೀತವಾದ್ಯಂಗಳ ಕೇಳಿಸುವೆ
ನಾನು ಸುರೂಪಂಗಳ ನೋಡುವುದಕ್ಕೆ ಮುನ್ನವೆ
ಜಂಗಮಕ್ಕೆ ಗೀತನೃತ್ಯಂಗಳ ನೋಡಿಸುವೆ
ನಾನು ಪುರುಷ ಸಂಗವ ಮಾಡುವುದಕ್ಕೆ ಮುನ್ನವೆ
ಜಂಗಮಕ್ಕೆ ಅಂಗಸಂಯೋಗವ ಮಾಡಿಸುವೆ
ನಾನು ಭೂಷಣಂಗಳ ತೊಡುವುದಕ್ಕೆ ಮುನ್ನವೆ
ಜಂಗಮಕ್ಕೆ ಆಭರಣಂಗಳ ತೊಡಿಸುವೆ
ನಾನು ವಾಹನಂಗಳನೇರುವುದಕ್ಕೆ ಮುನ್ನವೆ
ಜಂಗಮಕ್ಕೆ ವಾಹನವನೇರಿಸುವೆ
ನಾನು ಮನೆಯೊಳಗಿರುವುದಕ್ಕೆ ಮುನ್ನವೆ
ಜಂಗಮಕ್ಕೆ ಗೃಹವ ಕೊಡುವೆ

ಇಂತೀ ಹದಿನಾರು ತೆರನ ಭಕ್ತಿಯನು ಚರಲಿಂಗಕ್ಕೆ ಕೊಟ್ಟು
ಆ ಚರಲಿಂಗಮೂರ್ತಿ ಭೋಗಿಸಿದ ಬಳಿಕ
ನಾನು ಪ್ರಸಾದ ಮುಂತಾಗಿ ಭೋಗಿಸುವೆನಲ್ಲದೆ
ಜಂಗಮವಿಲ್ಲದೆ ಇನಿತರೊಳಗೊಂದು ಭೋಗವನಾದರೂ
ನಾನು ಭೋಗಿಸಿದೆನಾದೊಡೆ ನಿಮ್ಮಾಣೆ ! ನಿಮ್ಮ ಪ್ರಮಥರಾಣೆ !

ಇದು ಅಕ್ಕನ ಸಮಗ್ರ ಭಕ್ತಿಜೀವನಕ್ಕೆ ಕನ್ನಡಿ ಹಿಡಿಯುವ ಒಂದು ವಚನ. ಹದಿನಾರರ ಹರಯದಲ್ಲಿಯೇ ಪಕ್ವಗೊಂಡು ನಿಂತ ಈ ಹದಿನಾರು ತೆರನ ಭಕ್ತಿಯಿಂದಾಗಿ ಅಕ್ಕ 'ಅಂಗದಲ್ಲಿ ಲಿಂಗಸಂಗ, ಲಿಂಗದಲ್ಲಿ ಅಂಗಸಂಗ ಮಾಡಿದೆನೆಂದರೆ ನನಗಾವ ಜಂಜಡವಿಲ್ಲ' ಎಂದು ಸಾರಿದವಳು: ಲೌಕಿಕ ದ್ವಂದ್ವಗಳನ್ನೆಲ್ಲ ಮೀರಿದ ತನ್ನ ಬದುಕಿನ ಗುರಿಯ ಬಳಿಸಾರಿದವಳು. ಈ ಮಹಾಪ್ರಯಾಣದ ಹಂತಹಂತದಲ್ಲೂ ದೈವೀ ವಿವೇಕವೊಂದನ್ನು ನಂಬಿಕೊಂಡು ಮುನ್ನಡೆದ ಅಕ್ಕ ಕಂಡುಂಡ ಅನುಭವಗಳಿಗೆಲ್ಲ ಅವಳ ವಚನಗಳೇ ಸಾಕ್ಷಿ, ಇತರ ಶರಣರ ವಚನಗಳೇ ಪುರಾವೆಗಳು.

ಹದಿನಾರರ ಹರಯದಲ್ಲಿಯೇ 'ಅರಸದೆ ಬಂದ ಅರಸಿ ಪದ'ವನ್ನೊದ್ದು, ದಿಗಂಬರವನ್ನೆ ಹೊದ್ದು. ಕಾಯದಲ್ಲಿ ಅಕಾಯಳಾಗಿ, ಮಾಯಾಪ್ರಪಂಚದ ಸೀಮೋಲ್ಲಂಘನಗೈದು ಮುಂದುವರಿದ ಅಕ್ಕನ ಕಣ್ಮನಗಳು ನಿತ್ಯನಿರಂತರ ಹಂಬಲಿಸಿದ್ದು ಚೆನ್ನಮಲ್ಲಿಕಾರ್ಜುನನ ಸಂಗಸುಖಕ್ಕಾಗಿ. 'ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು' ಎಂಬ ತಳಮಳದಲ್ಲಿ, 'ಎನ್ನ ದೇವ ಚೆನ್ನಮಲ್ಲಿಕಾರ್ಜುನನ, ಕಾಣದೊಡೆ ಅನೆಂತು ಬದುಕುವೆನವ್ವಾ' ಎಂಬ ಕಳವಳದಲ್ಲಿ, 'ಅಯ್ಯಾ ನೀ ನೋಡಿದಡೆ ನೋಡು, ನೋಡದಿರ್ದಡೆ ಮಾಣು, ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ' ಎಂದು ಗೋಗರೆಯುವಲ್ಲಿ ಅಕ್ಕನ ಕಣ್ಣುಗಳು ಅವಳ ಪರಮಾರ್ಥ ಪ್ರಪಂಚದ ಕಾಜಿನ ಕಿಟಕಿಗಳಂತೆ ಕೆಲಸ ಮಾಡಿದಂತಿದೆ. ಹೊರಜಗತ್ತಿಗೂ ಅಕ್ಕನ ಅಂತರಂಗಕ್ಕೂ ದೈವೀ ಬೆಳಕಿನ ಲಾಳಿಯಾಡಿಸಿದ ಅವಳ ಕಣ್ಣೆಂದರೆ ಅವಳ ಇರವಿನರಿವು ಹೆಚ್ಚಿಸಿದ ಕಣ್ಣು; ಅವಳ ಇರವಿನಾಚೆಯ ಅರಿವಿಗೂ ರಹದಾರಿಯಾದ ಕಣ್ಣು ! ಈ ಅರಿವು ಅಕ್ಕನ ಒಳಗಣ್ಣಿನೆದುರು ಕನಸಾಗಿ ಕಂಗೊಳಿಸಿತೆಂಬುದಕ್ಕೆ,

ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ
ಅಕ್ಕಿಯಡಕೆ ತೆಂಗಿನಕಾಯಿ ಕಂಡೆ
ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವಾ
ಮಿಕ್ಕುಮೀರಿ ಹೋಹನಾ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು

ಎಂಬ ವಚನವನ್ನವಲೋಕಿಸಬಹುದು. ಅದರಂತೆಯೇ 'ನಗೆಮೊಗದ ಕಂಗಳ ಕಾಂತಿಯಿಂ ಈರೇಳು ಭುವನವುಂ ಬೆಳಗುವ ದಿವ್ಯಸ್ವರೂಪನ ಕಂಡು ಎನ್ನ ಕಂಗಳ ಬರ ಹಿಂಗಿತ್ತು' ಎಂಬ ಮಾತಿನಲ್ಲೂ ಅಕ್ಕನ ಕಣ್ಣಂಚಿನಲ್ಲಿದ್ದ ದೈವೀ ಕಾತರತೆಯ ಸುಳುಹು ದೊರೆಯುತ್ತದೆ. ಒಂದೊಂದು ಇಂದ್ರಿಯದ ಮೂಲಕವೂ ಅಕ್ಕ ಪಡೆದ ಆಧ್ಯಾತ್ಮದನುಭವಸಮೂಹಕ್ಕಿಂತ ಅವಳ ಕಣ್ಣಿನ ಮೂಲಕ ಬಂದ ದಿವ್ಯಾನುಭವಗಳು ಅವಳ ವಚನಗಳಿಗೊಂದು ವಿಲಕ್ಷಣವಾದ ದೃಶ್ಯ ವೈಭವವನ್ನೊದಗಿಸಿ ಕೊಟ್ಟಿವೆ ಎಂದು ಹೇಳಬಹುದು. ಈ ದೃಶ್ಯೀಕರಣ (Visualisation) ಎಂಬುದು ಅಕ್ಕನ ವಚನಗಳ ಹೆಗ್ಗಳಿಕೆಗಳಲ್ಲೊಂದು 'ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆ' ಎಂಬಂಥ ಶಬ್ದಚಿತ್ರದಲ್ಲಿ ನಾವು ಅಕ್ಕನ ಒಳಮನದ ತುಡಿತ-ಮಿಡಿತಗಳನ್ನು ಗುರುತಿಸಬಹುದು.

ಹೊರಗಣ್ಣಿಗೆ ಕಂಡುದನ್ನು ಕಂಡಂತೆ ಬಣ್ಣಿಸುವ ಬಗೆಯೊಂದಾದರೆ, ಸಾಮಾನ್ಯರ ಕಣ್ಣಿಗೆ ಕಾಣದ ಅಮೂರ್ತ ಕಲ್ಪನೆಯನ್ನು ಮೂರ್ತ ಚಿತ್ರವನ್ನಾಗಿ ಮಾರ್ಪಡಿಸಿ ಇತರರ ಕಣ್ಮನಗಳು ತುಂಬುವಂತೆ, ನಂಬುವಂತೆ ಬಣ್ಣಿಸುವ ಶಬ್ದಪಾರಮ್ಯ ಮತ್ತೊಂದು ಬಗೆಯದು. ಅಕ್ಕನದು ಈ ಎರಡನೆಯ ಬಗೆ. ದೃಶ್ಯದ ಮೂಲಕ ಅದೃಶ್ಯ ಲೋಕಕ್ಕಿಳಿದು ಭಾವದ ಮೂಲಕ ನಿರ್ಭಾವವನ್ನರಸುವ, ತನ್ನ ದೈವಿಕ ಮೊರೆಗಳನ್ನೆಲ್ಲ ವಸುಂಧರೆಯೆದುರು ಮಾತ್ರವೇ ಸೂರೆಗೊಳ್ಳುವ ಧೋರಣೆ ಅಕ್ಕನದು, 'ಚಿಲಿಮಿಲಿಯೆಂದೋದುವ ಗಿಳಿಗಳಿರಾ, ನೀವು ಕಾಣಿರೆ, ಎಂದಾರಂಭಿಸಿ ಕೋಗಿಲೆ, ತುಂಬಿ, ಹಂಸೆ, ನವಿಲುಗಳೆಲ್ಲಕ್ಕೂ 'ನೀವು ಕಾಣಿರೆ, ನೀವು ಕಾಣಿರೆ' ಎಂದೂ 'ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮನೆಲ್ಲರನು ಒಂದ ಬೇಡುವೆನು, ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ಕಂಡರೆ ಕರೆದು ತೋರಿರೆ' ಎಂದೂ, ಕಾಣದಂತಿರುವ ಚೆನ್ನಮಲ್ಲಿಕಾರ್ಜುನನನ್ನು ಕಂಡೇ ತೀರುವ ಕಳವಳವುಳ್ಳ ಅಕ್ಕ ತನ್ನ ಸುತ್ತಲಿನ ತರು-ಮರಾದಿಗಳಲ್ಲೂ ಜೀವಕೋಟಿಯ ಕಣ್ಣುಗಳಲ್ಲೂ ತನ್ನಿಷ್ಟದೇವನ ಬಿಂಬವನ್ನರಸುವ ಪರಿ ತುಂಬಾ ಪರಿಣಾಮಕಾರಿಯಾಗಿದೆ. ಬಾಲ್ಯದಲ್ಲಿ ಮನೆಯಂಗಳಲ್ಲಿ ಕಾಣುತ್ತಿದ್ದ 'ಇಳೆ-ನಿಂಬೆ-ಮಾವು-ಮಾದಲಗಳಿಗೆ ಹುಳಿನೀರನೆರೆದವರಾರಯ್ಯ ?' ಎಂಬ ಮುಗ್ಧ ಪ್ರಶ್ನೆಗೆ ಉತ್ತರವರಸುತ್ತಿದ್ದ ಅಕ್ಕನ ಕಣ್ಣುಗಳು ಕೊನೆಗೆ ಒಂದೊಂದು ತರು-ಮರದಲ್ಲೂ ಚೆನ್ನಮಲ್ಲಿಕಾರ್ಜುನದೇವನಸ್ತಿತ್ವವನ್ನು ಗುರುತಿಸಲು ಹಾತೊರೆವ ದೈವೀದೃಷ್ಟಿಯ ಮಾಧ್ಯಮವಾಗಿ ಅವಳಿಗೆ ನೆರವಾಗಿವೆ. ಬಾಲ್ಯದ ಮುಗ್ಧ ಮನೋಭಾವವೇ ಬರುಬರುತ್ತ ಆಧ್ಯಾತ್ಮಿಕ-ಅನುಭಾವವಾಗಿ ಉದಾತ್ತೀಕರಣಹೊಂದಿದಾಗ ಹೊರಹೊಮ್ಮಿದ ಅರ್ಥಪೂರ್ಣ ವಚನಗಳು ಅಕ್ಕನ ಅರಿವಿನ ಕಣ್ಣು ಅರಳಿ ಒಳಹೊರಗಿನ ಬೆಳಕನ್ನೂ ಒಂದಾಗಿಸಿದ ದಿವ್ಯಾನುಭವಕ್ಕೆ ದರ್ಪಣ ಹಿಡಿದಂತಿವೆ. ಅಂತೆಯೇ, ಅಕ್ಕನ ಅಲ್ಪಾವಧಿ ಜೀವನದಲ್ಲಿ ನಡೆದ ಆತ್ಮವಿಕಾಸಕ್ರಮವು ಇಂದಿನ ಮಾನಸಶಾಸ್ತ್ರ ಪರಿಣತರಿಗೂ ಒಂದು ಆಹ್ವಾ

ನವೇ ಆಗಿದೆ. ಅವಳ ಬದುಕಿನುದ್ದಕ್ಕೂ ಕ್ರಿಯಾಶೀಲವಾಗಿದ್ದ 'ಅರಸುವಿಕೆ' ಕೊನೆಗೊಮ್ಮೆ 'ಬೆರೆಸುವಿಕೆ' ಯಾಗಿ ಮಾರ್ಪಟ್ಟು ಶಿವಭಾವಸಮರತಿಯ ಶಿಖರಾವಸ್ಥೆಯಲ್ಲಿಯೂ 'ಕದಳಿಯ ಬನದಲ್ಲಿ ಭವಹರನ ಕಂಡೆನು' ಎಂದೇ ಹಿಗ್ಗಿನಿಂದ ಹೇಳಿಕೊಳ್ಳುತ್ತಾಳೆ. ಅರಸುವಿಕೆಯ ಹಂತದಲ್ಲಿ 'ನಿನ್ನನೆನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೇ ಪ್ರಾಣವಾಗಿಪ್ಪೆನಯ್ಯಾ', 'ಘನವ ಕಂಡೆ ಅನುವ ಕಂಡೆ', ಎನ್ನೊಳಗಿದ್ದ ಮಹಾಘನವ ನಿಮ್ಮಲ್ಲಿ ನೋಡಿ ಕಂಡೆ'–ಇತ್ಯಾದಿ ಅಕ್ಕನ ಮಾತುಗಳು ಅವಳ ಭಕ್ತಿ ಸಾಧನೆಯ ಸಂಕೇತಗಳಾಗಿದ್ದರೆ; 'ಎನ್ನಕಂಗಳು ಶುದ್ಧವಾಯಿತ್ತು ಇಂದು ಸಕಲ ಶಿವಗಣಂಗಳ ಮುಖವ ನೋಡಿ', ಅಯ್ಯಾ ನಿಮ್ಮ ಸದ್ಭಕ್ತರ ಕಂಡೆನಾಗಿ ಎನ್ನ ಕಂಗಳ ಪಟಲ ಹರಿಯಿತ್ತು' ಇತ್ಯಾದಿ ಮಾತುಗಳು ಅವಳು ಶರಣಸಮೂಹದ ಬಗೆಗಿರಿಸಿಕೊಂಡಿದ್ದ ಗೌರವಭಾವವನ್ನು ಸೂಚಿಸುತ್ತವೆ. ಈ ಎಲ್ಲ ವಚನಗಳಲ್ಲೂ ಅಕ್ಕನ ತಿಳಿಗಣ್ಣು ಕೆಲಸ ಮಾಡಿರುವ ರೀತಿ ಕೌತುಕಪೂರ್ಣವಾಗಿದೆ. ಉಡುತಡಿಯಿಂದ ಶ್ರೀಶೈಲದ ಕದಳೀವನ ಸೇರುವವರೆಗೂ ಚೆನ್ನಮಲ್ಲಿಕಾರ್ಜುನನಿಗಾಗಿ ಕಾತರಿಸಿದ ಅಕ್ಕನ ಆಧ್ಯಾತ್ಮಿಕ ಅರಿವಿನ ಕಣ್ಣು ವಚನ ಸಾಹಿತ್ಯಾಭ್ಯಾಸಿಗಳಿಗೂ ಅರಿವಿನ ಕಣ್ಣು ಕೊಟ್ಟಂತಾಗಿದೆಯೆನ್ನಬೇಕು. ಅಕ್ಕನೇ ಹೇಳಿರುವಂತೆ 'ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು!'

●

ಶ್ರೀಶಕ್ತಿ : ಪೌರ್ವಾತ್ಯಸಂಪ್ರದಾಯದ ಸ್ತ್ರೀದೇವತೆ

(ಜಾನಪದವೈಜ್ಞಾನಿಕ ವಿವೇಚನೆ)

ವಿಲ್ಯಂ ಮಾಡ್ತ

ಜನಪದ ಸಂಸ್ಕೃತಿಗಳನ್ನು ಜಾನಪದವೈಜ್ಞಾನಿಕ ದೃಷ್ಟಿಯಿಂದ ಅವಲೋಕಿಸಿದಾಗ ಅವುಗಳಲ್ಲಿ ದೇವರ ಕಲ್ಪನೆ ಪ್ರಧಾನವಾಗಿ ಕಂಡು ಬರುತ್ತದೆ. ಈ ಕಲ್ಪನೆ ಮಾನವರ ಕಲ್ಪನೆಯಾದುದರಿಂದ ಅದರಲ್ಲಿ ಮಾನವ ಅಂಶಗಳು (human elements) ಎದ್ದು ಕಾಣುತ್ತವೆ. ಜೈವಿಕವಾಗಿ ಮಾನವನಲ್ಲಿ ಎರಡು ಜಾತಿ : ಒಂದು ಗಂಡು, ಇನ್ನೊಂದು ಹೆಣ್ಣು. ಮಾನವ ಕಲ್ಪಿಸಿಕೊಂಡ ದೇವನಲ್ಲಿಯೂ ಈ ಗಂಡು-ಹೆಣ್ಣು ಎಂಬ ಭೇದವುಂಟು. ಅನುಭವ(secular experience)ದಲ್ಲಿ ದ್ವೈತವಾಗಿ ಕಂಡ ಈ ಲಿಂಗಭೇದವನ್ನು ತನ್ನ ಅನುಭಾವ(spiritual experience)ದಲ್ಲಿ ಮಾತ್ರ ಹೆಚ್ಚಾಗಿ ಅದ್ವೈತವಾಗಿಯೇ ಆತ/ಆಕೆ ಕಂಡಿದ್ದಾನೆ/ಳೆ. ಆದುದರಿಂದಲೇ ದೇವರು, ಜಗತ್ತಿನ ಸಮಷ್ಟ್ಯನುಭಾವ (folk depth-experience) ದಲ್ಲಿ, ಪೂರ್ವ-ಪಶ್ಚಿಮಭೇದವಿಲ್ಲದೆ ಅರ್ಧನಾರೀಶ್ವರ (androgynous)ನಾಗಿ ತಲೆದೋರಿದ್ದಾನೆ. ಮಾನವ, ಸ್ವಭಾವತಹ ಉಭಯಲಿಂಗಿ(bi-sexual)ಯೆಂಬುದು ಮನೋವೈಜ್ಞಾನಿಕ ಸತ್ಯ. ಆದುದರಿಂದ ಆತನ / ಆಕೆಯ ದೇವರೂ ದ್ವಿಲಿಂಗಿಯಾಗಿರುವುದು ಸ್ವಾಭಾವಿಕ (Madtha 1980 : 176). ಪುರುಷಪ್ರಧಾನ ಸಂಸ್ಕೃತಿಗಳಲ್ಲಿ ಈ ದ್ವಿಲಿಂಗಿ 'ಆಕೆ'ಗಿಂತ 'ಆತ'ನಾಗಿಯೇ ಪ್ರಸಿದ್ಧಿ ಪಡೆದಿರುವುದು ಸರ್ವವಿದಿತವಾಗಿದೆ.

ಭಾರತೀಯ ಸಂಪ್ರದಾಯದಲ್ಲಿ ಮಾತ್ರ ಇಂದಿಗೂ ದೇವರ ಸ್ತ್ರೀಮುಖ (feminine aspect) ಶ್ರೀಶಕ್ತಿನಾಮದಿಂದ ನಾನಾರೂಪಗಳ ಮೂಲಕ ಪ್ರಜ್ವಲಿಸುತ್ತಿದೆ. ಅಂತೆಯೇ ಸಮಗ್ರ ಪೌರ್ವಾತ್ಯ ಸಂಸ್ಕೃತಿಯಲ್ಲಿಯೂ ಸ್ತ್ರೀದೇವತೆ(Goddess)ಗೆ ಪ್ರಧಾನ ಸ್ಥಾನ ದೊರಕಿರುವುದು ಜಾನಪದ ವಿಜ್ಞಾನಿಗಳ ಗಮನಕ್ಕೆ ಬಂದಿದೆ. ಪೌರ್ವಾತ್ಯ ಜಾನಪದದಲ್ಲಿ ದೇವರು ಪ್ರಪ್ರಥಮತಹ ಮಹಾಮಾತೆ *(Magna Mater)*. ಈಕೆ ಹಿಬ್ರೂ ಜನಧರ್ಮದಲ್ಲಿ ಸ್ವರ್ಗದ ರಾಣಿ(Queen of Heaven) ಯಾಗಿ ಪೂಜಿತಳಾಗಿದ್ದಳು. ಅಲ್ಲಿಯ ಗುರುಮಠಗಳ ಪರಂಪರೆ ದೇವರನ್ನು ಯ್ಯಾವ್ಹೆ (Yahveh) ಎಂಬ ಗಂಡು ದೇವತೆ(God)ಯ ರೂಪದಲ್ಲಿ ಪ್ರಚಾರಕ್ಕೆ ತಂದರೂ ಸಾಮಾನ್ಯರ ಭಕ್ತಿ ಮಾತ್ರ ಸ್ತ್ರೀದೇವತೆಯಲ್ಲಿಯೇ ಬೇರೂರಿತ್ತು. ಸಿರಿಯನ್

ಕ್ರೈಸ್ತರ ದೇವಶಾಸ್ತ್ರ(Theology)ದಲ್ಲಿ ತ್ರಯೇಕ ದೇವ(Triune God)ನ ಮೂರನೆಯ 'ಮುಖ'(Person/function)ವಾದ ಪವಿತ್ರಾತ್ಮ (Holy Spirit, cf. Madtha 1976 & 37 & f. n. 49) ಮಾತೃಸ್ವರೂಪಿ (Payne, 130; Griffiths, 273). ಕೆಲವರ ಅಭಿಪ್ರಾಯದಂತೆ ಈ ಪವಿತ್ರಾತ್ಮ, ಶ್ರೀಶಕ್ತಿಯ ಕ್ರೈಸ್ತರೂಪ(Christian form)ವಲ್ಲದೆ ಬೇರೊಂದಲ್ಲ :

> ಕ್ರಿಯೆಯನ್ನು ಗಮನಿಸಿದಾಗ ಪವಿತ್ರಾತ್ಮ ದೇವನ ಸೃಜನಶೀಲ ಶಕ್ತಿಯೇ ಸರಿ...... ಇದು ಶ್ರೀದೇವಿಯಲ್ಲದೆ ಮತ್ತೇನು ?..... ಪವಿತ್ರಾತ್ಮದ ಹಂಬಲ, ಹೆಣಗಾಟ, ಸಮರ್ಥನೆ ಹಾಗೂ ಸಂತೈಸುವಿಕೆಗಳು ದೇವರ ಮಾತೃಹೃದಯದ ಅಭಿವ್ಯಕ್ತಿಗಳಲ್ಲದೆ ಮತ್ತೇನು ? (Payne, 130. Quote)

ಹಾನ್ಸ್‌ಕ್ಯೂಂಗನ (ಪು. ೪೬೯) ಅಭಿಪ್ರಾಯದಂತೆ ಪವಿತ್ರಾತ್ಮವೆಂಬುದು ಸೃಷ್ಟ್ಯಾತ್ಮಕ ಮತ್ತು ಲಯಾತ್ಮಕ ದೈವೀಶಕ್ತಿ.

ಹಳೆಯ ಒಡಂಬಡಿಕೆ(OT)ಯಲ್ಲಿ ಪ್ರಜ್ಞೆ(Wisdom)ಯೆಂಬುದು ಪರಬ್ರಹ್ಮ (The Godhead)ದ ಸ್ತ್ರೀರೂಪ (Ws. 7. 25-26). ಹೀಬ್ರೂ ಭಾಷೆಯಲ್ಲಿ ಪವಿತ್ರಾತ್ಮಕ್ಕೆ ಸಂವಾದಿ ಪದ ರೂಆ್ಹ *(ruah)*. ಅದು ಭಾಷಾವೈಜ್ಞಾನಿಕವಾಗಿ ಸ್ತ್ರೀಲಿಂಗಿ. ಸೊಲೊಮನನ ಪ್ರಗಾಥ(ode)ದಲ್ಲಿ ಪವಿತ್ರಾತ್ಮವನ್ನು 'ನಮ್ಮ ತಾಯಿ' ಎಂದು ಕರೆಯಲಾಗಿದೆ. ಪೌರ್ವಾತ್ಯ ಕ್ರೈಸ್ತರಲ್ಲಿ, ಅದರಲ್ಲಿಯ ಕಥೊಲಿಕ ಸಂಪ್ರದಾಯಸ್ಥ ಜನಪದರಲ್ಲಿ, ಕನ್ಯಾಮರಿಯಮ್ಮ (Virgin Mary)ನ ಗಾಢಭಕ್ತಿ ದೇವರ ಸ್ತ್ರೀಮುಖದ ಸ್ಥಾನಮಾನವನ್ನು ಕಣ್ಣು ಕುಕ್ಕುವಂತೆ ತೋರಿಸುತ್ತದೆ.

ಈಜಿಪ್ತದಲ್ಲಿಯ ಯೆಹೂದಿಗಳು ಕೆನನ್ಯಾಟ್ ಜನಪದರ ಆರಾತ್ ದೇವಿ (Virgin Arath) ಯನ್ನು ಯ್ಹಾವ್ಹೆಗ ಸಂಬಂಧಿತಳನ್ನಾಗಿ ಮಾಡಿ ಪೂಜಿಸುತ್ತಿದ್ದರು (Ashe, 31). ಸೆಮೆಟಿಕ್ ಧರ್ಮಗಳ ಕೆಲವು ತಜ್ಞರ ಪ್ರಕಾರ ಶೆಕೆನ್ಹಾ (Shekenah) ದೇವಿ ಉಗ್ರ ಗಂಡು ದೇವತೆಯಾದ ಯ್ಹಾವ್ಹೆಯ ಪತ್ನಿಯಾಗಿ ಅಲ್ಲಲ್ಲಿ ಆರಾಧಿತಳಾಗುತ್ತಿದ್ದಳು (Greely, 62). ಏಷ್ಯಾ ಮ್ಯಾನರ್, ಸಿರಿಯಾ ಹಾಗೂ ಇತರ ಮೆಡಿಟರೇನಿಯನ್ ಪ್ರದೇಶಗಳಲ್ಲಿಯೂ ಸ್ತ್ರೀದೇವತೆಯ ಆರಾಧನೆ ಪ್ರಚಲಿತವಾಗಿತ್ತು. ಸೆಮೆಟಿಕ್ ಜನಪದರ ಅಷ್ಟಾರ್ಟ್ (Astart), ಈಜಿಪ್ತರ ಈಸಿಸ್ (Isis), ಫ್ರೀಜಿಯವರ ಸ್ಯಾಬಿಲಿ (Cybele) ಮುಂತಾದ ಹೆಣ್ಣು ದೇವತೆಗಳಿಗೂ ಭಾರತದ ಶಾಕ್ತ ಸಂಪ್ರದಾಯದ ಶ್ರೀಶಕ್ತಿಗೂ ಅನ್ಯೋನ್ಯ ಸಂಬಂಧ ಕಂಡು ಬರುತ್ತದೆ (Chandra, 148-9).

ಆಸ್ತಿಕರಲ್ಲಿ, ಅದರಲ್ಲಿಯೂ ಪೌರ್ವಾತ್ಯರಲ್ಲಿ, ಮಾತೃದೇವತೆಯ ಕಲ್ಪನೆ ಬೇರೂರಿರಲು ಕಾರಣವೇನು ? ಮಾನವನ ಕಾತರತೆ, ಭಯ, ಪ್ರೀತಿ ಮೊದಲಾದ ಭಾವಗಳಿಗೆ ಸ್ಪಂದನೆಯಾಗಿ ನಿಲ್ಲತಕ್ಕ ಸಂಕೇತ ಅಮ್ಮನೇ ಹೊರತು ಅಪ್ಪನಲ್ಲ. ಮಾನವನ ಬೆಳವಣಿಗೆಯಲ್ಲಿ ಮಾತೃಪಾತ್ರವೇ ಹುಟ್ಟಿನಿಂದ ಸಾವಿನ ವರೆಗೂ ಪ್ರಧಾನ ವೆಂದರೆ ಪೌರ್ವಾತ್ಯ ಸಂಸ್ಕೃತಿಯ ಮಟ್ಟಿಗಂತೂ ಎಂದೆಂದಿಗೂ ಅತಿಶಯೋಕ್ತಿಯಾಗ ಲಾರದು. ಮಾತೃದೇವತೆಯ ಸ್ಥಾನ ಭದ್ರವಾಗಿರಲು ಇದೇ ಮೂಲ ಕಾರಣ ವೆನ್ನಬಹುದು

ಗಂಡು ಹೆಣ್ಣುಗಳ ಸಂಭೋಗ ಪ್ರಾಕೃತಿಕ ಧರ್ಮ. ಈ ಸಂಭೋಗದ ಫಲ ವಾಗಿ ಹೆಂಡತಿ ಬಸಿರಾಗಿ ಹಡೆದಾಗ ಸ್ತ್ರೀ ಶಕ್ತಿಯ ಅರಿವು ಪುರುಷನ ಅನುಭವಕ್ಕೆ ಬಂದು, ಬಹು ಹಿಂದೆಯೇ ಆತ ದಿಙ್ಮೂಢನಾಗಿರಬೇಕು. ಹೀಗಾಗಿ ತಾನು ಅನು ಭವಿಸಿದ ಸ್ತ್ರೀ, ತನ್ನ ಪ್ರಜ್ಞಾಪಾತಳಿ (Depth level) ಯಲ್ಲಿ ಮಹಾಶಕ್ತಿ (The Supreme Power) ಯಾಗಿ ಆತನಿಗೆ ಹೊಳೆದಿರುವುದು ಸಹಜವೇ ಸರಿ. ಹೀಗೆ ಸ್ತ್ರೀ, ಪ್ರಜ್ಞಾವಂತನಿಗೆ ಮಹಾಶಕ್ತಿಯ ಸಂಕೇತವಾಯಿತು. ಈ ಆದಿಶಕ್ತಿ (Primordial Power) ಕಾಲಾಂತರಗಳಲ್ಲಿ ಭಿನ್ನಭಿನ್ನ ರೂಪ ತಾಳಿದ್ದರೂ ಪ್ರಮುಖವಾಗಿ ಎಲ್ಲಮ್ಮ (The Mother of All) ನಾಗಿಯೇ ಇಂದೂ ಜೀವಂತಳಾಗಿ ಉಳಿದು ಕೊಂಡಿದ್ದಾಳೆ.[೧] ಈ ಮಹಾತಾಯಿ (The Great Mother) ಗೆ ಹಲವೆಡೆ ಹಲವು ಹೆಸರುಗಳು :

> ಶಕ್ತಿಪೂಜೆಯ ಇತಿಹಾಸವನ್ನು ಗಮನಿಸಿದಾಗ ನಮ್ಮ ಸ್ಮೃತಿ ಪಟಲದಲ್ಲಿ ಅತ್ಯಂತ ಪ್ರಾಚೀನವಾದ ಮಹಾಮಾತೆ (Mighty Mother) ಯ ಕಲ್ಪನೆ ಯಲ್ಲಿ ಸಂಧ್ಯಾದೇವಿಯಾದ ಆದ್ಯಶಕ್ತಿ; ಸರ್ವಕಾಲಿನ ಈಸಿಸ್; ಕಾಳಿ; ಹಾತೊರ್; ಸೈಬಿಲಿ; ಈಡಾ (Ida); ತ್ರಿಪುರ ಸುಂದರಿ; ಯವನರ ತಾಯಿ; ಸರ್ವಜನ್ಮದಾತಾರ ಶೂ (Su)ವಿನ ಪತ್ನಿ; ಆಫ್ರೊಡಾಯ್ಟ್; ಆಸ್ಟಾರ್ಟೆ...: ಬ್ಯಾಬಿಲೋನಿಯದ ಮೈಲೀಟಾ : ಬೌದ್ಧರ ತಾರಾ ; ಮೆಕ್ಸಿಕನರ ಇಶ್ (Ish) ; ಗ್ರೀಕರ ಒಷಿಯ; ...ಪಾರ್ವತಿಯಂತೆ ಪರ್ವತಸಾಲುಗಳಲ್ಲಿ ಅಲೆ ದಾಡುವ ಆಫ್ರಿಕೆಯ ಸಾಲಾಂಬೊ; ರೋಮೀಯರ ಯುನೊ (Juno): ಈಜಿಪ್ತರ ಬಾಸ್ತ್ (Bast) ...... ಆಸ್ಸೀರಿಯನರ ಸುಕೊತ್ ಬೆನೊತ್: ... ಫ್ರೇಯ, ...ಸೆಮೆಲೆ, ಮಾಯಾ, ಇಷ್ಟಾರ್... ಕುಂಡಲೀ, ಗುಹ್ಯಾ ಮಹಾಭೈರವಿ ಮತ್ತಿತರರು ಮೂಡಿಬರುತ್ತಾರೆ (Woodroffe 1965 : 137-8).

---

೧. ಆದಿಶಕ್ತಿಯ ವಿವಿಧ ನಾಮಗಳಿಗೆ ನೋಡಿ : ಲಲಿತ ಸಹಸ್ರನಾಮ. ಕನ್ನಡದಲ್ಲಿ ಆಕೆ ಎಲ್ಲಮ್ಮ ನೆಂದೇ ಸುಪ್ರಸಿದ್ಧಳು. ಕರ್ನಾಟಕದ ಬೆಳಗಾಂವಿ ಜಿಲ್ಲೆಯ ಸೌಂದತ್ತಿಯಲ್ಲಿ ಆಕೆಯ ಹೆಸರಿ ನಲ್ಲಿರುವ ಯಾತ್ರಾಸ್ಥಳ ಅತ್ಯಂತ ಸುಪ್ರಸಿದ್ಧ.

ಮೊಹೆಂಜೊದಾರೊ ಉತ್ಖನನದಲ್ಲಿ ಆರ್ಯಪೂರ್ವ ಸಂಸ್ಕೃತಿಗೆ (ಸು. ಕ್ರಿ. ಪೂ. ೩೦೦೦–೨೦೦೦) ಸೇರಿದ ಮೂರ್ತಿಗಳಲ್ಲಿ ದೇವಿಯ ಮೂರ್ತಿಯೂ ಒಂದು. ಇದು ಮಹಾಮಾತೆ ಕಲ್ಪನೆಯ ಪ್ರಾಚೀನತೆಯನ್ನು ತೋರಿಸುತ್ತದೆ. ಇದು ನೇರವಾಗಿ ಶಾಕ್ತರ ಶ್ರೀಶಕ್ತಿ ಹೌದೊ ಅಲ್ಲವೊ ಎಂಬ ಶಂಕೆ ಮೂಡಬಹುದಾದರೂ ಅದು ದೇವರ ಸ್ತ್ರೀಮುಖದ ಕಲ್ಪನೆಯ ಅತ್ಯಂತ ಪ್ರಾಚೀನ ಕುರುಹುವೆಂಬುದನ್ನು ಅಲ್ಲಗಳೆಯುವಂತಿಲ್ಲ. ಭಾರತೀಯ ಜನಪದರು ಅತಿ ಪೂರ್ವ ಕಾಲದಿಂದಲೂ ಒಂದಲ್ಲ, ಒಂದು ರೀತಿಯಿಂದ ದೇವಿಯ ಆರಾಧಕರಿದ್ದರೆಂಬುದಕ್ಕೆ ಇದೊಂದು ಉತ್ತಮ ಆಧಾರ.

ಶಕ್ತಿಯ ಕಲ್ಪನೆ ಅತ್ಯಂತ ಸಂಕೀರ್ಣವಾದ ಕಲ್ಪನೆ. ಆಕೆಯ ವಿವಿದ ಮುಖಗಳ ದರ್ಶನ ದೊರೆಯಬೇಕಾದರೆ ಕಲ್ಕತ್ತೆಯ ದಕ್ಷಿಣೇಶ್ವರ ದೇವಸ್ಥಾನದಲ್ಲಿಯ ಕಾಳಿಯ ಮೂರ್ತಿಯನ್ನು ಗಮನಿಸಬೇಕು (ಶಾಬ್ದಿಕ ಚಿತ್ರಕ್ಕಾಗಿ: ಭಟ್ಟಾಚಾರ್ಯ (ಸಂ.), ೬೬೧). ವಿವಿಧ ಮತಪಂಥಗಳಲ್ಲಿಯ ಬೇರೆ ಬೇರೆ ಕಾಲ ಸಂಸ್ಕೃತಿಗಳಿಗೆ ಸೇರಿದ ಜನರಲ್ಲಿ ಈ ಶಕ್ತಿಯ ಕಲ್ಪನೆ ವೈವಿಧ್ಯಮಯವಾಗಿ ಕಾಣಬರುವ ಸಂಭವ ಇದ್ದರೂ ಸಾಮಾನ್ಯವಾಗಿ ದೇವಕಲ್ಪನೆಯ ಸ್ತ್ರೀಮುಖವೆಂಬ ಆಶಯದ ಹಿನ್ನೆಲೆಯಲ್ಲಿ ಆಕೆಯನ್ನು ಗಮನಿಸಿದಾಗ ಆಕೆ ಒಂದು ಪ್ರಬಲವಾದ ಜನಪದಸಂಕೇತವಾಗಿ ಮೂಡಿ ಬರುತ್ತಾಳೆ. ಜನಪದರು ತಮ್ಮ ಅಸ್ತಿತ್ವದ ಸ್ಥಲ (Source-and-goal)ವನ್ನು ಅನುಭವಿಸಿದಾಗ ಅಲ್ಲಿ ಕಂಡುಂಡ ಸ್ತ್ರೀಗುಣಗಳ ಮೂರ್ತಸ್ವರೂಪವೇ ಶ್ರೀಶಕ್ತಿಯೆಂದರೆ ತಪ್ಪಾಗಲಾರದು.

ಜಾನಪದ ವೈಜ್ಞಾನಿಕವಾಗಿ ಸಂಸ್ಕೃತಿಗಳ ಅಧ್ಯಯನ ನಡೆಯಿಸುವಾಗ ದೇವನು ಉಭಯಲಿಂಗಿಯಾಗಿ ತೋರಿಬಂದಿರುವುದು ತಿಳಿದ ವಿಷಯವೇ (Elliade : 420 –4). ದೇವರನ್ನು ತಂದೆಯೆಂದೂ ತಾಯಿಯೆಂದೂ ಕರೆದುದು ಜಾನಪದದಲ್ಲಿ ಹಲವೆಡೆ ದೊರಕುತ್ತದೆ. ಹಿಂದೂ ದೇವಾಲಯಗಳ ಗೋಡೆಗಳ ಮೇಲೆ ಪುರುಷರೂ ಸ್ತ್ರೀಯರೂ ವಿವಿಧ ಕಾಮೋದ್ರೇಕ ಭಂಗಿಗಳಲ್ಲಿ ಚಿತ್ರಿತರಾಗಿದ್ದಾರಲ್ಲದೆ ಸಂಭೋಗದಲ್ಲಿ ಮೈಮರೆತಿರುವುದನ್ನು ಕಂಡಾಗ ಅದು ಪರಮಾತ್ಮನ ಉಭಯಲಿಂಗಿ ಸಾಮರಸ್ಯತೆಯನ್ನು ಸಂಕೇತಿಸಿದಂತೆ ತೋರುತ್ತದೆ.

ದೇವರು ಗಂಡೋ ಹೆಣ್ಣೋ ನಪುಂಸಕವೋ ಎಂದು ನಾಸ್ತಿಕರು ಮೂದಲಿಸುವುದುಂಟು. ಈ ರೀತಿಯ ವರ್ಗೀಕರಣಕ್ಕೆ ನಾಸ್ತಿಕರೂ ಆಸ್ತಿಕರೂ ಸೇರುತ್ತಾರಾದರೂ ದೇವರು ಸೇರುವುದು ಮಾತ್ರ ಅಸಾಧ್ಯ. ಆತ ಇವುಗಳೆಲ್ಲವನ್ನು ಒಳಗೊಂಡೂ ಅತೀತನಾಗಿರುವ ಸ್ವಯಂಭೂ ಅಸ್ತಿತ್ವವೆಂಬುದು ಸಮಷ್ಟಿ ಪ್ರಜ್ಞೆ. ವಸ್ತುಸ್ಥಿತಿ ಹೀಗಿದ್ದರೂ ಆತನನ್ನು ಸ್ತ್ರೀಸಂಕೇತದ ಮೂಲಕ ತಿಳಿದುಕೊಳ್ಳುವುದೂ ಒಲಿಸಿಕೊಳ್ಳುವುದೂ ಸ್ತ್ರೀಪ್ರೇಮವನ್ನನುಭವಿಸಿದ ಮಾನವನಿಗೆ ಹೆಚ್ಚು ಸಹಜವೆನಿಸಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ! ಬ್ರಹ್ಮಚಾರಿಗಳು ಮೂಗುಮುರಿಯಬೇಕಾಗಿಲ್ಲ !!

ಹುಟ್ಟಿನಿಂದ ಸಾವಿನ ತನಕ ಸ್ತ್ರೀಯ ಪ್ರೇಮವನ್ನು ವಿವಿಧ ಹಂತಗಳಲ್ಲಿ ವಿವಿಧ ರೂಪಗಳಲ್ಲಿ ಅನುಭವಿಸಿದ ಜನಪದರ ಸಮುಷ್ಟ್ಯನುಭಾವದಲ್ಲಿ ಸ್ತ್ರೀ, ದೈವೀಸಂಕೇತವಾಗಿ ತಲೆದೋರುವುದು ಅಸಹಜವೇನಲ್ಲ. ಭೂತಾಯಿಯ ಒಡಲಿನಲ್ಲಿ ಹುಟ್ಟಿದ ಗಿಡಮರ-ಬಳ್ಳಿಗಳು ಭೂತಾಯಿಯ ಮಡಿಲಲ್ಲಿಯೇ ಅವಸಾನಗೊಂಡುದುದನ್ನು ನೋಡಿದ, ತಾಯಿಯ ಬಸಿರಿನಿಂದ ಹುಟ್ಟಿದ ಮಗು ಬೆಳೆದು ಬೇಟೆಯಲ್ಲಿಯೋ ಯುದ್ಧದಲ್ಲಿಯೋ ಘಾಯಗೊಂಡು ತನ್ನ ತಾಯಿಯ/ಮಡದಿಯ ತೊಡೆಯ ಮೇಲೆಯೋ ತಲೆಯನ್ನಿಟ್ಟು ಅಸುನೀಗಿದುದನ್ನು ನೋಡಿದ ಮಾನವನಿಗೆ ಜನ್ಮತೆತ್ತ ಸ್ತ್ರೀಗರ್ಭವೇ ಘೋರಿಯೂ ಹೌದೆಂಬ ಸತ್ಯದ ಅರಿವು ಉಂಟಾಗಿ ಕಾಣುವ ಆಕೆಯನ್ನು ತನ್ನ ಪ್ರಜ್ಞಾಪಾತಳಿಯಲ್ಲಿ ಅಮೂರ್ತ ಶಕ್ತಿಯ ಮೂರ್ತ ಸಂಕೇತವನ್ನಾಗಿ ತಿಳಿದುದು ಮಾನವ ವ್ಯುತ್ಕ್ರಾಂತಿಯ ದ್ಯೋತಕ.

ಸ್ತ್ರೀಶಕ್ತಿ ಜನಪದ ಸಂಪ್ರದಾಯದಲ್ಲಿ ತಾಯಿಯಾಗಿಯೂ ಕನ್ಯೆಯಾಗಿಯೂ ಪತಿಯಾಗಿಯೂ ತೋರಿಬಂದಿದ್ದಾಳೆಯಲ್ಲದೆ ಮೃತ್ಯುದೇವತೆಯಾಗಿಯೂ ಮೂಡಿದ್ದಾಳೆ. ಹೀಗೆ ಆಕೆ ತಾರಿಣಿ (Saviour)ಯೂ ಹೌದು, ಸಂಹಾರಿಣಿ (Destroyer)ಯೂ ಹೌದು.

ಶಕ್ತಿ, ಮಹಾಮಾತೆಯಾಗಿ :

ಮಾನವಾನುಭವದಲ್ಲಿ ಸ್ತ್ರೀಯನ್ನು ತಾಯಿಯನ್ನಾಗಿ ಅನುಭವಿಸಿದುದು ಅತ್ಯಂತ ಮೂಲಾನುಭವ (Core exprience). ಕೂಸು ಹುಟ್ಟುವ ಪೂರ್ವದ (Prenatal) ಬೆಳವಣಿಗೆಯ ಎಲ್ಲ ಹಂತಗಳು ನಡೆಯುವುದು ತಾಯಿಯ ಗರ್ಭದಲ್ಲಿಯೇ. ಹುಟ್ಟಿದ ಬಳಿಕವೂ (postnatal) ಅದರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅದು ಹೆಚ್ಚಾಗಿ ತಾಯಿಯನ್ನೇ ಅವಲಂಬಿಸಿರುತ್ತದೆ. ಇಂತಹ ತಾಯಿ ಮಾನವಕೋಟಿಯ ಅಮೂರ್ತ ಸ್ಥಲಕ್ಕೆ ಸಂಕೇತವಾಗಿ ಜನಪದ ಪ್ರಜ್ಞೆಯಲ್ಲಿ ಮೂರ್ತಿವೆತ್ತಿದ್ದಾಳೆ :

> ಈಜಿಪ್ತಿನ ಈಸಿಸ್. ಗ್ರೀಸಿನ ದೆಮೆತೆರ್, ರೋಮಿನ ಯುನೊ. ಫಿನೀಷಿಯದ ಇಷ್ತಾರ್. ಪ್ರಾಚೀನ ಅಯೋನಿಯದ ಅರ್ತೆಮಿಸ್, ಸಿರಿಯದ ಅರ್ತಗಾತಿಸ್, ಇಂಡೋನೆಷ್ಯಾದ ರತಿ. ಭಾರತದ ಕಾಳಿ. .... ಮೆಕ್ಸಿಕೊವಿನ ಅಸ್ಟೆಕ್ ..... ಇವರಿಗೆ ಸರಿಸಮಾನವಾದ ಸ್ತ್ರೀದೇವತೆಗಳು ಜಗತ್ತಿನ ಮೂಲೆ ಮೂಲೆಗಳಲ್ಲಿವೆ (Greely, 11).

ಭಾರತೀಯ ಧಾರ್ಮಿಕ ಸಂಪ್ರದಾಯದಲ್ಲಿ ಗಂಡು ದೇವತೆಗಳಿಗೆ ಯೋಗ್ಯ ಸ್ಥಾನವಿದ್ದರೂ ಕೋಟಿಗಟ್ಟಲೆ ಭಾರತೀಯ ಜನಪದದ ದೇವತೆ (Dea), ಶಕ್ತಿಯಾಗಿರುವುದರಿಂದ ಆಕೆ ಅವರಿಗೆ ಮಹಾಮಾತೆ (ನೋಡಿ : ತ್ರಿಪುರ ಉಪನಿಷತ್ತು ೧೩:

ಸೌಭಾಗ್ಯಲಕ್ಷ್ಮಿ ಉಪನಿಷತ್ತು ವ. ೪, ಮಹಾನಿರ್ವಾಣ ತಂತ್ರ ೪.೧೦). ಕವಿಗಳೂ ಅನುಭಾವಿಗಳೂ ಆಕೆಯನ್ನು ಶ್ರೀಮಾತೆ(Madonna) ಯೆಂದೇ ಕೊಂಡಾಡಿದ್ದಾರೆ:[೨]

ಶ್ರೀಮಾತೆಯೇ, ನನ್ನ ಮನ ನಿನ್ನ ಧ್ಯಾನದಲ್ಲಿಯೇ
ಇರಲಿ; ನನ್ನ ಮಾತುಗಳೆಲ್ಲವೂ ನಿನ್ನ
ಹೊಗಳಿಕೆಗಿರಲಿ; ನನ್ನ ಕ್ರಿಯೆಗಳೆಲ್ಲವೂ
ನಿನ್ನ ಪಾದಕ್ಕೆರಗಲಿ—

ಎಂದು ಶ್ರೀಶಂಕರಾಚಾರ್ಯರು ಹಾಡಿದ್ದಾರೆ (ಭಟ್ಟಾಚಾರ್ಯ, ೨೪೭).

ದುರ್ಗಮ್ಮಾ, ಯಾವ ಪಾಪಗಳಿಂದಾಗಿ ನಿನ್ನ ಮಕ್ಕಳು ಇಷ್ಟೊಂದು ನಿರುತ್ಸಾಹಿಗಳಾದರು ? ಅನ್ಯಾಯದ ತುಳಿತಕ್ಕೆ ಅವರು ಬಲಿಬೀಳಲು ಕಾರಣವೇನು ?... ಎದ್ದೇಳಮ್ಮಾ......ನಿನ್ನ ಅಶಕ್ತ ಮಕ್ಕಳು ಊಟವಿಲ್ಲದೆ ಬಳಲಿದ್ದಾರೆ; ಕಷ್ಟ ಕಾರ್ಪಣ್ಯದಲ್ಲಿ ಸಿಲುಕಿ ಸೋತಿದ್ದಾರೆ; ಅಧಿಕಾರಿಗಳಿಗೆ ಹೆದರಿ ಕಂಗಾಲಾಗಿದ್ದಾರೆ ಒಂದೆಡೆ ಬರಗಾಲ, ಇನ್ನೊಂದೆಡೆ ಪ್ಲೇಗು ! ಎಲ್ಲೆಲ್ಲಿಯೂ ಅನ್ಯಾಯದ ವಿಜಯೋತ್ಸಾಹ!! ಓ ದುರ್ಗಾದೇವತೆಯೇ ಎದ್ದೇಳು! ನಿನ್ನ ಬಿಲ್ಲತುದಿಯಿಂದ ಬರುವ ಮಿಂಚಿನ ಸಳಕನ್ನು ನೋಡುತ್ತಾ ಇದ್ದೇನೆ. ನಿನ್ನ ಕೋಪದೃಷ್ಟಿಯನ್ನು ಕಂಡು ಜಗತ್ತು ನಡುಗುತ್ತಿದೆ. ಸೃಷ್ಟಿ ನಿನ್ನ ಹೆಜ್ಜೆಯಡಿಯಲ್ಲಿ ತತ್ತರಿಸುತ್ತಿದೆ. ನೆತ್ತರ ಹೊಳೆ ಹರಿದು ರಾಕ್ಷಸರ ಹೃದಯವೆಲ್ಲ ನಾಶಗೊಳ್ಳಲಿ (Chirol, 18–9)

ಎಂಬ ನಿಸ್ಸಹಾಯಕತೆಯ ಸಂದರ್ಭದಲ್ಲಿ ಮಾಡಿದ ಈ ಪ್ರಾರ್ಥನೆಯಲ್ಲಿ ಶ್ರೀಶಕ್ತಿಯನ್ನು ತಾಯಿಯನ್ನಾಗಿ ಕಂಡು ಅಂಗಲಾಚಿದುದನ್ನು ನಾವು ಕಾಣುತ್ತೇವೆ.[೩]

ಶಿಲ್ಪಿಗಳು ಶಕ್ತಿಗೆ ಮಿದು ಬಟ್ಟಮೊಲೆಗಳನ್ನೂ ವಾತ್ಸಲ್ಯಮಯ ಕಣ್ಣುಗಳನ್ನೂ ಇತ್ತು ಆಕೆಯ ತಾಯಿತನವನ್ನು ಪ್ರದರ್ಶಿಸಿದರೆ (ನೋಡಿ photoes in Woodroffe), ದೇವಶಾಸ್ತ್ರಜ್ಞರು (Thelogans) ಆಕೆಯನ್ನು ಸೃಷ್ಟಿಯ ಮೂಲಕಾರಣ (ಮಹಾನಿರ್ವಾಣ ತಂತ್ರ ೪.೧೧, ೩೪) ವೆಂದೂ ಬ್ರಹ್ಮನ ಶಕ್ತಿ (ಅದೇ. ೪.೩೦–೪) ಯೆಂದೂ ಸೃಷ್ಟಿ ಆಕೆಯ ಸ್ವಾಭಿವ್ಯಕ್ತಿ (ಅದೇ. ೫. ೧೯೫; ದೇವಿಉಪನಿಷತ್ತು ೨; ದೇವಿಭಾಗವತ (I, ೫. ೯೪–೫; ೭. ೨೭; IV, ೧೫.೩೫) ಯೆಂದೂ ವರ್ಣಿಸಿ ಆಕೆಯ ಮಾತೃತ್ವವನ್ನು ಸ್ಪಷ್ಟೀಕರಿಸಿದ್ದಾರೆ.

---

೨. ಕೇಶುಬ್ ಚಂದರ್ ಸೆನ್ (೧೮೩೮–೮೪), ಸ್ವಾಮಿ ವಿವೇಕಾನಂದ (೧೮೬೩–೧೯೦೨), ಅಕ್ಕ ನಿವೇದಿತಾ ಹಾಗೂ ರೋಮನ್ ಕೆಥೊಲಿಕ ಸಂಪ್ರದಾಯದ ಕ್ರಿಸ್ತಾನುಭಾವಿ ಬ್ರಹ್ಮಬಾಂಧವ್ ಉಪಾಧ್ಯಾಯ (೧೮೬೧–೧೯೦೭) ಮೊದಲಾದವರು ಶ್ರೀಮಾತೆಯನ್ನು ಕೊಂಡಾಡಿದ ಪ್ರಮುಖರಲ್ಲಿ ಕೆಲವರು.

೩. ಕ್ರೈಸ್ತರ Salve Regina ಮತ್ತು Memorare ಜಪಗಳನ್ನು ತೌಲನಿಕವಾಗಿ ಇಲ್ಲಿ ಗಮನಿಸಬಹುದು.

ಭಾರತೀಯ ಅವಲೋಕನ (world-view) ದಲ್ಲಿ ಆಕೆ ಮಾನವ ಮಾತೆ ಯಷ್ಟೇಯಲ್ಲ, ದೇವಮಾತೆ (*Theothekos*) ಯೂ ಹೌದು. ಆಕೆಗೆ ಏಕಾಂಗಿ ಯಾಗಿರಲು ಮನಸ್ಸು ಒಪ್ಪದಿರಲು ಮೊದಲು ಬ್ರಹ್ಮವಿಷ್ಣುಶಿವನೆಂದು ಅಭಿವ್ಯಕ್ತಿ ಗೊಂಡು ಆತನಿಗೆ ಅಧೀನಳಾಗಿ ಆ ಮೇಲೆ ಸರ್ವಸ್ವವನ್ನುಂಟುಮಾಡಿದಳು.[೪] ಈ ರೀತಿಯಲ್ಲಿ ದೇವಮಾತೆ (*Mater Dei*)[೫] ದೇವನಿಗೆ ಅಧೀನಳಾಗುವುದು ಏಷ್ಯಾ ಮ್ಯಾನರ್ ಹಾಗೂ ಮೆಡಿಟರೇನಿಯನ್ ಸಂಸ್ಕೃತಿಗಳಲ್ಲಿ ಒಂದು ಸಾರ್ವತ್ರಿಕಾಂಶ (universal element) ವೆನ್ನಬಹುದು :

ಪ್ಯೂನಿಕ್–ಆಫ್ರಿಕೆಯಲ್ಲಿ ತಾನಿತ್ ಆಕೆಯ ಮಗನೊಂದಿಗೆ; ಈಜಿಪ್ಟಿನಲ್ಲಿ ಈಸಿಸ್ ಹೊರುಸನೊಂದಿಗೆ; ಫಿನಿಷಿಯಾದಲ್ಲಿ ಅಷ್ಟಾರೊತ್ ತಾಮ್ಮುಸ (ಅದೊನಿಸ್) ನೊಂದಿಗೆ; ಏಷ್ಯಾಮೈನರಿನಲ್ಲಿ ಸ್ಯಾಬಿಲಿ ಆತ್ತಿಸನೊಂದಿಗೆ (ಇರುತ್ತಾಳೆ)...... ಪ್ರತಿ ಯೊಂದು ಕಡೆಯಲ್ಲಿಯೂ (ದೇವಿ) ಕನ್ಯಾಕುಮಾರಿಯಾಗಿದ್ದರೂ ತನ್ನ ಸಂಗಾತಿಗೆ ಆಕೆ ಅಮಲೋದ್ಭವ ತಾಯಿ(Mother of Immaculate Conception)ಯಾಗಿ ಆ ಬಳಿಕ ಆತನ ಅಪ್ಪುಗೆಯ ಮೂಲಕ ಇತರ ದೇವತೆಗಳಿಗೂ, ಸರ್ವಜೀವಿಗಳಿಗೂ ಆಕೆ ತಾಯಿಯಾಗುತ್ತಾಳೆ (Hogarth quoted in N, N. Bhattacharya, p, 6).

ಶತಮಾನಗಳಿಂದಲೂ ಕೋಟ್ಯಾನುಕೋಟಿ ಭಕ್ತರು ತಮ್ಮ ಅವಿದ್ಯೆಯನ್ನು ತಿಳಿದುಕೊಂಡು ಅಹಂಕಾರಕ್ಕೆ ಬೆನ್ನುಮಾಡಿ ಈ ಜಗದಾಂಬೆ(World-Mother)ಯ ಸೆರಗಿನ ಆಶ್ರಯ ಪಡೆದಿದ್ದಾರೆ :

ನಿನ್ನಲ್ಲಿ ಮೊರೆಯಿಟ್ಟವರ ದುಃಖವನು ಹೋಗಲಾಡಿಸುವ
ದೇವಿಯೇ ಕೃಪೆದೋರು !
ಜಗದಾಂಬೆಯೇ, ಕೃಪೆದೊರು !
ವಿಶ್ವದರಸಿಯೇ, ಕೃಪೆದೋರು ! ವಿಶ್ವವ ರಕ್ಷಿಸು ?
ದೇವಿಯೇ, ಸಚರಾಚರ ವಿಶ್ವದರಸಿ ನೀನು !
ಓದೇವಿ, ಕೃಪೆದೋರು !
ಅಸುರರನು ಕೊಂದು ಎಮ್ಮಯ ರಕ್ಷಿಸಿದಂತೆ
ವೈರಿಗಳಿಂದ ಸದಾ ರಕ್ಷಿಸೆಮ್ಮಯ !

೪. ನೋಡಿ : J. Woodroffe, *Hymn to Goddess*, Madras, P. 29; A. Barth, *Religion of India*, London 1882, P. 199-200; M. Monier Williams *Religious thought and Life in India* London, 1891 pp 180 ff.
H. H. Wilson. *Sketch of the Religious sects* of the Hindus, London. 1861, pp 240-4

೫. Hans Kung, 460.

ಜಗತ್ತಿನ ಪಾಪಗಳೆಲ್ಲವನೂ ನಿಲ್ಲಿಸಿ ಬಿಡು.
ದುಶ್ಶಕುನಗಳಿಂದ ಹೊರಬರುವ ಕೇಡುಗಳಿಂದ
ನಿನಗೆರಗುವ ಎಮಗೆ ಕೃಪೆದೋರು !
ಲೋಕದುಃಖವಿನಾಶಿನಿ ದೇವಿಯೇ
ಲೋಕತ್ರಯ ಪೂಜಿತ ದೇವಿಯೇ
ಲೋಕತ್ರಯಕೆ ಕೃಪಾವರ್ಷವ ಸುರಿಸು !

(F. E. Pargiter, *The Mārkāṇḍeya Purāṇa*, Calcutta, 1904).

ಹೀಗೆ, ಈ ಏಕೈಕ, ಅನಂತ, ಸ್ವಯಂಭೂ, ವಿಶ್ವಾತೀತ ಹಾಗೂ ವಿಶ್ವಂತ-ರ್ಯಾಮಿ ಶ್ರೀದೇವಿ.[೬] ಕಾರುಣ್ಯದ ಮೂರ್ತಿ (ದೇವಿ ಉಪನಿಷತ್ತು V. 25-28). ಆಕೆ ಸರ್ವಜನಕಳು, ಅದರಲ್ಲಿಯೂ ಅಧೋಗತಿಯಲ್ಲಿದ್ದರೂ ತನ್ನನ್ನು ಪೂಜಿಸುವವರಿಗೆ ಸದಾ ಕೃಪಾಪೂರಿತೆ, ದಯಾಮಯಿ, ಪೋಷಿತೆ ಹಾಗೂ ಸಂರಕ್ಷಿಣಿ (J. Woodroff, *Hymn to Goddess*, 9-30; ಸಪ್ತಶತಿ 4.17-32; 36-37). ಕಷ್ಟಕಾಲದಲ್ಲಿ ಶ್ರೀದೇವಿ ಅವತರಿಸಿ ಭಕ್ತರನ್ನು ದುಃಖದಿಂದ ಪಾರುಮಾಡುತ್ತಾಳೆ (ಸಪ್ತಶತಿ 1.66; 4.41-42). ಸರ್ವಾಂತರ್ಯಾಮಿಯಾದ ಜಗದಾಂಬೆ ಕರುಣಾಳು ಆಗಿರುವಂತೆ ಉಗ್ರರೂಪಿಯೂ ಹೌದು (ಅದೇ 1.71. 5.14, 1-78-82, 5-14-೬0, 1.81 5.10,13). ಹೀಗೆ ಈ ರುದ್ರರಮಣಿ ವಿರೋಧತ್ವದ ವಿಚಿತ್ರ ಸಂಘಟನೆ *(Coincidentia oppositorum)* ಎಲ್ಲ ವಿರೋಧಗಳೂ ಆಕೆಯಲ್ಲಿ ಸಮಪಾತಗೊಳ್ಳುತ್ತವೆ, ಆಕೆ ಸರ್ವಾತೀತ (Danielou, 273).

ಶ್ರೀಮಾತೆ (Divine Mother) ತನ್ನ ಭಕ್ತರಿಂದ ಸರ್ವಾರ್ಪಿತ ಭಕ್ತಿಯನ್ನು ಬಯಸುತ್ತಾಳೆ (ದೇವಿ ಭಾಗವತ II 18.58). ಶರಣರು ಸದಾ ಆಕೆಯ ಪ್ರೀತಿ ಪಾತ್ರರು (ಅದೇ. VI 22.56-57, 14.14-15). ಈ ಮಾತೃಭಕ್ತಿಯಿಂದಾಗಿ ಇಹದಲ್ಲಿ ಭುಕ್ತಿ, ಪರದಲ್ಲಿ ಮುಕ್ತಿ ಲಭಿಸುತ್ತದೆ (ದೇವಿ ಮಹಾತ್ಮೆ 13.5). 'ಸೋಹಂ ದೇವಿ' ಪ್ರಜ್ಞೆ ಭಕ್ತನಲ್ಲಿದ್ದಾಗ ಮಾತ್ರ ಈ ಸ್ಥಿತಿ ಸಾಧ್ಯಗೊಳ್ಳುತ್ತ (ಕಾಳಿಕಾ ಪುರಾಣ 53.10, 59.104-105, 165, ದೇವಿ ಭಾಗವತ ಪುರಾಣ VII 27.)

ಶ್ರೀಶಕ್ತಿ, ಕರುಣಾಳು ದೇವನ ಮೂರ್ತಸ್ವರೂಪವೇ ಆಗಿರುವುದರಿಂದ, ಆಕೆಯ ಭಕ್ತರು ಸಂಕಷ್ಟದಲ್ಲಿದ್ದಾಗ ಅವರಿಗೆ ಆಕೆ ದಾರಿದೀಪವಾಗುತ್ತಾಳೆ. ದೇವನ ಮಾತೃ ಸ್ವಭಾವವನ್ನು ತಾನು ಸಂಕೇತಿಸುವಂತೆ ಸ್ತ್ರೀಯರೊಂದಿಗೆ ಸರ್ವ ಪುರುಷರೂ ಮಾತೃಪ್ರೇಮದ ಗುಣಗಳನ್ನೂ ಅಭಿವ್ಯಕ್ತಗೊಳಿಸಿ ಪೂರ್ಣ (*Plenum* / The

---

೬. ಬಂಕಿಂ ಚಟರ್ಜಿ(೧೮೩೮–೧೮೯೪)ಯವರ ಕಾದಂಬರಿಯಾದ ಆನಂದ ಮಠದಲ್ಲಿಯ ಗೀತೆಯಾಗಿರುವ "ವಂದೇ ಮಾತರಂ", ಶ್ರೀದೇವಿಯ ಸ್ತುತಿಗೀತೆಗೆ ಇನ್ನೊಂದು ಉದಾಹರಣೆ : ಇಲ್ಲಿ ಕವಿಯ ಆಶಯ ಬಂಗಾಲವೊ, ಕಾಳಿಯೊ ಎಂಬುದು ಅಸ್ಪಷ್ಟವಾಗಿದೆ, "ವಂದೇ ಮಾತರಂ" ಗೀತೆಯ ಇಂಗ್ಲಿಷ್ ಅನುವಾದಕ್ಕೆ ನೋಡಿ E. A. Payne. 102.

Whole)ದ ಸಂಕೇತ(Sacrement)ವಾಗಿ ಬಾಳಲು ಈ ದಿವ್ಯಮಾತೆ (God the Mother) ಪ್ರತಿಯೊಬ್ಬನನ್ನು ಆಮಂತ್ರಿಸುತ್ತಾಳೆ.

ಶಕ್ತಿ, ಕನ್ಯಾಕುಮಾರಿಯಾಗಿ

ಪೂರ್ವೇತಿಹಾಸಕಾಲದಿಂದಲೂ ಇತರ ಸಹೋದರಿ ದೇವತೆಗಳಂತೆ ಶ್ರೀಶಕ್ತಿಯೂ ಕನ್ಯಾಕುಮಾರಿ(The Virgin)ಯಾಗಿಯೇ ಚಿತ್ರಿತಳಾಗಿದ್ದಾಳೆ. (Cf. Bhattacharya). ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯ ಬೆಳವಣಿಗೆಯ ವಿವಿಧ ಅವಸ್ಥೆಗಳಲ್ಲೊಂದಾದ ಕನ್ಯಾವಸ್ಥೆ(Virginity)ಗೆ ಅಗ್ರಸ್ಥಾನವಿದೆ. ಕನ್ಯಾ ಸಂಬಂಧ, ಅರ್ಥಾತ್ ಅಜನನೇಂದ್ರಿಯ ಲೈಂಗಿಕತೆ (non-genital sexuality) ಯಿಂದಾಗಿ ಪುರುಷರ ವ್ಯಕ್ತಿತ್ವವನ್ನು ಬೆಳೆಯಿಸುವ ಶಕ್ತಿ ಸ್ತ್ರೀಯರಲ್ಲಿದೆ :

> ಪುರುಷರಿರುವ ಕೋಣೆಗೆ ಕೋಮಲಾಂಗಿಯೋರ್ವಳು ಪ್ರವೇಶಿಸಿದರೆ - ತಕ್ಷಣ ಅವರ ಭಾಷೆ ಬದಲಾಗುತ್ತದೆ; ಅವರ ಸಂಭಾಷಣೆ ಹೆಚ್ಚೆಚ್ಚು ಪರಿಣಾಮಕಾರಿಯಾಗುತ್ತದೆ; ಆಕೆಯ ಮೇಲೆ ತನ್ನ ಪ್ರಭಾವ ಬೀಳುವಂತೆ ಪ್ರತಿಯೋರ್ವನೂ ಸ್ಪರ್ಧಾತ್ಮಕವಾಗಿ ವರ್ತಿಸಲಾರಂಭಿಸುವುದು ನಮ್ಮ ಗಮನಕ್ಕೆ ಬಾರದಿರದು .....
>
> ......ಹೆಣ್ಣುಮಕ್ಕಳು ಪಂದ್ಯಾಟವನ್ನು ನೋಡುತ್ತಿರುವಾಗ ಯಾವ ಗಂಡು ಮಕ್ಕಳೂ ಸೋಲಲು ಒಪ್ಪಲಾರರು ಅಲ್ಲಿರುವ ಸ್ತ್ರೀ, ಅದರಲ್ಲಿಯೂ ಇನಿಯಳು, ಆತನ ಜಯಸಂಪಾದನೆಯಲ್ಲಿ ಪ್ರಚೋದನೆಯಾಗುತ್ತಾಳೆ...... (ಆದರೆ) ಅನ್ಯಲಿಂಗಿಯ ಮೇಲೆ ಪ್ರಭಾವ ಬೀರುವುದಕ್ಕೂ ಆತನ/ಆಕೆಯ ಜೊತೆ ಸಂಭೋಗಿಸುವುದಕ್ಕೂ ಯಾವ ಸಂಬಂಧವೂ ಇಲ್ಲ (Greely : 135-6).

ಭಾರತೀಯ ಸಮಷ್ಟ್ಯನುಭಾವದಲ್ಲಿ ಆಧ್ಯಾತ್ಮಿಕ ಬೆಳವಣಿಗೆಗೂ ಶ್ರೀಶಕ್ತಿಯೇ ಮೂಲಚೈತನ್ಯ: ಆದುದರಿಂದ ಸಾಧಕರ ತಾರಿಣಿ (Saviouress) ಆಕೆ. ನಮ್ಮನ್ನು ಮೂಲ ಅವಿದ್ಯೆ(original sin)ಯಿಂದ ರಕ್ಷಿಸುವ ಸಾಮರ್ಥ್ಯ ಆಕೆಗಿರುವುದರಿಂದ ಆಕೆ ಪ್ರಜ್ಞಾರಾಣಿ (Queen of Wisdom). ಈ ಕಾರಣದಿಂದಾಗಿ ಆಕೆಯನ್ನು ಶಾರದೆ, ಸರಸ್ವತಿ ಇತ್ಯಾದಿಯಾಗಿ ಕರೆದು ಭಕ್ತರು ಸ್ತುತಿ ಮಾಡುತ್ತಾರೆ. (ನೋಡಿ: ಲಲಿತ ಸಹಸ್ರನಾಮ 196 & 704; J. Woodroffe, *Hymn to Goddess*, p, 28). ನಮ್ಮ ಅಂತರಂಗ ಬಹಿರಂಗಗಳೆರಡರಲ್ಲಿಯೂ ಸೂಕ್ತ ಸಲಹೆಯನ್ನು ನೀಡಿ ಮುಕ್ತಿಯ ಕಡೆ ನಮ್ಮನ್ನು ಸೆಳೆಯುವುದರಿಂದ ಈ ಕುಮಾರಿಯನ್ನು ಶಬ್ದಬ್ರಹ್ಮ (The Word)ವೆಂದೂ ಕರೆಯುತ್ತಾರೆ (ಸಪ್ತಶತಿ 4. 10.).

ಶಕ್ತಿ, ಜೀವವನ್ನು ಕೊಡುವ ತಾಯಿ ಮಾತ್ರವಲ್ಲ, ನಿರಂತರವಾಗಿ ಅದನ್ನು ಪ್ರಚೋದಿಸುವ ಕನ್ಯೆಯೂ ಹೌದು. ಕಾರಣ, ಆಕೆ ಕನ್ಯಾಮಾತೆ (The Virgin

Mother). ಭಾರತೀಯರು ತಾವು ನಿರುತ್ಸಾಹಗೊಂಡಾಗ, ಧೈರ್ಯಗೆಟ್ಟವರಾದಾಗ, ಪ್ರತಿಕೂಲ ಪರಿಸ್ಥಿತಿಯಲ್ಲಿದ್ದಾಗ ಆಕೆಯ ದರ್ಶನವನ್ನು ಪಡೆದುಕೊಂಡು ಬದಲಿತಗೊಂಡು ನವಮಾನವರಾಗಿ ರೂಪಾಂತರಗೊಂಡಿದ್ದಾರೆ. ಹೀಗೆ ಭಾರತೀಯರ ಸಾಮಾಜಿಕೊ-ಆಧ್ಯಾತ್ಮಿಕ ಜೀವನದಲ್ಲಿ ಈ ಕನ್ಯಾಮಾತೆ ಹಾಸುಹೊಕ್ಕಾಗಿದ್ದಾಳೆ.

ಶ್ರೀ ಶಕ್ತಿ. ಕನ್ಯಾಕುಮಾರಿಯಾಗಿ ಸಾವಿರಾರು ಕುಮಾರಿಯರನ್ನು ದೇವದಾಸಿ (Temple-virgins)ಗಳಾಗಿ ಆಕರ್ಷಿಸಿದ್ದಾಳೆಯಲ್ಲದೆ ಅವರ ಜೀವನದಲ್ಲಿ ತೃಪ್ತಿಯ ಬೀಜವನ್ನು ಬಿತ್ತು ಶಾಂತಿಯೆಂಬ ಫಲವನ್ನಿತ್ತಿದ್ದಾಳೆ. ಆಕೆಯ ಪ್ರೀತಿ ಪಾತ್ರರಾದವರಿಗೆ, ಅದರಲ್ಲಿಯೂ ತರುಣ ತರುಣಿಯರಿಗೆ ಇಹ ಜೀವನದ ಸವಿಯನ್ನು ಆಕೆ ಉಣಿಸಿದ್ದಾಳೆ. ಲೌಕಿಕ ಜೀವನವೆಂಬುದು ಕೇವಲ ದುಃಖಸಾಗರವಲ್ಲ; ಭಕ್ತಿ ಜೀವನವೇ ತೃಪ್ತಿ ಜೀವನವೆಂಬ ತತ್ವದ ಅರಿವನ್ನು ನಿಜಭಕ್ತರಿಗೆ ದಯಪಾಲಿಸಿ ತನ್ನ ಕೌಮಾರಿಯತ್ವವನ್ನು ಮರೆದು ಇತರರ ತಾರುಣ್ಯವನ್ನು ಬೆಳಗಿದ್ದಾರೆ.

ಶಕ್ತಿ, ಸತಿಯಾಗಿ :

ಸಮುಷ್ಟ್ಯಾನುಭಾವದಲ್ಲಿ ಶಕ್ತಿ ಕೇವಲ ಮೂಲಾಧಾರ (: ಮಾತೆ) ಮತ್ತು ಮೂಲ ಚೇತನ (: ಕನ್ಯೆ) ಆಗಿ ಮಾತ್ರವಲ್ಲದೆ ಕೂಡಿರಲು ಯೋಗ್ಯವಾದ ಸತಿಯಾಗಿಯೂ ಕಂಡು ಬಂದಿದ್ದಾಳೆ. ಈ ಸರ್ವಸುಂದರಿ ಸರ್ವಸುಂದರ-ಶಿವ-ನನ್ನು ಮಾತ್ರವಲ್ಲದೆ ಆತನ ಮೂಲಕ ಎಲ್ಲರೊಡನೆಯೂ ಕೂಡಿರಲು ಬಯಸುತ್ತಾಳೆ.

ಶಕ್ತಿಯೇ ಶಿವನ ಹೃದಯ, ಸಾರ (ಶಿವದೃಷ್ಟಿ III, 7 & ಈಶ್ವರ ಪ್ರತ್ಯಾಭಿಜ್ಞ I, 5-14), ಚೈತನ್ಯ ಹಾಗೂ ಚಿತ್ತು. ಆಕೆಯಿಲ್ಲದಿದ್ದರೆ ಶಿವ ಕೇವಲ ಶವ. ಶಕ್ತಿಯೆಂದರೆ ಚೈತನ್ಯಶಿವ/ಚಿನ್ಮಯಶಿವ, ಕಾರಣ ಪೌರಾಣಿಕವಾಗಿ (mythically) ಆಕೆಯನ್ನು ಶಿವನ ಸತಿ (Spouse of Shiva)ಯೆಂದೇ ವರ್ಣಿಸಿದ್ದಾರೆ. ದೇವಿ ಭಕ್ತರೊಡನೆಯೂ ಒಂದಾಗಿರುತ್ತಾಳೆ :

ನೀನೇ ಪ್ರಜ್ಞೆ, ನೀನೇ ಧರ್ಮ,
ನೀನೇ ನನ್ನ ಹೃದಯ, ನೀನೇ ನನ್ನ ಜೀವ,
ನೀನೇ ನನ್ನ ದೇಹದೊಳಗಿನ ಅಂತರಾತ್ಮ,
ನೀನೇ ನನ್ನ ಭುಜದೊಳಗಿನ ಶಕ್ತಿ,
ನೀನೇ ಹೃದಯದೊಳಗಿನ ಭಕ್ತಿ.
ನೀನೇ ದುರ್ಗೆ... . ...
ನೀನೇ ಕಮಲೆ (ಲಕ್ಷ್ಮಿ)......
ನೀನೇ ವಾಣಿ (ಸರಸ್ವತಿ), ಪ್ರಜ್ಞಾಸ್ವರೂಪಿಣಿ

(ನೋಡಿ : Payne : 102)

ಶಿವನಲ್ಲಿಯ ಚೈತನ್ಯ (Active Principle)ವೇ ಶಕ್ತಿಯೆಂದು ಸ್ಕಂದ, ಶಿವ ಹಾಗೂ ಲಿಂಗ ಪುರಾಣಗಳಲ್ಲಿ ವಿವರಿಸಲಾಗಿದೆ. ಆದರೆ, ಭಾಗವತ, ವಿಷ್ಣು, ವಾಮನವೇ ಮೊದಲಾದ ವೈಷ್ಣವ ಪುರಾಣಗಳಲ್ಲಿ ಶಕ್ತಿಯನ್ನು ವಿಷ್ಣುವಿನೊಂದಿಗೆ ಅಭೇದರೂಪದಲ್ಲಿ *(In unione identitatis)* ಕಂಡಿದ್ದಾರೆ (Kumar, 1974).

ಶೈವಪುರಾಣಗಳಲ್ಲಿ ಶಿವಶಕ್ತಿಯೆಂಬುದೊಂದು ಸಂಪುಟ. ವಜ್ರ ಹಾಗೂ ಅದರ ಹೊಳಪು, ಹಾಲು ಹಾಗೂ ಆದರ ಬಿಳಿಬಣ್ಣ, ಚಿತ್ತು ಮತ್ತು ಅದರ ಕಳೆ ಅಭೇದ ವಾಗಿರುವಂತೆ ಶಿವಶಕ್ತಿ ಅಭೇದ. ರಾಮಕೃಷ್ಣ ಪರಮಹಂಸರ ಮಾತಿನಲ್ಲಿ ಹೇಳ ಬೇಕಾದರೆ, "ಅವರೊಳಗಿನ ಭೇದ (distinction) ವ್ಯತ್ಯಾಸಾತ್ಮಕ (differentiating) ವಲ್ಲ... ಒಬ್ಬರನ್ನು ಇನ್ನೊಬ್ಬರಿಂದ ಬೇರ್ಪಡಿಸಿ ಗ್ರಹಿಸಿಕೊಳ್ಳುವುದು ಅಸಾಧ್ಯ (Bhattacharya 1969 : 672 *etiam* Kumar, 151). ಆದುದ ರಿಂದ ಶಿವಶಕ್ತಿಯರೊಳಗಿನ ಭೇದ ಕೇವಲ ತಾರ್ಕಿಕ (logical) ವೇ ಹೊರತು ವಸ್ತುಗತ (Ontic)ವಲ್ಲ.

ಶಕ್ತಿಪೂಜೆ (Shakti-cult)ಯಲ್ಲಿಯ ಸಂಭೋಗ, ಶ್ರೀಶಕ್ತಿ ಹಾಗೂ ಆಕೆಯ ಭಕ್ತರೊಳಗಿನ ಸಾಮರಸ್ಯತೆ (integration) ಯನ್ನು ಸಂಕೇತಿಸುತ್ತದೆ. ವಿಧಿ ಯಾತ್ಮಕ ಸಂಭೋಗದಲ್ಲಿ ದೈಹಿಕ ಸುಖದ ಅನುಭವ ಕಾಮೋದ್ರೇಕತೆಯಿಂದ ಹುಟ್ಟಿದರೂ ಅದು ಈ ಧಾರ್ಮಿಕ ವಿಧಿಕರ್ಮದ ಪ್ರಮುಖ ಉದ್ದೇಶವಲ್ಲ. ಗಂಡು ಹೆಣ್ಣುಗಳ ಕೂಟದಲ್ಲಿ ತಾನಿದಿರೆಂಬ ಭಾವ ಇಲ್ಲದಂತಾಗಿ ಮೈಮರೆತು ಉಂಟಾಗುವ ಸಾಮರಸ್ಯಾನುಭಾವವೇ ಲಿಂಗಾಂಗ ಸಾಮರಸ್ಯ (self-integration with the Self)ದ ಸಂಕೇತವಾಗಿ ಮೂಡಿಬಂದುದು ಭಾರತೀಯ ಸಂಸ್ಕೃತಿಯ ಒಂದು ಲಕ್ಷಣ ವೆನ್ನಬಹುದು. ಕಾರಣ, ವಿಧಿಯಾತ್ಮಕ ಸಂಭೋಗ(Ritualistic sexual union) ದಲ್ಲಿ ಕೂಡುವ ಹೆಣ್ಣು ಸಾಕ್ಷಾತ್ ದೇವಿ. ಹೀಗೆ ಶಾಕ್ತವಿಧಿಯಲ್ಲಿ ಭಿನ್ನಲಿಂಗಿಗಳ ಕೂಟ ಲಿಂಗಾಂಗ ಸಾಮರಸ್ಯವನ್ನೇ ಸಂಕೇತಿಸುತ್ತದೆಯಾದರೂ ಅದು ಈ ಸಾಮ ರಸ್ಯವನ್ನು, ದೈವೀಪ್ರೇಮವನ್ನು, ಪರಿಪೂರ್ಣವಾಗಿ ಬಿಂಬಿಸಲಾರದು :

> ಪುರುಷನೋರ್ವನು ಯಾವುದನ್ನೂ ಲೆಕ್ಕಿಸದೆ ತನ್ನ ಮೋಹಿನಿಯ ಬೆನ್ನಂಟಿಕೊಂಡು ಕೊನೆಗೆ ಆಕೆಯ ತೆಕ್ಕೆಯಲ್ಲಿ ಸಿಲುಕಿ, ಪ್ರವೇಶಿಸಿ, ಅಲ್ಲಿಯೇ ಮೈಮರೆತರೂ ಆತ ದೈವೀಪ್ರೇಮವನ್ನು ಪೂರ್ತಿಯಾಗಿ ಸಂಕೇತಿಸಲಾರ. ತನ್ನ ಯುಕ್ತಿಕುಯುಕ್ತಿಗಳಿಂದಲೂ ಆಕರ್ಷಕ ರೂಪದಿಂದಲೂ ಮೈಮಾಟ ದಿಂದಲೂ, ಉದ್ರೇಕಿಸುವ ವಿವಿಧ ಭಂಗಿಗಳಿಂದಲೂ ತನ್ನ ಇನಿಯನ ಮನ ವನ್ನು ಸೆಳೆಯುವ ಸರ್ವಾಂಗ ಸುಂದರಿ ಕೂಡಾ ನಮ್ಮನ್ನು ತನ್ನ ಕಡೆ ಸೆಳೆಯಲು ಸುಂದರ ವಿಶ್ವವನ್ನು ರಚಿಸಿದ, ಮಹಾ ಲೀಲಾಕಾರನಾದ ದೇವನ ಮುಂದೆ ತೃಣಸಮಾನಳು. (Greely, 162).

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ತನ್ನಪ್ಪುಗೆಯಲ್ಲಿ ಹಿಡಿದುಕೊಳ್ಳಲು ಹಾತೊರೆದು ಓಡಿಬರುತ್ತಿರುವ ಗಾಢಾನುರಕ್ತ ದೇವನನ್ನು ಚಿತ್ರಿಸಲು ಬೇಟೆನಾಯಿಯನ್ನು ಸಂಕೇತವನ್ನಾಗಿಟ್ಟುಕೊಂಡರೆ (ನೋಡಿ : Francis Thompson's *Hound of Heaven*), ಭಾರತೀಯ ಸಂಸ್ಕೃತಿಯಲ್ಲಿ ಮೋಹಗೊಳಿಸುವ, ಮರುಳು ಮಾಡುವ, ಮಂಕುಗವಿಸುವ ಹಾಗೂ ಉದ್ರೇಕಿಸುವ ಹೆಣ್ಣಿನ/ಶಕ್ತಿಯ ಸಂಕೇತವನ್ನು ಬಳಸಿದುದು ಬಹು ಔಚಿತ್ಯಪೂರ್ಣವಾಗಿದೆ.

ಶ್ರೀಶಕ್ತಿಗೆ ಶರಣಾಗತರಾದವರಲ್ಲಿ 'ಸೋಹಂ ದೇವಿ' ಪ್ರಜ್ಞೆ ಮೂಡುವದರಿಂದ ಅವರು ದೇವಿಯಾನಂದದಲ್ಲಿ ಮುಳುಗಿ ವಿಮುಕ್ತರಾಗುತ್ತಾರೆ. ಹೀಗೆ ಶಕ್ತಿ, ಸತಿಯಾಗಿ ದೈವೀಗಾಢಾನುರಕ್ತತೆ(Divine passionate lust)ಗೆ ಸಂಕೇತ (Sacrament)ವಾಗುತ್ತಾಳೆ. ಶಕ್ತಿಪುರಾಣದಲ್ಲಿಯ ಲೈಂಗಿಕ ಸಂಬಂಧ ಸಂಭೋಗೋದ್ರೇಕಗಳು ಮೋಹಕ ದೇವನಿಗೆ ಸಂಕೇತವಾಗಬಹುದಾದರೆ ಲಗ್ನಜೀವನವನ್ನು ವೈರಾಗ್ಯ ಜೀವನಕ್ಕಿಂತ ಕೀಳೆಂದೂ ಎರಡನೆಯ ದರ್ಜೆಯದೆಂದೂ ಪರಿಗಣಿಸುವುದು ಸರ್ವಥಾ ಸರಿಯಲ್ಲವೆಂದು ಪ್ರಸ್ತುತ ಸಂದರ್ಭದಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ವೈರಾಗ್ಯ ಹಾಗೂ ದಾಂಪತ್ಯಗಳೆರಡೂ ನಮ್ಮನ್ನು ಸದಾ ಪ್ರಚೋದಿಸುವ ಹಾಗೂ ನಮ್ಮೊಡನೆ ಸಾಮರಸ್ಯವನ್ನು ಬಯಸುವ ದಿವ್ಯ ಅನುರಾಗಿ (The Divine Lover) ಯನ್ನು ಸಂಕೇತಿಸಬಲ್ಲವು.

ಶಕ್ತಿ, ಮೃತ್ಯುದೇವತೆಯಾಗಿ

ಶಕ್ತಿಪುರಾಣದಲ್ಲಿ ಮೃತ್ಯು ಒಂದು ಪ್ರಬಲ ಸಂಕೇತ. ಮೃತ್ಯುವಿನಿಂದಾಗಿ ಶ್ರೀಶಕ್ತಿ ಸಂಹಾರಿಣಿಯಾಗಿ ರೂಪಾಂತರಗೊಳ್ಳುತ್ತಾಳೆ; ರಮಣಿ, ರುದ್ರರೂಪಿಣಿಯಾಗುತ್ತಾಳೆ. ಹೀಗೆ ಶ್ರೀಶಕ್ತಿ, ಕನ್ಯಾಮಾತೆ / ಸತಿಯಷ್ಟೇಯಲ್ಲ ಮೃತ್ಯುದೇವತೆಯೂ ಹೌದು. ಹುಟ್ಟಿನೊಡನಿರುವಂತೆ ಸಾವಿನೊಂದಿಗೂ ಈಕೆಗೆ ಸಂಬಂಧ ಕಲ್ಪಿಸಲಾಗಿದೆ.

ಸ್ತ್ರೀ, ಸತಿಯಾಗಿ ಪತಿಯನ್ನು ಕೆಲವು ನಿಮಿಷಗಳ ವರೆಗೆ ಮಾತ್ರ ಒಂದು ಬಗೆಯ ಸಾವಿಗೀಡುಮಾಡುತ್ತಾಳೆ. ಆಕೆಯ ಬಿಸಿಯಪ್ಪುಗೆಯಲ್ಲಿ ಸಿಕ್ಕು ಹೊಕ್ಕು ಪರವಶನಾದ ಪುರುಷ ಒಂದು ರೀತಿಯಲ್ಲಿ ನಿರ್ಜೀವನಾದಂತೆ, ಸತ್ತಂತೆ. ಆಕೆಯ ಮಗುವಾಗಲಿ ಗಂಡನಾಗಲಿ ಸತ್ತಾಗ ಪುನಃ ಆತನ ಮೃತದೇಹಕ್ಕೆ ಆಕೆಯ ತೊಡೆಯೇ ಸ್ಥಾನ! ಹೀಗೆ ಹೆಣ್ಣೆಂಬುದು ಗಂಡಿಗೆ 'ಗರ್ಭ'ವೂ ಹೌದು. 'ಘೋರಿ'ಯೂ ಹೌದು! ಆದುದರಿಂದ, ಜನ್ಮವನ್ನೀಯುವ, ಅಂತೆಯೇ ಜೀವವನ್ನು ಕೊಂಡೊಯ್ಯುವ ಆದ್ಯಶಕ್ತಿಗೆ ಸ್ತ್ರೀಯೇ ನಿಜಸಂಕೇತ.

ಶ್ರೀಶಕ್ತಿ, ಸಂಹಾರ ಶಕ್ತಿ *(Pietá)* ಯಾಗಿ ಅತಿ ಭಯಾನಕವಾಗಿ ಕಾಣುವುದರಿಂದ ಆಕೆ ಕಪ್ಪು ಬಣ್ಣದವಳು: ಕಾಳಿ. ಸ್ಮಶಾನವೇ ಆಕೆಯ ಮನೆ ! ಆಕೆಯ ಬಗೆಗಿನ ಶಬ್ದಚಿತ್ರವೊಂದನ್ನು ಗಮನಿಸಿ :

ಅಮಾನುಷವಾಗಿ ಹಲವು ತೋಳುಗಳುಳ್ಳ, ಜ್ವಾಲಾಮಂಡಲದ ನಡುವೆ ಭೀಕರವಾಗಿ ಕುಳಿತ. ಶವದ ಬಿಚ್ಚಿದ ಹೊಟ್ಟೆ ಮತ್ತು ಅವಳ ಗಂಟಲ ನಡುವೆ ಕರಾಳ ರೂಪದ ಹೊಕ್ಕುಳ ಬಳ್ಳಿಯೊಂದು ಇದೆಯೋ ಎಂಬಂತೆ ಕರುಳನ್ನು ಮುಕ್ಕುತ್ತಿರುವ, ಕಾಳಿಯ ಚಿತ್ರ ಆಕೆಯ ಚಿತ್ರತ್ರಯಗಳಲ್ಲಿ ಅತ್ಯಂತ ಭಯಾನಕವಾದುದಲ್ಲ; ಅಥವಾ ಅಂಧಕಾರವನ್ನೇ ಉಟ್ಟು, ಬಲಿಗೊಂಡವರ ಕೈಗಳನ್ನು ತಲೆಬುರುಡೆಗಳನ್ನು ತೊಟ್ಟು ಶಿವಶವದ ಮೇಲೆ ನಿಂತಿರುವ ಅಸಹಜವೆನಿಸುವ ಈ ಕ್ರೂರ ದೃಶ್ಯ ಕೂಡ ಅತ್ಯಂತ ಭಯಾನಕವೆನಿಸಲಾರದು. ಅಷ್ಟೊಂದು ಕ್ರೂರವಲ್ಲದ ಸೌಮ್ಯವಾದ ಮೂರನೆಯ ಚಿತ್ರವೇ, ಅದೇ ಕಾರಣಗಳಿಂದಾಗಿ, ಅತ್ಯಂತ ಭಯಂಕರವಾಗಿ ತೋರುತ್ತದೆ! ಇಲ್ಲಿ ಕೈಗಳು ಮಾನುಷವಾಗಿ ಕಾಣುತ್ತವೆ. ಒಂದು ಚಾಚಿಕೊಂಡಿದೆ; ಇನ್ನೊಂದು ಈಸಿಸ್ ತನ್ನ ಮಗುವಿನ ತಲೆಯನ್ನು ಮುದ್ದಾಡುವಂತೆ, ಸರ್ಪಗಳ ತಲೆಗಳ ಮೇಲೆ ಅತ್ಯಂತ ಮೃದುವಾಗಿ ನೇವರಿಸುತ್ತಿದೆ; ಸ್ತನಗಳು ಅಸಹ್ಯವಾಗಿದ್ದರೂ ಆಫ್ರಿಕೆಯ ಮಾತೃದೇವತೆಯ ಸ್ತನಗಳನ್ನು ನೆನಪಿಸುವಂತಿವೆ. ಆಕೆಯ ಸೊಂಟವನ್ನು ನಡುಪಟ್ಟಿಯಂತೆ ಸುತ್ತುವರಿದು ಹೆಡೆಯೆತ್ತಿದ ನಾಗ, ಇಲ್ಲಿ ಗರ್ಭಾಶಯವನ್ನು ಸಂಹಾರಕವಾಗಿ ತೋರಿಸುತ್ತದೆ. ಈ ಹಾವು, ಕ್ರೀಟದ (Cretan) ನಾಗದೇವತೆಯ ತೊಡೆಯಲ್ಲಿ ಸುತ್ತಿಕೊಂಡಿರುತ್ತದೆ, ಮೆಕ್ಸಿಕೊವಿನ ಕೊತ್‌ಲಿಕ್ಯೂ ದೇವತೆಯ ಉಡಿಗೆಯಾಗಿರುತ್ತದೆ: ಗ್ರೀಕ್ ಗಾರ್ಗನಿನ ಸೊಂಟವನ್ನು ಸುತ್ತುವರಿಯುತ್ತದೆ. ದೇವತೆಯ ರಕ್ತಸುರಿಯುತ್ತಿರುವ ಘೋರವಾದ ವ್ಯಾಘ್ರ-ಜಿಹ್ವೆ, ರಾಂಗ್ಡ (Rangda)ವೆಂಬ ಮಾಟಗಾತಿಯ ಕೋರೆಹಲ್ಲುಗಳ ನಡುವಿನಿಂದ ಹೊರಚಾಚಿಕೊಂಡು ಜ್ವಾಲೆಕಾರುತ್ತಿರುವ ನಾಲಗೆಯಂತೆ ಅಥವಾ ಗಾರ್ಗನ ಮುಸೆಯುತ್ತಿರುವ ಕೋರೆ ಹಲ್ಲುಗಳ ನಡುವಿನಿಂದ ಹೊರಚಾಚುತ್ತಿರುವ ನಾಲಗೆಯಂತೆ ತೋರುತ್ತದೆ (Erich Neumann, *The Great Mother* p. 149)!

ಶ್ರೀಶಕ್ತಿ ತಾರಿಣಿಯೂ ಹೌದು, ಸಂಹಾರಿಣಿಯೂ ಹೌದು. "ಸರ್ವಕ್ಕೂ ಆದಿಯಾಗಿರುವ ದೇವನು ಕೊನೆಯೂ ಆಗಿರುವನು" ಎಂದು ಕ್ಯೂಂಗ್ ಹೇಳಿದ ಮಾತನ್ನು ಇಲ್ಲಿ ನೆನಪಿಸಬಹುದು. ಭಾರತೀಯ ಅವಲೋಕನ (Weltanschuung)ದಲ್ಲಿ ಜೀವನ ಮರಣಗಳೆರಡೂ ಒಂದೇ ನಾಣ್ಯದ ಎರಡು ಮುಖಗಳು. ಬ್ರಹ್ಮಲೀಲೆಯಿಂದುಂಟಾದವುಗಳೆಲ್ಲವೂ ಆತನಲ್ಲಿಯೇ ಐಕ್ಯಗೊಳ್ಳಬೇಕು. ಈ ದೃಷ್ಟಿಯಿಂದ ಹಿರಣ್ಯಗರ್ಭ (The Womb)ವೇ ವಿಶ್ವದ ಘೋರಿ (The Tomb)ಯೂ ಹೌದು. ಈ ಸ್ವಯಂಭೂ ಲಿಂಗ ವಿರೋಧಗಳ ವಿಚಿತ್ರ ಸಂಘಟನೆ. *(Coincidentia Oppositoum)* ಶ್ರೀಶಕ್ತಿ ಮೂಲತಾಯಿಯೂ ಹೌದು

ಮೃತ್ಯುದೇವತೆಯೂ ಹೌದೆನ್ನುವಾಗ ಈ ಸಂಘಟನೆಯ ಅರ್ಥ ಸುಸ್ಪಷ್ಟಗೊಳ್ಳುತ್ತದೆ.

ಪೂರ್ಣ (The Whole)ದಿಂದ ಜನನದ ಮೂಲಕ ವ್ಯಕ್ತಿಯಾಗಿ ಅಭಿವ್ಯಕ್ತಗೊಂಡ ಅಸ್ತಿತ್ವ (being) ಸಾವಿನ ಮೂಲಕ ಪೂರ್ಣದಲ್ಲಿ ಸಮರಸಗೊಳ್ಳುತ್ತದೆ. ಪರಾವಲಂಬಿ ಅಸ್ತಿತ್ವಗಳೆಲ್ಲವೂ *(entia ab alio)* ಅಧೀನವಾಗಿರತಕ್ಕವುಗಳು, ಇತಿಮಿತಿವುಳ್ಳವುಗಳು ಅರ್ಥಾತ್ ಮಾಯೆ. ಸ್ವಾವಲಂಬಿ ಅಸ್ತಿತ್ವ *(Ens a Se)* ಮಾತ್ರ ಸಂಪೂರ್ಣವಾಗಿ ಸ್ವತಂತ್ರ ಹಾಗೂ ಪರಿಪೂರ್ಣ ಅರ್ಥಾತ್ ಸತ್. ಆದ್ಯಂತ್ಯ ಶಕ್ತಿ, ಈ ಮಹಾಸತ್ತಿಗೆ ಭಾರತೀಯ ಸಂಸ್ಕೃತಿಯಲ್ಲಿ ಒಂದು ಉಜ್ವಲ ಸಂಕೇತವಾಗಿ ನಿಲ್ಲುತ್ತಾಳೆ. ವೇದಪೂರ್ವಕಾಲದಿಂದಲೂ ಈ ಸಂಕೇತದ ಮೂಲಕ ಮೂಲ ನಿತ್ಯದ ಬೆಳಕನ್ನು ಭಾರತೀಯರು ಅನುಭಾವದಲ್ಲಿ ಕಂಡಿದ್ದಾರೆ.

ಸ್ವಯಂಭೂಲಿಂಗವನ್ನು ಬಿಟ್ಟು ಮಿಕ್ಕುಳಿದುದೆಲ್ಲವೂ ಅನಿತ್ಯವೆಂಬುದನ್ನು ಕಾಳಿಸಂಕೇತ ಮನದಟ್ಟಾಗುವಂತೆ ಮಾಡುತ್ತದೆ. ಆದುದರಿಂದ, ಪರರನ್ನು ಮೆಟ್ಟಿ ಪೈಪೋಟಿಯಿಂದ ಜೀವನ ಸಾಗಿಸುವುದರಲ್ಲಿ ಹುರುಳಿಲ್ಲ. ಸೌಹಾರ್ದತೆಯಿಂದ, ಪರಸ್ಪರ ಸ್ವಾತಂತ್ರ್ಯವನ್ನೊಪ್ಪಿಕೊಂಡು ಪ್ರೇಮದಿಂದ ಬಾಳುವುದೇ ಮಾನವ ಯೋಗ್ಯ ಜೀವನ. ಶ್ರೀ ಶಕ್ತಿ ತನ್ನ ತಾರಕ ರೂಪಗಳಲ್ಲಿ ಈ ಜೀವನ ತತ್ವವನ್ನೇ ಪ್ರತಿಪಾದಿಸುತ್ತಾಳೆ. ಸ್ವಾರ್ಥವನ್ನು ಕೊಂದು ಪರರಲ್ಲಿ ಪರ (The Beyond) ವನ್ನನುಭವಿಸುವುದೇ ನಿಜ ಮಾನವ ಬಾಳೆಂಬ ಘೋಷಣೆ ಕೊಡುತ್ತಾಳೆ, ಶಿವನ ಶವದ ಮೇಲೆ ನಿಂತಿರುವ ಕಾಳಿ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಗತ್ತಿನ ವಿವಿಧ ಸಂಸ್ಕೃತಿಗಳಲ್ಲಿ, ಅದರಲ್ಲಿಯೂ ಪೌರ್ವಾತ್ಯ ಸಂಪ್ರದಾಯದಲ್ಲಿ, ಶ್ರೀಶಕ್ತಿಗೆ ಹೋಲುವ ಹಲವು ಸ್ತ್ರೀ ದೇವತೆಗಳಿವೆ. ಭಾರತೀಯ ಜನಪದರು ಶ್ರೀಶಕ್ತಿಯನ್ನು ಕನ್ಯಾಮಾತೆಯಾಗಿ, ಸತಿಯಾಗಿ, ಮಾತ್ರವಲ್ಲದೆ ಮೃತ್ಯುದೇವತೆಯಾಗಿಯೂ ತಮ್ಮ ಸಮಷ್ಟ್ಯನುಭಾವದಲ್ಲಿ ಕಂಡಿದ್ದಾರೆ. ಕಂಡದ್ದನ್ನು ಅಭಿವ್ಯಕ್ತಗೊಳಿಸಿದ್ದಾರೆ. ತಮ್ಮ ಐಹಿಕ ಜೀವನದ ಅರ್ಥವನ್ನು ಲಿಂಗಾಂಗ ಸಾಮರಸ್ಯದಲ್ಲಿ ಕಂಡುಹಿಡಿದಿದ್ದಾರೆ. ಕಾರಣ, ಸಾವೆಂಬುದು ಅವರಿಗೆ ಕೊನೆಯಲ್ಲ; ಅದು ಅವರ ಕೈವಲ್ಯ ಜೀವನದ ನಾಂದಿಯಷ್ಟೆ. ಪೂರ್ಣ (The Absolute) ವೆಂಬುದು ಶಿವಶಕ್ತಿಸಂಪುಟ. ಆದ್ದರಿಂದ ಅದು ಗಂಡು ಹೆಣ್ಣೆಂಬ ಲಿಂಗಭೇದವನ್ನು ಮಿಕ್ಕಿರುವ ಪರತತ್ತ್ವ. ಶಿವಶಕ್ತಿಯೆಂಬುದು ಅಭೇದ ಅದ್ವೈತ ಸ್ವಯಂಪ್ರಜ್ಞಾಸ್ತಿತ್ವ (Woodroffe, 414, 428, 467) ಈ ಸ್ವಯಂಭೂ ಸ್ಥಲವನ್ನು ಶ್ರೀಶಕ್ತಿಯನ್ನಾಗಿ ಕಂಡು ಭಾರತೀಯ ಜನಪದರು ದೇವರಲ್ಲಿ ಪುರುಷ ಸಹಜ ಲಕ್ಷಣಗಳೊಂದಿಗೆ ಸ್ತ್ರೀ ಸಹಜ ಗುಣಗಳನ್ನೂ ಅನುಭಾವದಲ್ಲಿ ಕಂಡು ತೃಪ್ತರಾಗಿದ್ದಾರೆ. ಈ ದೇವಿದರ್ಶನ, ಪುರುಷ ಪ್ರಧಾನ ಸಮಾಜದಲ್ಲಿ ಬಹು

ಉಪಯುಕ್ತ (Kung, 310) ವೆಂದು ಬೇರೆ ಹೇಳಬೇಕಾಗಿಲ್ಲ. ಸ್ವಭಾವತಹ ಉಭಯಲಿಂಗಿಯಾದ ಮಾನವನು 'ಅಪ್ಪ'ನ ಪ್ರೀತಿಯೊಂದಿಗೆ 'ಅಮ್ಮ'ನ ವಾತ್ಸಲ್ಯವನ್ನೂ ಅನುಭವಿಸಲು ಹಾತೊರೆಯುವುದು ಸ್ವಾಭಾವಿಕವೇ ಸರಿ.

ಆಧಾರ ಸಾಹಿತ್ಯ

Agarwal V. S., *The Glorificatian of the Great Goddess*, Varanasi, 1963.

Ashe G., *The Virgin*, London, 1976.

Bhattacharya H. (Ed.), *The Cultural Heritage of India*, Vol. IV, Calcutta, 1969.

Bhattacharya N. N., *History of Śakti Religion*, New Delhi, 1974.

Chakravarti C. *Doctrine of Śakti in Indian Literature*, Calcutta, 1934.

Chandra R. P., *Indo-Aryan Races*, Calcutta, 1969.

Chirol V., *Indian Unrest*, London, 1910.

Danilou, A., *Hindu Polytheism*, London, 1964.

Elliade M., *Patterns in Comparative Religion*, New–York, 1958.

Farquhar J. N., *An Outline of the Religious Literature of India*, Oxford, 1920.

Greely A. M., *The Mary Myth*, New–York. 1977.

Griffiths B., " Mystical Theology in the Indian Tradition ", *Jeevadhara*, 53, Kottayam, 1979.

James E. O., *Cult of Mother Goddess*, London, 1959.

Kakati B. K., *The Mother Goddess Lamakhye*, Assam, 1961.

Kumar P., *Śakti Cult in Ancient India*, Varanasi, 1974.

Küng H., *On Being a Christian*, Collins, 1978.

Madtha W., "Viraśaivism and Christianity (An Ecumerical Danileou on Doctrine)" in *Journal of the Karnatak University, Humanities*, Vol. XX, Dharwad, 1976.

Madtha W., "Śakti : The Feminine Aspect of God in Indian Tradition", in *Journal of Dharma*, Vol. V No. 2, Bangalore, 1980.

Payne E. A. *The Religious Life of India : The Saktas (An Introductory and Comparative Study)* Calcutta, 1933.

Woodroffe J. (Sir), *Śakti and śakta : Essays and Addresses*, Madras, 1965 (1918).

ಡಾ. ಹಿರೇಮಲ್ಲೂರ ಈಶ್ವರನ್ ಅವರ

"ಲಿಂಗಾಯತ ಧರ್ಮ, ಸಂಸ್ಕೃತಿ ಮತ್ತು ಸಮಾಜ"

(ಕೃತಿ ವಿಮರ್ಶೆ)

ಎಂ. ಬಿ. ಕೊಟ್ರಶೆಟ್ಟಿ

೧೨ನೆಯ ಶತಮಾನದಲ್ಲಿ ಬಸವಣ್ಣನವರು ಪ್ರಾರಂಭಿಸಿದ ಸಾಂಸ್ಕೃತಿಕ ಆಂದೋಲನವು ಪ್ರವರ್ತಿಸಿದ ತಾತ್ವಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳು ಇಂದಿಗೂ ವಿಚಾರವಂತರನ್ನು ಆಕರ್ಷಿಸುತ್ತವೆ. ವೀರಶೈವ ಧರ್ಮ, ತತ್ವಜ್ಞಾನಗಳ ಬಗೆಗೆ ಇಲ್ಲಿಯವರೆಗೆ ನಡೆದ ಅಧ್ಯಯನಗಳು ಈ ಧರ್ಮವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ನವಮನ್ವಂತರಕ್ಕೆ ಕಾರಣವಾಗಿದೆ ಎಂಬ ಅಂಶವನ್ನು ಎತ್ತಿಹೇಳಿವೆ. ಕನ್ನಡದ ಪ್ರಸಿದ್ಧ ಲೇಖಕರೂ, ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳೂ ಆದ ಡಾ. ಹಿರೇಮಲ್ಲೂರ ಈಶ್ವರನ್ ಅವರ 'ಲಿಂಗಾಯತ ಧರ್ಮ, ಸಂಸ್ಕೃತಿ ಮತ್ತು ಸಮಾಜ' ಎಂಬ ಕಿರುಕೃತಿ ಮೇಲಿನ ಅಭಿಪ್ರಾಯಕ್ಕೆ ವೈಜ್ಞಾನಿಕ ಹಿನ್ನೆಲೆಯನ್ನು ಒದಗಿಸುವಷ್ಟು ಪ್ರಭಾವಿಯಾಗಿದೆ. ಲೇಖಕರ ವೈಜ್ಞಾನಿಕ ವಿಚಾರಧಾರೆ ಹಾಗೂ ಸಮರ್ಥ ಪ್ರತಿಪಾದನೆಗಳಿಂದ ಸತ್ವದ ದೃಷ್ಟಿಯಿಂದ ಇದೊಂದು ಅತ್ಯಂತ ಮಹತ್ವದ ಕೃತಿಯಾಗಿ ವಿದ್ವಾಂಸರ ಗಮನ ಸೆಳೆಯುತ್ತದೆ. ಪ್ರಸ್ತುತ ಕೃತಿಯಲ್ಲಿ ಸಾಂಸ್ಕೃತಿಕ ಮಾನವ ಶಾಸ್ತ್ರದ ದೃಷ್ಟಿ ಪ್ರಮುಖವಾಗಿದೆ. ವೀರಶೈವ ಧರ್ಮದ ಚರಿತ್ರೆ ಹಾಗೂ ಅದರ ಸಮಕಾಲೀನ ಸ್ಥಿತಿಗತಿಗಳ ಪ್ರೌಢವಿವೇಚನೆ ಈ ಕೃತಿಯ ವೈಶಿಷ್ಟ್ಯವಾಗಿದೆ.

"ಲಿಂಗಾಯತ ಜನತೆ ಮತ್ತು ಸಂಸ್ಕೃತಿ' ಎಂಬ ಪ್ರಥಮ ಅಧ್ಯಾಯದಲ್ಲಿ ಭಾರತೀಯ ವೈದಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಲಿಂಗಾಯತ ಸಂಸ್ಕೃತಿಯ ವೈಶಿಷ್ಟ್ಯ ಹಾಗೂ ಪ್ರತ್ಯೇಕತೆಯನ್ನು ಸಾಕಷ್ಟು ಸಾಕ್ಷ್ಯಾಧಾರಗಳನ್ನು ಕೊಟ್ಟು ಪ್ರತಿಪಾದಿಸಿದ್ದಾರೆ. ಲಿಂಗಾಯತರು ಬ್ರಾಹ್ಮಣ ಸಂಸ್ಕೃತಿಯ ಮಾದರಿಯಲ್ಲಿ ತಮ್ಮ ಸಾಮಾಜಿಕ ಸಂಸ್ಥೆಗಳು, ದೇವರು, ಸಂಕೇತ, ಸಮಾಜವ್ಯವಸ್ಥೆ, ನೈತಿಕ ಮೌಲ್ಯಗಳನ್ನು ರೂಪಿಸಿಕೊಂಡಿದ್ದರೂ ಅವೆಲ್ಲ 'ಲಿಂಗಾಯತೀಕರಣ' ಪ್ರಕ್ರಿಯೆಗೆ ಒಳಗಾಗಿ ತದ್ವಿರುದ್ಧವಾಗಿವೆ, ಕರ್ನಾಟಕದಲ್ಲಿ ಬ್ರಾಹ್ಮಣಮಾರ್ಗ ಸಂಪ್ರದಾಯ (Great tradition) ಹಾಗೂ ಜನಸಾಮಾನ್ಯರ ದೇಶೀ ಸಂಪ್ರದಾಯ (Little tradition) ಎರಡನ್ನೂ ಪ್ರತಿಭಟಿಸಿ ಪ್ರತ್ಯೇಕವಾದ ಕ್ರಿಯಾಶೀಲ "ಜನಪದ ಸಮಷ್ಟಿ ಸಂಸ್ಕೃತಿ" (Populistic culture)ಯನ್ನು ಪ್ರಚುರಪಡಿಸಿದ್ದಾರೆಂಬ ಅವರ ವಿಚಾರವು

ಮನನೀಯವಾಗಿದೆ. ಕರ್ನಾಟಕದ ಜನಸಂಖ್ಯೆಯ ೧೫ರಷ್ಟಿದ್ದ ಲಿಂಗಾಯತರು ವ್ಯಾಪಾರೋದ್ಯೋಗ, ಕೃಷಿ ವಿದ್ಯಾಸಂಸ್ಥೆಗಳನ್ನು ನಡೆಸುವುದರೊಂದಿಗೆ ರಾಜಕೀಯ ರಂಗದಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಸ್ವಾತಂತ್ರ್ಯಾಂದೋಲನದಲ್ಲಿ ವ್ಯಕ್ತಿತೀತ ಪಾತ್ರವನ್ನು ನಿರ್ವಹಿಸಿ ಭಾರತೀಯ ರಾಜಕಾರಣಕ್ಕೆ, ರಾಷ್ಟ್ರೀಯ ಸಂಸ್ಕೃತಿಗೆ ಕ್ರಿಯಾಶೀಲತೆಯನ್ನು ಒದಗಿಸಿಕೊಟ್ಟಿದ್ದಾರೆ. ಲಿಂಗಾಯತ ಸಂಸ್ಕೃತಿಯ ಉಗಮಕ್ಕೆ ಬಸವಣ್ಣನವರೇ ಕಾರಣರೆಂಬ ಆಶಯದ ಅವರ ದಿಟ್ಟ ಹೇಳಿಕೆ ಪ್ರಶಂಸನೀಯವಾಗಿದೆ. ಸ್ಥಗಿತಗೊಂಡಿದ್ದ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಭಟಿಸುವಲ್ಲಿ ಬಸವಣ್ಣನವರನ್ನು ಮಾರ್ಟಿನ್ ಲ್ಯೂಥರನಿಗೆ ಹೋಲಿಸಿದುದು, 'ಪಶ್ಚಿಮೀಕರಣ' ಹಾಗೂ ಸಂಸ್ಕೃತೀಕರಣಗಳ ಇಕ್ಕಟ್ಟಿನಲ್ಲಿ "ಜನಪದ ನವೀಕರಣ" ಸಿದ್ಧಾಂತದ ಅನನ್ಯತೆಯನ್ನು ಪ್ರತಿಷ್ಠಾಪಿಸುವಲ್ಲಿ ಅವರನ್ನು ಗಾಂಧೀಜಿಯೊಂದಿಗೆ ತುಲನೆಮಾಡಿದ್ದು ಡಾ. ಈಶ್ವರನ್ ಅವರ ಪ್ರಗಲ್ಭ ವೈಚಾರಿಕತೆಗೆ ನಿದರ್ಶನವಾಗಿದೆ.

ಕೃತಿಯ ಎರಡನೆಯಭಾಗದಲ್ಲಿ ಲಿಂಗಾಯತ ಧರ್ಮದ ಉಗಮ, ವಿಕಾಸಗಳ ಐತಿಹಾಸಿಕ ಅವಲೋಕನವಿದೆ: 'ಲಿಂಗಾಯತ ಧರ್ಮದ ಉದಯಕ್ಕೆ ಪ್ರೇರಕ ಕಾರಣಗಳಾವವು ? ಎಂಬುದರ ವಿವೇಚನೆಗೆ ತೊಡಗಿ, ಇದೊಂದು ಮೋಕ್ಷಾಪೇಕ್ಷಿ ಧರ್ಮ (Salvation Religion) ಎಂಬ ಮ್ಯಾಕ್ಸವೆಬರನ ವಿಚಾರ. ವಿಶಿಷ್ಟ ಸಿದ್ಧಾಂತ ಸ್ಥಾಪನೆಗೆ ಹುಟ್ಟಿದೆ ಎಂಬ ಸುರೇಂದ್ರನಾಥ ದಾಸಗುಪ್ತ ಅವರ ಹೇಳಿಕೆ, ೧೨ನೆಯ ಶತಮಾನದ ಆರ್ಥಿಕ ಸಾಮಾಜಿಕ ತುಡಿತಗಳೇ ಮುಖ್ಯ ಕಾರಣವೆಂಬ ರಮೇಂದ್ರನಾಥ ಮುನಿಯ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ. ಲೇಖಕರು ೧೨ನೆಯ ಶತಮಾನದ ಧಾರ್ಮಿಕ, ರಾಜಕೀಯ, ಸಾಮಾಜಿಕ ಒಟ್ಟು ಪರಿಸರದ ಹಿನ್ನೆಲೆಯಲ್ಲಿ ಪರಿಶೀಲಿಸಿ ಮೇಲಿನ ಎಲ್ಲ ಉದ್ದೇಶಗಳು ಒಟ್ಟಾಗಿಯೇ ಲಿಂಗಾಯತ ಧರ್ಮದ ಪ್ರಾದುರ್ಭವಕ್ಕೆ ಪ್ರೇರಣೆಯನ್ನಿತ್ತಿವೆ ಎಂಬ ಸೂಕ್ತ ನಿರ್ಣಯಕ್ಕೆ ಬಂದಿದ್ದಾರೆ. ಸಾಹಿತ್ಯಿಕ ಹಾಗೂ ಶಾಸನಾಧಾರಗಳಿಂದ ತಮ್ಮ ನಿಲುಮೆಗೆ ಸಾಕಷ್ಟು ಪುಷ್ಟಿಯನ್ನಿತ್ತಿದ್ದಾರೆ. ತನ್ನ ವ್ಯಕ್ತಿತ್ವದ ಸಮ್ಮೋಹಕತೆ ಹಾಗೂ ಅನುಭವ ಮಂಟಪದಂತಹ ವೇದಿಕೆಯನ್ನು ಒದಗಿಸುವ ಮೂಲಕ ಲಿಂಗಾಯತ ಧರ್ಮಕ್ಕೆ ಸಾಂಘಿಕ ಹಾಗೂ ಸಾಂಸ್ಥಿಕ ಸ್ವರೂಪ ಕೊಟ್ಟವನು ಬಸವಣ್ಣನೇ ಆಗಿದ್ದಾನೆ. ಷಟಸ್ಥಲ, ಗುರು, ಲಿಂಗ, ಜಂಗಮ, ಲಿಂಗಾಯತ, ವೀರಶೈವ ಎಂಬ ಪಾರಿಭಾಷಿಕ ಪದಗಳು ಬಸವಪೂರ್ವಯುಗದಲ್ಲಿ ಬಳಕೆಗೊಂಡಿದ್ದರೂ ಬಸವಯುಗದಲ್ಲಿ ಅವಕ್ಕೆ ನವೀನವಾದ ಅರ್ಥಪರಿವೇಷ ನಿರ್ಮಾಣವಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಪಂಚಾಚಾರ್ಯರ ಬಗೆಗೆ ಬರೆಯುತ್ತ ಅವರು ವೀರಶೈವ ಧರ್ಮದ ಸ್ಥಾಪಕರಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಪಂಚಾಚಾರ್ಯರ ಬಗೆಗೆ ಹುಟ್ಟಿಕೊಂಡಿದ್ದ ಕಾಲ್ಪನಿಕ ಕತೆಗಳನ್ನು ವಿಶ್ಲೇಷಿಸಿ ವಿಚಾರವಾದದಲ್ಲಿ ಇಂತಹ ಕಾಲ್ಪನಿಕ ಕಥಾವಾದಕ್ಕೆ ಸ್ಥಾನವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಪಂಚಾಚಾರರಲ್ಲಿ ಹಿರಿಯನಾದ ರೇವಣ

ಸಿದ್ಧನನ್ನು ಕುರಿತು ಪುರಾಣಗಳನ್ನು ವಿಶ್ಲೇಷಿಸುತ್ತ ಬಸವಪೂರ್ವಯುಗದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಿದ್ದ "ಕಾಳಾಮುಖ ಆಚಾರ್ಯರ ಮೌಲ್ಯ, ನಿಯಮ, ಸ್ಥಾನಗೌರವ ಹಂಬಲ ಮತ್ತು ನೈತಿಕ ಪ್ರಜ್ಞೆಗಳನ್ನು ರೇವಣ ಸಿದ್ಧನೊಡನೆ ಹೋಲಿಸಿನೋಡಿದಾಗ ನಮಗೆ ಅವರಲ್ಲಿ ಅಂತರವೆ ಕಾಣುವದಿಲ್ಲ. ಆದುದರಿಂದ ಪಂಚಾಚಾರ್ಯರು ಆ ಕಾಲದಲ್ಲಿ ಇದ್ದುದೇ ಆಗಿದ್ದರೆ ಅವರನ್ನು ನಾನು ಕಾಳಾಮುಖ ಆಚಾರ್ಯರೆಂದೇ ಭಾವಿಸುತ್ತೇನೆ." (ಪು. ೫೦) ಎಂಬ ಸ್ಪಷ್ಟ ಹೇಳಿಕೆ ವೀರಶೈವ ಧರ್ಮದ ಸಂಸ್ಥಾಪಕರಾರು ? ಎಂಬ ವಿಷಯದ ಬಗ್ಗೆ ಇದ್ದ ಭಿನ್ನಾಭಿಪ್ರಾಯ, ವಾದವಿವಾದಗಳಿಗೆ ಪೂರ್ಣವಿರಾಮ ಹಾಕುವಂತಿದೆ.

ಲಿಂಗಾಯತ ಧರ್ಮದ ಬೆಳವಣಿಗೆಯ ಇತಿಹಾಸವನ್ನು, ಸಂಸ್ಥೀಕರಣದ ಪೂರ್ವಾವಸ್ಥೆ, ಸಂಸ್ಥೀಕರಣ ವ್ಯವಸ್ಥೆ, ಸಂಸ್ಥೀಕರಣದ ವೈಪರೀತ್ಯಾವಸ್ಥೆ ಹಾಗೂ ಪುನಶ್ಚೇತನಾವಸ್ಥೆ, ಎಂದು ನಾಲ್ಕು ಹಂತಗಳಲ್ಲಿ ವಿಭಜಿಸಿ ನಿರೂಪಿಸಲಾಗಿದೆ. ಸಮಕಾಲೀನ ಲಿಂಗಾಯತರ ಧಾರ್ಮಿಕ ಆದರ್ಶ ಹಾಗೂ ಜೀವನ ಮೌಲ್ಯಗಳು ಮೇಲಿನ ನಾಲ್ಕು ಹಂತಗಳಲ್ಲಿನ ಕಾರ್ಯಗತಿಗೆ ಸಿಕ್ಕು ಆ ಧರ್ಮವು ಅವಿಚ್ಛಿನ್ನತೆ ಮತ್ತು ಚಿರಂತನತೆಯನ್ನು ಪಡೆದಿವೆಯೆಂದು ಸ್ಪಷ್ಟಗೊಳಿಸಲಾಗಿದೆ. ೧೫ನೆಯ ಶತಮಾನದ ಸಾಂಸ್ಥಿಕ ವೈಪರೀತ್ಯಾವಸ್ಥೆಯಲ್ಲಿ ಗುರು–ವಿರಕ್ತರ ನಡುವೆ ಸ್ಪರ್ಧೆ ಹಾಗೂ ಮಠಗಳ ಸಂಖ್ಯೆಯಲ್ಲಿ ಹೆಚ್ಚಳ, ಅವುಗಳ ಪ್ರಾಮುಖ್ಯತೆ ಕಂಡುಬರುತ್ತದೆ ಎಂಬ ಲೇಖಕರ ವಿಚಾರವು ವೀರಶೈವದ ಸಂಕೀರ್ಣಾವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ. ಆದರೆ ಈ ಬೆಳವಣಿಗೆ ಒಂದು ರೀತಿಯಲ್ಲಿ ಅನುಭವಮಂಟಪದ ಮೌಲ್ಯಗಳಿಗೆ ವ್ಯತಿರಿಕ್ತವಾಗಿದ್ದರೂ. ತಾಳವೋಲೆಗಳಲ್ಲಿದ್ದ ಗ್ರಂಥಗಳ ಸಂರಕ್ಷಣೆ, ಸ್ವತಂತ್ರ ಕೃತಿಗಳ ರಚನೆ, ಶಿಕ್ಷಣ ಕೇಂದ್ರಗಳ ಸ್ಥಾಪನೆ–ಇತ್ಯಾದಿ ಮಹತ್ವದ ಕಾರ್ಯಗಳನ್ನು ಮಾಡಿ, ಧರ್ಮದ ಪೋಷಣೆ ಹಾಗೂ ಸಂವರ್ಧನೆಗೆ ಸಮರ್ಥ ವೇದಿಕೆಗಳಾಗಿವೆ. ಎಂಬ ಅವರ ವಿಚಾರ ಮನನೀಯವಾಗಿದೆ.

"ಧರ್ಮ ಹಾಗೂ ಸಾಮಾಜಿಕ ರಚನಾಕ್ರಮ" ಎಂಬ ಅಧ್ಯಾಯದಲ್ಲಿ ವಿಶಿಷ್ಟ ನಂಬುಗೆ ಹಾಗೂ ಮೌಲ್ಯಗಳು ಲಿಂಗಾಯತರ ಜೀವನದಲ್ಲಿ ವ್ಯಕ್ತವಾಗುವುದರಿಂದ ಬ್ರಾಹ್ಮಣರ ಸಾಮಾಜಿಕ ರಚನೆಗೆ ಪ್ರತಿಸ್ಪರ್ಧಿಯಾದ ಪ್ರತ್ಯೇಕವಾದ ಸಾಮಾಜಿಕ ವ್ಯವಸ್ಥೆಯನ್ನು ಲಿಂಗಾಯತರು ಪ್ರಚುರ ಪಡಿಸಿದರು ಎಂದು ಲೇಖಕರು ಪ್ರತಿಪಾದಿಸಿದ್ದಾರೆ. "ಒಂದು ಬ್ರಾಹ್ಮಣ ಸಾಮಾಜಿಕ ರಚನೆಯು ಜಾತಿಪದ್ಧತಿ ಮಡಿಮೈಲಿಗೆ ಸಂಕೀರ್ಣದಲ್ಲಿ ನಂಬುಗೆ, ಮಾಟಗಾರಿಕೆಯಂದೊಡಗೂಡಿದ ಪ್ರಕ್ರಿಯೆಗಳನ್ನೊಳಗೊಂಡು ಆವೃತ ಜಗತ್ತಿಗೆ ಸೇರಿದುದಾದರೆ, ಲಿಂಗಾಯತ ಸಾಮಾಜಿಕ ರಚನೆ ಅವೆಲ್ಲವನ್ನು ವಿರೋಧಿಸಿ ವ್ಯಕ್ತಿಗೆ ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಒದಗಿಸಿಕೊಡುವ ಅನಾವೃತ ಜಗತ್ತಿಗೆ ಸೇರಿದುದಾಗಿದೆ." (ಪು. ೧೪೮) ಎಂಬ

ಮಾತು ವಿಚಾರಾರ್ಹವಾಗಿದೆ. ಬ್ರಾಹ್ಮಣ ಮಾರ್ಗ ಸಂಪ್ರದಾಯದ ಮೌಲ್ಯಗಳು, ಅಂತೆಯೇ ಜಾನಪದ ದೇಶಿ ಸಂಪ್ರದಾಯದ ಮೂಢನಂಬಿಕೆಗಳ ವಿರುದ್ಧ ಹೋರಾಟಕ್ಕಿಳಿದು ಸ್ಪಷ್ಟ ಪ್ರತ್ಯೇಕತೆ, ವ್ಯವಸ್ಥೆಗಳಿಗೆ ಲಿಂಗಾಯತ ಸಮಾಜವು ನಿರಂತರ ಪ್ರಯತ್ನಿಸಿರುವರನ್ನು ನಿದರ್ಶನಗಳೊಂದಿಗೆ ವಿವರಿಸಲಾಗಿದೆ. ಇವೆರಡೂ ಸಂಪ್ರದಾಯಗಳ ಕೆಲವು ಒಳ್ಳೆಯ ಅಂಶಗಳ ಪ್ರಭಾವ, ಪ್ರಚಾರ (diffusion) ಗಳಿಗೆ ಲಿಂಗಾಯತ ಸಮಾಜವು ಒಳಗಾಗಿದೆ ಎಂಬುದೂ ಅಷ್ಟೇ ಸತ್ಯ ಸಂಗತಿಯಾಗಿದೆ. ಶರಣರ ತಾತ್ವಿಕ ಪ್ರತಿಪಾದನೆ ಹಾಗೂ ಸಿದ್ಧಾಂತಗಳು ಜಾತಿಪದ್ಧತಿಯನ್ನು ಹೊಡೆದು ಹಾಕಲು ಸಮರ್ಥವಾದುವೆ? ಎಂಬ ಮುಖ್ಯ ಪ್ರಶ್ನೆಗೆ "ನನ್ನ ಉತ್ತರವೆಂದರೆ ಅವರು ಅಂಶತಃ ಯಶಸ್ವಿಯಾದರು ಅಂಶತಃ ಆಗಲಿಲ್ಲ" ಎಂದು ಹೇಳಿ ತಮ್ಮ ತರ್ಕಬದ್ಧ ವಿಶ್ಲೇಷಣೆಯನ್ನು ನಮ್ಮೆದುರುಗಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಡಾ. ಈಶ್ವರನ್ ಅವರು ಸಮಾಜಶಾಸ್ತ್ರ ಸಿದ್ಧಾಂತಗಳನ್ನು, ಪ್ರಖ್ಯಾತ ಸಮಾಜವಿಜ್ಞಾನಿಗಳ ಅಭಿಪ್ರಾಯವನ್ನು ವಿಮರ್ಶಿಸಿರುವ ಬಗೆ ಅವರು ಒಬ್ಬ ಶ್ರೇಷ್ಠಮಟ್ಟದ ಸಮಾಜ ವಿಜ್ಞಾನಿ ಎಂಬುದಕ್ಕೆ ಪ್ರಮಾಣವಾಗಿದೆ.

'ಲಿಂಗಾಯತ ಧರ್ಮ ಮತ್ತು ನವೀಕರಣ' ಎಂಬ ಕೊನೆಯ ಅಧ್ಯಾಯದಲ್ಲಿ ಎರಡನೆಯ ಮಹಾಯುದ್ಧದ ನಂತರ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ಜಗತ್ತಿನಾದ್ಯಂತ ಪ್ರಸರಿಸತೊಡಗಿದುದನ್ನು ಪ್ರಸ್ತಾಪಿಸಿ, ನವೀಕರಣ ಪ್ರಕ್ರಿಯೆಗಳು ಭಾರತೀಯ ಸಂಸ್ಕೃತಿಯಲ್ಲಿಯೂ ಕಂಡುಬಂದುದನ್ನು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಮೇಲ್ಮಟ್ಟದ ಸಂಸ್ಕೃತಿಯ ಮೌಲ್ಯಗಳನ್ನು ಆಚಾರ ನಡೆವಳಿಕೆಗಳನ್ನು ಕೆಳಮಟ್ಟದ ಸಂಸ್ಕೃತಿಯ ಜನರು ಅನುಕರಿಸುತ್ತಾರೆ, ಎಂಬ ಮೈಸೂರಿನ ಶ್ರೀನಿವಾಸರ ಅಭಿಪ್ರಾಯವನ್ನು 'ಲಿಂಗಾಯತ ನವೀಕರಣ'ಕ್ಕೆ ಅನ್ವಯಿಸಿ ಆಧಾರಪೂರ್ವಕ ಅಲ್ಲಗಳೆದಿದ್ದಾರೆ. ಲಿಂಗಾಯತ ಸಮಾಜದ ನವೀಕರಣದ ಅಧ್ಯಯನದಲ್ಲಿ ಬಾಹ್ಯಪ್ರಭಾವಕ್ಕಿಂತಲೂ ಗ್ರಾಮೀಣಜನರ ಸಮಷ್ಟಿ ಬದುಕಿನ ಆಂತರಿಕ ಕ್ರಿಯಾಶೀಲತೆಗೆ ಪ್ರಾಧಾನ್ಯ ದೊರೆಯಬೇಕು ಎಂದು ಪ್ರತಿಪಾದಿಸಿರುವುದು ಸ್ವಾಗತಾರ್ಹ ವಿಚಾರವೆಂದು ವಿವರಿಸಿ ಹೇಳಬೇಕಾಗಿಲ್ಲ. ಕ್ರಿಶ್ಚಿಯನ್ ದಾರ್ಶನಿಕರಾದ ಮಾರ್ಟಿನ್ ಲ್ಯೂಥರ ಹಾಗೂ ಕ್ಯಾಲ್ವಿನ್‌ರ ದೃಷ್ಟಿಯಲ್ಲಿ ವೃತ್ತಿಗೆ ಇದ್ದ ಅರ್ಥವ್ಯತ್ಯಾಸಗಳನ್ನು ವಿಶ್ಲೇಷಿಸಿದ್ದಾರೆ. ವೃತ್ತಿಯು ಜೀವನಸ್ಥಿತಿಯ ಸೂಚಕವಲ್ಲವೆಂದೂ ಉದ್ಯೋಗಶೀಲತೆ ವ್ಯಕ್ತಿಯ ಆಯ್ಕೆಗೆ ಒಳಪಟ್ಟ ವಿಚಾರವೆಂದೂ ಕ್ಯಾಲ್ವಿನ್ ಪ್ರತಿಪಾದಿಸಿದ (Beruf) ಪರಿಕಲ್ಪನೆ ಹಾಗೂ ಬಸವಣ್ಣನವರ ಕಾಯಕ ವಿಚಾರಗಳಲ್ಲಿ ಕಂಡುಬರುವ ಅಗಾಧಸಾಮ್ಯವನ್ನು ಎತ್ತಿಹೇಳಿದ್ದು ವಿಚಾರ ಪ್ರಚೋದಕವಾಗಿದೆ. ಲಿಂಗಾಯತ ಸಂಸ್ಕೃತಿಯಲ್ಲಿ ಕಾಣಿಸಿಕೊಂಡ ಕಾಯಕ, ದಾಸೋಹ, ಕಾರ್ಯತತ್ಪರತೆಯಲ್ಲಿ ವ್ಯಕ್ತಗೊಳ್ಳುವ 'ನವೀಕರಣ'ವು ಕರ್ನಾಟಕ ರಾಜ್ಯ

ಅಂತೆಯೇ, ರಾಷ್ಟ್ರೀಯ ಜೀವನದಲ್ಲಿ ಅವರು ಯಶಸ್ವಿಯಾದ ಪಾತ್ರನಿರ್ವಹಿಸಲು ಪ್ರೇರಕವಾಗಿದೆ.

ಒಟ್ಟಿನಲ್ಲಿ ಧರ್ಮ, ಸಂಸ್ಕೃತಿ, ಸಮಾಜಗಳನ್ನು ಕುರಿತು ಇಲ್ಲಿಯವರೆಗೆ ವಿದ್ವಾಂಸರು ವ್ಯಕ್ತಪಡಿಸಿದ ಸಿದ್ಧಾಂತ ಹಾಗೂ ಅನುಭವಿಕ ಅಧ್ಯಯನಗಳನ್ನು ಲಿಂಗಾಯತ ಸಮುದಾಯಕ್ಕೆ ಅನ್ವಯಿಸಿ ವಿಶ್ಲೇಷಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಲಿಂಗಾಯತ ಧರ್ಮ, ಸಂಸ್ಕೃತಿ ಸಮಾಜಗಳ ಸ್ವೋಪಜ್ಞತೆಯ ಕುರುಹುಗಳನ್ನು ವೈಜ್ಞಾನಿಕವಾಗಿ ಎತ್ತಿತೋರಿಸಿ ಈ ದಿಸೆಯಲ್ಲಿ ಇನ್ನುಮುಂದೆ ನಡೆಯಬಹುದಾದ ಅಧ್ಯಯನಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಡಾ. ಈಶ್ವರನ್ ಅವರ ಈ ಮೌಲಿಕ ಕೃತಿಯನ್ನು ಪ್ರಕಟಿಸಿದ ಮೈಸೂರು ವಿಶ್ವವಿದ್ಯಾಲಯಕ್ಕೆ ನಮ್ಮ ಅಭಿನಂದನೆ ಸಲ್ಲಬೇಕು.

●

ಈ ಸಂಚಿಕೆಯ ಲೇಖಕರು

೧ ಶ್ರೀ ವೆಂಕಟರಾಯಾಚಾರ್ಯ ವಿದ್ವಾನ್
ಸುರತ್ಕಲ್ – ೫೭೪ ೧೫೮ (ದ. ಕ.)

೨ ಡಾ. ಎಸ್. ರಾಜಶೇಖರ
ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩ ಪ್ರೊ. ಹಂಪ ನಾಗರಾಜಯ್ಯ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜ ಪೇಟೆ, ಬೆಂಗಳೂರು

೪ ಶ್ರೀ ಬಸವರಾಜ ಸಬರದ
ಅಧ್ಯಾಪಕರು
ಔರಾದ (ಜಿಲ್ಲೆ : ಬೀದರ)

೫ ಶ್ರೀ ವೀರೇಂದ್ರ ಸಿಂಪಿ
ಬಿ. ವ್ಹಿ. ಬಿ. ಕಾಲೇಜು, ಬೀದರ – ೫೮೫ ೪೦೧

೬ ಶ್ರೀ ಎಸ್. ಪಿ. ಪಾಟೀಲ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭ ಡಾ. ಬುದ್ದಣ್ಣ ಹಿಂಗಮಿರೆ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮ ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯ ಡಾ. ಶಾಂತಿನಾಥ ದಿಬ್ಬದ
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

೧೦ ಶ್ರೀ ಧರಣೇಂದ್ರ ಕುರಕುರಿ
ಶ್ರೀ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಹಾನಗಲ್ – ೫೮೧೧೦೪

೧೧ ಶ್ರೀಮಂತಿ ಲಲಿತಾಂಬ ವೃಷಭೇಂದ್ರಸ್ವಾಮಿ
ವಿಶ್ವವಿದ್ಯಾಲಯ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ

೧೨ ಡಾ. ದೇವೇಂದ್ರಕುಮಾರ ಹಕಾರಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೩ ಡಾ. ಎಂ. ಬಿ. ನೇಗಿನಹಾಳ
ಜಿ. ಎಚ್. ಕಾಲೇಜು, ಹಾವೇರಿ

೧೪ ಶ್ರೀ ಬಿ. ಎ. ಸನದಿ
೪೫೬, ಸೆಕ್ಟರ್– ೩, ಸಿ. ಜಿ. ಕಾಲನಿ
ಆ್ಯಂಟೋಪ ಹಿಲ್, ಮುಂಬಯಿ - ೪೦೦೦೩೭

೧೫ ಡಾ. ವಿಲ್ಯಂ ಮಾಡ್ತ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೬ ಡಾ. ಎಂ. ಬಿ. ಕೊಟ್ರಶೆಟ್ಟಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ರೂ. ೧೦೦-೦೦(ಒಂದು ನೂರು ರೂಪಾಯಿಗಳು) ಕಳಿಸಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"ಯ ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩